ಮನೋಹರ ಗ್ರಂಥಮಾಲೆಯ

೨೫ನೆಯ ಕುಸುಮ

ಐದನೆಯ ವರುಷದ ೧ನೆಯ ಕುಸುಮ

ಅಗಸ್ಟ ೧೯೪೭

OSMANIA UNIVERSITY LIBRARY.
HYDERABAD (DECCAN)

# ಸರಸಮ್ಮನ ಸಮಾಧಿ

'ಶಿವರಾಮ ಕಾರಂತ'

ಹನ್ನೆರಡು ಆಣೆ

ಮನೋಹರ ಗ್ರಂಥಪ್ರಕಾಶನ ಸಮಿತಿ

— ಧಾರವಾಡ —

ಸಂಪಾದಕರು .
ಜಿ. ಬಿ. ಜೋ|
ಜಿ. ವಿ. ಚುಳಿಕ

ಪ್ರಕಾಶಕರು :
ಜಿ. ಬಿ. ಜೋಶಿ
ಮನೋಹರ ಗ್ರಂಥಮಾಲಾ
ಧಾರವಾಡ

ಈ ಪುಸ್ತಕದ ಪ್ರಥಮ ಮುದ್ರಣದ ಅಧಿಕಾರವು ಮಾತ್ರ
ಮ. ಗ್ರಂ ಮಾಲೆಯವರದು.

ಮುದ್ರಕರು :
ಶೇಷಗಿರಿರಾವ ಗೋವಿಂದರಾವ
ಕುಲಕರ್ಣಿ
ಸಾಧನ ಪ್ರೆಸ್, ಧಾರವಾಡ

ಸಾಹಿತ್ಯ ವಿಷಯದಲ್ಲಿ ಸಲಹೆಗಾರರು .
ಶ್ರೀ. ದ. ರಾ. ಬೇಂದ್ರೆ, ಎಂ. ಎ.
,, ರಂ. ಶ್ರೀ. ಮುಗಳಿ, ಎಂ. ಎ. ಬಿ. ಟಿ
,, ವಿ. ಕೃ. ಗೋಕಾಕ, ಎಂ. ಎ.
( ಇಂಗ್ಲಂಡದ

# ಮುನ್ನುಡಿ

“ಸರಸಮ್ಮನ ಸಮಾಧಿ”ಯನ್ನು ನಿರ್ಮಿಸುವುದರಲ್ಲಿ ತುಂಬಾ ಅಂಜಿಕೆ ನನಗೆ. ಅದರಲ್ಲಿ ಎತ್ತಿಕೊಂಡ ಪ್ರಸಂಗವು ಮನುಷ್ಯಜೀವನದ ಮುಖ್ಯ ಸಮಸ್ಯೆಗಳಲ್ಲಿ ಒಂದಾಗಿದೆ; ದಾಂಪತ್ಯನೀತಿಯು ಯಾವ ದೇಶವನ್ನು, ಯಾವ ಕಾಲವನ್ನು ಬಿಟ್ಟಿರದ ಪ್ರಶ್ನೆಯೆಂಬುದು ನಿಜ. ಆದುದರಿಂದ ಈ ವಿಷಯವು ತೀರ ಹಳೆಯ ವಿಷಯ. ಆದರೆ ಆ ವಿಷಯವನ್ನು ನೋಡತಕ್ಕ ಕಣ್ಣು ಬೇರೆಬೇರೆ ದೇಶಗಳನ್ನು ಹೊಂದಿಕೊಂಡಿರುವಂತೆ, ಕಾಲವನ್ನು ಹೊಂದಿಕೊಂಡಿರುತ್ತದೆ. ನಮ್ಮ ನಾಡಿನ ಇತಿಹಾಸವನ್ನು ಪರಿಶೀಲಿಸಿದರೆ ಇಂಥ ವಿಷಯದಲ್ಲಿ ಹಲವು ಸಂದಿಗ್ಧ ಪ್ರಶ್ನೆಗಳು ಹುಟ್ಟುತ್ತವೆ. ನಮ್ಮ ಇತಿಹಾಸ–ಪುರಾಣಗಳು ಆ ಪ್ರಶ್ನೆಯನ್ನು ಎಷ್ಟೋ ಬಾರಿ ‘ಶಾಪ–ವರ–ಋಷಿ ಕೊಟ್ಟ ಫಲ’ ಎಂಬಿತ್ಯಾದಿ ಚಮತ್ಕಾರಿಕ ಕಥೆಗಳಿಂದ ಮುಚ್ಚಿಬಿಟ್ಟಿದೆ.

ಮಹಾಭಾರತದ ಕಾಲದಲ್ಲಿ ಇದ್ದಿರಲಾರದ ದಾಂಪತ್ಯನೀತಿಯನ್ನು ನಾವು ಮಹಾಭಾರತ ಗ್ರಂಥದಿಂದ ಊಹಿಸಲು ಯತ್ನಿಸುತ್ತಿದ್ದೇವೆ. ಇವೆಲ್ಲದಕ್ಕೆ ಕಾರಣವೆಂದರೆ—ನಮ್ಮ ಸಮಾಜದ ಇಂದಿನ ಜೀವನ ಎರಡು ಮೈ ಜೀವನವಾಗಿದೆ. ನಮ್ಮ ನೀತಿ–ಮನುವಿಗೂ ಹಿಂದಿನದು. ನಮ್ಮ ಆದರ್ಶ ಸೀತೆಯನ್ನು ಮೀರುವಂಥದು. ನಮ್ಮನ್ನು ಉಳಿದು ಇತರರನ್ನು ನಾವು ವಿಮರ್ಶಿಸುವ ಬಗೆಯು ಕೇವಲ ಯಮಧರ್ಮರಾಯನದು. ಆದರೆ ಜೀವನ ಹಾಗಿಲ್ಲ—ಅದು ಪಾಪ,—ಎಲ್ಲ ಕಾಲದಂತೆ, ಎಲ್ಲ ದೇಶಗಳಂತೆ ಕಲುಷಿತವಾಗಿದೆ, ಪಾಪಭರಿತವಾಗಿದೆ. ಅದು ಹಾಗಿರಲು ಎರಡೂ ಕಾರಣವಾಗಬಹುದು—ಪಾಪವನ್ನು ಪಾಪವೆಂದು ತಿಳಿಯುವುದರಿಂದ ಇರಬಹುದು. ಸಾಮಾನ್ಯ ವಿಷಯವನ್ನು ಅತಿ–ನೀತಿ ಪ್ರೇರಿತ ನಮ್ಮ ಬುದ್ಧಿಯು ತನ್ನ ಕಲ್ಪನೆಯ ಬಲೆಯಿಂದ ಅಳೆದು, ಮನುಷ್ಯನ ಮಾಂಸದ ಶೀಲವನ್ನು ‘ಪಾಪ’ವೆಂದು ಕರೆಯುವುದರಿಂದ

ಇರಬಹುದು. ಹೀಗೆ ಕರೆದುದರಿಂದ ಪಾಪ ಮಾತ್ರ ಕಡಿಮೆಯಾಗಿಲ್ಲ. ಅದಕ್ಕಾಗಿ ನಾವು–ಗತಕಾಲವನ್ನು ಸ್ಮರಿಸುತ್ತೇವೆ. ಅಹಲ್ಯಾ, ದ್ರೌಪದಿ, ಸೀತಾ. . . .ಎಂದು ಹಂಬಲಿಸುತ್ತೇವೆ.

ಸರಸಮ್ಮನು ಗತಕಾಲದ ಮೂಡಂಬೈಲಿನ ತಾರೆ, ಅಹುದು. . ಅಥವ ಅಂತಿರುವ ಇನ್ನೊಬ್ಬಳು. ಈಗಿನವರು ಅವಳನ್ನು ನೋಡುತಿದ್ದಾರೆ.

ನಮ್ಮ ಸಂಕೋಚಬುದ್ಧಿ, ಅರೆದೆರದ ಕಣ್ಣುಗಳಿಗೆ ಈಗಿನ ಜೀವನ ವಸ್ತುಚಿತ್ರ ಸಮನಾಗಿ ದೊರೆಯುವುದಿಲ್ಲ. ಅಥವ ಅದನ್ನು ಕಂಡು ಇದು ಗೌರವ ಎನ್ನುತ್ತೇವೆ. ಹಾಗಿರಲು ನಮಗೆ ಏನು ಸಮಾಧಾನ? ಗತ, ತ್ರೇತೆ, ದ್ವಾಪರಗಳು. ಕಾರಣ ಗತಕಾಲದಲ್ಲಿ ಈಗ ಉಳಿದು ಕಾಣಿಸುವುವು ಉನ್ನತ ಬೆಟ್ಟಗಳು. .ರಾಮ ಕೃಷ್ಣರು. .ಜನಜೀವನ ಮರೆಯಾಗಿರುತ್ತದೆ. ಆ ರಾಮಕೃಷ್ಣರನ್ನು, ಆರಾಧಿಸುವ ಚಿತ್ರಕಾರರು ಬರೆದಿರುತ್ತಾರೆ. ಹೀಗಿರಲು ಹಿಂದಿನ ಕೊಳೆ ಕಣ್ಣಿಗೆ, ನೆರೆಮನೆಯ ಕೊಚ್ಚೆಯಂತೆ ಕಾಣಿಸಲು ಶಕ್ಯವಿಲ್ಲ. ಆದುದರಿಂದ ಹಾಳು ಕಲಿಯುಗವನ್ನು ಎಲ್ಲರೂ ಶಪಿಸುತ್ತಾರೆ.

ದಾಂಪತ್ಯನೀತಿಯೂ ಈ ಶಾಪಕ್ಕೆ ಬಲಿಯಾಗಿದೆ. ನಮ್ಮಲ್ಲಿನ ಜೀವನವನ್ನು ಕಾಣಲಾರದೆ, ಜಗತ್ತನ್ನು ಉದ್ಧರಿಸಲು ಹೊರಟ ಭಾರತೀಯರಿಗೆ—ಇಂಗ್ಲಂಡಿನ, ಅಮೇರಿಕದ ಡ್ಯಾವೋರ್ಸುಗಳು—೧೬ ನೇ ಮದುವೆಗಳು ಕಾಣಿಸುತ್ತವೆ. ಅಲ್ಲಿ ಅದಕ್ಕೆ ಕಾರಣವಿದೆ. ಅಲ್ಲಿನ ಹೆಣ್ಣುಗಳು—ಹೆಣವಾಗಿಲ್ಲ. ಗಂಡಿನಂತೆ ತಮಗೆ ಬೆನ್ನುಕೋಲಿದೆ ಎಂದು ತಿಳಿಯತೊಡಗಿದ್ದಾರೆ. ಆದರಿಂದ ಡ್ಯಾವೋರ್ಸುಗಳು. ನಮ್ಮಲ್ಲಿ ಹೆಣ್ಣು ಮಕ್ಕಳು ಹೆಣ–ಮಕ್ಕಳಾಗಿರುವಷ್ಟು ದಿವಸ ಪಾತಿವೃತ್ಯ ಸಾಪೇತಾಗಿ ಸಾಗುತ್ತದೆ.

ಇನ್ನು ಅವರಿವರ ಪಾಪಗಳು — ವಿಷಯಲೋಲುಪತೆಗಳ ವಿಚಾರ ಪಾಶ್ಚಾತ್ಯರು ಅದನ್ನು ಮಹತ್ವವಾಗಿ ಎಣಿಸುವುದಿಲ್ಲ. ನಾಲ್ಕು ಜನಗಳು ಕೂಡಿದಲ್ಲಿ ಅವನ–ಇವಳ ಹಾದರವನ್ನು ಕುರಿತು ಗುಜುಗುಜು (ಪ್ಲೀ)

ಮಾಡುವುದಿಲ್ಲ. ಆ ಪುಣ್ಯದ ಕೆಲಸ ನಮ್ಮದು. ನಾಲ್ವರು ಸಾಧುಗಳೋ, ಸಾಧ್ವಿಯರೋ ಸೇರಿದರೆ—ನೆರೆಮನೆಯ ಆವನ ಇಲ್ಲವೆ ಇವಳ ಓರೆ ನೋಟ, ಜಾರತ್ವವೇ ನಮಗೆ ಆಹಾರವಾಗುವುದು. ಇದು ಪ್ರೌಢ, ಆರೋಗ್ಯಶೀಲ ಎಂದುಳಿಸ ಚಿಹ್ನೆಯೇ?

ಪಾಶ್ಚಾತ್ಯರಲ್ಲಿ ಹ್ಯಾವಲಾಕ್ ಎಲ್ಲಿಸಿನಂಥವರು ಮುಂದೆ ಬಂದಿದ್ದಾರೆ. ತಮ್ಮ 'ಅನೀತಿ'ಯ ಜೀವನವನ್ನು ಬಹಿರಂಗವಾಗಿ ಒಪ್ಪಿಕೊಳ್ಳುತಿದ್ದಾರೆ. ಈ 'ನೀತಿ'ಯ ಅರ್ಥವನ್ನು ಬದಲಾಯಿಸಲು ಎಲ್ಲಿಸಿ ಹೇಳುತ್ತಾನೆ. ಆದರೆ ನಾವು— ಮೋಟರಿನ ಮೇಲೆ ಕುಳಿತರೂ, ರೇಡಿಯೋ ಕೇಳಿಪರೂ–ರಾಮಾಯಣದ ವ್ಯಕ್ತಿಗಳೆಂದೇ ತಿಳಿದು ಥಟ್ಟನೆ ಜೇರೆಯುವರ ವಿಷಯ ಬಂದಾಗಲೆಲ್ಲ 'ಆಹಾ–ಸೀತಾಮಾತೆ' ಎನ್ನುತ್ತಿದ್ದೇವೆ. ನಾವಿನ್ನು ನಮ್ಮನ್ನೇ ಆಳವಾಗಿ ಇಣಿಕಿ ನೋಡಿಲ್ಲ.

ಹಿಂದುಸ್ಥಾನದ ಮೆಡಿಕಲ್ ಕೌನ್ಸಿಲಿನವರು ಈ ದೇಶದಲ್ಲಿ ಗುಪ್ತರೋಗಪೀಡಿತರ ಸಂಖ್ಯೆ ಎಷ್ಟೆಂದು ಹೇಳಿದೆ? ಅದರ ನೇಕಡದ ಸೆಲೆ ಎಷ್ಟಂತೆ?

ಹಳ್ಳಿಹಳ್ಳಿಯಲ್ಲಿ ಅಲೆದು ನಮ್ಮ ಬಡವರ, ಶ್ರೀಮಂತರ, ಆಚಾರ್ರ, ಅನಾಚಾರ್ರ–ಒಳಜೀವನವನ್ನು ಹರಿದು ಬಿಂಬಿಸಿ ತೋರಿಸಿದವರಿದ್ದಾರೆಯೇ?

ಅನೈಸರ್ಗಿಕ ಭೋಗಚೇಷ್ಟೆಗಳೆನ್ನುವುವು ಹಿಂದುಸ್ಥಾನದಲ್ಲಿ ಎಷ್ಟರ ಸೆಲೆ ಇದೆ..? ಈ ಎಲ್ಲ ಸಂಖ್ಯೆಗಳನ್ನು ಕೂಡಿಸಿ, ಬೇರೆ ದೇಶದವರೊಡನೆ ನಮ್ಮನ್ನು ಅಳೆದರೆ ಹಿಂದುಸ್ಥಾನವು ಇನ್ನೊಂದು ದೇಶಕ್ಕೆ ಏನು ಬೋಧಿಸುವ ಆವಶ್ಯಕತೆಯೂ ಇಲ್ಲ. ಅದು ತನ್ನನ್ನು ತಾನು ತಿಳಿದರೆ ಸಾಕು.

ಹೀಗೆ ತೆರಗಣ್ಣಿಂದ ಇಂದು ನಾವು ದಾಂಪತ್ಯಜೀವನವನ್ನು ವಿಮರ್ಶಿಸಬೇಕು. ಆಗ ನಮ್ಮ ದೃಷ್ಟಿಪಥ ಬದಲಾಗುವುದು. ಮಲೆಯಾಳದಲ್ಲಿ ನಂಬೂದರಿ ಅವಿವಾಹಿತ ಕನ್ಯೆಯು ಮಡಿದರೆ, ಅವಳಿಗೆ ಸ್ವರ್ಗದೊರೆಯದೆಂದು ಅವಳ ಶವದೊಡನೆ ಯಾವನಾದರೊಬ್ಬನನ್ನು

ಹಿಡಿದು ತಂದು ಮದುವೆ ಮಾಡುತ್ತಾರೆ. ಅಂಥ ದಾಂಪತ್ಯದಿಂದ ಪಾತಿವ್ರತ್ಯವಲ್ಲದೆ ಬೇರೇನು ಬಂದೀತು?

ನಾವು ಮದುವೆಯಾದವಳನ್ನು ಹೆಣವಾಗಿ ಮಾಡಿ ಪಾತಿವ್ರತ್ಯದ ಯಶಸ್ಸನ್ನು ಸಾರುತಿದ್ದೇವೆ. ಈ ನಿಯಮ ಮುರಿದು, ಸ್ತ್ರೀಯ ಸಮಾನತೆ, ಆಸೆಗಳಿಗೆ ಗೌರವಕೊಟ್ಟು ವರ್ತಿಸಿದರೆ, ಇಲ್ಲವೇ ಅವರು ಅಂಥ ಅಧಿಕಾರವನ್ನು ಹಿಡಿದು ಕುಳಿತರೆ ಆಗ ನಮ್ಮ ದಾಂಪತ್ಯ ನೀತಿ ಬದಲಾಗುವುದು. ಇಲ್ಲವೆ ಅದನ್ನು ವಿಮರ್ಶಿಸುವ ರೀತಿ ಬದಲಾಗುವುದು.

ನಾವು ಪಾಶ್ಚಾತ್ಯರಂತೆ ಆಗಬೇಕೆಂದು ನನ್ನ ತೀರ್ಮಾನವಲ್ಲ. ಎಲ್ಲ ದೇಶಗಳು ತಂತಮ್ಮ ತೀರ್ಮಾನವನ್ನು ತಾವೇ ಮಾಡಬೇಕಾಗುತ್ತದೆ. ಆದರೆ ಆ ತೀರ್ಮಾನಗಳು ಮನುಷ್ಯ ಸ್ವಭಾವಗಳನ್ನು ಮರೆತು ನಡೆಯತಕ್ಕವಲ್ಲ. ಮನುಷ್ಯ ಶೀಲದ ದೌರ್ಬಲ್ಯವನ್ನೋ (ಸಹಜತೆ) ಯನ್ನು ಎಣಿಕೆ ಹಾಕಬೇಕು. ಇಂದಿಗೆ ಇಂದಿನದೇ ಆದರ್ಶಬೇಕು. ಹಿಂದಿನ ಸಮಾಜ ಚರಿತ್ರೆಗಳೆರಡರ ಪರವೆಯಿಲ್ಲದೆ— ಅಂದಿನ ಬರಿಯ ಪುಸ್ತಕ ನೀತಿಯನ್ನು ಇಂದಿಗೂ ಅಂಟಿ ಉಪಯೋಗಿಸಿ ಫಲವಿಲ್ಲ. "Honest is the best policy" ಬೋರ್ಡನ್ನು ತೂಗಹಾಕಿ ಗಿರಾಕಿಗಳನ್ನು ವಂಚಿಸುವ ವ್ಯಾಪಾರಿಗಳಾದರೇನು ಬಂತು?

ಇಂದು ನಮ್ಮ ದೇಶ ಪ್ರಪಂಚದ ಸುಳಿಗೆ ಸಿಲುಕಿದೆ. ಹಿಂದಿನ ಗಂಡು ಇಂದು ಬದುಕಿಲ್ಲ; ಆ ಸಮಾಜವಿಲ್ಲ, ಆ ಆರ್ಥಿಕ ಜೀವನವಿಲ್ಲ, ಆ ಮಾನಸಿಕ ಜೀವನವಿಲ್ಲ. ಆದರಿಂದ ಗಂಡಿನ ಮನಸ್ಸಿನ ಲವಲವಿಕೆ ಹೊಸಹಾದಿಯಲ್ಲಿ ಹರಿಯುತ್ತದೆ. ಅದರಂತೆ ಹೆಣ್ಣಿನ ಸ್ವಭಾವ.

ಮನುಷ್ಯನಿಗೆ ದಾಂಪತ್ಯ ನೀತಿಯಲ್ಲಿ ಎರಡು ಬಗೆಯ ಜೀವನ ಸಾಧ್ಯವಿದೆ. ಜೀವನಕ್ಕೆ ಹೊಂದಿಕೆ ಇಲ್ಲದ ಆದರ್ಶವನ್ನಿಲಿಸಿಕೊಂಡು— ಮೌಢ್ಯದಿಂದ ಬಂದ ಫಲವನ್ನು ಅನುಭವಿಸುವುದು. ಇಲ್ಲವೆ—ಜೀವನದ ಒಳಹೊರಗನ್ನು ಅರಿತು, ಅದಕ್ಕೆ ಸಮನಾದ ಆದರ್ಶವನ್ನು ಕಲ್ಪಿಸುವುದು. ಒಂದರಿಂದ ಆದರ್ಶ ಉಳಿಯುತ್ತದೆ; ಇನ್ನೊಂದರಿಂದ ಜೀವನ ಉಳಿಯುತ್ತದೆ.

ಸರಸಮ್ಮನ ಸಮಾಧಿಯಲ್ಲಿ 'ಆದರ್ಶ' ಸೂಚಿಸಿಲ್ಲ; ತೀರ್ಮಾನ ಮಾಡಿಲ್ಲ— ಜೀವನ ಮುಚ್ಚಿದ್ದನ್ನು ತೆರೆದು ಅದರ ಅಸಹ್ಯತೆಯನ್ನು ಚಿತ್ರಿಸಿದೆ. ಇಲ್ಲಿ 'ಅಸಹ್ಯತೆ' ಏನೆಂದು ವಿಮರ್ಶಿಸಬೇಕು. ಅನೀತಿಯು ಅಸಹ್ಯತೆಯಲ್ಲ— ನೀತಿಯ ಹೆಸರಲ್ಲಿ ನಡೆಯುವ ಅಸಹನೀಯತೆ.

ಇದು ಒಂದು ಹಳ್ಳಿಯ—ಆಸುಪಾಸಿನ ಅಲ್ಲಿ ಇಲ್ಲಿ ಕಾಣುವ ಚಿತ್ರ. ಹಿಂದುಸ್ಥಾನವು ಇದರಂಥ ಹಳ್ಳಿಗಳ ರಾಜ್ಯ.

ಸರಸಮ್ಮನ ಸಮಾಧಿಯು ಕಟುತರ ಟೀಕೆಗೆ ಒಳಗಾಗುವುದೆಂದು ಮೊದಲೇ ಊಹಿಸಬಲ್ಲೆ. ಅದರಲ್ಲೆ ಒಂದು ಸಂತೋಷವಿದೆ. ಜನರು 'ಬುಕ್' ಓದುತ್ತಿದ್ದಾರೆಂದು. ಇನ್ನು ಅವರ ಟೀಕೆ—ಪ್ರತಿಟೀಕೆಗಳಿಗೆ ಉತ್ತರ ಅವಶ್ಯವಿಲ್ಲ. 'ನಿಮ್ಮ ಎದೆ, ಜೀವನಗಳನ್ನು ಅಳೆಯುವ ಕೋಲಿಂದ ಎಲ್ಲರನ್ನು ಅಳೆಯಿರಿ.'— ಅಷ್ಟೇ ವಿನಂತಿ ಮಾಡಬಲ್ಲೆ. ಶಾಸ್ತ್ರದ 'ನೀತಿ'ಯ ಕೋಲು ಈಗ ಬೇಡ. ಶಾಸ್ತ್ರದ ಸಾವಿರಾರು ಗಂಡಸರು ಹೆಂಗಸರಿಗೆ ಅದು ಸಾಕು—ಜೀವನಕ್ಕೆ ಆ ಕೋಲು ಸಂಕೋಚ ವಾದುದು. ಅದರ ಪ್ರಮಾಣದಿಂದ ಎಂಥ ದೀರ್ಘ ಕಾಯನೂ ಮೂರಡಿ ಮನುಷ್ಯನಾದಾನು. ಅದರೆ ನಮ್ಮನ್ನು ಅಳೆದುಕೊಳ್ಳುವ ಕೋಲಿಗೆ ಆ ಚ್ಯುತಿಯಿಲ್ಲ. .

೨೧—೮—೧೯೩೭
ಪುತ್ತೂರು

**'ಶಿವರಾಮ ಕಾರಂತ'**

# ನಮ್ಮ ಮಾತು

ಆಗಸ್ಟ ೧೯೩೩ರಲ್ಲಿ ಈ ಮ. ಗ್ರ. ಮಾಲೆಯು ತಲೆದೋರಿ, ಈಗ ಐದನೆಯ ವರುಷದಲ್ಲಿ ತಲೆಯೆತ್ತಿ ನಿಂತಿದೆಯೆಂದು ಹೇಳಲು ಧೈರ್ಯ ಬಂದಿದೆ. ಈ '**ಸರಸಮ್ಮನ ಸಮಾಧಿ**'ಯು ಮಾಲೆಯ ಐದನೆಯ ವರುಷದ ಪ್ರಥಮ ಪ್ರಕಟನೆಯಾದರೂ ಒಟ್ಟಿನಲ್ಲಿ **೨೫**ನೆಯ ಪ್ರಕಟನೆಯಾಗಿದೆ. ಈ ಕೃತಿಯ ಕರ್ತರು ಶ್ರೀಮಾನ ಶಿವರಾಮ ಕಾರಂತರು. ಸಾಹಿತ್ಯಪ್ರಪಂಚದಲ್ಲಿ ಇವರ ಹೆಸರು ಈಗಾಗಲೆ ಚಿರಸ್ಮರಣೀಯವಾಗಿ ನೆಲೆಸಿದೆಯೆಂದು ದೃಢವಾಗಿ ನಂಬಿದ್ದೇವೆ. ಇಂಥವರ ಕೃತಿಯನ್ನು ನಮ್ಮ ಮಾಲೆಯ ಚಂದಾದಾರರಿಗೆ ನೀಡಬೇಕೆಂಬ ನಮ್ಮ ಮನದಾಸೆಯು ಇಂದಿಗೆ ಈಡೇರಿತೆಂದು ಹಿಗ್ಗಿದ್ದೇವೆ. ಅದಕ್ಕಾಗಿ ನಾವು ಶ್ರೀಮಾನ ಕಾರಂತರಿಗೆ ಎಂದಿಗೂ ಕೃತಜ್ಞರಾಗಿದ್ದೇವೆ.

ಸಂಪಾದಕರು

**ಮ. ಗ್ರ. ಮಾಲಾ, ಧಾರವಾಡ**

# ಸರಸಮ್ಮನ ಸಮಾಧಿ

# ಸರಸಮ್ಮನ ಸಮಾಧಿ

## ೧

## ನಾನೂ ಅಲ್ಲಿಗೇ?

'ನಾನೂ ಅಲ್ಲಿಗೆ ಹೋಗುವುದಾಯಿತೇ?' ಎಂದು ಜಾನಕಿ ನಿಟ್ಟುಸಿರು ಬಿಡುವುದಾಯಿತು. ಅವಳ ಹಣೆ ಬೆವರಿತ್ತು. ಸೆಕೆ ದಿವಸ ವೇನಲ್ಲ. ಅಷ್ಟೊಂದು ಗಾಬರಿಯೂ ಆಗಿರಲಿಲ್ಲ. ಆದರೂ ಜಾನಕಿ-ಯಮ್ಮ, ನೆರೆಮನೆ ಸೀತಕ್ಕನೊಡನೆ ಮಾತನಾಡುತ್ತ ಕುಳಿತಿದ್ದವಳು, ಹಣೆಯ ಬೆವರನ್ನು ಸವರಿಕೊಳ್ಳಬೇಕಾಯಿತು. ಕೈ ನೋಡುತ್ತಾಳೆ: ಬೆರಳುಗಳಿಗೆ ಕುಂಕುಮದ ನೀರು ಕರಗಿ ರಕ್ತದಂತೆ ಅಂಟಿಕೊಂಡಿತ್ತು. ಅದನ್ನು ಕಂಡು, ಸೀತಕ್ಕನೊಡನೆ 'ಸೀತಕ್ಕ, ಇದು ನೋಡು ನನ್ನ ಕೈಬೆರಳು'—ಎಂದಳು. ಒಮ್ಮೆಂದೊಮ್ಮೆಗೆ 'ರಕ್ತ!' ಎಂದು ಸೀತಕ್ಕ ಬೆಚ್ಚುವುದಕ್ಕೆ ಮೊದಲೇ ಜಾನಕಿ 'ರಕ್ತ ಅಲ್ಲ, ರಕ್ತದ ಹಾಗೇ.. ಅದು ಹಣೆ ಬೆವರಿ ಕುಂಕುಮವನ್ನು ತೇಲಿಸಿತು ನೋಡು—ನಾನು ಬೆವರು ಉಜ್ಜಿಕೊಂಡೆನಲ್ಲ. ಈಗ, ಅದೇ ರಕ್ತದ ಹಾಗೆ ಬೆರಳಿಗೆ ಅಂಟಿತು. ಸೀತಕ್ಕ, ಏನು ರಕ್ತ, ಏನು ಬೆವರು! ಏನು ಕುಂಕುಮ! ನೋಡೇ,

ಈ ಮನೆಯಲ್ಲಿ ಇಷ್ಟು ವರ್ಷಗಳು ಕಳೆದದ್ದು ಅಂತೀಯಾ. ಅದು ಹೀಗೇನೆ ರಕ್ತ ಸುರಿಸಿದ್ದು ಅಂತಿಟ್ಕೊಕೋ! ಐದು ಮಕ್ಕಳನ್ನು ಹಡೆದ ಹೊಟ್ಟೆ—ವರ್ಷ ಮೂವತ್ತೈದು ಏರಿತು. ಈ ಕುಂಕುಮದ ಗತಿ–ಇದು ಇದ್ದರೂ ಅಷ್ಟೆ–ಇಲ್ಲದಿದ್ದರೂ ಅಷ್ಟೆ ಎಂಬ ಹಾಗೆ......' ಎಂದು ಮಾತುಗಳನ್ನು ನಿಲ್ಲಿಸಿ, ಮೋರೆ ತಗ್ಗಿಸಿ ಬೆರಳಿಗೆ ಅಂಟಿದ ಕುಂಕುಮದ ನೀರನ್ನೇ ಕಾಣುತ್ತಿದ್ದಳು. ಇಷ್ಟರತನಕ ಹಣೆ ಬೆವತಿದ್ದರೆ ಈಗ ಕಣ್ಣು ಹನಿಯುವ ಹಾಗಾಯಿತು.

ಸೀತಕ್ಕನಿಗೆ ಇದೊಂದು ಹೊಸ ಚಿತ್ರವಲ್ಲ. ಸೀತಕ್ಕ ಸ್ವತಃ ಕಣ್ಣೀರು ಸಾವಿರಸಾರಿ ಕಳೆದವಳು. 'ಅದು ಕಣ್ಣೀರು—ಹೆಂಗಸರ ಹಣೆಬರಹ' ಎಂದು ಅವಳ ಒಂದು ಕಾಲದಲ್ಲಿ ಬದುಕಿದ್ದ ಗಂಡ ಹೇಳುತ್ತಿದ್ದರೂ ಸೀತಕ್ಕನ ಕಣ್ಣೀರು ಬೇರೆ ಕಡಿಮೆಯಾಗಿರಲಿಲ್ಲ. ಈಗ ಅವಳು ಕುಂಕುಮದ ಋಣವಿಲ್ಲದವಳು. ಆದರೂ ಸಂಟರ ಕಾಟ, ಬಡತನದ ಹಿಂಸೆ ಎಂದು ಕಣ್ಣೀರಿನ ಸ್ನಾನ ತಪ್ಪುತ್ತಲಿಲ್ಲ. ತನಗೆ ಗಂಗಾಭಾಗೀರಥಿ ತಪ್ಪದಿದ್ದರೂ ಬೇರೆಯವರು ಗೋಳುಗರೆಯುವುದನ್ನು ಕಂಡರೆ ಸೀತಕ್ಕನಿಗೆ ಆಗದು. ಅದರಲ್ಲೂ ಅವಳ ಜೀವದ ಜಾನಕಿ ಅಳುವುದೆಂದರೆ ಅವಳ ಅಕ್ಕನೋ ತಂಗಿಯೋ ಅತ್ತಂತೆ. ಅವರಿಬ್ಬರೂ ಕುಳಿತು ಅತ್ತುದ್ದುಂಟು; ಒಬ್ಬರನ್ನು ಇನ್ನೊಬ್ಬರು ಸಾಕ್ಷಿಯಾಗಿರಿಸಿಯೂ ಅತ್ತುದ್ದುಂಟು. ಆದೂ ಜಾನಕಿಯ ಗಂಡ ತಿಮ್ಮಪ್ಪಯ್ಯ ಹೇಳುವಂತೆ 'ಸಾವಿರದ ನೂರ ಮುವತ್ತೆರಡುವರೇನೆ ಬಾರಿಗೆ.' ಕಾರಣಗಳು ಹೆಂಗಸರ ಪಾಲಿಗೆ ಬೇರೇನೇ ಇದ್ದರೂ ತಿಮ್ಮಪ್ಪಯ್ಯನ ಪಾಲಿಗೆ ಇದಕ್ಕೆಲ್ಲಾ ಹಣೆಬರಹವೇ ಮುಖ್ಯ ಕಾರಣ.

ಸೀತು:— ಮೆಲ್ಲನೆ ಜಾನಕಿಯ ಹೆಗಲಮೇಲೆ ಕೈಯಿಟ್ಟು ಬೆರಳಿಂದ ಸವರುತ್ತ 'ಜಾನಕಿ ಇವತ್ತೇನು ಬಂತು....ಅದೇ ಅಲ್ಲವೆ....ಚಿನ್ನ ಗಿನ್ನ ಬೇಡ ಅಂದ್ರಲ್ಲ. ನೀನು ಹಟ ಹಿಡಿದಿಯೇನೇ? ಸಾಯಲಿ ಆ ಚಿನ್ನ. ಅದನ್ನು ತೆಗೆದುಕೊಂಡು ನಿನಗೇನು ಮಾಡಬೇಕು?....'

ಜಾನಕಿ:– ನೀನು ಹಾಗೆಂದರೆ? ನನಗೇನು ಮಕ್ಕಳಿಲ್ಲವೇ. ನಾಳೆ ಆ ಹೆಣ್ಣುಮಕ್ಕಳ ಮುಸುಡು ನೋಡಿಯೋ ಅಳಿಯಂದಿರು ಬರುತ್ತಾರೆಯೋ! ಅಲ್ಲ–ಏನು ವಿದ್ಯೆಯೋ!

ಸೀತು:– ನಾಳೆ ಅಳಿಯನನ್ನು ಹುಡುಕುವುದು ಕಷ್ಟವಾದರೆ ಆವರಿಗೆ ಬುದ್ಧಿ ಬರುತ್ತದೆ.

ಜಾನಕಿ:– ಬುದ್ಧಿ ಬರುತ್ತೆ—ಹೇಳಿದ್ದನ್ನು ಕೇಳುವವರಿಗೆ. ನಾನು ಹೇಳಿದರೆ ನನಗೇ 'ಬುದ್ಧಿಯಿಲ್ಲ. ಈ ಹೆಣ್ಣುಮಕ್ಕಳ ಕುಲಕ್ಕೇ ಹಾಗೆ' ಅನ್ನುತ್ತಾರೆ. ಅವರು....ಏನಿಲ್ಲ ಆ ಕೆಳಗಿನ ಗದ್ದೆ ಮಹಾಲಿಂಗ ಕಳೆದ ವರ್ಷದ ಗೇಣಿ ಹಣ ತಿಂದೇ ಹೋಗಿದ್ದ. ಇವರಿಂದ ವಸೂಲು ಮಾಡಲಿಕ್ಕೆ ಆಗದೆ, ಅವನನ್ನು ಜಾಗದಿಂದ ಓಡಿಸಿದರು. ನಾನು ಶತಂ ಸಾಟಿ ಹಟಮಾಡಿ ಅವನ ಗುಡಿಯ ಮುಂದೆ ಕುಳಿತು, ಅವನನ್ನು ಚಂದ ಮಾತಾಡಿಸಿ ಆ ಐದು ರೂಪಾಯಿ ಬರುವ ಹಾಗೆ ಮಾಡಿದೆ.

ಸೀತು:– ಮಾಲಿಂಗ ಕೊಟ್ಟ ಕಡೆಗೂ!

ಜಾನಕಿ:– ಅವನು ಕೊಟ್ಟಾಯಿತು. ದೇವರು ಕೊಟ್ಟರೂ ಪೂಜಾರಿ ಬಿಡ ಎಂಬ ಹಾಗೆಯೂ ಆಯಿತು. ಅದನ್ನು ಅಕ್ಕಸಾಲಿಗನ ಕೈಮೇಲಿರಿಸಿ, ನಮ್ಮ ಪುಟ್ಟಮ್ಮನಿಗೇನಾದರೂ ಚಿನ್ನ ಮಾಡಿಸುವ ಎಂದು ಯೋಚಿಸಿದರೆ....

ಸೀತು:– ಹೌದಕ್ಕ, ಪುಟ್ಟಿಯ ಮೂಗು ಬರಿ ಬೋಳು ಕಾಣುತ್ತೆ. ಹೆಣ್ಣುಮಕ್ಕಳಿಗೆ ಮೂಗಿಗೆ ಮೂಗುತಿ ಇಲ್ಲದಿದ್ದರೆ ಅಲಂಕಾರವೇ ಇಲ್ಲ.

ಜಾನಕಿ:– ತುಸು ಸಿಟ್ಟುಬಂದವಳಂತೆ 'ಹೌದು, ಇದ್ದರೆ ಚಂದ. ಇಲ್ಲದಿದ್ದರೂ ಚಂದ. ಸೀತಕ್ಕ, ಹೆಣ್ಣುಮಕ್ಕಳಿಗೆ ಹಣ ಕಾಸಿನ ಮೇಲೆ ಹಕ್ಕೇನು ಹೇಳು? ಅಡುಗೆ ಒಲೆ ಮುಸುರೆ ಪಾತ್ರೆ ಇದು ನಮ್ಮ ಹಣೆಯ ಬರಹ' ಹೀಗೆಂದು ಬೆಳಗ್ಗೆ ಮನೆಯಲ್ಲಿ ಆ ದಿನ ನಡೆದ ಚರಿತ್ರೆಯನ್ನು ಬಿಡಿಸಿ ಬಿಡಿಸಿ ಹೇಳಿದಳು. ದುಃಖದ ಭರದಲ್ಲಿ ನಡೆದ ಕಥೆಯನ್ನು ಬಣ್ಣಿಸುವುದಕ್ಕೇನೇ ನಡೆದುದಕ್ಕೂ ಹೆಚ್ಚು ಸಮಯ ಹಿಡಿಯಿತು.

ಮಹಾಲಿಂಗನಿಂದ ಐದು ರೂಪಾಯಿ ವಸೂಲು ಬಂದಿತೆಂದು ಜಾನಕಿ ಯಜಮಾನರಿಗೆ ಹೇಳಲಿಲ್ಲ. ನಗ ಮಾಡಿಸಿ ಮಗಳಿಗೆ ತೊಡಿಸಿದ ಮೇಲೆ ಹೇಳಿದರೆ ಸಾಕೆಂದಿತ್ತು. ಆದರೆ ಈ ವಿಷಯದಲ್ಲಿ ತಿಮ್ಮಪ್ಪಯ್ಯನ ಕಣ್ಣು, ಕಿವಿಗಳೆರಡೂ ಬಲು ಶುದ್ಧ. ಅವರಿಗೆ ಅಡಚಣೆಯೂ ಕಡಿಮೆಯಿಲ್ಲ. ನಿತ್ಯ ಅಡಚಣೆಯ ಜನ ಅವರು. ಅದರಲ್ಲಿ ಈ ಹೊತ್ತು ಬೇರೆ ಮುನ್ಸೀಫ ಕೋರ್ಟಿನಲ್ಲಿ ಒಂದು ಕೈಫಿಯತ್ತು ಹತ್ತಿಸಬೇಕೆಂದು ನಿರ್ಣಯಮಾಡಿಕೊಂಡಿದ್ದರು. ಜಾನಕಿಯು ವಸೂಲು ಮಾಡಿ ತಂದ ರೂಪಾಯಿಗಳನ್ನು ನಾಗಂದಿಗೆ ಮೇಲೆ ಇರಿಸಿ ಸ್ನಾನಕ್ಕೆ ಹೋದಳು. ಬರುವುದರಲ್ಲಿ ಅದು ತಿಮ್ಮಪ್ಪ ಗಿಡುಗನ ಕಣ್ಣಿಗೆ ಬಿತ್ತು; ಅವರ ಮುಂಗ-ಮುಷ್ಟಿಗೂ ಸೇರಿತು. ತಿಮ್ಮಪ್ಪಯ್ಯನು ಉಸುರೆತ್ತಲಿಲ್ಲ. ಆದರೆ ನಾಗಂದಿಗೆಯ ಮೇಲಿನ ಕಾಸು ಕಾಣದೆ, ಜಾನಕಿ ತಬ್ಬಿಬ್ಬಾದಳು. ಮಕ್ಕಳಿಗೆ ಎಟಕುವ ಸ್ಥಳವಲ್ಲ. ಅಡುಗೆ ಮನೆಗೆ ಬೇರೆಯವರು ಬರುವ ಹಾಗಿಲ್ಲ. ಆದರೂ ರೂಪಾಯಿ ಇಲ್ಲ ಎಂದರೆ. . . .ಆದಕ್ಕಾಗಿ ಊಟಕ್ಕೆ ಕುಳಿತಾಗ 'ಆವಾಗ ಅಡುಗೆ ಮನೆಗೆ ಬಂದಿದ್ದೀರಾ?' ಎಂದು ಕೇಳಿದಳು. ಕೇಳಿದ್ದು ಮಾತ್ರನೆಯೇ . . . . . . ಉತ್ತರ ಮಾತ್ರ 'ಉಪ್ಪಳ್ಳಿನೇಶ'ನ* ರಾವಣನ ಕೇಕೆಯಲ್ಲಿಯೇ ದೊರೆಯಿತು.

ಹಣ ಸಂಪಾದಿಸಿದ ರೀತಿ ಅವಳು ಹೇಳಿದರೆ ಸಂತೋಷ ಪಡುವ ಬದಲು 'ಅವನ ಅಪ್ಪನಿಂದ ವಸೂಲು ಮಾಡುತ್ತಿದ್ದೆ. ಪಂಚಾಯತು ಕೋರ್ಟಿನಲ್ಲಿ ಕೈಪೀತು ತೆಗೆಯುತ್ತೇನೆ ಎಂದು ಮೊನ್ನೆ ಹೆದರಿಸಿದ್ದಕ್ಕೆ ಕೊಟ್ಟ ಮಗ'--ಎಂದು ಅಬ್ಬರಿಸಿದರು. ಮುಂದೆ ಮಾತೆತ್ತುವ ಹಾಗಿಲ್ಲ. ಆದರೂ ಜಾನಕಿ ಮಗಳ ಮೂಗುತಿ ನೆನಪಿಂದ 'ಮೂಗುತಿಗಾದೀತು' ಎಂದಿರಿಸಿದ್ದೆ ಎಂದಳು.

ಈಗ ರಾವಣನ ಅಡಗಿದ್ದ ಇನ್ನೊಂಭತ್ತು ಕಂಠಗಳು ಸೇರಿದುವು. 'ಅಲ್ಲ. ಇನ್ನುಮುಂದೆ ನನ್ನ ಆಸ್ತಿ ವಹಿವಾಟನ್ನು ನೀನೇ ನೋಡಿ-ಕೊಂಡು ಬಿಡು. ಗೇಣಿ ವಸೂಲಿ, ಒಕ್ಕಲನ್ನು ಸೇರಿಸುವುದು ಬಿಡುವುದು, ಕೋರ್ಟಿಗೆ ಹೋಗುವುದು ಬಿಡುವುದು ನಿನಗಿರಲಿ. ನಾನು

* ಯಕ್ಷಗಾನ ಬಯಲಾಟದ ರಾಕ್ಷಸಭೂಮಿಕೆ ವಹಿಸುವವನೊಬ್ಬ.

ಮನೆಯಲ್ಲಿ ದೇವರ ಪೂಜೆ ಮಾಡುತ್ತಿರುತ್ತೇನೆ. ಐದು ಹೆಣ್ಣುಮಕ್ಕಳನ್ನು ಪಡೆದ ಮಹಾತಾಯಿ. ಡಜನಿಗೆ ಇನ್ನೂ ಏಳು ಕಡಿಮೆಯಷ್ಟೆ. ಅವರಿಗೆ ಚಿನ್ನಗಿನ್ನ ಮಾಡಿಸಿ ಅಳಿಯಂದಿರನ್ನೆಲ್ಲಾ ಹುಡುಕಿ ತಂದು ಒಂದು ಸಂಭ್ರಮ ನಡೆಸು....' ಎಂದರು.

ತಿಮ್ಮಪ್ಪಯ್ಯ ಒಮ್ಮೆ ಬಾಯಿ ತೆರೆದರೆಂದರೆ ಅದಕ್ಕೆ ಮಿತಿ ಇಲ್ಲ. ತಾಳಮದ್ದಲೆಯ ಒಂದು ಅರ್ಥವನ್ನು ಮುಗಿಸಿಯೇ ಬಿಟ್ಟರು. ಅದರ ಅರ್ಥ ಹೇಳುವ ತ್ರಾಣ ಜಾನಕಿಗಿಲ್ಲ. ಅವಳು ಬೇಗ ಬೇಗ ಬಡಿಸಿ, ಎಲೆ ತೆಗೆದು, ಎಂಜಲು ಸಾರಿಸಿ ಮುಸುರೆ ತಿಕ್ಕಿ, ಹೆಪ್ಪುಹಾಕಿ, ದೇವರ ಮನೆಯ ಪಡಸಾಲೆಯಲ್ಲಿ ಕುಕ್ಕುರಿಸಿದಳು......ರಾತ್ರಿಯ ಊಟ ವಜಾ....ಈ ಮಧ್ಯಾಹ್ನದ ಊಟವನ್ನು ಉಂಡಹಾಗೆ ಆಗಲಿಲ್ಲ. ಎಂದಿನಂತೆ ಮನೆಗೆ ಸೀತಕ್ಕ ಬಂದಿದ್ದೆಂದು ಹಿಂದಿನ ದಿನದ ಕಥೆಯನ್ನು ಹೇಳಿದಳು.

ಸೀತಕ್ಕನಿಗೆ ಏನೇನೋ ಅನಿಸಿತು. 'ಜಾನಕಿ, ನೀನು ಎಷ್ಟೂ ಹೇಳು—ತಾರಾಬಲ—ಗೀರಾಬಲ ಎಲ್ಲ ಸುಳ್ಳು. ಪಡೆದು ಬಂದದ್ದು ಯಾರಿಂದಲೂ ತಪ್ಪಿಸಲಿಕ್ಕೆ ಬರುವದಿಲ್ಲ. ಮನೋಬಲ—ಅದು ಗಟ್ಟಿ. ಜಾತಕ ಎಷ್ಟು ಕೂಡಿದರೇನು? ಹೆಣ್ಣು ನೆಲ ನೋಡುತ್ತಿರಲಿ; ಮಾಣಿ ಗೋಡೆ ನೋಡುತ್ತಿರಲಿ. ಫಲವೇನು?..ಅಲ್ಲ ಈ ವಯಸ್ಸಿನಲ್ಲಾದರೂ ಕೈಹಿಡಿದವಳನ್ನು ಗೋಳಾಡಿಸಬಾರದು.' ಎಂಬ ಬುದ್ಧಿ ಆ ತಿಮ್ಮಪ್ಪಯ್ಯನಿಗೆ ಬರಬಾರದೇ! ತಿಮ್ಮಪ್ಪಯ್ಯ ಊರವರನ್ನೆಲ್ಲಾ ಕೂಡ್ರಿಸಿ ಮಳೆ ಬರ್ರೆನ್ನುವಾಗ ರಾಮಾಯಣ, ಸಾವಿತ್ರಿ—ಎಂದು ಪುರಾಣ ಹೇಳುತ್ತಾರೆ.

ಜಾನಕಿ ಆಗ 'ಸೀತಕ್ಕ ಪುರಾಣ—ಗೀರಾಣ ನಮ್ಮನ್ನೇನು ಮಾಡೀತು! ಕೈ ಬೇವಿನಗಿಡಕ್ಕೆ ಬೆಲ್ಲದ ಪಾನಕ ಎರೆದರೆ, ಬೇವಿನ ಚಿಗುರು ಸೀ ಆದೀತೆ? ಹೇಳು'

ಯಾವಾಗಲೂ ಮಾಡುವಷ್ಟು ಉಪದೇಶಗಳನ್ನು ಮಾಡಿ ತೋರುವಷ್ಟು ಸಮಾಧಾನಗಳನ್ನು ಒಪ್ಪಿಸಿ, ಕೊನೆಗೆ 'ನೀನು ಅದೊಂದು ಕೆಲಸ ಇನ್ನೂ ಯಾಕೆ ಬಾಕಿ ಇಡುತ್ತಿ ಹೇಳು'— ಎನ್ನುವ ವಾಡಿಕೆಯಂತೆ

ಈ ದಿನವೂ ಸೀತಕ್ಕ 'ನಾನನ್ನುತ್ತೇನೆ: ನಾನೂ ಬರುತ್ತೇನೆ. ಹತ್ತಿರ ಯಾರೂ ಇಲ್ಲದ ಹಾಗೆ ಹೋಗುವ. ಯಾರಾದರೂ ಬಂದರೆ ನಾನು ಹೇಳುತ್ತೇನೆ. ಮಾಸ್ತಿ ಹಣೆಗೆ ಕುಂಕುಮ ಇಟ್ಟು ತೀರ್ಥದಲ್ಲಿ ತೆಂಗಿನ ಕಾಯಿ ಮುಣುಗಿಸಿ ಬಿಡು' ಎಂದಳು. ಹಾಗೊಂದು ಪದ್ಧತಿ ಅವರ ಊರಿನದು. ಮಾಸ್ತಿ ಗುಡಿಗೆ ಯಾರೂ ಹೋಗಬಹುದು. ಹೆಂಗಸರೂ ಗಂಡಸರೂ ಸಾವಿರಾರು ಮಂದಿ ಶುಕ್ರವಾರಕ್ಕೆ ಅಲ್ಲಿಗೆ ಹೋಗಿ ಬರುತ್ತಾರೆ. ಆದರೆ ಮೇಲೆ ಹೇಳಿದ ಕೆಲಸ ಮಾಡಬೇಕಾದ್ದು ಗುರುವಾರ ದಿವಸ ಮಾತ್ರ. ಗಂಡಸರಾಗಲಿ ಹೆಂಗಸರಾಗಲಿ ದಾಂಪತ್ಯಸುಖವಿಲ್ಲವೆಂದು ಕಂಡವರು ಗುರುವಾರ ಒಂಟಿಯಾಗಿ ಅಲ್ಲಿಗೆ ಹೋಗಿ ಮಾಸ್ತಿ ಹಣೆಗೆ ಕುಂಕುಮವೇರಿಸಿ ಹೊರಗೆ ಬಂದು, ಗುಡಿಯ ಮುಂದಿನ ತೀರ್ಥದಲ್ಲಿ ಒಂದು ಟೆಂಗಿನಕಾಯನ್ನು ಹಾಕಿ ಒರಬೇಕು. ಈ ಕೊನೆಯ ವಿಧಿ ಮಾತ್ರ ಗುಪ್ತವಾಗಿ ನಡೆಯಬೇಕು, ದಾಂಪತ್ಯ ಕ್ಲೇಶ ಹೇಗೆ ಪ್ರಪಂಚಕ್ಕೆ ತಿಳಿಯದೋ ಅಥವಾ ತಿಳಿಯಬಾರದೋ ಹಾಗೇನೇ ಈ ವಿಚಿತ್ರ 'ಮುಟ್ಟು'ನ್ನು* ಯಾರೂ ಕಣ್ಣಿಂದ ಕಾಣಕೂಡದು.

ಅಂಥಾ ಹರಕೆಯನ್ನು ತಾನೂ ಹೊರಬೇಕಾಯಿತೇ ಎಂಬುದು ಜಾನಕಿಯ ವ್ಯಥೆ. 'ಸಾಯುವ ತನಕ ಹೀಗೆ ನರಳಿ ಸಾಯುವುದಕ್ಕಿಂತ ಮಾಸ್ತಿ ಸರಸಮ್ಮನ ಅನುಗ್ರಹ ಪಡೆದು ಸುಖ ಬರುವುದಾದರೆ ಯಾಕೆ ಪಡೆಯಬಾರದು' ಎಂಬುದು ಸೀತಕ್ಕನ ಹಿತೋಕ್ತಿ.

---

* ಗುಪ್ತ ಚಿಕಿತ್ಸೆ. ಇದರಲ್ಲಿ ಔಷಧ ಬಲಕ್ಕಿಂತ ಗೋಪ್ಯದಲ್ಲಿಯೇ ಹೆಚ್ಚಿನ ಬೆಲೆ. ಅದನ್ನು ವಿಶ್ವಾಸ ಚಿಕಿತ್ಸೆ ( faith cure ) ಎಂದರೂ ಸಲ್ಲುವುದು.

೨

# ಮಹಾಸತಿ ಸರಸಮ್ಮ

ಮಹಾಸತಿ ಸರಸ್ವತಿಯಮ್ಮನೇ ತದ್ಭವಿಸಿ ಮಾಸ್ತಿ ಸರಸಮ್ಮ ಇಲ್ಲವೇ, ಮಾಸ್ತಿ ಸರಸಿಯಾಯಿತು. ಮಾಸ್ತಿಯ ಕಲ್ಲು ಈಗಲೂ ಆವರ ಊರಿನಲ್ಲಿದೆ. ಮಾಸ್ತಿಯನ್ನು ಕುರಿತು ವದಂತಿ, ಸ್ಥಳ ಪುರಾಣ, ಮಹಾತ್ಮೆ—ಹೀಗೆ, ಅರೇಬಿಯನ್‌ನ್ಯಾಟ್ಸನ್ನು ಅರವತ್ತು ಪಾಲಿಗೆ ಮಿಗಿಸುವ ಸಾಹಿತ್ಯವಾಗಿದೆ. ಅದನ್ನೆಲ್ಲಾ ತಿಳಿದುಕೊಂಡರೆ ಎಂಥ ನಾಸ್ತಿಕನೂ 'ಮಾಸ್ತಿಕ'ನಾದಾನು. ಬಾರಕೂರಿನಲ್ಲಿ ಫರ್ಲಾಂಗು ಕಲ್ಲುಗಳಿಗೆ ಸಿಗುವ ಮರ್ಯಾದೆ ಅಲ್ಲಿನ ಮಾಸ್ತಿ ಕಲ್ಲುಗಳಿಗೆ ಸಿಗುತ್ತಿಲ್ಲ. ಪ್ರಾಯಶಃ ಅಲ್ಲಿ ಕಲ್ಲುಗಳ ಸಂಖ್ಯೆ ತುಂಬಾ ವಿಪರೀತವೆನ್ನುವ ಹಾಗಿದೆ. ಅಲ್ಲದೆ, ಕಲ್ಲಿಗೆ ಕಾರಣರಾದವರು ವೀರ ಸತಿಯರು ಎಂಬುದಿಷ್ಟೇ ಗೊತ್ತು— ಹೆಚ್ಚಿನ ಕಥೆ ಕಾವ್ಯ ಚರಿತ್ರೆಗಳು ಅವಕ್ಕಿಲ್ಲ. ಈ ಮಾಸ್ತಿ ಕಲ್ಲು ಮಂಜೇಶ್ವರದ ಸುತ್ತ ೩೦ ಮೈಲಿಗೆ ಒಂದೇ ಒಂದು ಎನ್ನುತ್ತಾರೆ. ಈ ವಿಷಯವನ್ನು ಚರ್ಚಿಸಿ ಉಪಯೋಗವಿಲ್ಲ. ಮಂಜೇ-ಶ್ವರಕ್ಕೆ ಮೂರು ನಾಲ್ಕು ಮೈಲಿನೊಳಗೆ, ಅಥವಾ ಬರಿಯ ಒಂದು ಕೂಗಿನ ದೂರದಲ್ಲಿರುವ ಕಲ್ಲು ಅದು.

ಇನ್ನು ಮುಂದೆ ಮಾಸ್ತಿ ಕಲ್ಲು ಅದು ಇದು ಎಂದು ಮರ್ಯಾದೆಗೆ ಕಡಿಮೆ ಮಾಡಿ ಮಾತನಾಡುವಂತಿಲ್ಲ. ಮಾಸ್ತಿಯ ಮರ್ಯಾದೆ ಆವಳಿಗೇನೇ ಇದೆ. ಉಳಿದ ಪಂಚಪತಿವ್ರತೆಯರ ಹೆಸರನ್ನು ಮೂಡಂಬೈಲಿನವರು, ಏಕೆ ಉಳಿದ ಜನರೂ ಸಹ 'ಅಹಲ್ಯಾ ದ್ರೌಪದೀ ಸೀತಾ...' ಎಂದು ಒಂದು ಶ್ಲೋಕದಲ್ಲೇ ಮುಗಿಸಿಬಿಡುತ್ತಾರೆ. ಆದರೆ ಸರಸಮ್ಮ ಹುಟ್ಟಿದ್ದು ಸತ್ತದ್ದು ಪ್ರತಿಯೊಬ್ಬರಿಗೂ ತಿಳಿದ ಕಥೆ. ತೀರ ಹಣ್ಣುಜಬ್ಬು ಮುದುಕಿಯರನ್ನು ಕೇಳಿದರೆ 'ನಮ್ಮ ಅಜ್ಜಿಯ ಅಕ್ಕ 'ನಾನು ಸಣ್ಣದಿರುವಾಗ ಆವಳನ್ನು ಕಂಡಿದ್ದೇನೆ' ಎಂದು ಅನ್ನುತ್ತಿದ್ದಳಂತೆ' ಎಂದು ಹೇಳುತ್ತಾರೆ.

ಮೂಡಂಬೈಲಿನ ಅಂಚಿನಲ್ಲಿ ನಾಗನ ಬನವಿರುವ ಹಾಗೆ ಗಿಡಗಳ ದಟ್ಟಣಿ ಇದೆ. ಅದರೊಳಗೆ ಚಿಕ್ಕೊಂದು ಗುಡಿಯೂ ಇದೆ. ಗುಡಿಯ ಮುಂದೆ ಸಣ್ಣದೊಂದು ಕೊಳವಿದೆ....ಅದೇ ತೀರ್ಥ. ಇಷ್ಟನ್ನೂ ಊರಿನ ಕ್ರೈಸ್ತ ಶಾನುಭಾಗರು ಮೂಡಂಬೈಲಿನ ಪಡುಬದಿಯಲ್ಲಿರುವ ನಾಗನಬನ ಎಂದು ರಿಕಾರ್ಡು ಮಾಡಿದ್ದಾರೆ. ಆದರೆ ಆ ಶಾನುಭಾಗರ ಹಾಗೆ ಉಳಿದ ಆಸ್ತಿಕರು ಮಾಸ್ತಿಯನ್ನು ಎಣಿಸುವಂತಿಲ್ಲ. ನೀವು ಬೈಲಿನ ಚನ್ನಕ್ಕನನ್ನು ಕೇಳಿ, ಈಶ್ವರಭಟ್ಟರ ಹೆಂಡತಿಯನ್ನೂ ಸ್ವತಃ ಈಶ್ವರಭಟ್ಟರನ್ನೂ ಕೇಳಿರಿ—ಅವರೆಲ್ಲ ಮಾಸ್ತಿಯೆಂದರೆ ಅಮ್ಮನವರ ಹಾಗೆ ಕಾಣುತ್ತಾರೆ. ಸೀತಮ್ಮನವರೇ ರಾಮಚಂದ್ರನನ್ನು ತಿರುಗಿ ಪಡೆಯಲಿಕ್ಕೆ ಮೂಡಂಬೈಲಿನಲ್ಲಿ ಜನ್ಮವೆತ್ತಿದಳಂತೆ. ಅದೇ ಊರಿನ ನೀಲಾಚಲಯ್ಯನನ್ನು ಮದುವೆಯಾದಳಂತೆ. ಮದುವೆಯಾದಂದಿನಿಂದ ಒಂದೇ ಒಂದು ದಿನ ಪತಿಯ ಸೇವೆ ತಪ್ಪಿಸಿದವರಲ್ಲ. ನೀಲಾಚಲಯ್ಯ ಒಂದೇ ಒಂದು ದಿವಸ ಸರಸಮ್ಮನನ್ನು ನೋಯಿಸಿದವರಲ್ಲ. ಹಿಂದಿನ ಜನ್ಮದಲ್ಲಿ ಅಗಸರವನ ಮಾತನ್ನು ಕೇಳಿ, ತಾವು ಸೀತೆಗೆ ಎಸೆದ ದ್ರೋಹ ವನ್ನು ಕಂಡು ಅವರಿಗೆ ನೋವಾಗದಿದ್ದೀತೆ? ಕೊನೆಗೆ ಅನೇಕ ಮನೆ ಗಳನ್ನು ಹರಸಿ ಒಂದು ದಿವಸ ನೀಲಾಚಲಯ್ಯ ಅಂತರ್ಧಾನವಾದರು. ಆಗ ಸರಸಮ್ಮ, ಅವರ ಕಳೇಬರವನ್ನು ಚಿತೆಯಲ್ಲಿರಿಸಿ, ಊರಿನ ಎಲ್ಲಾ ಮುತ್ತೈದೆಯರಿಂದ ಕುಂಕುಮವಿರಿಸಿಕೊಂಡು ಸಹಗಮನ ಮಾಡಿ ದರು! ಆಗ ನೆರೆದವರೆಲ್ಲ ಹೊಗೆ ಸುರಳಿಸುರುಳಿಯಾಗಿ ಸ್ತ್ರೀರೂಪ ತಾಳಿ ಅಂಬರವನ್ನು ಚುಂಬಿಸಿದ್ದನ್ನು ಕಂಡರಂತೆ.

ಆ ದಿವಸ ನಡೆದ ಒಂದು ಚಮತ್ಕಾರವನ್ನು ಹೇಳದೆ ಇರಬಾರದು. ಸರಸಮ್ಮ ಎಂದರೆ ಊರಿಗೆನೇ ಅಮೃತ. ಅವರು ಚಿತೆಯೇರಿದರೆ ಕಾಣು ವವರಿಗೆ ಹೇಗೆ ಕಂಡಿತು! ಅವರ ಅತಿ ಆಪ್ತರೆನ್ನುವ ನಾಲ್ಕೈದು ಮಂದಿ ಹೆಂಗುಸರು ಗೋದಿಸಿ, ಎದೆಯೊಡೆದುಕೊಂಡರು. ಕೊನೆಗೆ ಸರಸಮ್ಮ ಹೋಗುತ್ತೇನೆ—ಎಂದು ಚಿತೆ ಏರುವ ಕಾಲಕ್ಕೆ ತಮ್ಮನ್ನು ತಾವೇ ಮರೆತು 'ಸರಸಿ, ನಮ್ಮನ್ನು ಎಲ್ಲಿ ಬಿಟ್ಟು ಹೋಗುತ್ತಿ ತಾಯಿ' ಎಂದು ಅದೇ ಚಿತೆಯನ್ನು ಹಾರಿಕೊಂಡರು. ಹಾಗೆ ಹಾರಿದವರನ್ನು

ಹಿಂದಕ್ಕೆ ಸೆಳೆದರಂತೆ. ಅವರೆಲ್ಲ ಮೈ ಸುಟ್ಟುಕೊಂಡು ಸತ್ತರು ಎಂದು ಒಂದು ಕಥೆ. ಇಲ್ಲ–ಅವರೂ ಅಂತರ್ಧಾನವಾದರು ಎಂದು ಇನ್ನೊಂದು ಕಥೆಯಿ ಎದೆ.

ಈ ಎಲ್ಲ ಕಥೆ ಮೂಡಂಬೈಲಿನ ಆಸುಪಾಸಿನವರಿಗೆ ಬರಿ ಕಥೆಯಾಗದೆ ಹೋದದ್ದು ಸರಸಿಯ ಮಾಹಾತ್ಮೆಯಿಂದ. ಅವಳು ಹೋದ ಕೆಲವು ದಿನಗಳಲ್ಲೇ ಅಲ್ಲೊಂದು ಮಾಸ್ತಿಕಲ್ಲು ಸ್ಥಾಪನೆಯಾಯಿತು. ಮುಂದಿರ ವೆನ್ನುವಷ್ಟು ದೊಡ್ಡದಿಲ್ಲವಾದರೂ ಚಿಕ್ಕದಾಗಿ ಚೆನ್ನಾಗಿ, ಗಂಡಹೆಂಡಿರ ಶಯ್ಯೆಯ ಮನೆಗೆ ಸಹಜವಾದಷ್ಟು ಅನುಕೂಲವಾಗಿ ಒಪ್ಪಾಗಿ ಒಂದು ಗುಡಿ ನಿರ್ಮಿತವಾಯಿತು. ಗುಡಿಯಾದನಂತರ ಆಗಾಗ ಅಲ್ಲಿಗೆ ಹೋಗಿ ಬರುವ ಯಾತ್ರಿಕರು ಹೆಚ್ಚಿದರು. ಹರಕೆಯೂ ತೊಡಗಿತು. ಯಾವ ಸಂಸಾರದಲ್ಲೇ ಆಗಲಿ ದಂಪತಿಗಳಲ್ಲಿ ಒಡಕು ಬಂದು ಜೀವನ ಅಸಹ್ಯ ವಾದರೆ ಸರಸಮ್ಮನಲ್ಲಿಗೆ ದೂರು ಬರುವುದು. ಗಂಡಸಾದರೆ ತಮ್ಮ ಸತಿ ವಿಧೇಯಳಾಗಲೆಂದು, ಹೆಂಗಸಾದರೆ ತಮ್ಮ ಪತಿ ಒಲಿಯಲೆಂದೂ ಬೇಡಿ, ಮಾಸ್ತಿಗೆ ಕುಂಕುಮವಿರಿಸಿ ಹೊರಗೆ ಬಂದು ಕೆರೆಯಲ್ಲಿ ಒಂದು ತೆಂಗಿನಕಾಯಿ ಬಿಟ್ಟುಹೋಗುವರು. ಇದು ಗುರುವಾರ ದಿನ; ಮರು ದಿನ ಶುಕ್ರವಾರ. ಹೇಗೂ ಅಮ್ಮನವರ ದಿವಸ. ಆ ದಿನ ಹರಕೆ ಹೊತ್ತವರು ಬಂದೇ ಬರುತ್ತಾರೆ. ತಾವು ಬಿಟ್ಟ ತೆಂಗಿನಕಾಯಿ ಏನಾಯಿತು ಎಂದು ನೋಡಲು, ಒಂದು ದಿವಸ, ಒಬ್ಬರ ಕಣ್ಣಿಗೂ ಅವು ಕಾಣಿಸಿದ್ದಿಲ್ಲವಂತೆ. 'ಸರಸಮ್ಮನಿಗೆ ಒಪ್ಪಿಸಿದ ಕೆಲಸ ಗುಟ್ಟು ರಟ್ಟಾದೀತೇ?' ಎಂದು ಭಕ್ತರು ಸಂತೋಷದಿಂದ ಮರಳುವರು. ಸತಿಪತಿಯವರು ಎಂಥವರೇ ಇರಲಿ, ಅವರಲ್ಲಿ ಮನೋಕ್ಲೇಶಗಳು ಸಾವಿರವಿರಲಿ—ಕೈಹಿಡಿದ ಸತಿ, ಚಿತೆಯ ತನಕವೂ ಸತಿ, ಆಮೇಲೆಯೂ ಸತಿ. ಸರಸಮ್ಮ 'ನೀಲಾಚಲಯ್ಯ ಸತ್ತನು' ಎಂದು ಕುಂಕುಮ ಅಳಿಸಿ ಕೆಂಪುಸೀರೆ ಉಡಲಿಲ್ಲ.

ಇದೆಲ್ಲ ಪೊಳ್ಳು ನಂಬಿಕೆ ಎನ್ನುವವರಿದ್ದಾರೆ. ನಂಬದಿದ್ದವರಿಗೆ ಎಲ್ಲಾ ಪೊಳ್ಳು, ನಂಬಿದವರಿಗೆ ಎಲ್ಲಾ ದಿಟ. ತಿಳಿದ ಮಟ್ಟಿಗೆ ಹೇಳುವುದಾದರೆ–

ಈ ತಲೆಯುವರಲ್ಲಿ ಯಾರಾರು ಅಲ್ಲಿಗೆ ಹೋಗಿ ಈ ಗುಪ್ತ ಹರಕೆ ಹೊತ್ತು ಬಂದಿದ್ದಾರೆ, ಹೊತ್ತವರಿಗೆ ಏನೇನಾಗಿದೆ ಎಂದು ಸಂಪೂರ್ಣ ಹೇಳಬರುವುದಿಲ್ಲ. ಈ ಕಾಲದವರ ನಂಬಿಕೆಯೂ ಅಷ್ಟರಲ್ಲೇ ಇದೆ. ಅಲ್ಲದೆ—ಅದಕ್ಕೆ ಎದೆಗಾರಿಕೆ ಬೇಕು. ಮಾಸ್ತಿ ನಡೆಯಿಸಿಕೊಡುತ್ತಾಳೆ ಎಂದು ನಂಬಿ, ರಾತ್ರಿ ಒಂಟಿಯಾಗಿ ಅಲ್ಲಿಗೆ ಹೋಗಿ ಬರುವ ಸ್ತ್ರೀ ಪುರುಷರು ಬೇಕು. ಹೆಣ್ಣುಮಕ್ಕಳು ಒಮ್ಮೆಗೇ ಹಾಗೆ ರಾತ್ರಿಯಲ್ಲಿ ಹೊರಬೀಳುತ್ತಾರೆಯೇ ಎಂಬ ಮಾತೂ ಬರಬಹುದು. 'ಗಂಡಸರಿಗೆ ಅಂಥ ಜರೂರಿ ಏನು ಬಂತು?' ಎಂಬ ಕುಚೇಷ್ಟೆಯೂ ಬರಬಹುದು. ಆದರೆ ಕೇಳಿ ತಿಳಿದಮಟ್ಟಿಗೆ, ಕಳೆದ ತಲೆಯುವರಲ್ಲಿ ಒಂದಲ್ಲ ಹತ್ತು ಅನುಭವಗಳನ್ನು ಸಾಕ್ಷಿಯಾಗಿ ಒದಗಿಸಬಹುದು.

ಇದೇ ಸೀತಕ್ಕನ ತಾಯಿ ಮಾಚಕ್ಕ ಇರುತ್ತಿದ್ದಳು. ಮಾಚಿಯನ್ನು ಕಂಡರೆ ಗಂಡನಿಗೆ ಹಾಗಲ ಸೊಪ್ಪಿನ ರಸ ಕುಡಿಸಿದ ಹಾಗೆ. ಮದುವೆಯಾದದ್ದೇ ಏಕೋ—ಆ ಪುಣ್ಯಾತ್ಮ. ಮದುವೆಯಾದ ಮೇಲೆ ಒಂದು ದಿವಸ ಮಾಚಿಯ ಜೀವ ತಿನ್ನದೆ ಬಿಟ್ಟವನಲ್ಲ. ಅವಳು ಮಾಡಿದ್ದರಲ್ಲೆಲ್ಲಾ ದೋಷಾರೋಪಣೆ. ಸಾಲದುದಕ್ಕೆ 'ನೀನು ನಿನ್ನೆ ಅವನನ್ನು ನೋಡಿದಿ ಯಾಕೆ? ಇವತ್ತು ಬೆಳಿಗ್ಗೆ ಕೆಲಸದವನೊಡನೆ ಅಷ್ಟುಹೊತ್ತು ಮಾತನಾಡಿದಿ ಏಕೆ?' ಎಂದು ಅಪವಾದ ಬೇರೆ. ಇತ್ತ ತಾನಾದರೂ ಪುನೀತನೋ......ಬೈಲು ಕರೆ ಬಿಟ್ಟಿನ ಬೆಸ್ತಮ್ಮನಿಲ್ಲವೇ ಅವಳ ತಾಯಿಯೋ ಅಜ್ಜಿಯೋ ಆಗಿನ ಕಾಲಕ್ಕೆ ರತಿಯಾಗಿದ್ದಳಂತೆ. ಅವಳ ಮನೆಗೆ ಸರ್ಕೀಟು ಬೇರೆ. ಅದೆಲ್ಲಾ ಹದಿನೈದೇ ದಿವಸಗಳಲ್ಲಿ ನಿಂತು ಹೋಯಿತು. ಆ ಮೇಲೆ ಮಾಚಮ್ಮನ ಗಂಡನಿಗೆ ಬ್ರಹ್ಮ ಬಹಳ ಆಯುಷ್ಯ—ಬರೆಯಲಿಲ್ಲ—ಎಂಬುದೊಂದೇ ಹೇಳಬೇಕೇ ಹೊರತು, ಅವರು ಬದುಕಿ ಉಳಿದಷ್ಟು ದಿವಸ ಮಾಚಿಗೆ ಒಂದು ಗಳಿಗೆ ಬೇಸರ ತರಲಿಲ್ಲವಂತೆ. ಮಾಚಿ ಗಂಡನನ್ನು ಕಳೆದುಕೊಂಡ ಬಳಿಕ, ಮಗಳಿಗೆ ಹೇಳಿದ ಕಥೆಯಿದು. ಅದರಿಂದಲೇ ಸೀತಕ್ಕನಿಗೆ ಸರಸಮ್ಮನಲ್ಲಿ ಅಷ್ಟು ನಂಬಿಕೆ.

ಇದೊಂದೇ ಕಥೆಯುಲ್ಲ. ಪಠೇಲ ನಾರ್ಣಯ್ಯ, ಅಂದರೆ ಈಗಿನ ವೀರಪ್ಪನ ಚಿಕ್ಕಪ್ಪನೋ ದೊಡ್ಡಪ್ಪನೋ ಆಗಬೇಕು. ಅವರು ಸಾಮಾನ್ಯ ಇಂಥಾ ಮರ್ಯಾದೆಗೆಟ್ಟವರೆಂದರೆ ಹೇಳಲಿಕ್ಕಿಲ್ಲ. ಅಕ್ಕ-ಸಾಲ್ತಿ ಬಂಗಾರಿಯು ಮನೆಗೆ ಬಂದು ಕಾಡುವುದಂತೆ. ಅವಳ ಗಂಡ ಒಬ್ಬ ಉಂಡಾಡಿ. ಅವನಿಗೆ ಅವನ ಮರ್ಯಾದೆಯೂ ಇಲ್ಲ; ಅವಳದು ಮೊದಲೇ ಬೇಡ. ಯಾರಾರು ನಂಟರ ಮನೆಯೆಂದು ತಿಂದು ತಿರುಗುವ ಕೆಲಸ ಅವನದು. ಬಂಗಾರಿ ಎಷ್ಟು ಬಾರಿ ಗಂಡನೊಡನೆ ದೂರು ಕೊಟ್ಟರೂ ಅವನು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಅಷ್ಟು ಅವಕಾಶ ಇಲ್ಲ ಅವನಿಗೆ. ಅತ್ತು ಹೇಳಿದರೆ: 'ಪಠೇಲರ ಎದುರಿಗೆ ನಾವೇನು ಮಾಡುವುದು. ಅವರು ಮನೆಗೆ ಬಂದರೆ ಯಜಮಾನರಿಲ್ಲ, ನನಗೇನು ತಿಳಿಯದು ಅನ್ನು' ಎನ್ನುವನು. 'ಏನಿಲ್ಲದ ಹರಟೆ ಹಿಡಿದು, ಒಳಗೆ ನಿಲ್ಲಲಿಕ್ಕೆ ಬಿಡುವಂತಿಲ್ಲ..ಚಿನ್ನ ಕೊಟ್ಟಿದ್ದೆ, ಬೆಂಡೆಕಾಯಿ ಆಗಲಿಲ್ಲವೇ? ಬಿರುಮಾಚಾರಿ ಯಾಕೆ ಬರಲಿಲ್ಲ? ಈಗ ಮದ್ದಲೆ ಯಾರು ಚೆನ್ನಾಗಿ ಬಾರಿಸುತ್ತಾರೆ' ಎಂದು ಮೈಮೇಲೆ ಬಿದ್ದು ಮಾತನಾಡಿಸುತ್ತಾರೆ ಎಂದು ಬಂಗಾರಿ ದೂರುಕೊಡುವಳು.

-ರಾಚಿಕೆಗೆಟ್ಟ ಗಂಡ—ಹಾಗಾದರೆ ಈ ಊರಿಂದ ಒಕ್ಕಲುಕಿತ್ತು ಮೂಡುಗೆರೆಗೋ, ಶೃಂಗೇರಿಗೋ, ಕೊಪ್ಪಕ್ಕೋ ಹೋಗುವ.... ಎನ್ನುವನಂತೆ.

ನಿಜಕ್ಕೂ ಹಾಗೇನೆ ತೀರ್ಮಾನವಾಗಿತ್ತು. ಆದರೆ ಕೊನೆಯ ಆಸೆ ತೀರಿಸಿಬಿಡುವ ಎಂದು ರಾತ್ರೋರಾತ್ರಿ ಸರಸಮ್ಮನ ಗುಡಿಗೆ ಬಂಗಾರಿ ಹೋಗಿ ಬಂದಳು. ಹೋಗಿ ಬಂದ ಹದಿನೈದೇ ದಿವಸಗಳಲ್ಲಿ ಪಠೇಲ ನಾರ್ಣಯ್ಯನ ಮೈಯಲ್ಲಿ ನೀರು ತುಂಬಿಕೊಂಡಿತು. ಮತ್ತೊಂದು ಹದಿನೈದು ದಿವಸಗಳಲ್ಲಿ ನಾರ್ಣಯ್ಯನ ಶ್ರಾದ್ಧಕ್ಕೆ ತಯಾರಿ ನಡೆಯಿತು.

ಆಗಿನ ದಿವಸಗಳಲ್ಲಿ ಇನ್ನು ಹೆಂಡಿರ ಕಾಟ ಸಹಿಸದೆ ಸರಸಮ್ಮನ ತನಕ ದೂರಿಟ್ಟ ಗಂಡಸರೂ ಕಡಿಮೆಯಿಲ್ಲ. ಈಗಿನ ಮಂಜನಾಥಯ್ಯನ ತಂದೆ ಸೋಮನಾಥಯ್ಯ, ಬೆಟ್ಟಿನ ಶುಕ್ರನಾಯಕನ ಅಜ್ಜ ಐತುನಾಯ್ಕ,

ಪಾಳೂರು ಪರಮೇಶ್ವರಯ್ಯನ ಸೋದರಮಾವ ಸದಾಶಿವಯ್ಯ ಇವರೆಲ್ಲ ಒಂದೊಂದು ಹಿಡಿಂಬೆಯೋ, ಶೂರ್ಪನಖಿಯೋ, ಪೂತನಿಯೋ ಇವರ ಕೈಯಲ್ಲಿ ಸಿಕ್ಕಿ ನರಳಿದವರು. ಕೆಲವರು 'ಇವರೇ ಪೂತನಿಯರನ್ನು ಅಹಲ್ಯೆ ತಾರೆ' ಎಂದುದೂ ಉಂಟು. ಗಂಡಂದಿರನ್ನು ಮಾರೀಚ, ಸುಬಾಹು ಎಂದುದೂ ಉಂಟು. ಹೇಗಿದ್ದರೂ ಅವರೆಲ್ಲರ ಸಂಸಾರದಲ್ಲಿ ಒಲೆಗೆ ಏರಿಸಿದ ಎಸರು ತಿರುತಿರುಗಿ ಬೆಂಕಿಮಾಡದೆ ಒಂದೇ ಉಸುರಿಗೆ ಬೆಂದದ್ದಿಲ್ಲವಂತೆ.

ಉದಾಹರಣೆಗೆ ಮಂಜುನಾಥಯ್ಯನ ಒಂದೇ ಒಂದು ಕಥೆ ಸಾಕು. ಅವರೆಂದರೆ ಎಂಥ ಶ್ರೋತ್ರಿಗಳು! ಏನು ಓದಿ ತಿಳಿದವರು! ಅವರ ಜಪಕ್ಕೆ ಹಗಲು ಸಾಲದೆ ಹೋಗುತಿತ್ತು. ದೇವತಾಮನುಷ್ಯ. ಆದರೆ ಅವರಿಗೆ ಸಿಕ್ಕಿದ ಅಪರಂಜಿ ಹೇಗಿನದು? ಕಾಣಲಿಕ್ಕೊಂದು ರೂಪವೂ ಇಲ್ಲ. ಬೆಳಗಿನಿಂದ ಸಂಜೆಯತನಕ ಇವರ ಬಾಯಿಯಿಂದ ಹೊರಟ ಮೂರು ಪಾಲು ಸ್ವರ ಅವಳ ಬಾಯಿಯಿಂದ ಹೊರಡಬೇಕು. ಇವರು 'ಅಚ್ಯುತಾಯ ನಮಃ ಅನಂತಾಯ ನಮಃ ಕೇಶವಾಯ ನಮಃ' ಎಂದರೆ ಅವಳು 'ಸೀರೆ, ಚಿನ್ನ, ಹೂವು–ವಡೆ, ಪಾಯಸ, ಕಡುಬು–ಚಕ್ಕುಲಿ, ಕೋಡ್ಬಳೆ ಮತ್ತೊಂದು—ಅನ್ನುತ್ತಿರಬೇಕು. ಪಾಪ, ಮಂಜುನಾಥಯ್ಯನ ಕಿವಿ ಮರದ್ದಾಗಿದ್ದರೆ ಎಂದೇ ಹೊಟ್ಟೆಹೋಗುತಿತ್ತು ಅನ್ನುತ್ತಾರೆ. ಅವರಾದುದಕ್ಕೆ ಕೇಳಿದರು. ಕೇಳಿ ಕೇಳಿ ಜಪದ ಸರಣಿ ತಪ್ಪಿ ತಿರುಗಿ ತಿರುಗಿ 'ಗುರುರೇಕೋ, ಗುರುಬ್ರಹ್ಮ....' ಎಂದು ಪ್ರಾರಂಭ ಮಾಡುತ್ತಿದ್ದರೇ ವಿನಾ 'ಥೂ ದಿಂಡೆ, ಥೂ....' ಎಂದು ಒಂದು ಸಾರಿಯೂ ನಾಲಿಗೆ ಕೆಡಿಸಿಕೊಂಡವರಲ್ಲ. ಆದರೆ ಎಷ್ಟೆಂದರೂ ಮನುಷ್ಯರಲ್ಲವೇ. ಕಿವಿತುಂಬಾ ಕರೆಕರೆಯಾದರೆ ಮನಸ್ಸುಬಿಟ್ಟು ಜಪವನ್ನಾದರೂ ಮಾಡಬೇಕು ಅಂದರೆ ಹೇಗೆ? ಒಂದು ದಿನ ಅವರು ಹೆಂಡತಿ ಕಾಟ ತಡೆಯಲಾರದೆ ಸರಸಮ್ಮನಲ್ಲಿ ದೂರುಕೊಟ್ಟರಂತೆ. ಮತ್ತೊಂದು ತಿಂಗಳಿನಲ್ಲಿ ಅವರೇ ಹೆಂಡತಿಯ ಕಿವಿಯಲ್ಲಿ ಪಂಚಾಕ್ಷರಿ ಜಪವನ್ನು ಉಪದೇಶಿಸಿದ್ದರು.

ಅಂಥ ಮಹಾಸತಿಯ ಗುಡಿ ಇಂದು ಮೂಡಂಬೈಲಿಗೆ ಸಂಜೀವನವಾಗುವುದರಲ್ಲಿ ವಿಶೇಷವೇನು? ಸರಸಮ್ಮನ ಕೀರ್ತಿ ಬರಿಯ ಆ ಊರಿಗೇನೆ ಅಂಟಿ ನಿಂತಿರಲಿಲ್ಲ. ಸುತ್ತಲಿನ ನಾಲ್ವತ್ತು ಹಳ್ಳಿಯವರು ತಿಳಿದಿದ್ದರು. ಪ್ರತಿ ಸಂಕ್ರಾಂತಿಗೆ ಸರಸಮ್ಮನ ಗುಡಿಯ ಮುಂದೆ ಸಂತೆ ನಡೆಯುತ್ತಿತ್ತು. ಮಕರ ಸಂಕ್ರಾಂತಿಗೆ ಭಾರೀ ಜಾತ್ರೆಯೇ ನೆರೆಯುತ್ತಿತ್ತು. ಜಾತ್ರೆಗೆ ಹಾಳು 'ಕೋಳಿ ಅಂಕದ' * ಜನರೇ ಹೆಚ್ಚಿದ್ದರೂ, ಭಕ್ತಿ ಇದ್ದವರಿಗೆ 'ತಾವು ಬರುವುದು ಕೋಳಿಯ ಜೂಜಿಗಲ್ಲ ಸರಸಮ್ಮನಿಂದ ವರಪ್ರಸಾದ ಪಡೆಯಲಿಕ್ಕೆಂ' ಬುದು ತಿಳಿದೇ ಇದೆ.

---

## ೨

## ಅಡಾಳುಡಿ ಚಂದ್ರಯ್ಯ

ಹಂಸಪಕ್ಷಿಯಿದ್ದಲ್ಲಿ ಕೆಸರೂ ಇರುತ್ತದೆ. ದೀಪವಿದ್ದಲ್ಲಿ ಕತ್ತಲೂ ಇರುತ್ತದೆ. ಎನ್ನುವ ಹಾಗೆ ಸರಸಮ್ಮನ ಗುಡಿ ಇರುವ ಊರಿನಲ್ಲೇ ಅಡಾಳುಡಿ ಚಂದ್ರಯ್ಯನ ಮನೆಯಿರುವುದು. ಸರಸಮ್ಮ ಸ್ಥೂಲಕಾಯದಲ್ಲಿಲ್ಲ. ಸೂಕ್ಷ್ಮಶರೀರಿಯಾಗಿ ಮೂಡಂಬೈಲಿನ ಮೂಲೆ ಮೂಲೆಯನ್ನು ತನ್ನದಾಗಿ ಮಾಡಿಕೊಂಡಿದ್ದಾಳೆ. ಚಂದ್ರಯ್ಯನು ಯಾವ ಮೂಲೆಯನ್ನೂ ಬಿಟ್ಟವನಲ್ಲ; ವಿಚಿತ್ರ ಪ್ರಾಣಿ. ಅವನ ಕೆಲಸವೆಲ್ಲಾ ಸ್ಥೂಲಶರೀರಕ್ಕೇನೆ ಸಂಬಂಧಪಟ್ಟುದು. ಯಾರನ್ನು ಕೇಳಿದರೂ ಅವನಿಗೆ ಸೂಕ್ಷ್ಮಬುದ್ಧಿಯೇ ಇಲ್ಲವೆನ್ನುತ್ತಾರೆ. ಬುದ್ಧಿಯಲ್ಲಿ ಯಾವುದು ಸ್ಥೂಲ ಯಾವುದು ಸೂಕ್ಷ್ಮ ಎನ್ನುವುದನ್ನು ಗುರುತಿಸುವುದು ಕಷ್ಟವಾದರೂ,

---

* ಕೋಳಿ ಪಡೆ ಎಂದು ಕೋಳಿಗಳಿಗೆ ಕತ್ತಿಯನ್ನು ಕಟ್ಟಿಸಿ ಕಾದಾಟಕ್ಕೆ ನಿಲ್ಲಿಸುವ ವಿನೋದ.

ಊರವರ, ದ್ವೇಷಿಕರಲ್ಲ, ಅವನದೇ ಹಿತೇಚ್ಛುಗಳ ಮಾತನ್ನು ನಂಬುವುದಾದರೆ, ಅವನ ಯಾವತ್ತು ಕೆಲಸ, ಮನಸ್ಸಿನ ರೀತಿಗಳನ್ನು ಸ್ಥೂಲಕ್ಕೇನೆ ಸೇರಿಸುತ್ತಾರೆ.

ಚಂದ್ರಯ್ಯನಿಗೆ 'ಅಡಾಉಡಿ' ಎಂಬ ಬಿರುದು ಬೇರೆ ಬಂದಿದೆ. ಊರವರು ಮಾತನಾಡುವಾಗ 'ಅಡಾಉಡಿ' ಎಂದೇ ಅವನನ್ನು ಕರೆಯುವುದು ವಾಡಿಕೆ. ಚಂದ್ರಯ್ಯನೆನ್ನುವುದು ಸರಕಾರಿ ಪಟ್ಟೆಯಲ್ಲಿ, ಟಪಾಲು ವಿಳಾಸದಲ್ಲಷ್ಟೇ ರೂಢಿ. ಅವನನ್ನು ಎದುರಿಂದ ಸಂಬೋಧಿಸುವುದಾದರೆ ಚಂದ್ರನಾಥಯ್ಯನೆನ್ನುವುದೂ ಉಂಟು. ಈ ಚಂದ್ರನಾಥಯ್ಯನಿಗೂ ಸೋಮನಾಥ ಮಂಜುನಾಥಯ್ಯನವರ ಕುಟುಂಬಕ್ಕೂ ಯಾವ ಸಂಬಂಧವೂ ಇಲ್ಲ. ಬರೇ 'ನಾಥ' ಪದದ ಸಂಬಂಧ. ಆದರೆ ಚಂದ್ರಯ್ಯನ ನಾತ ಊರಿಂದ ಬಲು ದೂರದ ತನಕ ಹಬ್ಬಿದೆ.

ಅವನ ಮನಸ್ಸಿನ ಓಟದ ರೀತಿಯೇ ಬೇರೆ. ಅದನ್ನು ಓಟ ಎನ್ನುವುದಕ್ಕಿಂತ ಹಾರಾಟ ಎನ್ನುವುದೇ ಲೇಸು. ಇಡೀ ದಿವಸ ತಿರುಗಾಟ ಅವನಿಗೆ–ಕಾಲಿಗೆ ಚಕ್ರ ತಗಲಿಸಿದಂತೆ. ಊರಿಗೆ ಯಾರು ಬಂದರೂ ಅವನಿಗೆ ಬೇಕು. ಊರಿನ ಸುತ್ತು ಏನು ನಡೆದರೂ ಅದು ಅವನಿಗೆ ತಿಳಿಯುತ್ತದೆ. ಮಂಗಳೂರಲ್ಲಿ ಸತ್ಯಾಗ್ರಹ ತೊಡಗಿದಾಗ ಮೊದಲಿಗೆ ಹೋಗಿ ಕಾರ್ನಾಡು ಸದಾಶಿವರಾಯರನ್ನು ಮಾತನಾಡಿಸಿ ಬಂದವನು ಅವನು. ಕನ್ನಾನೂರಿನಲ್ಲಿ ಕಾರಾಗೃಹವಾಸವನ್ನು ಮುಗಿಸಿ ಬಂದ ಮೊದಲಿನ ಗುಂಪಿನಲ್ಲಿ ಅವನು. ಇತ್ತ ದೇಶಭಕ್ತಿ ಅಷ್ಟು ಉಕ್ಕಿದ್ದರೆ, ಅತ್ತ ರಾಜಭಕ್ತಿಯೂ ಕಡಿಮೆಯಿಲ್ಲ. ಜಾರ್ಜ ಸಾರ್ವಭೌಮರು ತೀರಿದ ದಿವಸ ಉಪವಾಸವನ್ನೇ ಮಾಡಿದ್ದನು. ಆ ಕೆಲಸವನ್ನು ಯಾವ ಕಲೆಕ್ಟರರಾಗಲಿ, ತಹಸಿಲ್ದಾರರಾಗಲಿ ಮಾಡಿರಲಿಲ್ಲ. ಆ ದಿವಸ ಅವರ ಮನೆಗೆ ಶ್ಯಾನುಭಾಗ ಸಂತಾನ ಸೋಜರು ಬಂದಿದ್ದರು. 'ನಿಮಗೆ ತಿಳಿಯದೇ? ಜಾರ್ಜರು ತೀರಿದುದು. ನಾನು ಉಪವಾಸ. ನೀವು ಉಪವಾಸ ಮಾಡುವುದಿಲ್ಲವೇ?' ಎಂದು ಕೇಳಿದರು. ಸೋಜರ ಮನಸ್ಸಿಗೆ, ಬಾಯಾರಿ ಬಂದವನಿಗೆ ಎಳೆನೀರು 'ಚಕ್ಕರು' ಕೊಡಲಿಕ್ಕೆ ಉಪಾಯ

ವಿದೆಯೆಂದು ತೋರಿದರೂ, ಚಂದ್ರಯ್ಯನಾಡಿದುದು ಪ್ರಾಮಾಣಿಕವಾಗಿಯೇ ಇತ್ತು.

ಅಂದರೆ ಅವನ ಮನಸ್ಸಿನಲ್ಲಿ– ಎಲ್ಲಾ ನನಗೆ ತಿಳಿದಿದೆ, ಅಥವಾ ತಿಳಿಯಬೇಕು ಎಂಬುವ ಹಟ. ಎಲ್ಲವುದನ್ನು ಸಾಧಿಸಿ ನೋಡುವವ. ಪುರಾಣವನ್ನೂ ನಂಬುತ್ತಾನೆ; ವಿಜ್ಞಾನವನ್ನೂ ನಂಬುತ್ತಾನೆ. ಅವನು ಕಲಿತು ಫೈಲಾದ ಫೊರ್ತ್ ಫಾರ್ಮಿಗೆ ಹತ್ತುಮಡಿ ಮೀರಿದ ವಿಜ್ಞಾನ ಅವನಿಗೆ ತಿಳಿದಿದೆ. ಈಶ್ವರ ಭಟ್ಟರು ಸಿಕ್ಕಿದರೆ 'ಭಟ್ಟರೇ, ನಿಮ್ಮ ಅದ್ವೈತಕ್ಕೂ, ಐನ್‌ಸ್ಟೈನಿನ 'ರಿಲೆಟಿವಿಟಿ ಥೀರಿ'– ಅಂದರೆ ಆದೂ ಮಾಯಾವಾದವೇ– ಅದಕ್ಕೂ ಇಷ್ಟು ಬಿಟ್ಟು ಕೊಡುವುದಿಲ್ಲ' ಎನ್ನುತ್ತಾನೆ. ಚೌತಿಯ ದಿವಸ ಬಂದಿತೇ! ಆಳೆತ್ತರದ ಆವೆಮಣ್ಣಿನ ವಿನಾಯಕನನ್ನು ಮಾಡಿ ಮನೆಗೆ ಬಂದವರಿಗೆಲ್ಲಾ ಅರಳು ಪಂಚಕಜ್ಜಾಯವನ್ನು ಹಂಚುತ್ತಾನೆ. ಅವನ ಏನು ಅಡಾಉಡಿಯಾದರೂ 'ಅಪ್ಪ ಬಿಟ್ಟುಹೋದ ಆರುನೂರು ಮುಡಿ ಹುಟ್ಟುವಳಿಯ ಆಸ್ತಿ ಇದ್ದುದರಿಂದ ನಡೆಯುತ್ತದೆ' ಎನ್ನುತ್ತಾರೆ ಊರವರು.

ಚಂದ್ರಯ್ಯನ ಮನೆಯಲ್ಲಿ ಇಲ್ಲದ ಸಾಮಗ್ರಿಯಿಲ್ಲ. ಮುತ್ತಜ್ಜನ ಕಾಲದ ನೀಲಾಂಜನ, ಹಿರಿಯಜ್ಜ ಗದ್ದೆ ಸಾಗುವಳಿಗೆ ಹೋಗುವಾಗ ತೊಡುತ್ತಿದ್ದ 'ಮುಟ್ಟುಹಾಳೆ' ಇವೂ ಇವೆ. ಅವನ್ನು ಇರಿಸಿದ ಕೋಣೆಯಲ್ಲಿಯೇ ಹೊಸತಾಗಿ ಬಂದ 'ರೇಡಿಯೋ ಸೆಟ್' ಸಹ ಇದೆ. ಊರವರು ಸಂಗೀತ ಕೇಳಲಿಕ್ಕೆ ಅವನ ಮನೆಗೆ ಬರುತ್ತಾರೆ. ಅವರ ಮುಂದೆ ಗ್ರಾಮಾಫೋನು ಇರಿಸಿ, ಸತಾರವಿಯ ಪ್ಲೇಟುಗಳನ್ನು ಹಾಕುತ್ತಾನೆ. ಅರ್ಧದಲ್ಲೆ ನಿಲ್ಲಿಸಿ, ರೇಡಿಯೋ ತಿರುಗಿಸಿ 'ಒಹೋಯ್– ಭಟ್ಟರೇ ಇದು ಪಿತೃಲೋಕದ ಸಂಗೀತ. ಪಾತಾಳದಿಂದಲೂ ಇಲ್ಲಿಗೆ ವರ್ತಮಾನ ಬರುತ್ತದೆ' ಎಂದು ಬಿ. ಬಿ. ಸಿ. ಸ್ಟೇಶನಿಗೆ ನಿಲ್ಲಿಸಿಬಿಡುವನು. ನಡುವೆ ಆಗುವ ಚಿಟಿಪಿಟಿ (atmospherics) ಕೇಳಿ 'ಇದೇನು ಸಿಡಿಲು ಗುಡುಗು' ಎಂದು ಭಟ್ಟರು ಕೇಳಿದರೆ, ಕೂಡಲೆ ಉತ್ತರ ಬಂದಿತು. ನಿಮ್ಮ ಇಂದ್ರಯ್ಯ ವಜ್ರಾಯುಧ ಹಿಡಿದುಕೊಡುವ ತಕಲೀಫು'

ಅಷ್ಟಕ್ಕೇ ಅಲ್ಲಿನ ಗದ್ಯವಾಣಿ ಕೇಳಿಸುವುದು. ಭಟ್ಟರಿಗೆ ಇಂಗ್ಲಿಷ್ ಅರ್ಥವಾಗದಿದ್ದರೂ, ಇದು ಇಂಗ್ಲಿಷ್ ಎನ್ನುವಷ್ಟು ಮಾಹಿತಿಯುಂಟು. ಆದುದರಿಂದ ನಗುತ್ತ 'ಇದು ಇಂಗ್ಲಿಷ್ ಅಲ್ಲವೇ' ಎನ್ನುವರು. ಆಗ ಚಂದ್ರಯ್ಯ ಬಂದ ವಾರ್ತೆಯನ್ನು ಹೇಳುವನು.... ರೇಡಿಯೋ ಎಂಥದ್ದೆಂದೂ ಬಣ್ಣಿಸುವನು. ಈಶ್ವರ ಭಟ್ಟರು 'ಈಗಲೇ ಇಷ್ಟು ಸಾಧ್ಯವಿದ್ದರೆ ಹಿಂದಿನ ಕಾಲದಲ್ಲಿ ಆಕಾಶವಾಣಿ, ಅಶರೀರವಾಣಿ ಎಂಬುದು ಸುಳ್ಳಲ್ಲ ಎನ್ನುವನು.'

'ಆಕಾಶವಾಣಿ'– ಅಯ್ಯೋ ಭಟ್ಟರೇ, ಆಕಾಶವಾಣಿ ಎಂಬ ಹೆಸರನ್ನೇ ಮೈಸೂರಿನ ರೇಡಿಯೋ ಜನರು ಇಟ್ಟು ಕೊಂಡಿದ್ದಾರೆ' ಎನ್ನುವನು ಚಂದ್ರಯ್ಯ.

'ಹಾಗಾದರೆ ಬಿಡಾರಂ ಕೃಷ್ಣಪ್ಪನವರ ಸಂಗೀತ ಬರುತ್ತದೆಯೋ?'

'ಭಟ್ಟರೇ ನೀವೆಲ್ಲಿದ್ದೀರಿ? ಇದರಲ್ಲಿ ಸತ್ತವರು ಮಾತನಾಡುವುದಿಲ್ಲ.'

'ಕೃಷ್ಣಪ್ಪನವರು ತೀರಿಕೊಂಡರೇ?'

'ಯುಗವೆರಡು ಕಳೆಯಿತು.'

'ಅಯ್ಯೋ ರಾಮ ರಾಮ. ಚಂದ್ರ, ನಿನ್ನ ಹಾಗೆ ನಾನೇನು ಗಜೇಟು ಓದುತ್ತೇನೆಯೋ! ಆದರೆ ನಿನ್ನ ರೇಡಿಯೋ ಕಂಪೆನಿಯವರು ಸತ್ತವರನ್ನು ಒಂದು ದಿವಸ ಮಾತಾಡಿಸದೆ ಇರುತ್ತಾರೆಯೇ?'

ನನಗೂ ಹಾಗೆ ಅನಿಸುತ್ತದೆ ಭಟ್ಟರೇ. ಎನ್‌ಸ್ಟನ್ ಅನ್ನುವವನು ನಾಳೆ ಆಗುವುದನ್ನು ಇವತ್ತು ಕಾಣಬಹುದು ಅನ್ನುತ್ತಾನೆ. ಅದಲ್ಲದೆ ಆಲಿವರ್ ಲಾಜ್, ಕಾನಂಡಾಯಲ್ ಮುಂತಾದವರು ಈಗ ಪ್ರೇತ ಸಂಭಾಷಣೆ ಮಿಥ್ಯವಲ್ಲ– ಎಂದು ಹೇಳುತ್ತಿದ್ದಾರೆ. ಕಾನಂಡಾಯಲ್ ತೀರಿಕೊಂಡನು. ಆದರೂ ಅವನಿಂದ ಸುದ್ದಿ ಬರುತ್ತಿದೆಯಂತೆ ಈ ಲೋಕಕ್ಕೆ.' ಇಂತಹ ಮಹಾ ತರ್ಕ ನಡೆಯುತ್ತಿರುವಾಗಲೇ ಒಂದು ದಿವಸ ಆಲಂಬಾಡಿ ರಾಮಣ್ಣನು ನಡುವೆ ಬಾಯಿಹಾಕಿದ್ದು. ರಾಮಣ್ಣನು ಚಂದ್ರಯ್ಯನ ದೂರದ ನಂಟ. ಏನೋ ಕೆಲಸದ ಮೇಲೆ ಅಲ್ಲಿಗೆ

ಬಂದಿದ್ದ. ಇವರೆಲ್ಲ ಕುಳಿತು—'ಪಿತೃಲೋಕ, ಪ್ರೇತ ಪ್ರೇತ ಸಂಭಾಷಣೆ'—ಎನ್ನುತ್ತಿರುವಾಗ, 'ಓಹೋ ಇಷ್ಟೆಲ್ಲಾ ಯಾಕೆ? ನಮ್ಮ ಆಲಂಬಾಡಿಗೆ ಬನ್ನಿ. ಅಮಾವಾಸ್ಯೆಯ ದಿವಸ ನಮ್ಮ ಮನೆಯ ಹಿಂದಿನ ಗುಡ್ಡದ ಮೇಲೆ ಸಾಲಾಸಾಲು ಸೂಟಿಗಳನ್ನು ನಾನು ತೋರಿಸುತ್ತೇನೆ. ಗುಡ್ಡವನ್ನೇರಿದರೆ, ಘಂಟೆಯ ಧ್ವನಿ ಕೇಳುತ್ತದೆ....'

ಚಂದ್ರಯ್ಯನಿಗೆ ಈ ಪ್ರೇತ ಭೂತಗಳ ಕಥೆ ಕೇಳುವುದೆಂದರೆ ತುಂಬಾ ಇಷ್ಟ. ಆದರಲ್ಲಿ ನಂಬಿಕೆ ಉಂಟೆಂತಲೂ ತಿಳಿಯದು, ಇಲ್ಲವೆಂದೂ ಅವನೆನ್ನಲಾರ. ಆದುದರಿಂದ ಬಲು ಆತುರದಿಂದ 'ನಿಜವೇನಯ್ಯಾ. ಅಲ್ಲವೇ ನಮ್ಮ ಮೂಡಂಬೈಲಿನ ಬೆಳ್ಳಕ್ಕನ ಹಾಗೆಯೋ?'

'ನಿಮ್ಮ ಬೆಳ್ಯಕ್ಕ–ಗಿಳ್ಯಕ್ಕ ನನಗೆ ತಿಳಿಯದು. ನಾನು ಹೇಳಿದುದನ್ನಾದರೆ ಪ್ರತ್ಯಕ್ಷ ತೋರಿಸಿಯೇನು. ಆದರೆ ಪುಣ್ಯಾತ್ಮನಿಗೆ ನಮ್ಮ ಆಲಂಬಾಡಿ ಕಣ್ಣಿಗೆ ಬೀಳಬೇಕಲ್ಲ; ನಂಟರು, ಸಂಬಂಧಿಗಳು ಇದ್ದಾರೆ–ಎಂಬ ಅಭಿಮಾನ ಬೇಕಲ್ಲ.'

'ಏ ಮಹಾರಾಯಾ–ಹಾಗೆಲ್ಲ ಹೇಳಬೇಡ. ಬರಲಿಕ್ಕೆ ಅವಕಾಶವಾಗುವುದಿಲ್ಲ. ನೀನು ಭೂತವನ್ನು ತೋರಿಸುವುದಾದರೆ ನಾನು ಬರುತ್ತೇನೆ. ನನಗಿಷ್ಟೇ ಬೇಕು–ಅದು ಸತ್ಯವೋ ಸುಳ್ಳೋ ಎಂದು ತಿಳಿಯುವ ಆತುರ.'

ಇದೆಲ್ಲ ಪಂಚಾತಿಕೆ ಆಗುವಾಗ ಈಶ್ವರಭಟ್ಟರು ಕುಳಿತು ಕೇಳುತ್ತಿದ್ದರು. ಅವರೆಂದರು 'ಚಂದ್ರಯ್ಯ ಭೂತ ನೋಡುವುದಾದರೆ ಇದನ್ನು ಹಟ ಹಿಡಿದು ಸಾಧಿಸು.'

'ಇದನ್ನು ಎಂದರೆ?'

'ಹಾಂ–ಭಟ್ಟರೇ ನೀವು ನಡುವೆ ಬರಬೇಡಿ. ಒಂದು ಸಾರಿ ನಮ್ಮ ಆಲಂಬಾಡಿಗೆ ಬಂದವನಲ್ಲ ಚಂದ್ರ–ಅವನು ಬರುವುದನ್ನು ತಪ್ಪಿಸಿ ಹಾಕಬೇಡಿ.'

'ನಾನು ತಪ್ಪಿಸಲಿಕ್ಕೆ ಹೇಳಿದ್ದಲ್ಲ. ನಿಮ್ಮಲ್ಲಿದ್ದಷ್ಟೇ ಸತ್ಯ ಈ ಬೆಳ್ಯಕ್ಕನಲ್ಲೂ ಇದೆ ಅಂದೆ. ಅಂದರೆ ನಾನೇ ಕಂಡಿಲ್ಲ. ನಮ್ಮಪ್ಪ

ಇರುವಾಗ ತಾನು ತಿಂಗಳಿಗೆ ಒಂದೆರಡು ಸಾರಿಯಾದರೂ ಕಾಣುತಿದ್ದೆ ಅನ್ನುತ್ತಿದ್ದರು. ಅಂದರೆ ಅವರು ಎಲ್ಲೆಲ್ಲಿಯು ಪಂಚಾಯತಿ ಪುರೋಹಿತಿ ತಲೆಗೆ ಗಂಟು ಹಾಕಿಕೊಂಡು ತಿರುಗಾಡುವವರು. ಬೆಳಗ್ಗೆ ಸ್ನಾನಮಾಡಿ ವಿಭೂತಿ ಬಳಿದುಕೊಂಡು ಹೊರಟರೆ ಮಧ್ಯರಾತ್ರಿಗೇನೆ ಮನೆಗೆ ಬರುವುದು. ಅಮಾವಾಸ್ಯೆ ಎಂದಿಲ್ಲ, ಹುಣ್ಣಿಮೆಯೆಂದಿಲ್ಲ. ಹೀಗಾಗಿ ಬಹಳ ಸಾರಿ ಅವರಿಗೆ ಅದು ಕಾಣಲಿಕ್ಕೆ ಸಿಕ್ಕಿದೆಯಂತೆ. ಬೆಳ್ಯಕ್ಕನ ರೂಪ ಅಂದರೆ ಥೇಟು ರತಿಯಂತೆ ಅನ್ನುತ್ತಿದ್ದರು.

ಆಗ ಚಂದ್ರಯ್ಯನು ಚೇಷ್ಟೆಗೆ 'ಅದೇ ನಮ್ಮ ಒಯಲಿನ ಬೆಳ್ಯಮ್ಮನೂ ಕಡಿಮೆಯಿಲ್ಲ. ಅವಳೂ ಒಂದು ರತಿಯಲ್ಲವೇ?' ಎಂದನು. ಈಶ್ವರಭಟ್ಟರಿಗೆ ಸಿಟ್ಟು ಬಂದಿತು. 'ನಿನಗೇನು ಚೇಷ್ಟೆ. ಈ ಬೆಳ್ಯಮ್ಮ ನನ್ನ ಸುಡು. ಹಾದರಗಿತ್ತಿ..' ಹೀಗೆಂದು ಮಾತನ್ನು ನಿಲ್ಲಿಸಿಬಿಟ್ಟರು.

ಚಂದ್ರಯ್ಯನು ಇನ್ನೂ ಕಡ್ಡಿ ಹಾಕಿ ಕೆರಳಿದರೂ ಆ ದಿವಸದ ಮಟ್ಟಿಗೆ ಅವರ ಬಾಯಿಂದ ಬೆಳ್ಯಕ್ಕನ ಸುದ್ದಿ ತರಿಸುವಂತಿಲ್ಲ. ಅಂದರೆ ಈ ಬೆಳ್ಯಮ್ಮ ನಿಜಕ್ಕೂ ಒಬ್ಬಳು 'ತುಂಡು ಸೂಳೆ' ಅವಳಿಂದಲೇ ಆಗಿ ಈಶ್ವರಪ್ಪಯ್ಯನ ಹಿರಿಮಗನು ಎಲ್ಲ ಕಳೆದುಕೊಂಡು ಊರು ಬಿಟ್ಟುದು. ಹಾಗಾಗಿ ಈ ಮಾತು ಅವರನ್ನು ರೇಗಿಸಿತು. ಚಂದ್ರಯ್ಯನು ಆ ಪ್ರಸ್ತಾಪವನ್ನು ಅಲ್ಲಿಗೇ ಬಿಟ್ಟು ರಾಮಣ್ಣಯ್ಯನೊಡನೆ ಅಲಂಬಾಡಿ ಪ್ರೇತಭೂತಗಳ ವಿಚಾರ ಮಾತಾಡತೊಡಗಿದನು. ಅವನೂ ಉಪ್ಪು ಕಾರ ಸೇರಿಸಿ ಅವುಗಳ ಪುರಾಣವನ್ನು ಬಿಚ್ಚಿದನು. ರಾಮಣ್ಣನಿಗೆ ಈ ಭೂತಗಳಲ್ಲಿ ನಂಬಿಕೆ ಇಲ್ಲವೆಂದಿಲ್ಲ. ಈ ಉಪ್ಪುಕಾರದ ಉದ್ದೇಶ ಒಮ್ಮೆಗೆ ಚಂದ್ರಯ್ಯನನ್ನು ತಮ್ಮೂರಿಗೆ ಕರೆದೊಯ್ಯುವುದು. ಅವರ ಉದ್ದೇಶ ಇನ್ನೊಂದು ಇತ್ತು. ಚಂದ್ರಯ್ಯ ಬರುವೆನೆಂದು ವಚನ ವಿತ್ತನು.

ಹೊತ್ತು ಬಹಳವಾಯಿತೆಂದು ಎಲ್ಲರೂ ಎದ್ದರು. ಈಶ್ವರಭಟ್ಟರೂ ಎದ್ದರು. ಚಂದ್ರಯ್ಯ ನಮ್ರನಾಗಿ 'ಭಟ್ಟರೇ, ಮನಸ್ಸಿಗೆ ನೋವಾಯಿತೆಂದು ಕಾಣುತ್ತದೆ. ಅಂದರೆ ನಿಮ್ಮ ಮಗನ ನೆನಪು ನನಗೆ ಬರಲಿಲ್ಲ.

ನಾನು ಸುಮ್ಮನೆ ಅಂದೆ. ಇನ್ನು ಅವಳ ಸುದ್ದಿ ನಿಮ್ಮೆದುರಿಗೆ ತೆಗೆಯುವುದಿಲ್ಲ.' ಎಂದನು. ಎಷ್ಟು ಉಡಾಫಿ ಮಾತನಾಡಿದರೂ ಚಂದ್ರಯ್ಯನಿಗೆ ವಿನಯವಿದ್ದೇ ಇದೆ ಎಂಬುದು ಭಟ್ಟರಿಗೆ ಗೊತ್ತು. ಆದುದರಿಂದ ಅವರು ಎಲ್ಲವನ್ನೂ ಮರೆತು 'ಹೋಗಲಿ ಬಿಡು ಚಂದ್ರಯ್ಯ, ಇನ್ನೊಂದು ದಿವಸ ಬೆಳ್ಯಕ್ಕನ ವಿಚಾರ ಹೇಳುತ್ತೇನೆ' ಎಂದರು.

'ನಾಳೆಗೆ' ಎಂದನು ಚಂದ್ರಯ್ಯ.—'ನಾಳೆಗೇ' ಎಂದು ಅವರೂ ಒಪ್ಪಿದರು.

---

೪

# ಬೆಳ್ಯಕ್ಕನ ಪ್ರೇತ

ಮರುದಿನ ಈಶ್ವರಭಟ್ಟರ ಸವಾರಿ ಚಂದ್ರಯ್ಯನ ಮನೆಗೆ ಬಂದಿತು. ಚಂದ್ರಯ್ಯನು ಇರುತ್ತಾನೆಯೋ ಇಲ್ಲವೋ ಎಂಬ ಸಂಶಯ ಅವರಿಗಿತ್ತು. ಮನೆಯಲ್ಲಿರುತ್ತೇನೆಂದ ದಿವಸ ಚಂದ್ರಯ್ಯನಿರುವುದೇ ಕಷ್ಟ. ಅಂದರೆ ಒಂದಲ್ಲ ಒಂದು ಕೆಲಸ. ಏನಾದರೊಂದು ಗಾಳಿಗೋಪುರ ಕಟ್ಟುತ್ತಿರುವ ಅವನು ನಿತ್ಯವೂ ಮನೆಯಲ್ಲಿರುವುದು ಸಾಧ್ಯವೇ? ಆದರೆ ಈ ದಿನ ವಿಶೇಷವಾಗಿ ಮನೆಯಲ್ಲಿ ಉಳಿದುಕೊಂಡನು. ಬೆಳ್ಯಕ್ಕನ ಪ್ರೇತದ ಕಥೆಯೇನೆಂದು ತಿಳಿಯುವ ಕುತೂಹಲ ಅವನದು. ಭಟ್ಟರು ಬರುವಾಗ ಕಾಫಿ ಉಪ್ಪಿಟ್ಟು ಸಿದ್ಧಮಾಡಿ ಕುಳಿತಿದ್ದನು. ಫಲಾಹಾರ ಮುಗಿದೊಡನೆಯೇ 'ಭಟ್ಟರೇ, ನೀವು ನೋಡಿಲ್ಲವೇ ಆ ಪ್ರೇತವನ್ನು' ಎಂದು ಪ್ರಸ್ತಾಪಿಸಿದನು.

'ಇದೇನು ಚಂದ್ರಯ್ಯ, ಪ್ರೇತಕ್ಕೇನು ಅಷ್ಟು ತಗಲಿಕೊಂಡಿದ್ದಿಯಾ?' ಎಂದು ನಕ್ಕರು. 'ಇಲ್ಲ ಹೇಳುತ್ತೇನೆ. ಒಂದು ದಿನವಂತೆ. ನಮ್ಮಪ್ಪ ಕುಂಬಳೆಯಿಂದ ಕಾಲು ನಡೆಯಾಗಿ ಬರುತ್ತಿದ್ದರು. ಕಾಲುನಡೆ

ಎಂದರೆ ಆಗಿನ ದಿವಸ ಮೋಟರೇ ಇರಲಿಲ್ಲವಲ್ಲ. ರೈಲು ಬಂದಿತ್ತಷ್ಟೆ. ಅವರು ಹಾಗೆಲ್ಲ ಹಣ ವ್ಯಯಿಸಿ ರೈಲು ಏರಿದವರಲ್ಲ. ರಾತ್ರಿ ಒಬ್ಬರೇ ಕೈಬೀಸಿಕೊಂಡು ಬರುತ್ತಿದ್ದರು. ಬರುತ್ತ ಬರುತ್ತ ಮೂಡಂಬೈಲಿನ ಸೆರಗು ಬಂದಿತು. ಒಮ್ಮೆಗೇ ಏನೋ ಬೆಳ್ಳನೆ ಕಾಣಿಸಿಕೊಂಡಿತಂತೆ. ಆಶ್ಚರ್ಯವಾಯಿತಂತೆ '

'ಹೆದರಲಿಲ್ಲವೇ' ಎಂದು ಚಂದ್ರಯ್ಯ ಕೇಳಿದ.

'ಹೆದರಿಕೆ ಯಾಕೆ? ಅವರಿಗೆ ಹೆದರಿಕೆ ಏನೆಂದು ತಿಳಿಯದು. ಅಲ್ಲದೆ ಆಂಜನೇಯನ ಸ್ತೋತ್ರ, ನೂರಾರು ಅಷ್ಟೋತ್ತರಗಳೆಲ್ಲಾ ಅವರ ನಾಲಿಗೆ ತುದಿಯಲ್ಲಿತ್ತು. ಬಾಯಿಯಲ್ಲಿ ಹಾಗೇನೋ ಮಂತ್ರವನ್ನು ಉಚ್ಚರಿಸುತ್ತ ನಿಂತರಂತೆ. ಅದೂ ನಿಂತಿತಂತೆ. ಇವರು ಎಷ್ಟುಹೊತ್ತು ನಿಂತರೋ ಅದೂ ಅಷ್ಟು ಸಮಯ ನಿಂತಿತಂತೆ.

'ಕಡೆಗೆ?'

'ಹೋ, ಇದು ನಿಂತು ಪೂರೈಸುವ ಬಾಬತ್ತು ಅಲ್ಲವೆಂದು ಮುಂದೆ ಹೆಜ್ಜೆ ಕಿತ್ತರು. ಇವರಿಗೆ ಐವತ್ತು ಮಾರು ದೂರದಲ್ಲಿ ಅದೂ ಸರಿಯಿತು. ಬೈಲಿನ ಮುಂದಿರುವುದು ಗೊತ್ತಿದೆಯಲ್ಲ ಮಾಸ್ತಿ ಗುಡಿ. ಅಲ್ಲಿ ಹಿಂದೆ ಯಾರು ತಿರುಗುತ್ತಿದ್ದರೋ, ಈಗಂತೂ ರಾತ್ರಿ ಸಂಚಾರ ಮಾಡುವವರಿಲ್ಲ. ಈ ಭೂತ ಆ ಕಡೆ ಸರಿಯಿತಂತೆ. ಇವರೂ ಹಿಂಬಾಲಿಸಿದರು. ಅಂದರೆ ಮನೆಗೆ ಬರಬೇಕಾದರೂ ಅಲ್ಲಿಂದಲೇ ಬರಬೇಕಷ್ಟೆ.'

'ಭೂತ ಕೆರೆದಂಡೆಯಲ್ಲಿ ನಿಂತಿತು'

'ಮಾಸ್ತಿ ತೀರ್ಥದಲ್ಲೇ?'

'ಅಹುದು. ಅಲ್ಲೇ. ನೋಡುತ್ತಿರುವಾಗಲೇ ವಸ್ತ್ರ ಕಳಚಿ ಹಾಕಿ ಮಕ್ಕಳ ಹಾಗೆ 'ಡೋಳುಂ' ಎಂದು ನೀರಿಗೆ ಹಾರಿತು. ಕೆಲವು ನಿಮಿಷ ಮೇಲೆ ಬರಲೇ ಇಲ್ಲವಂತೆ. ನಮ್ಮ ಅಪ್ಪನಿಗೆ ಆಶ್ಚರ್ಯವಾಯಿತು. ನೀರಿನೊಳಗೆ ಇದು ಎಲ್ಲಿ ಹೋಯಿತು? ಹೋದರೆ ವಸ್ತ್ರ ಯಾಕೆ ಕಳಚಿ ಹಾಕಿತು ಎಂದು. ವಸ್ತ್ರ ಮತ್ತೂ ಕೆರೆಯದಂಡೆಯ ಮೇಲೇನೆ ಇತ್ತಂತೆ. ಆಗ ಇದೇನು ಎಂದು ಮೂಗಿಗೆ ಬೆರಳಿಟ್ಟರೆ ಅದೂ ಕೆರೆಯ

ದಂಡೆಯ ಮೇಲೆ ನಿಂತಿತ್ತು. ಬರಿ ಬತ್ತಲೆಯಂತೆ. ತನಗೆ ನಾಚುಗೆ ಯಾಯಿತು ನೋಡುವುದಕ್ಕೆ ಎನ್ನುತ್ತಾರೆ.

'ಭೂತಗಳಲ್ಲೂ ಅಷ್ಟು ನಾಚಿಕೆಗೆಟ್ಟವು ಇರುತ್ತಾವೆಯೇ ?'

'ಅಯ್ಯೋ ಅವಕ್ಕೇನು ನಾಚಿಕೆ ? ಹಾಗೆ ಕೇಳಿದರೆ ಪ್ರೇತಾವಸ್ಥೆ ಯಲ್ಲಿ ವಸ್ತ್ರ ಇರುವುದು ನಾಚಿಕೆ. ಕಥೆ ಕೇಳು: ಎರಡು ಮೂರು ಆವೃತ್ತಿ ಹಾಗೆ ಕೆರೆದಂಡೆಯಿಂದ ನೀರಿಗೆ ಹಾರಿ ಮೇಲೆ ಬಂದಿತು. ಇವರು ಬೆಪ್ಪಾಗಿ ನೋಡುತ್ತಲೇ ಇದ್ದರು. ನೋಡುತ್ತಿದ್ದ ಹಾಗೆ, ಒಮ್ಮೆ ಮೇಲಕ್ಕೆ ಬಂದು ಬಟ್ಟೆಯನ್ನು ಉಟ್ಟುಕೊಂಡು ಮಾಯ ವಾಯಿತು....ಅಪ್ಪಯ್ಯ ಹರಹರ ಎಂದು ಮನೆಗೆ ಬಂದರು.'

'ಒಂದೇ ಸಾರಿ ನೋಡಿದ್ದೋ ? ಅದನ್ನ'

'ಇಲ್ಲ, ತುಂಬ ಸಾರಿ ನೋಡಲಿಕ್ಕೆ ಸಿಕ್ಕಿದೆಯಂತೆ. ಪ್ರತಿ ಸಾರಿಯೂ ಆ ಬಯಲಿನಲ್ಲಿ ಅಮಾವಾಸೆ, ಸಂಕ್ರಾಂತಿ ಸಮಯ ತಪ್ಪದೆ ಇದೆಯಂತೆ. ಆದರೆ ಹಾಗೆ ಬೆತ್ತಲೆ ನೀರಲ್ಲಿ ಹಾರಿ ಕುಣಿದದ್ದು ಮಾತ್ರ ಒಂದೇ ಸಾರಿಗೆ ಎನ್ನುತ್ತಾರೆ.'

ಇಷ್ಟು ಕಥೆಯನ್ನು ಕೇಳುತ್ತಲೇ ಚಂದ್ರಯ್ಯನ ಕಿವಿ ನೆಟ್ಟ ಗಾಯಿತು. ತಮ್ಮ ಊರಿನಲ್ಲೇ ಅಷ್ಟೊಂದು ವಿಚಿತ್ರವಿರುವುದು ನಿಜವಾದರೆ ತಾನೇಕೆ ನೋಡಬಾರದು. ಅದು ನಿಜವಾದರೆ ಆ ವಿಷಯ ವಾಗಿ ವರ್ತಮಾನ ಪತ್ರಿಕೆಗಳಿಗೆ ಒಂದು ಲೇಖನ ಬರೆದರೂ ಬರೆಯುವ ಎಂಬ ಮನಸ್ಸಾಯಿತು. 'ಭಟ್ಟರೇ, ಒಂದು ದಿವಸ ನಾನೂ ನೀವೂ ಹೋಗಿ ರಾತ್ರಿ ಕಾದಿರೋಣವೇ ಅಲ್ಲಿ. ಸಂಕ್ರಾಂತಿಯಾದರೂ ಸರಿಯೆ, ಅಮಾವಾಸ್ಯೆಯಾದರೂ ಸರಿಯೇ—ಹಟ ಸಾಧಿಸಿ ಅದನ್ನು ಕಾಣಬೇಕು.'

'ಕಂಡು..?'

'ನಾನು ಮಾತನಾಡಿಸಲಿಕ್ಕೂ ತಯಾರಿ. ಬರಿ ಬತ್ತಲೆ ಯಾಕೆ ನಿಂತಿದ್ದಿ ಎಂದು ಕೇಳಿಯೇ ಬಿಟ್ಟೇನು ? ನಿಮ್ಮಪ್ಪಯ್ಯನ ಹಾಗೆ ನಾಚಿ ಕೊಂಡು ತಲೆ ತಗ್ಗಿಸಲಿಕ್ಕಿಲ್ಲ....'

'ಆದರೆ ಅಪ್ಪಯ್ಯ ಎನ್ನುತ್ತಿದ್ದರು: ರೂಪ ಮಾತ್ರ ರತಿದೇವಿ ಸುಳ್ಳೆನ್ನುವ ಹಾಗಿತ್ತಂತೆ..'

'ನಿಜವೇ ? ಪ್ರೇತಕ್ಕೆ ಯಾಕೆ ಅಂಥ ರೂಪ ?'

'ಯಾರನ್ನಾದರೂ ಹಿಡಿದು ಮುಣಗಿಸಲಿಕ್ಕೆ. ಎಲ್ಲಾದರೂ ನಮ್ಮಪ್ಪ ಮಂಕು ಹಿಡಿದು ರೂಪ ಮೋಹಿಸಿ ಕೆರೆಯ ಬಳಿಗೆ ಹೋಗಿದ್ದರೆ ಜುಟ್ಟುಹಿಡಿದು ನೀರಲ್ಲಿ ಮುಣುಗಿಸುತ್ತಿತ್ತೊ. ಏನೋ ? ಈ ಪ್ರೇತ ಗಳೆಂಬವೆಲ್ಲ ಏನು. ಅತೃಪ್ತ ಜೀವಿಗಳು. ಬದುಕಿದ್ದಾಗ ನಿರಾಶೆ ಗೊಂಡವು. ಸತ್ತ ಮೇಲೆ ಈ ಸೂಕ್ಷ್ಮಶರೀರವನ್ನಾದರೂ ತಾಳಿ ಆಸೆ ಪೂರೈಸಿಕೊಳ್ಳುವುವು..'

'ಅದರಿಂದ ನಮಗೇನು ಬಂದೀತು?' ಎಂದು ಚಂದ್ರಯ್ಯನ ವಾದ.

'ಅವನ್ನು ನೋಡಿಯೇ ಸಾಧಾರಣದವರಿಗೆ ಜೀವ ಹಾರಿ ಹೋದೀತು. ನಿನ್ನಂಥವರು ಯಾರಾದರೂ ಹಾಗೆ ಮುಂದರಿದಾರೆಯೇ ಏನಹ ಸಾವಕಾಸ್ಯರು ಬರಲಾರರು. ಅಲ್ಲದೆ ಮಂತ್ರವಾದದ ಬಲವಿಲ್ಲದೆ ಅವುಗಳನ್ನು ಬಗ್ಗಿಸುವುದೂ ಅಸಾಧ್ಯ..'

'ಅದೆಲ್ಲ ಇರಲಿ—ನೀವು ನನ್ನೊಟ್ಟಿಗೆ ಬರುತ್ತೀರಾ ? ಉಳಿದ ಕೆಲಸ ನನ್ನಿಂದ ಸಾಧ್ಯ. ನಮ್ಮನ್ನು ಏನೂ ಮಾಡಲಾರವು ಅವು. ಅವನ್ನು ನಾವು ಹಾನಿ ಮಾಡಬೇಕಾಗಿಲ್ಲ..'

'ನಿನಗೆ ಇಲ್ಲದ ಆಡಾವುಡಿ. ಒಮ್ಮೆ ಎಲ್ಲಾದರೂ ಏಟು ಹಾಕಿ ತೆಂದರೆ ಹಾಸುಗೆಯಿಂದ ಬಿಟ್ಟೇಳುವಂತಿಲ್ಲ.'

'ಆ ! ಹೆದರಿದರೆ ಮಾತ್ರ..'

'ಹೆದರುವ ಬಿಡುವ ಕೆಲಸ ನನಗೆ. ನೀವು ಒಂದು ದಿವಸ ಬನ್ನಿ ನೋಡಲಿಕ್ಕೆ ಸಿಗಲಿ. ಆ ಮೇಲೆ ನೀವು ಮರಳಿದರೂ ಚಿಂತೆಯಿಲ್ಲ.'

ಅಷ್ಟಕ್ಕೇನೆ ಈಶ್ವರಭಟ್ಟರ ಉಸಿರು ಅರ್ಧವಾಯಿತು. 'ಆಯಿತು ನೋಡುವ. ಆಯಿತು ನೋಡುವ' ಎಂದು ಸಮಾಧಾನ ಹೇಳಿದರು. ಚಂದ್ರಯ್ಯನಿಗೆ ಇದು ಕೆಲವು ದಿವಸಗಳಲ್ಲಿ ಮರವೆಯಾದೀತು ಎಂದು ಅವರು ತಿಳಿದಿದ್ದರು. ಆದರೆ ಇವರ ಕಥೆ ಚಂದ್ರಯ್ಯನ ಮನಸ್ಸಿನಲ್ಲಿ ಬಿತ್ತಿದ ಹೊಸಬೀಜ, ಅದೆಷ್ಟು ಬೆಳೆದೀತು ಎಂದು ಅವರಿಗೆ ಏನು ಗೊತ್ತು ?

೫

# ಸುನಾಲಿನಿಯ ಸಂತಾಪ

ಸ್ವದೇಶಾಭಿಮಾನಿ, ಪ್ರಭಾತಗಳೆರಡನ್ನೂ ಸುನಾಲಿನಿ ತಿರುವಿ ಹಾಕಿದಳು. ಒಂದೊಂದನ್ನು ಐದೈದು ಸಾರಿ ಓದಿ ಮುಗಿಸಿದಳು. ಸಾಲದುದಕ್ಕೆ ಹಿಂದಿನ ಒಂದು ವಾರದ ಪೇಪರನ್ನು ತಿರುವಿ ಹಾಕಿಯಾಯಿತು. ಅವಳು ಪೇಪರು ಓದುತ್ತಿರುವುದನ್ನು ಕಂಡರೆ ಅತ್ತೆ ರಾಜೀವಿಗೆ ಮೈಯೆಲ್ಲಾ ಉರಿ. ಆದರೂ ಇವಳಿಗೆ ಸಮಯ ಕಳೆಯಲು ಬೇರೆ ದಾರಿಯಿಲ್ಲ. ಅತ್ತೆ ಜತೆಯಲ್ಲಿ ದಾಳಿ ತೊವ್ವೆ ತಯಾರಿಗೆ ನೆರವಾದಳು. ಅಡುಗೆ ಮಾಡಿ ಇರಿಸಿಯಾಯಿತು. ಸಮಯ ಹೋಗದು. ನೆರೆಮನೆಯಿಂದ ಎರವಾಗಿ ತಂದ ಸಂಡೇ ಟ್ಯಾಮ್ಸನ್ನು ತಿರುವಿ ಹಾಕಿದಳು. ಆದರೂ ಮನಸ್ಸಿಗೆ ನೆಮ್ಮದಿ ಇಲ್ಲದಿರುವಾಗ ಪೇಪರುಗಳ ರಾಶಿ ಏನು ಮಾಡೀತು? 'ಹಿಂದೂ' ತರಿಸಿದ್ದರೆ ಇನ್ನಷ್ಟು ಹೇಳಿ ಕೊಳ್ಳಬಹುದಿತ್ತು. ತಿಂಗಳಿಗೆ ಎರಡೂ ಚಿಲ್ಲರೆ ರೂಪಾಯಿ ವರ್ಗಣಿ ಕೊಡಬೇಕೆಂದರೆ ಅವಳ ಗಂಡ ಅಣ್ಣಪ್ಪ ಕಮ್ತಿಗೆ ದಿಗಿಲು ಹಾರುತ್ತಿತ್ತು.

ರಾತ್ರಿ ಎಂಟು ಬಡಿದು ಮಿನಿಟಿನ ಮುಳ್ಳು ಇನ್ನೊಂದು ಸುತ್ತು ಬರುವಲ್ಲಾಯಿತು. ಗಂಡ ಬಾರದೆ ಊಟ ಮಾಡುವಂತಿಲ್ಲ; ನಿದ್ರೆ ಹತ್ತುವಂತಿಲ್ಲ. ಅಂಗಡಿ ಮುಚ್ಚಿ ಅಣ್ಣಪ್ಪ ಕಮ್ತಿಯರ ಸವಾರಿ ಮನೆಗೆ ಚಿತ್ತೈಸುವಾಗ ಹತ್ತುಗಂಟೆಯಾಗುವುದು ರೂಢಿ. ಬೆಳಿಗ್ಗೆ ಎಂಟು ಘಂಟೆಗೆ ತೆರೆದ ಅವರ ಅಂಗಡಿ ರಾತ್ರಿ ಹತ್ತರ ತನಕ ತೆರೆದಿರಲೇಬೇಕು. 'ಅವರ ಅಂಗಡಿಯಲ್ಲಿಲ್ಲದ ದಿನಸಿಲ್ಲ. ಸಾಲ, ಕಡ ಕೊಡುವ ತ್ರಾಣವೂ ಉಂಟು. ಅಂತು ಊರಿನ ಸುತ್ತಲಿನ ವರ್ಗದಾರರಿಗೆ ಅದು ವ್ಯಾಪಾರದ ಅಂಗಡಿ, ಗ್ರಾಮ ಚಾವಡಿ, ಜನಾರ್ಧನ ಕಚೇರಿ—ಏಕಕಾಲದಲ್ಲಿ ಆಗುತ್ತಿತ್ತು. ಅಣ್ಣಪ್ಪಯ್ಯ ಊರಿನ ಸಂಗತಿ ತಿಳಿದವರಾದುದರಿಂದ ಚಂದ ಮಾತನಾಡುತ್ತ, ಅಳತೆಯಲ್ಲಿ ತೊಲಾ, ನಾಲ್ಕು ತೊಲಾ ಕತ್ತರಿಸಿದರೆ ಬೆಪ್ಪು ಗಿರಾಕಿಗಳಿಗೆ ತಿಳಿಯುತ್ತಲೂ ಇದ್ದಿಲ್ಲ. ಹಾಗೆ ಕೇಳಹೋದರೆ ಸಂಜೆ

ಮುನ್ನೂರು ಚೀಲ ತುಂಬಿಸಿದ್ದಾರೆ. ಈ ಹಾಳು ತುಫಾನು ಬಿಡುವ ಹಾಗೇ ಇಲ್ಲ. ಕೊಲಂಬೋದಲ್ಲಿ ಮೊಸೂಮು (monsoon) ನಿಂತಿದೆ ಯಂತೆ....ಎಂದರು. ಸುನಾಲಿನಿಗೆ ಈ ಉಪನ್ಯಾಸ ಕೇಳಿ ರೇಗಿತು. ತಿಂಗಳಿಗೆ ಎರಡು ದಿವಸ ಅವಳ ಸುಖದುಃಖ ವಿಚಾರಿಸಿದವರಲ್ಲ. ಆದರಿಂದ 'ದಯಾವತಿ ಸ್ಟೀಮರು ಬಂದರಾಗದಿದ್ದರೆ ಹೋಗಲಿ—ತಮ್ಮ ಸ್ಟೀಮರು ಬಂದರೇ ಆಗುವುದಿಲ್ಲ. ಸಕ್ಕರೆ ಬೇಡ—ಸಕ್ಕರೆ ಹಾಗಿನ ಮಾತಿಗೂ ಬರಗಾಲವೇ? ಮಾತಿಗೂ ಪುರುಸೊತ್ತು ಇಲ್ಲದವರು ಮದುವೆಯಾಗಬೇಕು ಏಕೆ?'—ಎಂದುಬಿಟ್ಟಳು.

ಮುಂದಿನ ವಿಚಾರ ತಿಳಿಯಬಹುದು. ಮೋಸೂಮು—ಮಳೆ. ಅಣ್ಣಪ್ಪಯ್ಯ ಈಗ ಮಾತನಾಡಬಾರದು ಎಂದು ತಿಳಿದು ಮೂಕಾದರು. ರಾತ್ರಿಯೆಲ್ಲಾ ಮೌನವಾಗಿಯೇ ಕಳೆಯಿತು. ಮಧ್ಯಾಹ್ನ ತಾಯಿ ಮತ್ತು ಅವರು ಊಟಕ್ಕೆ ಕುಳಿತಿದ್ದರು. ಸುನಾಲಿನಿ ಅನ್ನ ಬಡಿಸುತ್ತಿದ್ದಳು. ಆಗ ಅಣ್ಣಪ್ಪಯ್ಯನು ಸಂಜೆಸಿಂದ ಮಾತನಾಡತೊಡಗಿದರು, 'ನನ್ನ ಬಳಿಯಲ್ಲಿ ಸಕ್ಕರೆಯಂತಹ ಮಾತೂ ಸಹ ಇಲ್ಲವಂತೆ! ತಾನೊಂದು ಮೆಟ್ರಿಕ್ಕು ಓದಿದ್ದೇನೆ ಎಂದು ತಲೆತುಂಬ ಹುಳಿ ಬಂದರೆ ಮತ್ತೇನಾದೀತು?' ಎಂದರು.

ತಾಯಿ ಸಂಗತಿ ಏನೆಂದು ಕೇಳಿದಳು. ಎಲ್ಲಾ ಸುದ್ದಿ ಬಂದಿತು. ಅವಳೂ ಮಗನ ಕಡೆಗೆ ಸೇರಿ 'ಅವಳಿಗೆ ಗಂಡನೇಕೆ? ನೂಸ್ ಪೇಪರಿಲ್ಲವೇ? ಈ ಮನೆಯಲ್ಲಿ ಏನು ಕಡಿಮೆಯಾಗಿದೆ? ಉಣ್ಣಲಿಕ್ಕಿಲ್ಲವೇ? ತಿನ್ನಲಿಕ್ಕಿಲ್ಲವೇ? ಉಡಲಿಕ್ಕಿಲ್ಲವೇ?'

ಸುನಾಲಿನಿಗೂ ಪಿತ್ತ ಅಡರಿತು......'ಹೌದು ಎಲ್ಲಾ ಇದೆ. ಅದು ಪಟ್ಟಿಯಲ್ಲಿರುವ ಗೋಪಿ (ಪಸ) ಗೂ ಇದೆ.'

ಅತ್ತೆಯ ಅಧಿಕಾರಕ್ಕೆ ಅವಮಾನವಾದಂತಾಯಿತು. 'ಹೂಂ.. ನನಗೆ ಎದುರು ಮಾತನಾಡುತ್ತೀಯಾ? ಈ ಮನೆಯ ಗೋಪಿಯ ಹಾಗೆ ನಿನ್ನನ್ನು ಕಂಡರೇ? ಅಣ್ಣಪ್ಪ, ನಾಳೆಯಿಂದ ನೀನು ಅಂಗಡಿಗೆ ಹೋಗಬೇಡ ಏನು—ನಿನ್ನ ಈ ಪೀಸಣಿಗೆ ಬಟ್ಟೆಗೆ ಕೂತು ಇಂಗ್ಲಿಷ್ ಪೇಪರು

ಓದು....ಅಂಗಡಿಯನ್ನು ಹುಲಿ ತಿನ್ನಲಿ....ಆಮೇಲೆ ಏನಾದೀತು ನೋಡಿಕೊಳ್ಳುವ....

ಇಂಗ್ಲಿಷ್ ಓದಿಯೇ ದೇವಪ್ಪ ಪ್ರಭು ದಿವಾಳಿ ತೆಗೆದದ್ದು. ಅಲ್ಲವಾದರೆ ಬಂದರಿನಲ್ಲಿ ಲಕ್ಷಾಂತರ ರೂಪಾಯಿ ವ್ಯಾಪಾರ ಮಾಡುತ್ತಿದ್ದವರು, ಒಂದು ಸಾರಿ ಅಡಿಕೆ ಧಾರಣೆ ಇಳಿದರೆ ಮುಣುಗಿ ಹೋಗುತ್ತಾರೆಯೇ?'

ಅತ್ತೆಯ ಅಪೂರ್ಣ ಟೀಕೆಯನ್ನು ಅಣ್ಣಪ್ಪಯ್ಯ ಪೂರೈಸಿದರು, 'ಅದು ಅಡಿಕೆ ವ್ಯಾಪಾರದಿಂದಲ್ಲ. ಅವರು ಕೊನೆಕೊನೆಗೆ ಹಗಲೂ ರಾತ್ರಿ ಬಿದ್ದಿರುವುದೇ ಕ್ಲಬ್ಬಿನಲ್ಲಿ. ಬೆಳಗಿಂದ ಸಂಜೆಯತನಕ ಇಸ್ಪೀಟು. ಮಾಳ್ಸೈ, ಬಿಸ್ಕುಟಾಂಬಡೆ, ಇಸ್ಪೀಟು ಇಂಗ್ಲಿಸ್ ಪೇಪರು..ಅಂಗಡಿಯಲ್ಲಿ ಸಿಕ್ಕಿದವರ ದರ್ಬಾರು. ಹಾಗಿದ್ದರೆ ಲಕ್ಷವಲ್ಲ ಹತ್ತುಲಕ್ಷವಿದ್ದರೂ ನಿಂತೀತೇ?......ಅವರ ಠೀವಿ ಮೊದಲಿನ ಹಾಗೆ ಇದ್ದರೆ, ಇಂಗ್ಲಿಸ್ ತಿಳಿಯದ ಅಳಿಯನಿಗೆ ತಮ್ಮ ಮೆಟ್ರಿಕ್ಕಿನ ಮಗಳನ್ನು ಕೊಡುತ್ತಿದ್ದರೇ' ಎಂದರು.

ಅಣ್ಣಪ್ಪಯ್ಯ ಮಾತನಾಡಿಸದಿದ್ದರೂ ಹೋಗಲಿ, ಇಷ್ಟು ಮುಂದು ವರಿದು ಮಾತನಾಡುತ್ತಿದ್ದರೆಂದು ಸುನಾಲಿನಿ ಊಹಿಸಿರಲಿಲ್ಲ. ತಾನು ಎಂಥ ಮನೆಗೆ ಬಂದೆ—ಎಂದು ಅವಳಿಗಿದ್ದ ಚಿಂತೆ ನೂರ್ಮಡಿಯಾಯಿತು.

ಮಧ್ಯಾಹ್ನ ಊಟವಿಲ್ಲ. ಹಾಗೇನೇ ತನ್ನ ಕೋಣೆಗೆ ಬಂದು ಮುಖ ಉಬ್ಬಿಸಿ ಕುಳಿತಳು. ಎಷ್ಟು ಉಬ್ಬಿಸಿ ಕುಳಿತರೂ, ಅವಳನ್ನು ಮಾತನಾಡಿಸುವರಾರು? ಅತ್ತೆ ಬರುವವಳಲ್ಲ, ಗಂಡನ ಉದ್ಯೋಗ ಅಂಗಡಿಯಲ್ಲೇ ಪರಿಸಮಾಪ್ತಿ. ಪೇಪರುಗಳನ್ನು ತೆಗೆದಳು—ಹರಿದು ಎಸೆದು ಬಿಟ್ಟಳು. ಅವರು ತನ್ನ ತಂದೆಯನ್ನು ನಿಂದಿಸಿದ್ದು ನೆನಪರಿಕೆಯಾಯಿತು. ಅವರು ದಿವಾಳಿಯಾಗಲು 'ಇಸ್ಪೀಟು' ಕಾರಣವಿತ್ತೋ ಏನೋ—ಅಂತು ಅದೊಂದೇ ಇರಲಾರದು. ಪೇಪರು ಓದಿ ದಿವಾಳಿಯಾದರೆ? ಅಂತು ದಿವಾಳಿಯಾದದ್ದೂ ನಿಜ. ತನ್ನ ಮಗಳನ್ನು ಐ. ಸಿ. ಎಸ್. ಮಾಡಿದ ಅಳಿಯನಿಗೆ ಕೊಡುತ್ತೇನೆ ಎಂದು ಹೊತ್ತ ಆಸೆಯನ್ನು

ಅಲ್ಲಿಗೇ ಮುರಿದು, ಮಂಜೇಶ್ವರ ಅಣ್ಣಪ್ಪ ಕಮ್ತಿಯವರಿಗೆ ಕೊಟ್ಟದ್ದೂ ನಿಜ. ಏನಿಲ್ಲವಾದರೆ ಹೊಟ್ಟೆಬಟ್ಟೆಗಿಲ್ಲದೆ ಹೋಗಬಾರದು. ಸುಖದಿಂದ ಬೆಳೆಯಿಸಿದ ಮಗಳು. . ಒಂದೇ ಒಂದು ರತ್ನ–ಎಂಬುದರಿಂದ. ಮದುವೆ ಯಾದ ಕೆಲವು ದಿವಸಗಳಲ್ಲಿ ತಾನೆಂಥ ಕೆಲಸ ಮಾಡಿದೆನೆಂದು ಅವರಿಗೆ ತಿಳಿಯಿತು.

ಈಗೇನು ಗತಿ? ಸುನಾಲಿನಿ ತಿರುಗಿ ತಂದೆಯ ಮನೆಗೆ ಹೋಗಲೇ? ದೇವಪ್ಪ ಪ್ರಭುಗಳ ವಾನಪ್ರಸ್ಥಾಶ್ರಮದ ಚಿಂತೆಯನ್ನು ತನ್ನ ಚಿಂತೆ ಯಿಂದ ಹೆಚ್ಚಿಸಲೇ? ಸುನಾಲಿನಿಗೆ ಮದುವೆಯಾಗುವಾಗ ಹದಿನೇಳನೆಯ ವಯಸ್ಸು. ಈಗ ಇಪ್ಪತ್ತನಾಲ್ಕು ವರುಷವಾಗಿದೆ. ದುಃಖವನ್ನು ಮರೆಯಲು ಸಂತತಿಯೂ ಇಲ್ಲ. ಮನುಷ್ಯರ ಎಡೆಯಲ್ಲಿ ನಲಿದು ನಲಿದು ಅವಳು ಒಬ್ಬಂಟಿಗಳು.

ಎಷ್ಟೋ ಬಾರಿ ಅವಳ ಮನಸ್ಸು ತಂದೆಯ ಮನೆಗೆ ಹರಿಯು ತ್ತಿದ್ದಿತು. ಇವಳನ್ನು ಕಂಡಾಗಲೆಲ್ಲ 'ನಾನು ನಿನ್ನನ್ನು ಹಳ್ಳಕ್ಕೆ ನೂಕಿದೆ.' ಎಂದು ಅಳುತ್ತಿದ್ದವರ ಮುಂದೆ, ತನ್ನ ಜೀವನವನ್ನು ಬಣ್ಣಿಸಿ ಹೇಳಿದರೆ– ಅವರ ಮುಪ್ಪಿನ ಎದೆ ತಟಸ್ಥವಾಗಲು ಬೇರೆ ಔಷಧಿಯೇ ಬೇಡ. ಆದುದ ರಿಂದ ಆಗಾಗ ಮಂಗಳೂರಿಗೆ ಹೋದರೂ—ಗಂಡನ ಮನೆಯಲ್ಲಿ ಇಲ್ಲದ ವೈಭವವನ್ನು ಅಲ್ಲಿ ಬಣ್ಣಿಸುತ್ತಿದ್ದಳು. ಈಗೇನು ಒಮ್ಮೆಗೇ ಅಲ್ಲಿಗೆ ಹೋಗಿ ಈ ಶಸ್ತ್ರಘಾತದ ಗಾಯವನ್ನು ತಂದೆಯ ಮುಂದೆ ಬಿಡಿಸಲೇ? ಅವನೊಂದಿಗೆ ಬಡತನವನ್ನು ಸವಿಯಲೇ?

ಬದಲೇನು? ಗಂಡನನ್ನು ವಿದ್ಯಾವಂತನಾಗಿ ಮಾಡಲು ಬಂದೀತೇ? ವಿದ್ಯೆ ಸಾಕಷ್ಟು ಇದೆ. ಶಾಲೆಗೆ ಹೋಗಿ ಸಾಮಾನ್ಯಜ್ಞಾನವನ್ನು, ಸಾಮಾನ್ಯವಲ್ಲವಾದರೂ ವ್ಯಾಪಾರಕ್ಕೆ ಸಹಜವಾದ ಜ್ಞಾನವನ್ನು ಪಡೆದು ಬಂದವರೇ. ಆದರೆ ಯಾವ ಶಾಲೆ ದಾಂಪತ್ಯಕ್ಕೆ ಬೇಕಾದ ಜ್ಞಾನವನ್ನು ಕೊಡುತ್ತದೆ. ಇವೇ ಯೋಚನೆಗಳೆಲ್ಲ ಅವಳ ಮನಸ್ಸಿಗೆ ಬಂದವು. ಬಂದು 'ಹಾಗೆ ಕೊಟ್ಟರೆ ಶಾಲಾ ಕಾಲೇಜುಗಳೆಲ್ಲಾ

ಪರೀಕ್ಷಾಮಂದಿರಗಳಾಗುವ ಬದಲು ವಿವಾಹ ಮಂಟಪಗಳಾಗಲಿಕ್ಕಿಲ್ಲವೇ?' ಎಂದು ತೋರಿ ನಕ್ಕಳು. ಹೊಟ್ಟೆ ಬಿರಿಯುವಂತೆ ನಕ್ಕಳು. ಮರುಕ್ಷಣ— 'ಹಾಗಾದರೇನು? ಸಂಸಾರಕ್ಕೆ ಸೇರವಾಗದ ವಿದ್ಯೆ ಎಷ್ಟಿದ್ದರೇನು? ಎರಡು ಅಪರಿಚಿತ ಹೆಣ್ಣು ಗಂಡುಗಳನ್ನು ಬೇರೆ ಬೇರೆ ಬೆಳೆಸಿ, ಒಂದು ದಿವಸ ಅವರನ್ನು ಮಂಟಪದೊಳಗೆ ಕೂಡ್ರಿಸಿ ದಾಂಪತ್ಯದಲ್ಲಿ ಬೆಸೆಯುತ್ತೇವೆ ಎಂಬುದು ಭ್ರಮೆಯಲ್ಲವೇ?' ಎಂದುಕೊಂಡಳು.

---

## ೬

## ಆರುತಿಂಗಳ ಅಂತರಿಕ್ಷ

ಈಶ್ವರಭಟ್ಟರಿಂದ ಬೆಳ್ಳಕ್ಕನ ವಿಚಾರ ಅನುಭವ ಪಡೆದು ಇಂದಿಗೆ ಆರು ತಿಂಗಳಾಯಿತು. ಚಂದ್ರಯ್ಯನ ತಲೆಯಲ್ಲಿ ಬೆಳ್ಳಕ್ಕನ ಪ್ರೇತವು ಅಹೋರಾತ್ರಿಯೂ ಸಂಚರಿಸುತ್ತದೆ. ಆರು ತಿಂಗಳಿನಲ್ಲಿ ಮೂರು ತಿಂಗಳ ಕಾಲ ಅವನು ಊರ ಹೊರಗೇನೆ ಇದ್ದರೂ, ಅವನ ಮನಸ್ಸು ಪ್ರೇತರಾಜ್ಯದಲ್ಲಿ ಸಂಚರಿಸುತ್ತಿತ್ತು. ಯಾವ ಊರಿಗೆ ಹೋಗಲಿ, ಯಾವ ಮಿತ್ರರು ಭೇಟಿಯಾಗಲಿ, ಅವನು ಅವರೊಡನೆ ಪ್ರೇತಭೂತಗಳನ್ನು ಕುರಿತು ಮಾತನಾಡುವುದು ರೂಢಿಯಾಯಿತು. ಮನೆಯ ರೇಡಿಯೋ ಪೆಟ್ಟಿನ ಮೇಲೆ ಜೇಡರ ಬಲೆ ಕಟ್ಟಿತು.

ಈಶ್ವರಭಟ್ಟರು ದೊರೆತಾಗಲೆಲ್ಲ 'ಭಟ್ಟರೇ, ಈ ಹೊತ್ತು ಹೋಗೋಣವೇ?' ಎಂದು ಕೇಳುವನು. ಭಟ್ಟರು 'ಅಯ್ಯೋ ಇದು ಹುಣ್ಣಿಮೆ ಸಮಯವಲ್ಲವೇ. ತಿಂಗಳು ಪ್ರಕಾಶವಿರುವಾಗ ಅದೆಲ್ಲಾ ಕಾಣಸಿಗುತದೆಯೋ' ಎನ್ನುವರು. ಅಮಾವಾಸ್ಯೆಗೆ ಮೂರು ದಿನ ಮುಂಚೆ ಮಾತನಾಡಿಸಿ ಬಂದರೆ, ಅಮಾವಾಸ್ಯೆಯ ದಿನ ಈಶ್ವರಭಟ್ಟರು

ಏನಾದರೊಂದು ನೆಪದಿಂದ ಊರಲ್ಲಿಯೋ ಇರುತ್ತಿರಲಿಲ್ಲ. ಈ ರೀತಿಯಾಗಿ ಆರು ತಿಂಗಳು ಕಾಲ ಸರಿಯಿತು. ಅವನ ಮನಸ್ಸನ್ನು ರತಿ ಸಮಾನದ ಬೆಳ್ಳಕ್ಕನು ಏಕೆ ಆವರಿಸಿದಳೋ—ಕಾರಣ ಅವನಿಗೆ ತಿಳಿಯದು. ಅವನೀಗ ಅಂತರಿಕ್ಷದಲ್ಲಿ ತಿರುಗುತ್ತಿದ್ದಾನೆ. ನಡುವೆ ಕಾರಣಾಂತರದಿಂದ ಅಲಂಬಾಡಿ ರಾಮಣ್ಣಯ್ಯ ಅವರ ಮನೆಗೆ ಬಂದರು. ಅವನೊಡನೆ ಸುಮ್ಮಗಿರುತ್ತಾನೆಯೇ? ಅವನಾಗಿ—'ಏನು ನಿಮ್ಮಲ್ಲಿಯ ಭೂತ ನೋಡಲು ಯಾವಾಗ ಬರುವುದು?' ಎಂದು ಕೇಳಿದನು. ರಾಮಣ್ಣಯ್ಯನಿಗೆ ಆ ಪ್ರಥಮ ವಾಕ್ಯವೇ ರುಚಿಸಲಿಲ್ಲ. 'ನಿನ್ನ ಮರ್ಜಿ ತೋರಿದಾಗ' ಎಂದು ಅವರು ಉತ್ತರವಿತ್ತರು. 'ನಾಳೆಗೇ ಜತೆಯಲ್ಲಿ ಹೊರಡೋಣ; ಅಮಾವಾಸ್ಯೆ ನಾಡಿದ್ದು ಅಲ್ಲವೇ' 'ನೀನು ಸುಮ್ಮನೆ ಚೇಷ್ಟೆಗೆ ಹೇಳುತ್ತಿ ಚಂದ್ರಯ್ಯ, ನಿನಗೆ ಬಡವರ ಮನೆ....'

'ಅಯ್ಯೊ ಅಯ್ಯೊ..ನನ್ನ ದೊಡ್ಡಸ್ತಿಕೆ ಅಷ್ಟರಲ್ಲಿಯೂ ಇದೆ. ನಾನೂ ಮನೆಯಲ್ಲಿ ಬೇಯಿಸಿ ತಿನ್ನುವುದು ಕುಚ್ಚಲು ಅಕ್ಕಿಯನ್ನು. ಬೆಳ್ಳಿಯ ಅಗಳು ತಿನ್ನಲು ಇನ್ನೂ ತೊಡಗಿಲ್ಲ..'

ರಾಮಣ್ಣನ ಮನಸ್ಸಿಗೆ 'ಚಂದ್ರಯ್ಯನು ದೊಡ್ಡಸ್ತಿಕೆ ರೀಪಿಯಿಂದ ತಮ್ಮ ಮನೆಗೆ ಬರುವುದಿಲ್ಲ ಎಂಬ ಸಂಶಯ ಮಾಯವಾಯಿತು. ಆದರಿಂದ ತುಸು ಉಲ್ಲಾಸವಾಗಿ 'ಹಾಗಿದ್ದರೆ ಹೋಗೋಣವೇ' ಎಂದನು. ಚಂದ್ರಯ್ಯನು ಅಲಂಬಾಡಿಗೆ ಹೋಗಲು ಬಸ್ಸಿಲ್ಲ..ಅಲ್ಲವೇ ಎಂದನು.

'ಬಸ್ಸಿಲ್ಲ. ಆದರೆ ಎತ್ತಿನ ಗಾಡಿ ಮಾಡುವ'

'ಅಯ್ಯೋ ಅಯ್ಯೋ ನನ್ನ ಬೆನ್ನೆಲುಬು ಅಷ್ಟು ಗಟ್ಟಿ ಇಲ್ಲಪ್ಪ.. ನಡೆದಾದರೂ ಹೋಗಬಹುದು. ನಿಮ್ಮ 'ಲಿಗಾಡಿ' ಬೇಡ'

'ನಡೆದು ಹೋಗುವುದಾದರೆ ಬೆಳಗಿನ ಜಾವಕ್ಕೇನೆ ಏಳಬೇಕು'

'ಸ್ನಾಕಲು ಬಂದೀತೇ?'

'ನನಗೆ? ಇನ್ನೊಂದು ಜನ್ಮಕ್ಕೆ'

'ನಿಮಗೆ ಬಾರದಿದ್ದರೂ ಚಿಂತೆಯಿಲ್ಲ. ನೀವು ಹೋಗುವ ಹಾಗೆ

ಹೋಗಿಬಿಡಿ. ಗಾಡಿ 'ರೋಟು' ಇದ್ದರೆ ನಾನು ಸ್ಯಾಕಲ್ ಫೇರಿ ಬಿಡುತ್ತೇನೆ.'

ಅಂತೆಯೇ ತೀರ್ಮಾನವಾಯಿತು. ಆ ದಿನ ರಾತ್ರಿ ರಾಮಣ್ಣಯ್ಯನಿಗೆ ಸವಿಗನಸುಗಳು. ಒಂದು ಸಾರಿ ಚಂದ್ರಯ್ಯನನ್ನು ಊರಿಗೆ ಒಯ್ದರೆ ಮಗಳ ಮದುವೆ ವಿಚಾರ ಹೇಗೂ ಅವನಿಂದ ಒಪ್ಪಿಸಬಹುದು ಎಂಬ ಧೈರ್ಯ ಅವನಿಗೆ. ರೂಪಗೀಪ ತಕ್ಕಮಟ್ಟಿಗೆ ಚಿಂತೆಯಿಲ್ಲ ಎನ್ನುವಹಾಗಿತ್ತು ಜಲಜಾಕ್ಷಿಗೆ. ಅದಕ್ಕೇನೆ ಅವನು ಚಂದ್ರಯ್ಯನನ್ನು ಬಾ ಎಂದು ಬಲವಂತಪಡಿಸುತ್ತಿದ್ದುದು. ಈ ಬಾರಿ ತೆಗೆದ ಬಾಯಿಗೆ 'ನಿಮ್ಮಲ್ಲಿಯ ಭೂತವನ್ನು ಯಾವಾಗ ನೋಡಲು ಬರುವುದು....' ಎಂದುದನ್ನು ಕೇಳಿ ಅವನಿಗೆ ದಿಗಿಲುಹಾರಿತು. 'ಹೋ. ಯಾರೋ ಹುಡುಗಿ ತೋರಿಸಲು ಕರೆಯುತ್ತಿದ್ದಾನೆ ಎಂದು ಕಿವಿ ಚುಚ್ಚಿರಬೇಕು. ರೂಪ ಚೆನ್ನಾಗಿಲ್ಲ ಅಂದಿರಬೇಕು. ಅದಕ್ಕಾಗಿ ಇವನು ಕುಚೇಷ್ಟೆ ಮಾಡುತ್ತಿದ್ದಾನೆ' ಎಂದು ಅವರಿಗೆ ಅನಿಸಿತು. ನಿಜಕ್ಕೂ ಚಂದ್ರಯ್ಯನಿಗೆ ಹುಡುಗಿಯ ವಿಚಾರವೇ ತಿಳಿದಿರಲಿಲ್ಲ.

ಚಂದ್ರಯ್ಯನು ಅವಿವಾಹಿತ. ಇಪ್ಪತ್ತನಾಲ್ಕನೆಯ ವಯಸ್ಸು ನಡೆಯುತ್ತದೆ. ಇನ್ನೂ ಮದುವೆಯಾಗಿಲ್ಲ. ಏಕೆ ಎಂದು ಈಶ್ವರಭಟ್ಟರು ಕೇಳಿದರೆ 'ಅಯ್ಯೋ ಹುಡುಗಿ ಸಿಗಬೇಡವೇ? ನಮ್ಮ ಜಾತಿಯವರು ಇರುವುದು ಮೂರು ಮುಷ್ಟಿ ಮಂದಿ.. ರೂಪವೋ ದೇವರೇ ಗತಿ..' ಎನ್ನುತ್ತಿದ್ದನು. ಈಶ್ವರಭಟ್ಟರು ಬಲವಾಗಿ ಒತ್ತಾಯಿಸಿ 'ಎಲ್ಲಿಂದಾದರೂ ಒಂದು ಹುಡುಗಿ ಸಂಪಾದಿಸಿ ಮದುವೆಯಾಗು. ಇನ್ನು ಮದುವೆಯಾಗದೆ ಇರುವುದು ಚಂದವಲ್ಲ. ಗಡ್ಡ ಹಣ್ಣಾದಮೇಲೆ ಸಂಸಾರವೇ?' ಎಂದು ಹೇಳುವರು. 'ನನ್ನ ಗಡ್ಡ ಫಕ್ಕನೆ ಹಣ್ಣಾಗುವ ಜಾತಿಯವಲ್ಲ' ಎಂದು ಚಂದ್ರಯ್ಯ ನುಡಿದರೂ ಅವನ ಮನಸ್ಸಿಗೆ ಆ ವ್ಯಥೆ ಇದ್ದೇ ಇತ್ತು. ಮದುವೆಯಾದರೆ ರೂಪಗೀಪ ಇರುವ ತಕ್ಕವಳನ್ನು ಮದುವೆಯಾಗಬೇಕೆಂದು ಯೋಚನೆ. ತಕ್ಕವಳು ಅವನ ಹುಟ್ಟುಜಾತಿಯಲ್ಲಿಲ್ಲ. ಯಾವುದೋ ಅಡ್ಡಗೆರೆ ಬ್ರಾಹ್ಮಣರ ಕುಲ ಅವರದು. 'ಅಡ್ಡಗೆರೆ'

ಬಂದವರು ಆ ಊರಲ್ಲಿಲ್ಲ. ಇದ್ದವರ ಮಕ್ಕಳು 'ಕೆಸರು ಮುಕ್ಕ' ಪೋರೆಗಳು. ಅ ಆ ಇ ಈ ಯೂ ಆಗದವರು. ಅವರನ್ನು ಕಟ್ಟಿಕೊಂಡು ಏನು ಮಾಡುವುದು?

ಹಾಗೆ ಊರಲ್ಲೆಲ್ಲಾದರೂ 'ಚಂದ್ರಯ್ಯನಿಗೆ ಇಷ್ಟೆಲ್ಲಾ ಆಸ್ತಿ ಇದ್ದು ಅವನು ಮದುವೆಯಾಗಿಲ್ಲ ಯಾಕೆ?' ಎಂದರೆ 'ಅಯ್ಯೋ ಮದುವೆ ಯೆಂದರೆ ಮೋ ಬಳ್ಳಿ ಹಾಕಿದ ಹಸುವಿನ ಹಾಗಾಯಿತು. ಇದೇನಿಲ್ಲ– ಗೋ ಬಿಟ್ಟ ಬಸವನಂತೆ ತಿರುಗಬಹುದಲ್ಲಿ' ಅನ್ನುತ್ತಿದ್ದರು. ಈ ಮಾತು ಚಂದ್ರಯ್ಯನ ಕಿವಿಗೆ ಮುಟ್ಟದಿರಲಿಲ್ಲ. ಅವನು ನಗುತ್ತ 'ಮನುಷ್ಯನೂ ಒಂದು ಗೂಳಿಯೇ. ಏನು ಹೆಚ್ಚು? ಏನು ಕಡಿಮೆ? ಮದುವೆ ಯಾದವ ರನ್ನು ನೋಡಿದ್ದೇನೆ. ಆಗದವರನ್ನೂ ನೋಡಿದ್ದೇನೆ. ಸಂಸಾರ ಹೀಗಿಲ್ಲವಾಗಿದ್ದರೆ ಬೆಳ್ಳಮ್ಮನ ಹಾಗಿನವರು ಇರುತ್ತಲೇ ಇರಲಿಲ್ಲ. ಬೆಂಕಿಯಮುಂದೆ ಏಳು ಹೆಜ್ಜೆ ಬಂದ ಸಂಸಾರಗಳೆಲ್ಲಾ ಸಂಭಾವಿತತನದಲ್ಲಿ ಮುಳುಗಿಯೂ ಇಲ್ಲ.' ಎಂದುಬಿಡುತ್ತಿದ್ದನು.

ಚಂದ್ರಯ್ಯನು ಸರಳ, ಉದಾರ. ಅವನ ಮನಸ್ಸಿನ ವಿಚಾರ ತಿಳಿಯುವವರು ಕಡಿಮೆ. ತಿಳಿದು ಅರ್ಥಮಾಡಿಕೊಂಡವರು ದುರ್ಲಭ. ಹಾಗಿರಲು 'ಅವನಿಗೆ ಬಹಳ ಮಂದಿ ಇದ್ದಾರೆ' ಎನ್ನುವ ಮಾತಿಗೆ ಅವಕಾಶವಿದ್ದೇ ಇದೆ. 'ಇಲ್ಲ' ಎಂದು ನಿರಾಕರಿಸಿದವನು ಚಂದ್ರಯ್ಯನಲ್ಲ. ಒಂದು ಮಾತನ್ನು ಗಟ್ಟಿಯಾಗಿ ಅನ್ನುತ್ತಿದ್ದ. 'ಮದುವೆಯಾಯಿತು ಎಂದಾಮೊಡನೆ ಹೆಣ್ಣುಗಂಡುಗಳು ಸಂಭಾವಿತರಾಗುವದಿಲ್ಲ.' ಎಂದು ಈ ಮಾತಿಗೆ ಸಾವಿರ ಅರ್ಥಗಳನ್ನು ಸಾವಿರ ರೀತಿಯಲ್ಲಿ ಮಾಡಿ ದವರುಂಟು. ಒಮ್ಮೆ ಈಶ್ವರ ಭಟ್ಟರೇ ಆ ತರ್ಕವನ್ನು ಅವನೊಡನೆ ತೆಗೆದರು. ಅದಕ್ಕೆ ಚಂದ್ರಯ್ಯನೆಂದ 'ಭಟ್ಟರೇ, ಸಿಟ್ಟು ಮಾಡಬೇಡಿ. ಈಗ ನಿಮ್ಮನ್ನೇ ನೀವು ಕೇಳಿ, ನೀವು ಎಷ್ಟು ಒಲವಿಂದ ನಿಮ್ಮವಳನ್ನು ಕೂಡಿದ್ದೀರಿ. ಅವರಿಗೆ ನಿಮ್ಮಲ್ಲಿ ಎಷ್ಟು ಒಲವಿದೆ ಹೇಳಿ.... ಶಾಸ್ತ್ರದ ಹೆದರಿಕೆಯಿಂದಲೋ ನರಕದ ಹೆದರಿಕೆಯಿಂದಲೋ ನೀವು ದಾಂಪತ್ಯದ ಹೊರಗೆ ಕಾಲಿಟ್ಟಿರಲಾರಿರಿ....' ಈಶ್ವರ ಭಟ್ಟರು ಮೊದಲಿಗೆ ನಕ್ಕರೂ,

ಆ ಮೇಲೆ 'ಅದು ಸಹಜ' ಅನ್ನುವ. ಮದುವೆಯಾಯಿತೆಂದೊಡನೆಯೇ ಮನಸ್ಸು ಕೂಡುತ್ತದೆಯೇ? ನಾವು ಕೂಡಬಹುದು. ಮನಸ್ಸು....? ಎಂದರು.

'ಅದಕ್ಕೆ ನಾನೆಂದುದು ಮನುಷ್ಯನೂ ಒಂದು ಗೂಳಿಯೇ' ಎಂದು. ಚಂದ್ರಯ್ಯನ ಅಂತರಂಗವು ಜತೆಗಾರ್ತಿಗಾಗಿ ಬಾಯಾರು ತ್ತಿತ್ತು. ಆದರೆ ರಾಮಣ್ಣನಿಗೆ ಮಗಳೊಬ್ಬಳಿದ್ದಾಳೆ ಎಂದು ಕನಸಿನಲ್ಲೂ ಅವನು ಎಣಿಸಿರಲಿಲ್ಲ. ಇತ್ತ ಆ ರಾತ್ರಿ ರಾಮಣ್ಣಯ್ಯ ಅಲ್ಲೇ ಉಳಿದು ಕೊಂಡರು. ಅವರನ್ನು ಚಂದ್ರಯ್ಯ ಬೆಳಗಿನ ಜಾವಕ್ಕೇನೆ ಎಚ್ಚರಗೊಳಿಸಿ ಊರಿಗೆ ಅಟ್ಟಿದನು. ಆದರೂ ಚಂದ್ರಯ್ಯನ ಸಂಚಿಕೆ ಅವರಿಗಿಲ್ಲ. ರಾಮಣ್ಣನು ಬೇಗ ಬೇಗ ನಡೆದು ಹೊತ್ತು ಮೂಡಿ ಒಂದೆರಡು ಗಳಿಗೆ ಯಲ್ಲಿಯೇ ಮನೆಯನ್ನು ಸೇರಿದರು. 'ಇವತ್ತು ಚಂದ್ರಯ್ಯ ಬರುತ್ತಾ ನೆಂದು ಮನೆಯಲ್ಲಿ ಸುದ್ದಿ ಸಾರಿದರು.' 'ಸುದ್ದಿ ಜಲಜಾಕ್ಷಿಯ ಕಿವಿಗೂ ಮುಟ್ಟಿತು. ಜಲಜಾಕ್ಷಿ ಹದಿನಾರು ವರ್ಷದವಳು. ಶಾರದಾ ಬಿಲ್ಲು, ವರನ ಅಭಾವ ಇವೆರಡೂ ಸೇರದಿದ್ದರೆ ಲಗ್ನವಾಗಿ ಇಂದಿಗೆ ಮೂರು ವರ್ಷವಾಗಬೇಕಿತ್ತು. ಅವಳೂ ಗಂಡನ ಚಿಂತೆಯಲ್ಲಿರುವಂತೆ ಮನೆಯ ಆವರಣ ಪ್ರೇರೇಪಣೆ ಕೊಟ್ಟಿತ್ತು. ಜಲಜಾಕ್ಷಿಯು ಬೇಗ ಸ್ನಾನದ ಮನೆಗೆ ಹೋದಳು. ಅಡುಗೆ ಮನೆಯಲ್ಲಿ ತೆಂಗಿನ ಕಾಯಿ ಹೆರೆಯುವ ಗಡಿಬಿಡಿ. ರಾಮಣ್ಣಯ್ಯ ಖುದ್ದು ಹಾಲು ತರಲು ನೆರೆ ಕೇರಿಗೆ ಓಡಿದರು. ರಾಮಣ್ಣಯ್ಯನವರ ಮನೆಯ ಎಮ್ಮೆಗಳು ಹಾಲು ಕೊಡುವ ಪರಿಪಾಠ ವನ್ನು ಮರೆತು ಬಹಳ ಕಾಲವಾಗಿತ್ತು.

ರಾಮಣ್ಣಯ್ಯನು ಹಾಲನ್ನು ಕೊಂಡು ಅವಸರ ಅವಸರದಿಂದ ಮನೆಗೆ ಬರುತ್ತಿದ್ದಾರೆ. ಬಾಯಿಯಲ್ಲಿ 'ಒಮ್ಮೆ ದೇವರು ಅಷ್ಟು ಮಾಡಿಸಿದ್ದರೆ' ಎಂದು ಪ್ರಾರ್ಥನೆ ಮಾಡಿಕೊಂಡೇ ಬರುತ್ತಿದ್ದರು. ಮನೆಯ ಅಂಗಳಕ್ಕೆ ಕಾಲಿರಿಸಿದ್ದೇ ತಡ. ಸ್ನಾನಕಲು ಒಂದು 'ಟ್ರ್ಯಾಂ ಟಿನ್' ಆಯಿತು. ಚಂದ್ರಯ್ಯನು ಸರ್ಕಸ್ಸು ಫ್ಯೈಲವಾನರಂತೆ ಸ್ನಾನಕಲ್ಲಿ ನಿಂದ ನೆಗೆದು ಹಾರಿ 'ಹೂಂ....' ರಾಮಣ್ಣಯ್ಯ ಬಂದಿದ್ದೀನೆ.

ಭೂತ ತೋರಿಸಿ. ಹೋ ಮರೆತೇ ಹೋಯಿತು. ಹಗಲಿಗೆಲ್ಲಿಯ ಭೂತ? ಎಂದು ಹೇಳಿ ನಕ್ಕನು.

ಜಲಜಾಕ್ಷಿ ಸ್ನಾನದ ಮನೆಯಿಂದ ಹೊರಬೀಳುವಾಗ ಈ ಮಾತು ಕೇಳಿಸಿತು. ಅವಳ ಮನಸ್ಸಿಗೆ ಏನೇನೋ ಅನಿಸಿತು.

---

೭

## ಭೂತದ ಬೆನ್ನ ಹಿಂದೆ

ರಾಮಣ್ಣಯ್ಯ ಅತ್ಯಂತ ಆದರ ಉತ್ಸಾಹಗಳಿಂದ ಚಂದ್ರಯ್ಯನ ಉಪಚಾರವನ್ನು ತೊಡಗಿದರು. ಅಳಿಯನನ್ನು ಒಲಿಸಿಕೊಳ್ಳಲು ಲೋಕ ರೂಢಿ ಏನೆಲ್ಲವನ್ನು ಹೇಳುತ್ತದೆಯೋ ಅದೆಲ್ಲವನ್ನು ಮಾಡತೊಡಗಿದರು. ಅರ್ಧ ಪಾವಿನ ಹೊಟ್ಟೆಯ ಮುಂದೆ ಒಂದು ಸೇರು ಉಪ್ಪಿಟ್ಟು ಸುರಿಸಿದರು. ಒಂದು ಕೊಡ ಕಾಫಿ ನಿಲ್ಲಿಸಿದರು. ಎಲೆ ಅಡಿಕೆ ತಿನ್ನದವನ ಮುಂದೆ ತಾಂಬೂಲದ ಹರಿವಾಣವನ್ನು ಇರಿಸಿದರು. ಆ ಮೇಲೆ 'ಎಳನೀರನ್ನು ತರಿಸಲೇ?' ಎಂದು ಕೇಳಿದರು. ಚಂದ್ರಯ್ಯನು ಭಾವಿ ಅಳಿಯನಾಗಿ ಹೋದುದು ಇದು ಮೊದಲನೆ ಬಾರಿಗೆ. ಅವನಿಗೆ ಗೆಳೆತನದ ಹದವಾದ, ಇಲ್ಲವೇ ತುಸ ಹದವೇರಿದ ಉಪಚಾರ ತಿಳಿದಿತ್ತು. ಆದರೂ ಭಾವಿ ಮಾವನು ಭಾವಿ ಅಳಿಯನಿಗೆ ತೋರಿಸುವ ಹದ ಮೀರಿದ ಉಪಚಾರ ತಿಳಿದಿರಲಿಲ್ಲ—ಅದೂ ಮನಸ್ಸಿನಲ್ಲಿ ಅಳಿಯನಾಗುವ ಕಲ್ಪನೆಯೂ ಇದ್ದಿಲ್ಲವಾದುದರಿಂದ ಅವರ ಉಪಚಾರವನ್ನು ಕಂಡು ನಕ್ಕು 'ರಾಮಣ್ಣಯ್ಯ, ನಾನು ಭೂತ ನೋಡಲು ಬಂದಿದ್ದೆ. ನೀವು ನನ್ನನ್ನೇ ಭೂತ ಎಂದು ತಿಳಿದು ಈ ಕೋಲ* ಕೊಟ್ಟಿರೆ ಹ್ಯಾಗೆ?' ಎಂದು ಕೇಳಿದನು.

---

* ಭೂತ ಪ್ರೇತಗಳಿಗೆ ಒಪ್ಪಿಸುವ ಸಮಾರಾಧನೆ.

ಅವನ ಮಾತಿನ ಸೂಕ್ಷ್ಮ ರಾಮಣ್ಣಯ್ಯಗೆ ಹೊಳೆಯದೆ ಬೆರಗಾದ್ದನ್ನು ಕಂಡು 'ರಾಮಣ್ಣಯ್ಯ, ಯಾರಾದರೂ ಇಷ್ಟು ಉಪ್ಪಿಟ್ಟು ತಿಂದಾರೇ? ಇಷ್ಟೊಂದು ಕಾಫಿ ಕುಡಿದಾರೇ. ನಮ್ಮ ಇಷ್ಟು ಅಕ್ಕಚ್ಚನ್ನು ಕೊಟ್ಟರೆ 'ಬೋರ'ಲಿಕ್ಕಿಲ್ಲ. ಏನು ಇದುವರೆಗೆ ಬರಲಿಲ್ಲವೆಂದು ಯಾವತ್ತು ಉಪ್ಪಿಟ್ಟನ್ನು ವಸೂಲಿ ಕೊಟ್ಟ ಹಾಗೆ ಕಾಣುತ್ತದೆ.' ಎಂದನು. ಆ ಬಳಿಕ ರಾಮಣ್ಣಯ್ಯನ ಉತ್ತರವನ್ನು ಕಾಯಲೂ ಇಲ್ಲ, ಅವರ ಕೈಯನ್ನು ಹಿಡಿದು 'ಹೂಂ ನಿಮ್ಮ ಊರನ್ನೆಲ್ಲಾ ನೋಡಿ ಬರುವಾ' ಎಂದು ಎಳೆದನು.

ರಾಮಣ್ಣಯ್ಯ ಆಯಿತೆಂದು ಒಳಗೆ ಹೋದರು.

'ಏನು ನಿಮ್ಮ ಊರಿಗೊಂದು ಸ್ಪೆಶಲ್ ಡ್ರೆಸು ಬೇಕೆ?'

ರಾಮಣ್ಣಯ್ಯ ಒಳಗಿನಿಂದಲೇ 'ಸ್ಪೆಶಲ್ ಡ್ರೆಸ್ ಎಂಥದು. ಇಲ್ಲ–ಈಗ ಬಂದೆ......'

ರಾಮಣ್ಣಯ್ಯ ಒಳಗೆ ಹೋದುದು ಮಧ್ಯಾಹ್ನ ಊಟಕ್ಕೆ ಇಂಥಿಂಥದು ಆಗಲಿ ಎಂದು ಹುಕುಂ ಮಾಡಲಿಕ್ಕೆ. ಅದು ತಿಳಿಯುತ್ತಲೇ ಹೊರಗಿಂದಲೇ ಚಂದ್ರಯ್ಯನು 'ಅಮ್ಮಾ, ಏನು ಹೆಚ್ಚು ಬೇಡ. ಒಂದು ಹತ್ತು ಬಗೆ ಪಲ್ಯ, ಐದು ಬಗೆ ಹುಳಿ, ಒಂದು ಸಾರು, ಒದು ಆರೆಂಟು ಕಜ್ಜಾಯ, —ಒಂದು ಗುಡಾಣ ಪಾಯಸ— ಇಷ್ಟನ್ನು ಮಾಡಿದರೆ ಸಾಕು. ಬೇಕಾದರೆ ಒಂದು ನೂರು ಮಂದಿ ಬ್ರಾಹ್ಮಣರಿಗೂ ಹೇಳಿಬಿಡಿ. ಒಂದು ಸಂತರ್ಪಣೆ ನಡೆಯಲಿ' ಎಂದನು. ಆ ಮಾತಿಂದ ರಾಮಣ್ಣಯ್ಯಗೆ ನಾಚುಗೆಯಾಗಿ, ನಗುತ್ತ 'ಹೂಂ ಏನೂ ಮಾಡಿಸುವುದಿಲ್ಲ. ನಿತ್ಯದ ಊಟ—ತಿಳಿಯಿತೇ' ಎಂದು ಹೊರಕ್ಕೆ ಬಂದರು.

ಮಧ್ಯಾಹ್ನ ಹದಿನೆರಡು ಘಂಟೆ ತನಕ ಚಂದ್ರಯ್ಯನನ್ನು ಕೂಡಿಕೊಂಡು ರಾಮಣ್ಣಯ್ಯ ತಮ್ಮೂರಿನ ಪರಿಭ್ರಮಣೆ ಮಾಡಿದರು. ಹೊರಬಿದ್ದೊಡನೆಯೇ ಚಂದ್ರಯ್ಯನು 'ಅದು ಯಾವ ಗುಡ್ಡ....ಭೂತದ ಸೂಟೆ, ಘಂಟೆ ಕೇಳುವುದು ಎಂದಿರಲ್ಲ' ಎಂದು ಪ್ರಶ್ನಿಸಿದನು. 'ಅದು ಸ್ವಲ್ಪ ದೂರದಲ್ಲಿದೆ' ಎಂದು ರಾಮಣ್ಣಯ್ಯ ಹೇಳಿದರು. ಸರಿ ಅವನ

ಹಟವನ್ನು ಸಹಿಸದೆ ಆ ಗುಡ್ಡದ ತನಕ ಹೋದರು. ಗುಡ್ಡವನ್ನು ಏರಿದರು. ರಾಮಣ್ಣಯ್ಯ ಹಗಲಿಗೂ ಸಹ ಗುಡ್ಡವನ್ನು ಏರಿದವರಲ್ಲ. ಅದರ ಮೇಲೆ ಮೂರು ಆಲದ ಮರ ಒಂದು ಅಶ್ವತ್ಥ ಮರ ಇವೆ ಎಂದು ಕೇಳಿದ್ದರು. ಯಾರೊಡನೆ ಮಾತನಾಡುವುದಾದರೂ ಮೂರು ಆಲದ ಮರ, ಒಂದು ಅಶ್ವತ್ಥದ ಮರ—ಅವರ ಲೆಕ್ಕದಿಂದ ತಪ್ಪುತ್ತಿರಲಿಲ್ಲ. ಆದರೆ ಈಗ 'ಸ್ಥಳ ತನಿಖೆ' ಮಾಡಲಾಗಿ ಒಂದು ಆಲದ ಮರ ಮಾತ್ರ ಉಳಿದಿತ್ತು. ಉಳಿದ ಮೂರು ಮರಗಳ ಬದಲು, ಹಲವು ಕಾಸರಕ, ಜಾಕಟೆ ಗಿಡಗಳು ಬೆಳೆದಿದ್ದವು.

ದಾರಿಯಲ್ಲಿ ಹೋಗುತ್ತಿದ್ದಾಗ,—ಅಲ್ಲಿನ ಮೂರು ಆಲದ ಮರ, ಒಂದು ಅಶ್ವತ್ಥ ಮರದ ಲೆಕ್ಕ ಬಂದಿತ್ತು. ಆದುದರಿಂದ ಗುಡ್ಡವೇರಿದ ಒಳಿಕ ಅಲ್ಲಿನ ಬರಿಯ ಒಂದು ಆಲದ ಮರವನ್ನು ಕಂಡು ಚಂದ್ರಯ್ಯನು 'ಏನು ಮರಗಳನ್ನು ಕಿತ್ತುಕೊಂಡೇ ಭೂತಗಳು ಪಿಹಾರ ಕಿತ್ತಿರಬೇಕು' ಎಂದನು. 'ಛೇ, ಗಾಳಿಮಳೆಗೆ ಮರ ಹೋಗಿರಬೇಕು. ನಾನು ಈ ಕಡೆಗೆ ಬಾರದೆ ವರ್ಷವೆಷ್ಟೋ ಆಯಿತು. ಏನು ಕೆಲಸ?'

'ರಾತ್ರಿ ಬರುವುದು ನಿಜವಷ್ಟೆ?'

'ನೀನು ನಿಜಕ್ಕೂ ಹೋಗಬೇಕೆನ್ನುವುದಾದರೆ ಹೋಗುವ. ನಮ್ಮ ಸಂಜನನ್ನೂ ಪುಟ್ಟನನ್ನೂ ಬರಲಿಕ್ಕೆ ಹೇಳುತ್ತೇನೆ.'

'ಎಲ್ಲರೂ ಹೊರಟರೆ ಭೂತಗಳು ಹೊರಬೀಳಬಿದ್ದರೆ..'

'ಅದು ನಿಜ. ಆದರೆ ಇಬ್ಬರೇ ಹೋಗಲು ಧೈರ್ಯ ಸಾಕೇ?'

'ಧೈರ್ಯ..ನನಗೆ ಧೈರ್ಯ ಎಂದರೆ ನೀವು..'

'ಹೂಂ.. ನೋಡುವಾ.. ಈಗ ಬಿಸಿಲಾಯಿತು. ಮನೆಯಲ್ಲಿ ಗುಡಾಣ ತುಂಬಾ ಪಾಯಸ ಕಾದಿರಬೇಕು.. ತಡವಾದೀತು.'

'ಇಲ್ಲ ಮಹಾರಾಯಾ. ಪಾಯಸ ಮಾಡಬಾರದು ಎಂದು 'ತಾಕತ್' ಮಾಡಿದ್ದೇನೆ. ನಿನಗೆ ಆಗದ್ದನ್ನು ನಾನೇಕೆ ಮಾಡಿಸುತ್ತೇನೆ.'

'ನನಗೆ ಪರವಾನ್ನ ಆಗದು ಎಂದು ಯಾರು ಹೇಳಿದರು? ಕಡಿಮೆ ಮಾಡಿದರೆ ಆಗದು-ಅಷ್ಟೆ. ಒಂದು ಗುಟಾಣಕ್ಕಿಂತ ಕಡಿಮೆ ಮಾಡ ಬಾರದು— ಕೈಮರಿಗೆಗಿಂತ ಕಡಿಮೆ ಬಡಿಸಬಾರದು.'

ಇಬ್ಬರೂ ನಗುತ್ತ ಮನೆಗೆ ಬಂದರು. ಬಿಸಿ ನೀರಿನ ಸ್ನಾನವಾಯಿತು. ಸ್ನಾನ ಮುಗಿಸಿ ಚಂದ್ರಯ್ಯನು ಕೆಂಪಗಾಗಿ ಹೊರಬಿದ್ದನು. ಬಿದ್ದವನೇ 'ಯಾವಾಗ ಒಕ್ಕೆತ್ತೂರಿನ ಕಂಬಳ*?' ಎಂದು ಕೇಳಿದನು.

ರಾಮಣ್ಣಯ್ಯನು 'ಏನು ಕಂಬಳಕ್ಕೆ ಹೋಗಬೇಕೇ? ಒಕ್ಕೆತ್ತೂರಿನದು ಯಾವಾಗಲೋ— ಬೇರೆ ಹತ್ತಿರವೆಲ್ಲಿಯೂ ಇಲ್ಲ..'

'ಅಯ್ಯೋ, ದೇವರೇ ಗತಿ. ಇಷ್ಟು ಬಿಸಿ ನೀರು ಮಿಂದು ಕಂಬಳದ ಹೋರಿಯಂತೆ ಕೆಂಪಗಾದದ್ದು ವ್ಯರ್ಥವಾಯಿತಲ್ಲ.'

ಸ್ನಾನವಾಗಿ ಊಟಕ್ಕೆ ಎಲ್ಲರೂ ಕುಳಿತರು. ಅಷ್ಟೊಂದು ಹೆಚ್ಚಿಗೆ ಪಲ್ಯ ಪದಾರ್ಥಗಳನ್ನು ಮಾಡಿಲ್ಲವಾದರೂ, ಹೆಂಗಸರು ತಾವು ತಿಳಿದ ಮಟ್ಟಿಗೆ ಮಾಡದೆ ಇರಲಿಲ್ಲ. ಹಲಸಿನ ಹಣ್ಣಿನ ಪಾಯಸವೂ ಇತ್ತು. ಸ್ನಾನಮಾಡುವಾಗ ಚಂದ್ರಯ್ಯನ ಮೂಗಿಗೆ ಅದರ ವಾಸನೆ ಬಡಿಯದಿರಲಿಲ್ಲ. ಊಟಕ್ಕೆ ಪಾಯಸ ಬಡಿಸಲು ಚಂದ್ರಯ್ಯನು 'ಹೂಂ. ನೋಡಿ 'ಪಾಯಸ'ರು ಬಂದರಲ್ಲ' ಎಂದನು. ರಾಮಣ್ಣಯ್ಯ ನಕ್ಕನು. ಊಟವಾಗಿ ಜಮಖಾನದ ಮೇಲೆ ಎಲೆ ಅಡಿಕೆ ತಿನ್ನುವ ಸೇವೆ ನಡಿಯಿತು. ಚಂದ್ರಯ್ಯನೂ ಮೆಲುಕಾಡಲು ಪ್ರಯತ್ನಿಸಿದನು. ಊಟಕ್ಕೆ ಕುಳಿತಾಗ ಚಂದ್ರಯ್ಯನು ಮನೆಯವರನ್ನೆಲ್ಲಾ ವಿಚಾರಿಸಿದನು. ಅಂದರೆ ದೂರದ ಸಂಬಂಧ ಎಂಬ ಅಭಿಮಾನದಿಂದ. ಇದು ನನ್ನ ಅಜ್ಜಿ, ಇದು ಅಕ್ಕ. ಇದು ಮನೆಯವಳೇ.. ಇದು ಆಚೆ ಮನೆ ರಾಧಕ್ಕನ ಮಗಳು. ಪಾಯಸ ಮಾಡಿದೆಯಲ್ಲಾ ಎಂದು ಕರೆದಿರಬೇಕು.. ಇದು ಅನ್ನುವಾಗ.. ಜಲಜಾಕ್ಷಿಯು ಆ ಕಡೆಯಿಂದ ಹಾದು ಹೋದಳು.

ಚಂದ್ರಯ್ಯ 'ಇದ್ಯಾರು.. ಮಗಳೇ' ಎಂದನು.

'ಹೌದಪ್ಪ ಒಬ್ಬಳೇ.. ಗಂಡುಮಕ್ಕಳು ಇಲ್ಲ.'

---

* ಕೋಣಗಳನ್ನು ಓಡಿಸುವ ಸ್ಪರ್ಧೆ

'ಎಲ್ಲಿಗೆ ಕೊಟ್ಟದು?..'

ಚಂದ್ರಯ್ಯನ ಪ್ರಶ್ನೆಗೆ ರಾಮಣ್ಣಯ್ಯನ ಎದೆ ಕುಸಿದು ಬಿಟ್ಟಿತು. ತನ್ನ ಮಗಳಿಗೆ ಮದುವೆಯಾಗಿಲ್ಲ ಎಂಬ ಕಲ್ಪನೆ ಚಂದ್ರಯ್ಯನಿಗೆ ಏಕೆ ಬಂದಿರಲಿಲ್ಲವೊ ಅವರಿಗೆ ತಿಳಿಯದು.

'ಅವಳಿಗೆ, ಜಲಜಾಕ್ಷಿಗೆ ಮದುವೆ ಇನ್ನೂ ಇಲ್ಲ. ಅದೇ ಯೋಚನೆಯಲ್ಲಿದ್ದೇನೆ' ಎಂದರು. ಚಂದ್ರಯ್ಯನು ಜಲಜಾಕ್ಷಿಯನ್ನು ಎಲ್ಲರನ್ನು ಕಾಣುವಂತೆ ಕಂಡನು. ಸುಮ್ಮಗಾದನು. 'ಅವಳಿಗೆ' ಎಂದು ಅದಕ್ಕೆ 'ಜಲಜಾಕ್ಷಿ' ಎಂಬ ಹೆಸರನ್ನು ಸೇರಿಸಿದರೆ ಹುಡುಗಿ ಚೆನ್ನಾಗಿ ಕಂಡಾಳು ಎಂದು ರಾಮಣ್ಣಯ್ಯ ತಿಳಿದಿರಬೇಕು. ಆದರೂ ಆ ಒಗ್ಗರಣೆ ವ್ಯರ್ಥವಾಯಿತು.

ಮಧ್ಯಾಹ್ನ ಕಳೆಯಿತು. ರಾತ್ರಿ ಊಟವಾಯಿತು. ನಂಜಪ್ಪ, ಪುಟ್ಟ ಇಬ್ಬರೂ ಬಂದು ಕಾದಿದ್ದರು. ಚಂದ್ರಯ್ಯ 'ಹೊರಡುವ' ಎಂದನು. ಮನೆಯ ಹೆಂಗುಸರಿಗೆ ಏನೂ ತಿಳಿಯದು. ರಾಮಣ್ಣಯ್ಯನ ಹೆಂಡತಿ ಗಂಡನನ್ನು ಕರೆದು, ಕಿವಿಯಲ್ಲಿ 'ಅಯ್ಯೋ ಈ ರಾತ್ರಿಯೇ ಊರಿಗೆ ಹೋಗಬೇಕಂತೇನು?' ಎಂದಳು....'ಊರಿಗಲ್ಲ.. ಇನ್ನೊಂದೆರಡು ಗಂಟೆಯಲ್ಲಿ ಬರುತ್ತೇವೆ' ಎಂದು ಹೇಳಿದನು. ಎಲ್ಲರೂ ಕೈಯಲ್ಲಿ ಒಂದೊಂದು ಸೂಟೆಯನ್ನು ಹಿಡಿದು ಹೊರಟರು. ಭರದಿಂದ ಸಾಗಿದರು. ಒಂದು ತಾಸಿನಲ್ಲಿ ಹಳ್ಳಿಯ ಅಡ್ಡತಿಡ್ಡದ ಕಾಲುಹಾದಿ ಸುತ್ತಿ ಗುಡ್ಡದ ಬುಡ ಬಂದಿತು. ನಿಜಕ್ಕೂ ಆಗ ಗುಡ್ಡದ ತುದಿಯಲ್ಲಿ ನಾಲ್ಕಾರು ಸೂಟೆಗಳು ಸಂಚರಿಸುತ್ತಿದ್ದವು.

ರಾಮಣ್ಣಯ್ಯನು ಹಿಗ್ಗಿನಿಂದ 'ನಾನು ಅಂದದ್ದು ಸುಳ್ಳೇ..ಸೂಟೆ ನೋಡಬಾರದೇ. ಇನ್ನು ಎರಡು ಗಳಿಗೆ ಕಾದು ಕುಳಿತರೆ ಘಂಟೆ ಧ್ವನಿಯೂ ಕೇಳಿಸೀತು.'

ನಂಜಪ್ಪ:– ಅಯ್ಯೊ ನಾನು ಎಷ್ಟೋ ಸಾರಿ ಘಂಟೆ ಸ್ವರ ಕೇಳಿದ್ದೇನೆ. ಸೂಟೆ ಕಂಡದ್ದು ಮಾತ್ರ ಇವತ್ತು.

ಚಂದ್ರ:– ಮೇಲೆ ಹೋಗಿದ್ದೀಯಾ ನೀನು.

'ಮೇಲೆ. . ನನಗೇನು ಕೆಲಸ!'

ಪುಟ್ಟ:– ಮೇಲೆ ಹೋದರೆ ಆಯಿತು.

ಚಂದ್ರ:– ಈಗ ಹೋಗುವ. ಮೇಲೆ ಹೋಗುವ ದಾರಿ ಇದೇ ಅಲ್ಲವೆ?

ಸಂಜ ಪುಟ್ಟರಿಗೆ ಇವರು ಬಂದ ಉದ್ದೇಶ ತಿಳಿಯಿತು. ಅವರು ಬೇಡವೆಂದು ಬಲವಂತ ಮಾಡಿದರು. ಚಂದ್ರಯ್ಯನು—'ನೀವಿಲ್ಲಿ ಕಾದು ಕುಳಿತಿರಿ. ಗಾಬರಿಯಾದರೆ ನಿಮ್ಮನ್ನು ಕರೆಯುತ್ತೇವೆ' ಎಂದು ಹೇಳಿ ಹೊರಟನು. ರಾಮಣ್ಣಯ್ಯನಿಗೆ ಮೇಲೆ ಹೋಗುವ ಧೈರ್ಯವಿರಲಿಲ್ಲ. ಚಂದ್ರಯ್ಯನನ್ನು ಹಿಂಬಾಲಿಸದೆ ಮಾರ್ಗವಿಲ್ಲ. ಹಾಗಾಗಿ ಹಿಂದೇನೇ 'ರಾಮ ರಾಮ' ಎಂದು ಹೊರಟರು. ಚಂದ್ರಯ್ಯನು ಗುಡ್ಡದ ಮೇಲಿನ ನೂಟಿ ಬೆಳಕುಗಳ ಮೇಲೆ ಕಣ್ಣಿಟ್ಟು ಚಲಿಸಿದನು. ಆದರೆ ಸ್ವಲ್ಪ ಹೊತ್ತಿನಲ್ಲಿ ಬೆಳಕು ಮಾಯವಾಯಿತು. ಇಬ್ಬರೂ ಬೆಟ್ಟದ ತುದಿಯನ್ನು ಏರಿದರು. ಒಂಟಿ ಆಲದ ಮರ ಸಮೀಪಿಸಿತು. ಅಲ್ಲಿಯ ತನಕ ಹೋಗುವುದು ಬೇಡವೆಂದು ರಾಮಣ್ಣಯ್ಯ ಹಟಹಿಡಿದರೂ ಚಂದ್ರಯ್ಯ ಅಲ್ಲಿಗೆ ಹೋದ. ಏನೂ ಆಗಲಿಲ್ಲ.

ಅರೆ ತಾಸಿನಲ್ಲಿ ಏನೋ ಘಂಟೆ ಧ್ವನಿಯಂತೆ ಕೇಳಿಸಿತು ನಿಜ. ರಾಮಣ್ಣಯ್ಯನ ಎದೆ ಬಡಿಯತೊಡಗಿತು. ಮೆಲ್ಲಗೆ ಚಂದ್ರಯ್ಯನ ತೋಳನ್ನು ತಬ್ಬಿ 'ಚಂದ್ರಯ್ಯ, ಕೇಳುವುದಿಲ್ಲವೇ? ಕಿವಿಗೊಡು ಘಂಟೆ ಸ್ವರ. ಅದು ಗಣಗಳು ಬಾರಿಸುವುದು. ಭೂತ ಅಲ್ಲ. ಭೂತ ಬೇರೆ, ಗಣ ಬೇರೆ' ಎಂದರು. ಚಂದ್ರಯ್ಯನಿಗೂ ಕೇಳಿಸಿತು. ಆದರೆ ಅಂಥ ಸ್ವರ ಹಲವು ಸಾರಿ ಅವನು ಕೇಳಿದ್ದನು. ಎಲ್ಲಿ ಎಂದು ನೆನಪುಮಾಡಿಕೊಂಡರೆ ನಗು ಬಂದಿತು. —'ಇದೇನೇ ನಿನ್ನ ಘಂಟೆ. ಇದೊಂದು ಜಾತಿಯ ಹುಳು. ತೀರ್ಥಹಳ್ಳಿ ಆಗುಂಬೆಗೆ ಹೋದರೆ ಕಾಡುತುಂಬ ಮಳೆಗಾಲದಲ್ಲಿ ಇದೇ ಹುಳು' ಎಂದನು.

ರಾಮಣ್ಣಯ್ಯನು ನಂಬಲಿ, ನಂಬದಿರಲಿ—ಮಾತನಾಡಲಿಲ್ಲ. ಇನ್ನು ಮನೆ ಸೇರುವ ತನಕ ಮಾತನಾಡುವಂತೆಯೂ ಇಲ್ಲ.

ಚಂದ್ರಯ್ಯನು 'ತುಸು ಸಮಯ ಕಾದು ಕುಳಿತಿರೋಣ—ಆ ಮೇಲೆ ಮರಳಿದರಾಯಿತು....' ಎಂದನು. ರಾಮಣ್ಣಯ್ಯ ಒಮ್ಮೆಗೇ 'ಓ ಅಲ್ಲಿ ಕೆಳಗೆ ಬಯಲಲ್ಲಿ' ಎಂದನು. ನಿಜ, ಕೆಳಗಿನ ಬಯಲಲ್ಲಿ ಐದಾರು ಬೆಳಕುಗಳು ಸಂಚರಿಸುತ್ತಿದ್ದುವು. ಚಂದ್ರಯ್ಯನು ಮೊದಲು ಕಂಡ ದೀವಿಗೆಗಳನ್ನು ಎಣಿಸಿದನು. 'ಆರು'—ಈಗಲೂ ಆರು. ಎದ್ದುನಿಂತು ಇವನ್ನು ಎಣಿಸಿದನು. 'ಆರು' ಬಳಿಕ ರಾಮಣ್ಣಯ್ಯನನ್ನು ಕುರಿತು 'ಕೆಳಗೆ ಅಲ್ಲಿ ಮನೆಗಳಿಲ್ಲವೇ?' ಎಂದು ಪ್ರಶ್ನಿಸಿದನು.

'ಉಂಟು, ಆದರೂ ದರಿದ್ರ ಬಯಲಪ್ಪ. ಮಧ್ಯಾಹ್ನವೆಂದಿಲ್ಲ ರಾತ್ರಿಯೆಂದಿಲ್ಲ. ಭೂತಗಳು ಯಾವಾಗಲೂ ಇವೆಯಂತೆ' ಎಂದನು.

ಚಂದ್ರಯ್ಯನು ಈ ಬೆಳಕು ಘಂಟೆಯ ಧ್ವನಿಗಳಿಂದ ತೃಪ್ತಿಹೊಂದ ಲಾರದೆ ಹೋದನು. ಅವರಿಬ್ಬರೂ ಮರಳಿದರು. ಗುಡ್ಡವನ್ನು ಇಳಿದರು· ನಂಜಪುಟ್ಟರು—ಕುಳಿತಲ್ಲೇ ನಿದ್ದೆತೂಗುತ್ತಿದ್ದರು. ಅವರು ನೆಲದಲ್ಲಿ ಇರಿಸಿದ್ದ ಸೂಟೆ ಉರಿದು ಮುಗಿದುಹೋಗಿತ್ತು. ಅವರನ್ನು ಎಚ್ಚರಿಸಿ ಎಲ್ಲರೂ ಮನೆಗೆ ಹಿಂದೆರಳಿದರು.

ಮರುದಿವಸ ಬೆಳಗ್ಗೆ ಚಂದ್ರಯ್ಯನು ಸ್ನಾನಕಲಗೆ ಕೈಹಾಕಿ ದೊಡನೇ ರಾಮಣ್ಣಯ್ಯನು 'ಮಧ್ಯಾಹ್ನ ಊಟಮಾಡಿ....' ಎಂದು ಬಲವಂತಪಡಿಸಿದನು. ಚಂದ್ರಯ್ಯನಿಗೆ ಭೂತ ಕಾಣಲು ಸಿಗಲಿಲ್ಲ, ಎಂದು ಅಸಮಾಧಾನ. ಮನಸ್ಸು ಎಲ್ಲೆಲ್ಲೋ ಛಲಿಸುತ್ತಿತ್ತು. 'ಈಶ್ವರಭಟ್ಟರ ಬೆಳ್ಯಕ್ಕನೂ ಹೀಗೆ ಇರಬೇಕು....' ಎಂದುಕೊಂಡನು. ಈ ಅಸ್ವಸ್ಥ ಮನಸ್ಸಿನಲ್ಲಿಯೇ ಮಧ್ಯಾಹ್ನದ ತನಕ ಅಲ್ಲಿ ಇರಲು ಒಡಂಬಟ್ಟನು.

ಊಟ ಮುಗಿದು ಮನೆಯವರನ್ನು ಬೀಳ್ಕೊಡುವಾಗ, ಮನೆಯ ಅಜ್ಜಿಯನ್ನು ಕಾಣಲು ಹೋದನು. ಅವಳು 'ಚಂದ್ರ, ನಿನಗೆ ನೆನಪಿಲ್ಲ ಮಗು. ನಿನ್ನ ಅಪ್ಪನನ್ನು, ತಾಯಿಮನೆಯಲ್ಲಿ ಒಂದು ವರ್ಷ ತೊಡೆಯ ಮೇಲಿರಿಸಿಕೊಂಡು ಆಡಿಸಿದ್ದೆ....ನೀನಾಗ ಎಲ್ಲಿದ್ದಿ......ಈ ಮುದುಕಿ ನೆನಪಿರಲಿ.....ಎಂಭತ್ತೊ ತೊಂಭತ್ತೊ ಆಯಿತು.

ಸಾಯುವ ಮುದುಕಿಯದು ಒಂದು ಮಾತು ನಡೆಯಿಸು. ರಾಮಣ್ಣನೂ ಹೇಳಿರಬಹುದು....'

ಚಂದ್ರಯ್ಯನು 'ಏನು' ಎಂದು ಕೇಳಲು ಆಕೆ 'ಜಲಜಾಕ್ಷಿ. ಪಾಪ—ಮದುವೆ ಆಗಿಲ್ಲ' ಎಂದಳು. ಚಂದ್ರಯ್ಯನು ಊರಿಗೆ ಹಿಂದಿರುಗಿದನು.

---

೮

# ಗುರುವಾರ ಬರಲು

ನಾಳಿನ ಗುರುವಾರ ಬಂದಿತು. ಆ ದಿನ ಜಾನಕಿಯು ಉಪವಾಸ ಆಚರಿಸಿದಳು. ನಡುರಾತ್ರಿಗೆ ಮನೆಯನ್ನು ಬಿಟ್ಟು ಹೊರಬೀಳಬೇಕು. ಧೈರ್ಯಕ್ಕೆ ಸೀತಕ್ಕ ಇದ್ದಾಳೆ. ಸೀತಕ್ಕನಿಗೆ ಸಂಸಾರದಲ್ಲಿ ಯಾವು-ದೊಂದು ಅಂಜಿಕೆಯೂ ಇರಲಿಲ್ಲ. ಭೂತ-ಪ್ರೇತಗಳು ಅವಳನ್ನು ಏನು ಮಾಡಿಯಾವು? ಇತ್ತ ಕೋರ್ಟಿನ ಬೆನ್ನುಹತ್ತಿಹೋದ ತಿಮ್ಮಪ್ಪಯ್ಯನು ಆ ದಿನ ಮನೆಗೆ ಬರುವಂತಿಲ್ಲ. ಮೂರು ದಿವಸಗಳಿಗೆ ನೋಟೀಸು ಕೊಟ್ಟೇ ಹೋಗಿದ್ದರು.

ರಾತ್ರಿ ಜಾನಕಿ ಮಕ್ಕಳಿಗೆ ಊಟಮಾಡಿಸಿ, ಮನೆಯ ಒಳ ಪಡಸಾಲೆಯಲ್ಲಿ ಮಲಗಿಸಿ, ಅಗಳಿ ಹಾಕಿಕೊಂಡು ಹೊರಗೆ ಬಂದಳು. ಸೀತಕ್ಕ ಅವಳಿಗಾಗಿ ಕಾದಿದ್ದಳು. 'ಹೂಂ, ಹೋಗುವ' ಎಂದು ಇಬ್ಬರೂ ಸರಸಮ್ಮನ ಗುಡಿಗೆ ಹೊರಟರು. ಅದು ಅವರ ಮನೆಯಿಂದ ಬಲು ದೂರದ ಸ್ಥಳವೇನಲ್ಲ. ಸರಿ—ಅರ್ಧತಾಸಿನ ನಡಿಗೆಯಲ್ಲಿ ಮಾಸ್ತಿ ಗುಡಿಯಿರುವ ಬಯಲು ಬಂದಿತು.

ಸೀತಕ್ಕ ಜಾನಕಿಯನ್ನು ಕುರಿತು 'ಮೆಲ್ಲಗೆ. ಹರಿಯುವುದೇನಾ ದರೂ ಇದ್ದೀತು. ಕೋಲನ್ನು ನೆಲಕ್ಕೆ ಬಡಿಯುತ್ತ ಹೋಗು. ನಾನು

ಇಲ್ಲಿ ಕಾದಿರುತ್ತೇನೆ. ಕರ್ಪೂರ ಬೆಂಕಿಪೆಟ್ಟಿಗೆ ಎಲ್ಲವು ಇದೆಯಷ್ಟೆ? ಗದ್ದೆ ಅಂಚಿನ ಮೇಲೆ ಮೆಲ್ಲಗೆ ಕಾಲಿರಿಸು......ಈಗ ಸ್ವಲ್ಪ ಕಣ್ಣು ಶುಭ್ರವಾಗಲಿಲ್ಲವೇ? ಅಚೀಚೆಗೆಲ್ಲ ಕಾಣಿಸುವುದಿಲ್ಲವೇ?' ಎಂದು ಎಚ್ಚರಿಸಿದಳು.

ಜಾನಕಿ, 'ಆಗಲಿ. ನೀನಿಲ್ಲೇ ಇರು....ಈಗ ಬರುತ್ತೇನೆ.. ಅಮ್ಮನವರು ನನ್ನೊಂದು ಮಾತನ್ನು ನಡೆಯಿಸಿಕೊಟ್ಟಿದ್ದರೆ' ಎಂದಂದು-ಕೊಂಡು ಮುಂದವರಿದಳು. ಸರಸಮ್ಮನಿಗೆ ಕನಿಕರವಿಲ್ಲವೇ. ಅವಳು ಪ್ರತ್ಯಕ್ಷ ಸೀತಮ್ಮನವರಲ್ಲವೇ? ನಂಬಿದವರಿಗೆ ಎಂದೂ ಮೋಸವಿಲ್ಲ.'– ಎಂದು ಸೀತಕ್ಕ ಅಭಯವಿತ್ತಳು. ನಂಬುಗೆಯಲ್ಲಿ ಜಾನಕಿ ಎಂದರೆ ಹಿಮಾಚಲ. ಯಾವುದನ್ನು ನಂಬಿದರೂ ಅರ್ಧಮರ್ಧ ನಂಬುವವಳೇ ಅಲ್ಲ.

ಪಾಪ—ಮೆಲ್ಲನೆಡೆಯಿಂದ ಬನಕ್ಕೆ ಸಾಗಿದಳು. ಅವಳ ಮನಸ್ಸೆಲ್ಲ ಸರಸಮ್ಮನ ಕಡೆಗೇನೆ ಇತ್ತು. ಆವಳೇನು ಗುಡಿಗೆ ಹೊಸಬಳಲ್ಲ. ಪ್ರತಿ ಶುಕ್ರವಾರ ಸಂಜೆ ಅಲ್ಲಿಗೆ ಹೋಗಿ ದೀಪ ಹಚ್ಚಿ ಬರುವವಳು. ಎಷ್ಟೋ ಬಾರಿ, ಮಾತಿನಲ್ಲಿ ಮುಸ್ಸಂಜೆಯಾಗಿ ಮನೆಗೆ ಬರುವಾಗ ಕತ್ತಲಾದುದೂ ಉಂಟು. ಆದುದರಿಂದ ಅವಳು ಹಾದಿಯಲ್ಲಿ ಎಡವಿ ಬೀಳುವ ಭೀತಿಯೇನಿಲ್ಲ. ಗುಡಿಯ ಒಳಗು ತಮ್ಮ ಮನೆಯ ದೇವರು ಕೋಣೆಯಷ್ಟೇ ಪರಿಚಿತವಾದುದು. ಆದರೆ 'ಹರೆಯುವುದು ಏನಾದರೂ ಇದ್ದರೆ' ಎಂಬ ಅಂಜಿಕೆ. ಅದಕ್ಕೂ ಪರಿಹಾರವಿದೆ. 'ಸತ್ತರೆ ಎಲ್ಲಾ ಮುಗಿಯಿತಲ್ಲ' ಎಂಬ ಮನೋಭಾವವಿದ್ದವಳಿಗೆ ಅದೊಂದು ಅಂಜಿಕೆಯ ವಿಷಯವಲ್ಲ.

ಯೋಚನೆ ಮಾಡುವುದರಲ್ಲಿ ಗುಡಿ ಬಂದಿತು. ಗುಡಿಯ ಬಾಗಿಲು ಮುಚ್ಚುವುದೆಂದೇ ಇಲ್ಲ. ಜಾನಕಿ ಗುಡಿಯಲ್ಲಿ ಕಾಲಿಡುವಾಗ ದೀಪ ನೊಂದಿ ಬತ್ತಿಯ ಕೆಂಡವೂ ಕಾಣುತಿತ್ತು. ಆಕೆ ತಾನು ತಂದ ಕರ್ಪೂರ ವನ್ನು ಉರಿಸಿದಳು. ಆ ಬೆಳಕಿನಲ್ಲಿ ಮಾಸ್ತಿಯ ಕೈಯು ವಿಚಿತ್ರ ಸೊಗಸಿನಿಂದ ಕಾಣಿಸುತಿತ್ತು. ಜಾನಕಿ ಅದಕ್ಕೆದುರಾಗಿ ಕುಳಿತು 'ಅಮ್ಮ ನನ್ನ

ಸಂಸಾರವನ್ನು ಹಾಳುಪ್ಪು ಆಗದಂತೆ ರಕ್ಷಿಸು ತಾಯಿ ' ಎಂದು ಬೇಡಿ ಉದ್ದಂಡ ನಮಸ್ಕರಿಸಿದಳು, ಪೂಜೆಯನ್ನು ಮುಗಿಸಿ ಹೊರಕ್ಕೆ ಬಂದಳು. ಅಲ್ಲೇ ಎಡಮಗ್ಗುಲಿಗೆ ತೀರ್ಥವಿದೆ. ತೀರ್ಥವೆಂದರೇನು !–ಚಿಕ್ಕ ಕೆರೆ. ಹೆಚ್ಚಿನ ನೀರಿಲ್ಲ. ಅಲ್ಲಿ ತಾನು ತಂದ ತೆಂಗಿನಕಾಯನ್ನು, ಬಗ್ಗಿ ನೀರಲ್ಲಿ ಬಿಟ್ಟಳು.

ಬಳಿಕ ತಾನು ಬಂದ ಕೆಲಸವಾಯಿತೆಂದು ಸರಸರನೆ ನಡೆದು ಸೀತಕ್ಕ ಕಾದುನಿಂತಲ್ಲಿಗೆ ಬಂದಳು. ಬರುವಾಗ ಹಾದಿಯಲ್ಲಿ ಯಾರದೋ ಕಾಲಸಪ್ಪಳದಂತೆ ಕೇಳಿಸಿತು. ಬಂದವಳೇ ' ಸೀತಕ್ಕ–ಇಲ್ಲಿ ಯಾರಾ ದರೂ ಸುಳಿದಾಡಿದಂತೆ ಕಂಡಿತೇ ? ಏನೋ ಸದ್ದಾಯಿತಲ್ಲ. ಯಾರಾ ದರೂ ನನ್ನನ್ನು ಕಂಡರು–ಅನ್ನುತ್ತೀಯಾ ? ' ಎಂದು ವಿಚಾರಿಸಿದಳು.

ಸೀತಕ್ಕನಿಗೂ ದೂರದಲ್ಲಿ ಏನೊ ಸಪ್ಪಳವಾದಂತೆ ಕೇಳಿಸಿತ್ತು. ' ಇಲಿ, ಹೆಗ್ಗಣ, ಮೊಲ ಮತ್ತೊಂದು ತಿರುಗಾಡುವ ಜಾಗವಲ್ಲವೇ ? ಸದ್ದಾಗದೆ ಇರುತ್ತದೆಯೇ. ಅಂತು ನನ್ನ ಕಣ್ಣಿಗೆ ಮನುಷ್ಯರಾರೂ ಬೀಳಲಿಲ್ಲ. ನಿನಗೆ ಯಾರಾದರೂ ಕಾಣಸಿಕ್ಕಿದರೇ ? '

' ಹೂಂ–ಯಾರೂ ಕಾಣಿಸಲಿಲ್ಲಪ್ಪ. ಆದರೆ ಸದ್ದು ಕೇಳಿ ಸಂಶಯ ವಾಯಿತು '

' ಹೇಗೂ, ನಾಳೆ ಬೆಳಿಗ್ಗೆ ತೀರ್ಥವನ್ನು ನೋಡಲು ಬರುತ್ತೇನೆ, ತೆಂಗಿನಕಾಯಿ ಕಾಣಿಸದಿದ್ದರಾಯಿತು. ಹಾಗೆ ನೀನು ಕಾಯಿ ಎಸೆ ಯುವುದನ್ನು ಯಾರಾದರೂ ಅಡಗಿ ಕುಳಿತು ಕಂಡಿದ್ದರೆ ಅದು ಅಲ್ಲೇ ಕಾಣಿಸಬೇಕು. ಯಾರು ಆ ಕೆಲಸ ಮಾಡುತ್ತಾರೆ. ಹಾಗೇನಾದರೂ ಕಂಡರೆ ಮುಂದಿನ ಗುರುವಾರ ಇನ್ನೊಮ್ಮೆ ಬರುವುದಾಯಿತು. '

ಅವರಿಬ್ಬರೂ ಮಿಂಚಿನ ವೇಗದಿಂದ ತಂತಮ್ಮ ಮನೆಗಳನ್ನು ಸೇರಿ ದರು. ಜಾನಕಿಗೆ ಆ ರಾತ್ರಿ ಸುಖಸ್ವಪ್ನಗಳ ಸಂತೆ. ಪ್ರತ್ಯಕ್ಷ ಸರ ಸಮ್ಮನು ಬಂದು ಅವಳನ್ನು ಹರಸಿದ ಹಾಗೆಯೇ ಕಂಡಿತು.

ಇತ್ತ ಸರಸಮ್ಮನ ಗುಡಿಯ ಬಳಿ ಯಾರದೋ ಕಾಲುಸಪ್ಪಳ ಕೇಳಿಸಿದ್ದು ನಿಜ. ಇವರಂತೆ ಬೇರೆ ಯಾರೋ ಅಲ್ಲಿಗೆ ಬಂದು ಆಗಷ್ಟೆ

ಹಿಂದಿರುಗುತ್ತಿದ್ದರು. ಇನ್ನೊಂದು ಪಾಪದ ಜೀವಿ–ಅದೇ ಊರಿನ ತರುಣನೊಬ್ಬನು. ಮುಂಡಂಬೈಲಿನ ವೆಂಕಟರಮಣಯ್ಯನ ಹಿರೇ ಹುಡುಗ ಹಿರಣ್ಯ. ಹಿರಣ್ಯ ನಿಜಕ್ಕೂ ಹಿರಣ್ಯ. ಆದರೆ ಅಪ್ಪನ ಅಂಕೆಯಿಂದ ಮಗನಿಗೆ ಮನೆಯಲ್ಲಿ ಬಾಯಿತೆರೆಯುವ ಅಧಿಕಾರವಿಲ್ಲ. ಅವನಿಗೆ ಮದುವೆಯಾದ ಎರಡನೇ ವರ್ಷವಿದು. ಮನೆತುಂಬಿಸಲು ಬಂದ ಅವನ ಹೆಂಡತಿಯು ಒಮ್ಮೆ ತವರುಮನೆಗೆ ತೆರಳಿದವಳು ಹಿಂದಿರುಗಿ ಬರಲಿಲ್ಲ. ತವರುಮನೆ ಮುಂಡಂಬೈಲಿನಿಂದ ಬರಿಯ ಎರಡು ಹರದಾರಿ ದೂರ ವಿದ್ದರೂ ಆಕೆ ಹಿಂದಿರುಗಿದವಳಲ್ಲ.

ಹಿರಣ್ಯನ ಹೆಂಡತಿ ಹೆಸರು ಭಾಗೀರಥಿ. ಭಾಗೀರಥಿ ಒಳ್ಳೆ ರೂಪವತಿ. ಅವಳು ಹಿರಣ್ಯನ ಮಡದಿಯಾಗಿ ಬಂದು ಬರಿಯ ಹದಿನೈದು ದಿನಗಳನ್ನು ಮಾತ್ರ ಮಾವನ ಮನೆಯಲ್ಲಿ ಕಳೆದಿದ್ದಳು. ಹಿರಣ್ಯನಿಗೆ ಹೊಸ ಹೆಂಡತಿಯೊಡನೆ ಸ್ನೇಹ ಬೆಳೆಯಿಸುವ ಆತುರ ಬಹಳವಾಗಿತ್ತು. ಭಾಗೀರಥಿಯು ಲಜ್ಜಾಶೀಲೆ. ಅಲ್ಲದೆ ಈ ನವದಂಪತಿಗಳು–'ಮನೆಗೆ ಬಂದ ಮೂರು ಗಳಿಗೆಯಲ್ಲೇ ಹಾಗೆ ಪರಸ್ಪರ ಹರಟುವುದು ವೆಂಕಟರಮಣಯ್ಯನ ಲೌಕಿಕ ದೃಷ್ಟಿಗೆ ಸರಿಕಾಣಲಿಲ್ಲ. ಒಂದು ದಿನ ಹಿರಣ್ಯಭಾಗೀರಥಿಯರು ಹಿತ್ತಲಲ್ಲಿ ನಿಂತು ಪ್ರಣಯಪ್ರಸ್ತಾಪಕ್ಕೆ ಬಾಯಿತೆರೆಯುವಾಗಲೇ ಯಜಮಾನರ ಕಣ್ಣಿಗೆ ಬಿದ್ದರು. ಆಗ ವೆಂಕಟರಮಣಯ್ಯ ನೋಡಿಯೂ ನೋಡದ ಹಾಗೆ ಅಲ್ಲಿಂದೆದ್ದು ಬಂದರು. ಬಂದವರು ಹೆಂಡತಿಯೊಡನೆ 'ನಿನ್ನ ಮಗನಿಗೆ ಸ್ವಲ್ಪ ಬುದ್ಧಿಯನ್ನು ಹೇಳು. ಹೆಂಡತಿ ಮನೆಗೆ ಬಂದಳು ಎಂದು ನಾಯಿಯ ಹಿಂದಿನ ಬಾಲವಾಗುವುದಲ್ಲ. ಯಾವುದು ಎಲ್ಲೆಲ್ಲಿರಬೇಕೋ ಅದು ಅಲ್ಲಲ್ಲಿ ಇದ್ದರೇನೆ ಚಂದ. ಕಾಲಿನದ್ದು ಕಾಲಿಗೇ.. ತಲೆಗಲ್ಲ ಎಂದರು. ಅವಳಿಗೂ ಈ ಮಾತುಗಳ ಅರ್ಥ ತಿಳಿಯಲಿಲ್ಲ. ಮಗನು ಅಡುಗೆ ಮನೆಗೆ ಬಂದಾಗ 'ನಿನ್ನ ತಂದೆ ಹಾಗೇಕೆ ಹೇಳಿದರು' ಎಂದು ಕೇಳಿದಳು. ಹಿರಣ್ಯನು ಸತ್ಯವನ್ನು ಸುರಿದನು.' ಬೇಡ ಮಗು, ಅವರಿಗೆ ಅದನ್ನೆಲ್ಲಾ ನೋಡಿದರಾಗದು. ನಾಳೆ ಅವಳು ದೊಡ್ಡವಳಾದ ಮೇಲೆ ಮಾತನಾಡಿಸಬಹುದಲ್ಲ, ಈಗಲೇ ಏನು ಅವಸರ. ಅಲ್ಲದೆ ಈಗಲೇ

ಸಲಿಗೆಯನ್ನು ತೋರಿಸಿದರೆ–' ಸಸಿಕೊಟ್ಟ ನಾಯಿ ಮೂಸಲು ನಕ್ಕೀತು '– ಎಂಬಂತಾದರೆ ಕಷ್ಟ. ಆದಕ್ಕೇನೆ ಅವರೆಂದದ್ದು ಕಾಲಿಗಿರುವುದು ಕಾಲಿಗೇ ಇರಬೇಕು.

ಹಿರಣ್ಯನಿಗೆ ಲಜ್ಜೆಯಾಯಿತು; ಸಿಟ್ಟುಬಂದಿತು. ಭಾಗೀರಥಿಯಂಥ ಕನ್ಯೆ ಸಿಕ್ಕಿದ್ದು ತನ್ನ ಭಾಗ್ಯ. ಅಂಥವಳು ಮನೆಗೆ ಒಂದರೆ ಗಂಡನಾದವನು ಮಾತನಾಡಿಸದೆ ಮೂಕನಾಗಿರಬೇಕೇ ? ರಾತ್ರಿ ಅವಳು ಮಲಗುವ ಕಡೆಯೂ ಬೇರೆ; ಆಗಂತು ಮಾತಿಲ್ಲ. ಹಗಲು ಮಾತನಾಡಿಸುವುದು ತಪ್ಪೇ ? ಅಲ್ಲದೆ ಮದುವೆಯಾದವಳನ್ನು ' ತಲೆಗೆ. . . . ಕಾಲಿಗೆ ' ಎಂದ ರಲ್ಲ–ಇಂಥ ಎಲ್ಲ ವಿಚಾರತರಂಗಗಳು ಅವನಲ್ಲಿ ಉತ್ಪನ್ನವಾದುವು.

ದುರ್ದೈವಕ್ಕೆಂಬಂತೆ ಅಡುಗೆ ಮನೆಯಲ್ಲಿ ಅತ್ತೆಮಾವಂದಿರಿಗೆ ನಡೆದ ಸಂಭಾಷಣೆ, ತಾಯಿಮಗನಿಗಾದ ಮಾತುಗಳು ಭಾಗೀರಥಿಯ ಕಿವಿಗೆ ಬಿದ್ದುವು. ಇದು ಅವಳ ಅಭಿಮಾನಶೀಲ ಬುದ್ಧಿಗೆ ಬರೆ ಎಳೆದಂತಾ ಯಿತು. ಇಷ್ಟು ನಡೆದುದು ಮನೆತುಂಬಿಸಿದ ಎರಡನೆಯ ಇಲ್ಲವೆ ಮೂರ ನೆಯ ದಿನವಿರಬೇಕು. ಅನಂತರ ಅವಳು ಗಂಡನನ್ನ ಕಣ್ಣೆತ್ತಿ ನೋಡಲಿಲ್ಲ.

ಹಿರಣ್ಯನು ಹಲವು ಸಾರಿ ಹೆಂಡತಿಯನ್ನು ಕಾಣುವ ಆಸೆಯಿಂದ ಆವಳ ಮುಂದೆಯೇ ಹಾದು ಹೋದನು. ನಾಲ್ಕಾರು ದಿನ ಶಾಸ್ತ್ರೋ ಕ್ತವಾಗಿ ಎಂಬಂತೆ ಅವರು ಜತೆಯಲ್ಲಿ ಕುಳಿತು ಊಟವನ್ನು ಮಾಡಿದರು. ಆಗ ಒಂದೆರಡು ಬಾರಿ ಒಳದನಿಯಲ್ಲಿ ' ಭಾಗೀ, ಸಿಟ್ಟೇ ' ಎಂದು ಕೇಳಿ ದನು. ಆಗಲೂ ಭಾಗಿಯೂ ಉತ್ತರವನ್ನು ಕೊಡಲಿಲ್ಲ.

ಅವಳನ್ನು ತವರುಮನೆಗೆ ಕರೆಯಬಂದರು. ಭಾಗಿಯು ಎಲ್ಲರನ್ನು ನಮಸ್ಕರಿಸಿ ಗಂಡನಿದ್ದಲ್ಲಿಗೆ ಬಂದಳು. ಕತ್ತೆತ್ತಿ ನೋಡಲಿಲ್ಲ. ಹಿರಣ್ಯನು ಮೆಲುಧನಿಯಿಂದ ' ಹೋಗಿ ಬರುತ್ತೀಯಾ ? ' ಎಂದು ಕೇಳಿದನು. ಅವಳು ' ಹೂಂ–ಹೋಗುತ್ತೇನೆ. ಆದರೆ ಕಾಲಿನದಾಗಿ ಬರುವುದಿಲ್ಲ '– ಎಂದಳು. ತನ್ನ ತಂದೆಯ ಮಾತುಗಳು ಅವಳ ಕಿವಿಗೂ ಬಿದ್ದಿತ್ತೆಂದು

ಅವನು ಊಹಿಸಿರಲಿಲ್ಲ. ಅವಳ ಮೌನಕ್ಕೆ ಆ ಮಾತುಗಳು ಕಾರಣವೆಂದು ಆಗಷ್ಟೆ ತಿಳಿಯಿತು.

ಅನಂತರ ಸೊಸೆಯು ಮನೆಗೆ ಬರಲು ವೆಂಕಟರಮಣಯ್ಯನ ಅಭಿಮಾನವೇ ಅಡ್ಡವಾಯಿತು. 'ಬೇಕಾದರೆ ಹುಡುಗಿಯನ್ನು ಕಳುಹಿಸು. ಇಲ್ಲವಾದರೆ ಹಿರಣ್ಯನಿಗೆ ಸಾವಿರಜನರು ಹೆಣ್ಣುಕೊಟ್ಟಾರು' ಎಂದರು. ಹಿರಣ್ಯನು ತಾನಾಗಿ ಹೆಂಡತಿಯನ್ನು ಕರೆಯ ಹೋಗುವ ಸಾಹಸಿಯಲ್ಲ. ಈ ಎರಡುವರ್ಷಗಳಲ್ಲಿ ಒಂದೇ ಒಂದು ದಿವಸ ಅವನ ಸ್ಮೃತಿಯಿಂದ 'ಭಾಗೀರಥಿ'ಯು ಮರವೆಯಾಗಿರಲಿಲ್ಲ. ಆದರೆ ತಂದೆಯು ಅವರ ಕುಲಕ್ಕೆ ಭೈರವಸ್ವರೂಪನು. ಪ್ರತ್ಯುತ್ತರಕ್ಕೆ ಮೀರಿದ ಮೂರ್ತಿಯಾಗಿದ್ದನು.

ಇತ್ತೀಚಿಗೆ ಭಾಗೀರಥಿಯ ವಿಚಾರದಲ್ಲಿ ಅವನಿಗೆ ಉಗ್ರಚಿಂತೆಯುಂಟಾಗಿದೆ. ಅವಳು ಸಲ್ಲದ ಶೀಲವನ್ನು ಕೈಕೊಂಡಳೆಂಬ ವಾರ್ತೆ ಊರೆಲ್ಲ ಹಬ್ಬಿತು. ಅವನ ಕಿವಿಗೂ ಬಿದ್ದಿತು. 'ತಾನು ಗಂಡನ ಮನೆಗೆ ಹೋಗುವುದಿಲ್ಲವೆಂದು ಲಜ್ಜೆಯಿಲ್ಲದೆ ಹೇಳುತ್ತಾಳೆಂ'ಬ ಸುದ್ದಿಯೂ ಬಂದಿತು. ಇತ್ತ ವೆಂಕಟರಮಣಯ್ಯನು ಮಗನಿಗೆ ಬೇರೆ ಲಗ್ನದ ಸನ್ನಾಹದಲ್ಲಿದ್ದಾರೆ. ಹಿರಣ್ಯನ ಅಂತರಂಗದಲ್ಲಿ 'ನಾನು ಹೋದರೆ ಭಾಗೀರಥಿ ಹೇಗಿದ್ದರೂ ಅವಳನ್ನು ಕರತಂದೇನು' ಎಂಬ ಧೈರ್ಯವಿತ್ತು. ಅದೇ ಧೈರ್ಯದಿಂದ ಕೊನೆಯ ಒಂದು ಪ್ರಯತ್ನವನ್ನು ಮಾಡಿದನು. ತಾಯಿಗೂ ತಿಳಿಸದೆ ತನ್ನೊಬ್ಬ ಮಿತ್ರನ ಮೂಲಕ ಭಾಗೀರಥಿಯ ಬಳಿಗೆ ಸಂದೇಶವನ್ನು ಕಳುಹಿಸಿದನು; 'ಭಾಗೀ, ನಾವಿಬ್ಬರೂ ಕೂಡಿ ಬೇರೆ ಮನೆ ಮಾಡಿರುವ; ಬರುತ್ತೀಯಾ' ಎಂದು. ಊಹೆಗೆ ಮೀರಿದ ಪ್ರತ್ಯುತ್ತರ ಬಂದಿತು 'ಕಾಲಿನದನ್ನು ನೀವಾಗಲೇ ದೂರವಿರಿಸಿದಿರಿ. ಇನ್ನು ಅದು ನಿಮ್ಮಿಂದ ದೂರವೇ ಸರಿ.' ಈ ಮಾತಿಗೂ ಊರವರು ಹೊರಿಸಿದ ಅಪವಾದಕ್ಕೂ ಸರಿಗಂಟಾಯಿತು. 'ನನ್ನ ಭಾಗೀರಥಿ ಬೇರೆಯವರ ಮೋಹಕ್ಕೆ ಬಿದ್ದಳೇ' ಎಂಬ ಶಂಕೆ ಅವನಲ್ಲಿ ಉಂಟಾಯಿತು.

ಹಿರಣ್ಯನು ಅವಳ ಚಿಂತೆಯನ್ನು ಮರೆಯುವ ನಿರ್ಧಾರ ಮಾಡಿ ದಷ್ಟಕ್ಕೂ ಅದು ಆಳವಾಗಿ ಬೇರೂರ ತೊಡಗಿತು. 'ಸಾಯಲಿ, ಬದುಕಲಿ–ಭಾಗೀರಥಿಯೇ ಬೇಕು' ಎಂಬ ಹಂಬಲ ಬಲವತ್ತರ ವಾಯಿತು. ಅದೇ ಭ್ರಾಂತಿಯಿಂದ ಅವನು ದೂರದ ಭಾಗಿಯನ್ನು ಒಲಿಸ ಲೋಸುಗ ಸರಸಮ್ಮನ ದರ್ಶನಕ್ಕೆ ಬಂದುದು. ಜಾನಕಿ ಅಲ್ಲಿಗೆ ಬಂದು ಹೋಗುವ ತುಸು ಮೊದಲು, ಸರಸಮ್ಮನ ಆದರ್ಶಪತಿ ನೀಲಾಚಲಯ್ಯ ನನ್ನು ಮರೆಹೊಕ್ಕು, ಗುಡಿಮುಂದಿನ ತೀರ್ಥದಲ್ಲಿ ತೆಂಗಿನಕಾಯಿ ಯನ್ನು ಹಾಕಿ ಹೊರಟಿದ್ದನು. ಅಷ್ಟು ಕೆಲಸವನ್ನು ಮಾಡಿ, ತಾನೇ ಒಂದು ದಿನ ಭಾಗೀರಥಿಯ ಮನೆಗೆ ಹೋಗುವೆನೆಂದೂ, ಅವಳು ಬರಲೊಲ್ಲೆನೆಂದರೆ ತಿರುಗಿ ಮನೆಗೆ ಹಿಂದಿರುಗುವುದಿಲ್ಲೆಂದೂ ನಿರ್ಣಯಿ ಸಿದ್ದನು.

ಜಾನಕಿಯು ಗುಡಿಯಿಂದ ಮರಳಿದ ಆ ರಾತ್ರಿ ಸುಖದಿಂದ ಮಲಗಿ ನಿದ್ದೆಹೋದರೆ ಹಿರಣ್ಯನು ಮಾತ್ರ ತೀರ ಭೀಕರ ಕನಸುಗಳನ್ನು ಹೊತ್ತು ಹಾಸುಗೆಯಲ್ಲಿ ಉರುಳಾಡುತ್ತಿದ್ದನು, 'ತಂದೆ ನನಗೆ ಬೇರೆಯೇ ಸಂಬಂಧವನ್ನು ನಿರ್ಣಯಿಸಿರಬೇಕು. ತಾನಿನ್ನು ಮನೆಯಲ್ಲಿ ನಿಲ್ಲಲಾರೆ. ಆದರೆ ಹೊರಡುವ ಮೊದಲು ತಾಯಿಗೆ ಸುದ್ದಿಯನ್ನು ತಿಳಿಸಬೇಡವೇ. ಎಂಬೆಲ್ಲ ಚಿಂತೆಗಳು ಕಾಡುತ್ತಿದ್ದುವು. ತಾಯಿಗೆ ತಿಳಿಸದೆ ಮನಸ್ಸು ಕೇಳದು. ತಿಳಿಸಿದರೆ ಅವಳು ತಡೆಯದಿದ್ದಾಳೆಯೇ ಎಂಬ ಭೀತಿ. ಆಗ ಎಲ್ಲವೂ ಬಹಿರಂಗವಾಗಿ ತಂದೆಯ ಕೋಪಕ್ಕೆ ಬಲಿಯಾದರೆ..?

೬

# ಬೆಳ್ಳಮ್ಮನ ಭೇಟಿ

ಬೆಳಗಿನ ಬಿಸಿಲು ವೆಂಕಟರಮಣಯ್ಯನ ಮನೆಯ ಮುಂದಿನ ಸುಗ್ಗಿ ಗದ್ದೆಯ ಮೇಲೆ ಕುಣಿಯುತ್ತಿತ್ತು. ತಂಗಾಳಿ ಹಸುರು ಭತ್ತದ ಸಸಿಗಳನ್ನು ಹಾವಾಡಿಗನಂತೆ ತಲೆದೂಗಿಸುತ್ತಿತ್ತು; ಮಂಜಿನಿಂದ ತೊಯ್ದ ಅಂಗಣದ ಮುಂದಿನ ತೆಂಗಿನಮರದ ಸೋಗೆಗಳನ್ನು ಹೊಳಪಿಸುತ್ತಿತ್ತು. ಮನೆಯ ಯಜಮಾನ ವೆಂಕಟರಮಣಯ್ಯನು ಒಂದು ಕಿರುಪಂಚೆಯುಟ್ಟು ಸೃಷ್ಟಿಸೌಂದರ್ಯವನ್ನು ಮೆಲ್ಲುವವರಂತೆ ಮೂಡನ್ನು ನೋಡುತ್ತ ಮನೆಯ ಮುಂಭಾಗದ ಚಾವಡಿಯ ಕಂಭಕ್ಕೆ ಒರಗಿ ಎಲೆ ಅಡಿಕೆ ಮೆದ್ದು, ಹೊಗೆಸೊಪ್ಪಿಗೆ ಸುಣ್ಣವನ್ನು ತೀಡುತ್ತಿದ್ದರು. ಏನೋ ಕೆಲಸದ ನೆನಪಾಗಿ 'ಹಿರಣ್ಣಾ' ಎಂದು ಮಗನನ್ನು ಕೂಗಿದರು. ಒಳಗಿನಿಂದ ಅವರ ಹೆಂಡತಿ—'ಏಳಲಿಲ್ಲವೆಂದು ಕಾಣುತ್ತದೆ' ಎಂದಳು. ವೆಂಕಟರಮಣಯ್ಯನಿಗೆ ಆಶ್ಚರ್ಯವಾಯಿತು. 'ಏನು! ಬೆಳಗಾಗಿ ಜಾವವಾಯಿತು. ಇನ್ನೂ ಮಲಗಿಕೊಂಡಿದ್ದಾನೆಯೇ? ದಿನಕ್ಕೆ ಒಂದೊಂದನ್ನೇ ಕಲಿಯುತ್ತಾ ಬರಲಿ'—ಎಂದರು. ಅಷ್ಟರಲ್ಲಿ ಅವರ ಗಮನವು ಮನೆಗೆ ಬಂದ ಅತಿಥಿಗಳೀರ್ವರ ಕಡೆಗೆ ಹರಿಯಿತು. ಈ ಅಪೂರ್ವದವರನ್ನು ಕಂಡು ಅವರಿಗೂ ಆಶ್ಚರ್ಯವಾಯಿತು.

ಬಂದವರಿಬ್ಬರೂ ಹೆಂಗಸರೇ. ಒಬ್ಬಳು ನಾಲ್ವತ್ತು ವಯಸ್ಸಿನ ವೃದ್ಧೆ; ತಲೆಕೂದಲು ನೆರೆದಿದೆ; ಕುಳ್ಳ ಶರೀರ. ಒಂದು ಕಾಲದಲ್ಲಿ ರೂಪವು ಆ ಕಾಯದಲ್ಲಿ ತುಂಬಿ ನೆಲಸಿದ್ದಿರಬೇಕು. ಮೈಬಣ್ಣ 'ನಿಂಬೆ'ಯಾಗಿರಬೇಕು. ಈಗ ಒಣ ನಿಂಬೆಯ ತೊಗಟೆಯ ಬಣ್ಣ ಅದಕ್ಕೆ ಬಂದಿದೆ. ತುಟಿಗಳೆರಡು ಚಳಿಯಿಂದೆಂಬಂತೆ ಬಿರುಕುಗೊಂಡಿವೆ. ಗದ್ದೆ ಬೇಸಾಯಕ್ಕೆ ಹೋಗುವ ಉಡುಗಿಯಲ್ಲಿದ್ದರೂ ಅವಳ ತಲೆಯಲ್ಲಿ ಶಾಸ್ತ್ರೋಕ್ತವಾಗಿ ಬುಗುಡಿ ಸರಪಳಿಗಳೆಲ್ಲಾ ತೂಗುತ್ತಿದ್ದುವು. ಅರೆಕೈರವಿಕೆ—ಮೊಣಕಾಲಿನ ತನಕ ಒಂದು ಹಳೆಯ ಮೊಳಕಾಲ್ಮುರು ಸೀರೆ.

ಜತೆಯಲ್ಲಿದ್ದವಳು ಜವ್ವನೆ. ಹದಿನೆಂಟು ವಯಸ್ಸಿರಬೇಕು. ಹಳ್ಳಿಯ ಮರ್ಜಿಗೆ ಮೀರಿದ ಉಡುಗೆಯಾಗಿ ಕಾಣಿಸುವುದು. ನಡೆಯುವಾಗ ಝುಣಝುಣಿಸುವ ಕಾಲುಂಗರ ಬೇರೆ. ನತ್ತು, ಬುಗುಡಿ, ಬಳೆಗಳಿಂದ ಅಲಂಕಾರಪೂರಿತಳಾಗಿ ಕಾಣುತ್ತಾಳೆ. ಉಟ್ಟುದು ಹಳೆಯ ತೆರನ ಮೊಳಕಾಲ್ಮರು, ಇಲ್ಕಲು ಶೀರೆಗಳಲ್ಲ—ಹಳ್ಳಿಯವರೆಂಬಂತೆ ಮಂಗಳೂರಿನ ಗೇರುಬೀಜದ ಕಾರ್ಖಾನೆಯ ಹೆಂಗಸರಂತೆ ಉಡುಗೆ. ಅವಳ ಎಳೆಜಾಜಿಯ ಮೈಯನ್ನು ಕೇಸರಿಬಣ್ಣದ ಸೀರೆ, ಕಡುನೀಲ ಕುಪ್ಪಸಗಳು ಮುಚ್ಚಿದ್ದುವು. ಹಣೆಯಲ್ಲಿ ದುರ್ಬಿನಿನಿಂದ ಕಾಣಬೇಕಾದ ತಿಲಕವಿತ್ತು. ಇವನೆಲ್ಲಾ ಕಂಡರೆ ಹಳ್ಳಿಯವರು ತಕ್ಷಣ 'ಗರತಿ ಲಕ್ಷಣವಲ್ಲ' ಎಂದು ಹೇಳಿಯೇ ಬಿಡುತ್ತಾರೆ. ಅವರ ಊಹೆಯು ತಪ್ಪಾಗಲಾರದು.

ಈಗ ಬಂದವರು ಹಿಂದೊಮ್ಮೆ ಪರಿಚಯಮಾಡಿಕೊಟ್ಟ ಬೆಳ್ಳಮ್ಮ; ಅವಳ ಜೊತೆಗೆ ಬಂದವಳು ಮುಂದಿನ ಯುವರಾಣಿಯಾದ ಗುಲಾಬಿ. ಮೂಡಂಬೈಲಿನಲ್ಲಿ ಬೆಳ್ಳಮ್ಮನೆಂದರೆ ತಿಳಿಯದವರುಂಟೇ? ಎಲ್ಲರಿಗು ಪರಿಚಿತಳು. ಪರೋಕ್ಷದಲ್ಲಿ ಎಲ್ಲರಿಂದ ಅಪಹಾಸ್ಯಕ್ಕೆ ಗುರಿಯಾದರೂ, ಪ್ರತ್ಯಕ್ಷದಲ್ಲಿ ಸನ್ಮಾನಕ್ಕೆ ಪಾತ್ರಳು; ಅಂತರಂಗದಲ್ಲಿ ಆಪ್ತಳು ಸರಿಯೆ. ಈಗ ವಯಸ್ಸಾಯಿತು. ಜೀವಮಾನ ಇಳಿವರ್ಚಸ್ಸಿನ ಹಿಂದೆಯೂ ಮುಂದೆಯೂ ಸಮಾನಾಗಿ ಅವಳನ್ನು ಕಂಡು ದ್ವೇಷಿಸುವರೆಂದರೆ ಈಶ್ವರಭಟ್ಟರೊಬ್ಬರೇ. ಮಗನು ಊರನ್ನು ಬಿಟ್ಟ ಸಿಟ್ಟಿನಿಂದ ಇನ್ನೂ ವೈರ ನಿಂತಿದೆ. ಎಷ್ಟು ಹಗೆಗಳಿದ್ದರೂ ಬೆಳ್ಳಮ್ಮನಿಗೆ ಸ್ನೇಹಿತರು ಹಲವರು ಮೂಡಂಬೈಲಿನಲ್ಲೆ ಇದ್ದಾರೆ.

ಬೆಳ್ಳಮ್ಮನ ಸಾಕುಮಗಳೆನ್ನುತ್ತಾರೆ ಗುಲಾಬಿಯನ್ನು. ಅವಳಿಗೆ ಮಗಳಿಲ್ಲ. ಅಕ್ಕನ ಮಗಳನ್ನು ಬೆಳೆಸಿ ಬಂದಿರುತ್ತಾಳೆ; ಅವರ ಹಿರಿಯರ ಊರು ಮಂಕಿ-ಮುರ್ಡೇಶ್ವರ. ಅಲ್ಲಿಂದ ಬೆಳ್ಳಮ್ಮನ ಮುತ್ತಜ್ಜಿ ಕುಂಬಳೆ ಸೀಮೆಗೆ ಬಂದುದು. ಪ್ರಾಯಶಃ ಆ ಕಾಲದಲ್ಲಿ ಕುಂಬಳೆ ರಾಜರು ಆಸ್ಥಾನದಲ್ಲಿ ನರ್ತನಕ್ಕೆ ಅವಳನ್ನು ಕರೆಯಿಸಿಕೊಂಡಿರಬೇಕು. ಆ

ಮಾಜಿಕಾಲ ಸರಿಯಿತು. ಈಗ ಗೆಜ್ಜೆ ಕಟ್ಟಿದರು ಕುಣಿಯುವುದೆಲ್ಲಿಂದು ಬೇಡವೇ? 'ಮೇಳ'ವೊಂದನ್ನು ಕಟ್ಟಿಕೊಳ್ಳುವ ಶಕ್ತಿ ಬೆಳ್ಳಮ್ಮನಿಗಿಲ್ಲ. ಅದೂ ಅಲ್ಲದೆ—ಈಗಿನ ದಿನಕ್ಕೆ ಕುಣಿತ ಯಾರಿಗೆ ಬೇಕು? ಗುಲಾಬಿಗೆ ಯೌವನವಿರುವಷ್ಟು ದಿವಸ ಯಾವ ವಿದ್ಯೆಯಿಲ್ಲದಿದ್ದರೂ ದೋಷವಿಲ್ಲ. ಸಂಗೀತ ಕುಣಿತಗಳಿಂದ ವಶೀಕರಣ ಮಾಡುವ ಬಾದರಾಯಣ ಸಂಬಂಧದ ದಿವಸಗಳು ಇವಲ್ಲ. ವೆಂಕಟರಮಣಯ್ಯಗೆ ಬೆಳಗ್ಗೆ ಇವರಿಬ್ಬರನ್ನು ಕಂಡು ಬೇಸರವಾಗಲಿಲ್ಲ. ಬದಲು ನಗುತ್ತ 'ಏನು, ಬೆಳ್ಳಮ್ಮನ ಸವಾರಿ ಬೆಳಗ್ಗೆ ಹೊರಟಿತು?' ಎಂದು ಕೇಳಿದರು. 'ಏನಿಲ್ಲ. ಒಂದು ಮುಡಿ ಅಕ್ಕಿ ಬೇಕಿತ್ತು. ಮನೆಯಲ್ಲಿ ತರಿಸಿಹಾಕಿದುದು ಖರ್ಚಾಯಿತು. ಮುಂದಿನ ವಾರದಲ್ಲಿ ಹಣ ಕೊಡುತ್ತೇನೆ. ಆದರೆ ಮೂರು ರೂಪಾಯಿಗಿಂತ ಒಂದು ಪೈ ಹೆಚ್ಚಿಗೆ ಕೊಡುವುದಿಲ್ಲ' ಎಂದಳು.

ವೆಂಕಟರಮಣಯ್ಯ 'ಇದಾರು, ಮಗಳೇನು? ಹೋ ಇವತ್ತು ಶುಕ್ರವಾರ. ಸರಸಮ್ಮನು ಗುಡಿಗೆ ಹೊರಟಳೆಂದು ಕಾಣುತ್ತದೆ. ಆದರೆ ಹಣ್ಣು ಕಾಯಿ, ಒಂದನ್ನೂ ತೆಗೆದುಕೊಳ್ಳದೆ'—ಎನ್ನುವಾಗ ಒಳಗಿಂದ ಹಿರಣ್ಯನು ಎಚ್ಚತ್ತು ಚಾವಡಿಗೆ ಬಂದನು. ಅವನ ಮೋರೆಯನ್ನು ಕಂಡು 'ಹಿರಣ್ಯ, ಬೇಗ ಮುಖ ತೊಳೆದು ಒಂದು ಮುಡಿ ಅಕ್ಕಿಯನ್ನು ಹೊರಗೆ ಹಾಕು. ಬೆಳ್ಳಮ್ಮನಿಗೆ ಬೇಕಂತೆ. ಮುಂದಿನ ವಾರದಲ್ಲಿ ಕೊಡುತ್ತಾಳಂತೆ ರೂಪಾಯಿಯನ್ನು' ಎಂದು ಅನುಜ್ಞೆ ಮಾಡಿದರು. ಹಿರಣ್ಯನು ನೆಟ್ಟಗೆ ಬಾವಿಯ ಕಡೆಗೆ ಹೋದನು.

ಬೆಳ್ಳಮ್ಮ ಊರಿನ ಒಂದು ವರ್ತಮಾನಪತ್ರವೂ ನಿಜ. ಅಕ್ಕಿ ದೊರೆಯುವ ತನಕ ಅವಳ ಬಾಯಿ ಸುಮ್ಮನಿರಲಾರದು. 'ಹೌದೇ.. ನಿಮ್ಮ ಮಗನಿಗೆ ಬೇರೆ ಸೆಂಟಸ್ತಿಕೆ ಕಾಣುತ್ತೀರೆಂದು ಊರೆಲ್ಲಾ ಸುದ್ದಿ ..ಎಲ್ಲಿನದು? ಏನು ಕಥೆ? ಕಳೆದ ಮದುವೆಯನ್ನು ಸುದ್ದಿಯಿಲ್ಲದೆ ಮಾಡಿಬಿಟ್ಟಿರಿ. ಈ ಸಾರಿ ಮದುವೆಗೆ ನಮ್ಮ ಗುಲಾಬಿಯಿಂದ ಒಂದು ಕುಣಿತ ಮಾಡಿಸಬಹುದಿತ್ತು. ನಿಮ್ಮಂಥವರು ಮನಸ್ಸು ಮಾಡದೆ ಗೆಜ್ಜೆಕಟ್ಟುವುದೇ ನಿಂತಹಾಗೆ' ಎಂದಳು. ವೆಂಕಟರಮಣಯ್ಯನಿಗೆ ಆ

ಪ್ರಶ್ನೆ ರುಚಿಸಲಿಲ್ಲವೋ ಏನೋ,—'ಸೆಂಟಸ್ತಿಕೆಯೆಂದರೆ ಸುಲಭವೇ? ಇನ್ನೂ ಜಾತಕ ನೋಡಿಲ್ಲ'—ಎಂದು ಉದಾಸೀನವಾಗಿ ಉತ್ತರವಿತ್ತರು. ಹೀಗೇನೆ ಹಾಳು ಹರಟೆಯಲ್ಲಿ ಸಮಯ ಸಾಗುತಿತ್ತು. ಗುಲಾಬಿಯು ತಾಯ ಮಾತನ್ನು ಕೇಳಿ ನಸುನಗುತ್ತ ಬಳಿಯಲ್ಲಿ ನಿಂತಿದ್ದಳು. ಹಿರಣ್ಯನು ಮುಖ ತೊಳೆದುಕೊಂಡು ಮನೆಯನ್ನು ಸೇರಿದನು. ಸ್ವಲ್ಪಹೊತ್ತಿನಲ್ಲಿ ಒಳಗಿನಿಂದ ಒಂದು ಮುಡಿ ಅಕ್ಕಿಯನ್ನು ಉರುಳಿಸಿಕೊಂಡು ಜಗುಲಿಗೆ ಬಂದನು.

ಬೆಳ್ಳಮ್ಮನು ಹಿರಣ್ಯನ ಮುಖವನ್ನು ಕಂಡು 'ಸಣ್ಣ ಧನಿಯರ ಕಣ್ಣೆಲ್ಲ ಇಷ್ಟಿಷ್ಟು ದೊಡ್ಡದಾಗಿದೆ. ಏನು, ನಿನ್ನೆ ಎಲ್ಲಾದರೂ ತಾಳ ಮದ್ದಲೆ ಇದ್ದಿತ್ತೇ?' ಎಂದಳು. ಹಿರಣ್ಯನು ಮಾತನಾಡಲಿಲ್ಲ. ಸುಮ್ಮನೆ ಒಳಕ್ಕೆ ಹೋದನು. ಆದನ್ನು ಕಂಡು ಬೆಳ್ಳಮ್ಮನು 'ನಿಮ್ಮ ಮಗನಿಗೆ ಹುಷಾರಿಲ್ಲವೇ?' ಎಂದು ವಿಚಾರಿಸಿದಳು. ಅದಕ್ಕೆ ವೆಂಕಟರಮಣಯ್ಯ 'ಅವನಿಗೇನು ದಾಡಿ? ಹುಷಾರಿದೆ, ಎಲ್ಲಾ ಇದೆ. ರಾತ್ರಿ ಮಲಗಿಕೊಂಡ ವನು ಈಗಷ್ಟೆ ಎದ್ದುದು. ನಾನಾದರೂ ಬೆಳಗ್ಗಿನ ಜಾವಕ್ಕೆ ಏಳುತ್ತೇನೆ. ಈಗಿನ ಮಕ್ಕಳಿಗೆ......' ಎಂದರು.

'ಬೆಳ್ಳಮ್ಮ ಗಟ್ಟಿಗಿತ್ತಿ' ಎಂಬ ಆಶ್ಚರ್ಯದ ಮಾತು ವೆಂಕಟ-ರಮಣಯ್ಯನ ಬಾಯಿಂದ ಬಂದಿತು. ಅಕ್ಕಿ ಮುಡಿಯನ್ನು ಎತ್ತಿ ತಾಯಿಯ ತಲೆಯ ಮೇಲೇರಿಸಲು ಗುಲಾಬಿಗೆ ಸಾಧ್ಯವಾಗಲಿಲ್ಲ. ವೆಂಕಟರಮಣಯ್ಯನು ಸಹಾಯಕ್ಕೆ ಬರಬೇಕಾಯಿತು. ಆದರೆ ನಾಲ್ವತ್ತು ವರ್ಷದ ಆ ಹೆಂಗುಸು ಸಟಸಟನೆ, ಅದನ್ನು ತಲೆಯ ಮೇಲಿರಿಸಿಕೊಂಡು ಹೊರಟುಬಿಟ್ಟಳು. ಹೋಗುತ್ತ 'ಮುಂದಿನ ಶುಕ್ರವಾರ ಇಲ್ಲವೆ ಶನಿವಾರ—ಮೂರು ರೂಪಾಯಿ—ಹೆಚ್ಚಿಗೆ ಕೊಡಲಾರೆ. ನಾನಾಗಲಿ ಗುಲಾಬಿಯಾಗಲಿ ತಂದುಕೊಡುತ್ತೇವೆ. ಅಲ್ಲ, ನೀವೇ ಪೇಟೆಗೆ ಹೋಗುವವರು ಮುಖ ಹಾಯಿಸಿ ಹೋಗಿಬಿಡಿ..ಎಂದು ಆಮಂತ್ರಣ ವಿತ್ತಳು. ಗುಲಾಬಿಯು ತಾಯಿಯನ್ನು ಅನುಸರಿಸಿದಳು. ಅವರ ಮನೆಯ ಅಂಗಣವನ್ನು ಇಳಿಯುವುದರೊಳಗೆ ಮೂರು ಮೂರು ಬಾರಿ

ಮನೆಯ ಕಡೆಗೆ ಮುಖ ತಿರುವಿ ನೋಡಿದಳು. ವೆಂಕಟರಮಣಯ್ಯನು ಪ್ರಸನ್ನಮುಖರಾದರು. ಅವಳೊಂದು ಕಿರುನಗೆ ನಕ್ಕಳು. ಆದರೆ ಮೋರೆಯು ಮಾತ್ರ ನಿರಾಶೆಯಿಂದಲೇ ಕೂಡಿತ್ತು.

ದಾರಿಹೋಗುತ್ತ ತಾಯಿಯು ಮಗಳೊಡನೆ ತಲೆಯ ಮೇಲಿನ ಹೊರೆಯನ್ನು ಮರೆತಷ್ಟು ಸುಲಭದಿಂದ 'ಅದೇ ಹಿರಣ್ಯ—ಅವರ ಮಗ. ಕಣ್ಣು ನೋಡಿದೆಯಾ? ರಾತ್ರಿ ಪೂರಾ ನಿದ್ದೆ ಕೆಟ್ಟಿರಬೇಕು. ನಿನ್ನೆ ಸರಸಮ್ಮನ ಗುಡಿಗೆ ಬಂದಿದ್ದರು—ಎಂದರೆ ನೀನು ಸುಳ್ಳೆನ್ನುತ್ತಿ. ಈಗಿನ ಮಕ್ಕಳು ನೀವು. ಕುಳಿತಲ್ಲಿಂದಲೇ ಎಲ್ಲಾ ಕೆಲಸವಾಗಬೇಕು.' ಗುಲಾಬಿಯು ಅಷ್ಟೇ ಗಂಭೀರವಾಗಿ 'ನಿನಗೇನು? ನಾನು ಮನೆಯೊಳಗೆ ಹೋಗಿ ಅವರನ್ನು ಕರೆಯಬೇಕೆನ್ನುತ್ತೀಯಾ? ನಾನು ಅಷ್ಟೊಂದು ಅವರನ್ನು ನೋಡುತ್ತಿದ್ದರೆ ಆ ಪುಣ್ಯಾತ್ಮ ನನ್ನ ಮುಖದ ಕಡೆ ತಿರುಗಿ ನೋಡಲಿಲ್ಲ. ಅದರ ಬದಲು ವೆಂಕಟರಮಣಯ್ಯ ಕಿರುಬಾಯಿ ಮಾಡಿ ಕೊಂಡು ನೋಡುತ್ತದೆ.'

'ನಾವು ಅಕ್ಕಿ ಕ್ರಯವನ್ನು ಕೊಡುವುದು ವಿಲಂಬ ಮಾಡಿದರೆ ಒಬ್ಬರಲ್ಲ ಒಬ್ಬರು ಮನೆಗೆ ಬರುತ್ತಾರೆ. ಅಪ್ಪ ಕೇಳಲು ಬಂದರೆ ಇವತ್ತು ನಾಳೆಯೆಂದು ಬೇಸರ ಬರಿಸಿ, ಮಗನು ಮನೆಗೆ ಬರುವ ಹಾಗೆ ಮಾಡ ಬೇಕು.'

ಸರಸಮ್ಮನ ಗುಡಿಯ ವಿಚಾರ ತಿಳಿಯಬೇಕಾದವರು ಬೆಳ್ಳಮ್ಮನ ಕಥೆಯನ್ನು ತಿಳಿಯಬೇಕು. ಬೆಳ್ಳಮ್ಮನ ಪ್ರೇತವು ಆ ಗುಡಿಯ ಬಳಿ ಅಲೆಯುತಿತ್ತು ನಿಜವೋ ತಿಳಿಯದು—ಆಗಾಗ ಬೆಳ್ಳಮ್ಮನ ರೂಪು ಮಾತ್ರ ಆ ಪ್ರದೇಶದಲ್ಲಿ ಕಾಣಿಸುತಿತ್ತು. ಪ್ರತಿ ಗುರುವಾರ ರಾತ್ರಿ ಅವಳನ್ನು ನೀವು ನಾಗನ ಬನದ ಮರೆಯಲ್ಲಿ ಕಾಣಬಹುದು. ಈ ಪಹರೆಯು ಅವಳ ಉದ್ಯೋಕ್ಕೆ ಒಂದು ಸಹಾಯ. ಅಲ್ಲಿಗೆ ಬರುವ ಹೆಂಗುಸರಲ್ಲಿ ಅವಳು ಉದಾಸೀನಳಾದರೂ ಗಂಡಸರ ವಿಚಾರದಲ್ಲಿ ಆಸಕ್ತಳು. ಹಾಗೆ ಹೊಂಚುಹಾಕಿ ಯಾವ ಯಾವ ದಾಂಪತ್ಯಗಳಲ್ಲಿ ಕಿಲುಬು ಮೂಡಿದೆ ಎಂಬು ತಿಳಿದು ಜೀವನದ ವ್ಯಾಪಾರವನ್ನು

ಬೆಳೆಯಿಸಿಕೊಂಡು ಹೋಗುವ ರೀತಿ ಅಪೂರ್ವ. ಈಗ ಆಕೆಗೆ ವಯಸ್ಸು ಏರಿದೆ. ಮೊದಲಿನಂತೆ ತಾವಾಗಿ ಜನರು ಅವಳನ್ನು ಪೋಷಿಸಿ ಒರುವವರಿಲ್ಲ. ಅದಕ್ಕೇನೆ ಗುಲಾಬಿಯನ್ನು ಮನೆಗೆ ತಂದು ಬೆಳೆಯಿಸು ತ್ತಿದ್ದಾಳೆ. ಮುಪ್ಪಿನ ಕಾಲದಲ್ಲಿ ಬೀದಿಯಲ್ಲಿ ಬಿದ್ದು ಸಾಯಬಾರದಷ್ಟೆ! ನಿನ್ನೆ ದಿನ ಪಹರಿಯಲ್ಲಿ ಅವಳು ಹಿರಣ್ಯನನ್ನು ಕಂಡಳು. ಮರುದಿನವೇ ಕಾರ್ಯಾರಂಭಕ್ಕೆ ಪೀಠಿಕೆಯನ್ನು ಹಾಕಿದಳು. ಅಲ್ಲವಾದರೆ ಅವಳಿಗೆ ಅಕ್ಕಿಯ ಆವಶ್ಯವಿರಲಿಲ್ಲ. ಇದ್ದರೂ ವೆಂಕಟರಮಣಯ್ಯನ ಮನೆಗೆ ಮಗಳನ್ನು ಕರೆತರುವ ಕಾರಣ ಇದ್ದಿರಲಿಲ್ಲ. ವೆಂಕಟರಮಣಯ್ಯಗೆ ಅನುಕೂಲತೆಯಿದೆ. ನಗದು, ಮನೆ, ಆಸ್ತಿ,—ಮೂರೂ ಸಮನಾಗಿ ಇವೆ. ಮೂಡಂಬೈಲಿನಲ್ಲಿ ವೆಂಕಟರಮಣಯ್ಯ, ಚಂದ್ರಯ್ಯ—ಇವರಿಬ್ಬ ರಂತೆ ಕೈ, ಕಾಲು, ಕಿಸೆ—ಶುದ್ಧವಿರುವ ಜನರು ಕೈಬೆರಳೆಣಿಸುವಷ್ಟು ಇರಲಿಲ್ಲ. ಹಿಂದೆ ಇದ್ದರೆನ್ನುತ್ತಾರೆ. ಈಶ್ವರಭಟ್ಟರಿಗೂ ಸಾಕಷ್ಟು ಇತ್ತು. ಇನ್ನು ಪಮ್ಮನಾಯ್ಕ, ಬಾಸಡ್ಕ ಬಾಲಪ್ಪಯ್ಯ ಇವರೆಲ್ಲರೂ ಆಢ್ಯರೇ ಆಗಿದ್ದರು. ಆದರೆ ಈಗ ಅವರಿಗೆ ಕಾಲಿಗೆಳೆದರೆ ತಲೆಗಿಲ್ಲ; ತಲೆಗೆಳೆದರೆ ಕಾಲಿಗಿಲ್ಲ, ಎಲ್ಲಕ್ಕೂ ಮೂಲ ಕಾರಣವೆಂದರೆ—ಬೆಳ್ಳಮ್ಮ ಎನ್ನುತ್ತಾರೆ. ಎಷ್ಟು ನಿಜವೋ, ಎಷ್ಟು ಸುಳ್ಳೋ! ಬೆಳ್ಳಮ್ಮ ಬೇರೆ ಶ್ರೀಮಂತಳಾಗಿ ಕಾಣಿಸುವುದಿಲ್ಲ; ಬಾಲಪ್ಪಯ್ಯನು ಕಟ್ಟಿಸಿಕೊಟ್ಟ ಹೆಬ್ಬಾಗಿಲ ಮನೆಯಿದೆ. 'ಅವರು ಇವರಿಂದೆ ಸುಲಿದ' ನಾಲ್ಕಾರು ಮುಡಿ ಗದ್ದೆಗಳು ಇವೆ. ಗದ್ದೆಗಳೆಲ್ಲಾ ವೆಂಕಟರಮಣಯ್ಯನಿಗೆ ಅಡವು. ಅಡವಿನ ಹಣ ಐಂಕ್ಕೆ ಬಡ್ಡಿ ಸಲ್ಲದೆ ಎರಡು ವರ್ಷಗಳಾದವು. 'ಗುಲಾಬಿ ಸಾಲ ಸಂದಾಯ ಮಾಡಿದರೆ ಆಸ್ತಿ; ಇಲ್ಲವಾದರೆ ನಾಸ್ತಿ' ಎಂದು ಪ್ರಾಸಬದ್ಧವಾಗಿ ಬೆಳ್ಳಮ್ಮನೇ ಅನ್ನುತ್ತಾಳೆ.

ಈ ಶುಕ್ರವಾರ ಬೆಳಗಿನ ಶಿಖಾರಿ ಫಲಪ್ರದವಾಗಲಿಲ್ಲ. ಗುಲಾಬಿಯನ್ನು ಮುಂದಿಟ್ಟುಕೊಂಡು ಬೆಳ್ಳಮ್ಮ ಚಂದ್ರಯ್ಯನನ್ನು ಸೆಳೆಯಲು ಬಲು ಯತ್ನಮಾಡಿದ್ದಳು. ಆದರೆ ಯಶಸ್ಸು ಸಿಗಲಿಲ್ಲ. ಗುಲಾಬಿಯ ವಿಷಯ ಬಂದಾಗಲೆಲ್ಲಾ ಚಂದ್ರಯ್ಯನೆನ್ನುತಿದ್ದನಂತೆ—'ಆ ಕ್ಷಯ

ರೋಗದ ಕಡ್ಡಿಗೆ ಏನು ಹುಚ್ಚು ಕಟ್ಟಿ ಬೀಳುತ್ತಾರಪ್ಪ ನಮ್ಮೂರ ಜನಗಳು ' ಎಂದು. ಆ ಸಿಟ್ಟು ಬೇರೆ ಬೆಳ್ಳಮ್ಮನಿಗಿದೆ. ಅದರ ಸೇಡನ್ನು ತೀರಿಸುವೆನೆಂದು ಬೆಳ್ಳಮ್ಮ 'ಅವನಿಗೇನು—ಮಂಗಳೂರಿನ 'ತಾರಮ್ಮ' ಗಳ ಮುಂದೆ ಗುಲಾಬಿಯು ಕ್ಷಯರೋಗದ ಕಡ್ಡಿಯಾದಳು.' ಎಂದು ಸಾರುತಿದ್ದಳು. ಈ ಮಾತೇ ಗಿಡವಾಗಿ, ಮರವಾಗಿ ಚಂದ್ರಯ್ಯನ ವಿಷಯ ಅಪವಾದಕ್ಕೂ ಕಾರಣವಾಗಿತ್ತು.

ಇಷ್ಟೊಂದು ಸಂತಾಪ ಸಾಲದೆಂಬುದಕ್ಕೆ ಹಿಂದಿನ ಗುರುವಾರದಲ್ಲಿ ಇನ್ನೊಂದು ವಿಚಿತ್ರ ಪ್ರಸಂಗ ನಡೆದಿತ್ತು. ಈಶ್ವರಭಟ್ಟರನ್ನು ಕಾಡಿ ಕಾಡಿ, ನಿರಾಶೆಗೊಂಡು, ಆಲಂಬಾಡಿಯಲ್ಲಿ ಭೂತಕಾಣದೆ ತಾನೊಬ್ಬನೇ ಬೆಳ್ಳಕ್ಕನ ಬೇರನ್ನು ಹರಡುವೆನೆಂದು ಚಂದ್ರಯ್ಯನು ನಿರ್ಧರಿಸಿದ್ದನು. ಆ ಗುರುವಾರ ಹದಿನೆರಡು ಗಂಟೆ ರಾತ್ರಿಗೆ, ಮೂಡಂಬೈಲಿಗಿಳಿಯುವಲ್ಲಿ ಒಂದು ಗೇರುಮರದ ಕೆಳಗೆ ಹೊಂಚು ಹಾಕಿ ಕುಳಿತನು. ಕುಳಿತಲ್ಲೇ ತೂಕಡಿಕೆ ಬಂದಿತು. ಅತ್ತಿತ್ತ ಅಲೆದಾಡುವಷ್ಟು ಸಾಹಸವಿರಲಿಲ್ಲ. ಅಷ್ಟಕ್ಕೆ ತರಗಲೆ ಸದ್ದಾಯಿತು. ಬಳಿಯಲ್ಲೇ ಯಾರೋ, ಸರಿದು ಹೋದಂತೆ ಕಂಡಿತು. ಕಣ್ಣುತೆರೆದು ನೋಡಿದರೆ ಏನೂ ಕಾಣಿಸಲಿಲ್ಲ. ಕೈಯಲ್ಲಿ ಹಿಡಿದಿದ್ದ ಟಾರ್ಚುದೀಪವನ್ನು ಒತ್ತಿದನು. ಬೆಳಕು ಹಾಯಿತು. ಬೆಳಕಿನಲ್ಲಿ ಬಿಳೇ ಸೀರೆಯುಟ್ಟು ನಿಂದ ಒಂದು ವಿಗ್ರಹ ಕಂಡಿತು. ಟಾರ್ಚುದೀಪ ತನ್ನಂತೆ ಆರಿತು. ಕತ್ತಲಲ್ಲೆ ದಿಟ್ಟಿಸಿ ನೋಡಿದನು. 'ಏನೇ ಆಗಲಿ' ಎಂದು ಧೈರ್ಯಮಾಡಿ ಅಲ್ಲಿಯ ತನಕ ಬರ ಬರನೆ ಹೆಜ್ಜೆ ಹಾಕಿ, ಮುಖಕ್ಕೆ ಇನ್ನೊಮ್ಮೆ ಬೆಳಕು ಹಿಡಿದನು.... ನಿಜಕ್ಕೂ ಗ್ರಾಮದ ದೆವ್ವ! ಬೆಳ್ಳಕ್ಕನಲ್ಲ—ಬೆಳ್ಳಮ್ಮ. ಚಂದ್ರಯ್ಯನಿಗೆ ಅಸಹ್ಯವೆನಿಸಿತು. ಅಲ್ಲಿಂದಲೇ ಮರಳಿ ಮನೆಗೆ ಬಂದನು. ಈಶ್ವರಭಟ್ಟರ ತಂದೆಯೂ ಇದೇ ದೆವ್ವವನ್ನು ಕಂಡದ್ದು ಎಂದು ಅವನಿಗೆ ಸಂಶಯ ವಾಯಿತು.

ಬೆಳ್ಳಕ್ಕನಿಗೆ ಚಂದ್ರಯ್ಯನ ಮೇಲೆ ಹಾವು ಮುಂಗುಸಿ ವೈರವೇ ಉಂಟಾಯಿತು.

*

೧೦

# ಹಲವು ಸೆಳೆತಗಳಲ್ಲಿ

ಚಂದ್ರಯ್ಯನು 'ಬೆಳ್ಳಮ್ಮ'ನ ಭೂತವನ್ನು ಕಂಡು ಒಂದು ವಾರವಾಯಿತು. ಪ್ರತಿದಿವಸವು ಅವನು ಈಶ್ವರಭಟ್ಟರ ಮನೆಗೆ ಹೋಗ ಬೇಕೆಂದು ಎಣಿಸುತ್ತಾನೆ. ಆದರೆ ಒಂದು ದಿವಸವೂ ಆಗಲೊಲ್ಲದು. ಅವಕಾಶವಿಲ್ಲವೆಂದಲ್ಲ ಹಾಗೆ ಕೇಳ ಹೋದರೆ ಚಂದ್ರಯ್ಯನಿಗಿದ್ದ ವಿರಾಮ ಮೂಡಂಬೈಲಿನಲ್ಲಿಸವರಿಗಾರಿಗೂ ಇಲ್ಲ. ಆದರೆ ಅವನ ಮನಸ್ಸು ಸ್ವಸ್ಥ ವಾಗಲಿಲ್ಲ. ಭೂತವನ್ನು ಕಾಣುವ ಹಂಬಲ ಎರಡು ಬಾರಿ ನಿರಾಶೆ ಗೊಂಡಿತು. 'ಅದಿಲ್ಲವೆಂದು ಹೇಳುವ ಹಾಗಿಲ್ಲ. ಉಂಟೆನ್ನುವಷ್ಟು ಬಲವಾದ ಆಧಾರಗಳಿಲ್ಲ. ಅದನ್ನು ಭೇಟಿಯಾಗಿ, ಅದೇನೆಂದು ಶೋಧಿ ಸುವೆನೆಂಬ ಹಿಗ್ಗು ವ್ಯರ್ಥವಾಯಿತು. ಭೂತಗಳ ವಿಷಯವಾಗಿ ದೊಡ್ಡ ಗ್ರಂಥವನ್ನು ಬರೆಯುಬೇಕು—ಎಂದಿದ್ದ ಅವನ ಹುರುಪಿಗೆ ಈ ಎರಡು ಪ್ರಸಂಗಗಳು ಕಣ್ಣೀರೆರಚಿದವು. ಭೂತಪ್ರೇತಗಳಿದ್ದು ತನಗೆ ಸಿಕ್ಕಿಲ್ಲ ವಾದರೆ ಚಿಂತೆಯಿಲ್ಲ. ಇಂದಲ್ಲದಿದ್ದರೆ ನಾಳೆ ಕಾಣಸಿಗಬಹುದು. ಬದಲು ಅವುಗಳ ಕಥೆಗಳೆಲ್ಲವೂ ಸುಳ್ಳಾಗಿದ್ದರೆ ಮುಂದೆಯೂ ಅವು ಕಾಣಸಿಗುವ ಸಂಭವವಿಲ್ಲ—ಎಂಬ ದೊಡ್ಡ ನಿರಾಶೆಯು ಅವನನ್ನು ಕಾಡುತಿತ್ತು. ಈ ನಡುವೆ ಅವನ ಮನಸ್ಸಿನ ಆಕಾಶದಲ್ಲಿ ಬೇರೊಂದು ತಾರೆಯು ಆಗಾಗ ಹೊಳೆದು ಮಾಯುವಾಗತೊಡಗಿತು. ಮೊದಲಿಗೆ ಅದರ ಉದಯ ಅಸ್ತಗಳು ಬಹಳವಾಗಿರದಿದ್ದರೂ ಇತ್ತೀಚೆಗೆ ದಿನಕ್ಕೆ ಹತ್ತೆಂಟು ಬಾರಿ ಜಲಜಾಕ್ಷಿಯ ನೆನಪು ಅವನಿಗಾಗುತ್ತಿತ್ತು.

ಅವನು ಅವಳ ರೂಪವನ್ನು ಮೆಚ್ಚಿರಲಿಲ್ಲ. ಅವಿದ್ಯಾವಂತ ಳೆಂಬುದೂ ಗೊತ್ತು. ಹೋದಾಗ ಅವಳನ್ನು ನೋಡಬೇಕೆಂಬ ಆಸೆಯೂ ಆಗಿರಲಿಲ್ಲ. ಆದರೂ ಪಕ್ಕನೆ ಎದುರಿಂದ ಹಾದು ಹೋದ ಹುಡುಗಿಯ ಮುಖಮುದ್ರೆಯು ಮೇಲಿಂದ ಮೇಲೆ ಕಣ್ಮುಂದೆ ನೆಗೆಯತೊಡಗಿತು.

'ಏಕೆ ಹೀಗಾಗುತ್ತದೆ?' ಎಂದು ಅವನಿಗೇನೆ ತಿಳಿಯದು. ಈ ಯೋಚನೆಗಳಿಂದ ಊರಿನ ಯಾರೊಡನೆಯೂ ಸರಸವಾಗಿ ಕಾಲಯಾಪನೆ ಮಾಡಲು ಅವನಿಗೆ ಆಗದೆ ಹೋಯಿತು. ಹಾಗೆಂದು ಒಂದು ದಿವಸ ಮಂಗಳೂರಿಗೆ ಹೋದನು. ಮನೆಯಲ್ಲಿರುವುದು ಅವನ ಮುದಿ ತಾಯಿ ಮಾತ್ರ. ಅವಳೊಡನೆ 'ಅಮ್ಮಾ, ಇನ್ನೊಂದು ಐದಾರು ದಿವಸ ಬರುವುದಿಲ್ಲ' ಎಂದು ಹೇಳಿ ಹೊರಟನು. ಐದಾರು ದಿನಗಳು ಮಂಗಳೂರಲ್ಲಿ ಕಳೆದವು. ಗೆಳೆಯರು, ಬಂದರದ ಸಾಹುಕಾರರು, ಸಿನೇಮಾ—ಎಂದು ಸಮಯ ಹಾಗೂ ಹೀಗೂ ಕಳೆಯುತಿತ್ತು. ಅಲ್ಲೂ ಮನಸ್ಸಿನಿಂದ ಭೂತಪ್ರೇತಗಳು ಮಾಯವಾಗಲಿಲ್ಲ. ಗೆಳೆಯರಿಂದ 'Ghost stories'ಗಳನ್ನು ಎರವಾಗಿ ತಂದು ಓದ ತೊಡಗಿದನು. ಆದರೆ ಜರ್ಮನಿ, ಎರಿಜೋನಾ, ಏನಿಪೆಗ್, ಸ್ಕಾಟಲೆಂಡೆಗಳಲ್ಲಿ ಭೂತಪಿದೆಯೆಂದು ಕಾದಂಬರಿಯನ್ನು ಓದಿದರೆ ಮೂಡಂಬೈಲಿನ ಆಸುಪಾಸಿನಲ್ಲಿ ಅವನ್ನು ಕಾಣಲು ಬಂದೀತೆ? ಆರು ದಿನಗಳಲ್ಲಿ ಮಂಗಳೂರು ಹಳಸಿತು. ಚಂದ್ರಯ್ಯನು ರೈಲುಗಾಡಿ ಹತ್ತಿ ಮಂಜೇಶ್ವರಕ್ಕೆ ಬಂದನು. ಬಂದವನು ಅಣ್ಣಪ್ಪ ಕಮ್ತಿಯವರ ಅಂಗಡಿಗೆ ಹೋಗಿ ಅಲ್ಲಿಷ್ಟು ಹರಟೆ ಕೊಚ್ಚುತ್ತಾ ಕುಳಿತನು. ಕತ್ತಲಾಗಿ ಅವರು ಅಂಗಡಿಯ ಕದವಿಕ್ಕಿದ ಒಳಿಕ ಮೂಡಂಬೈಲಿಗೆ ಹೊರಟನು. ಕೈಯಲ್ಲಿ ಬೆಟರಿ ದೀಪವಿದೆ. ಕತ್ತಲಿನದೇನು ಭೀತಿ?

ಬಯಲಿನ ಸೆರಗು ಬಂದಿತು. ಕಾಲು ತನ್ನಂತೆ ತಟಸ್ಥವಾಯಿತು. ಹೇಗೂ ಕತ್ತಲಿಗೆ ಬಂದಿದ್ದೇನೆ. ನಡುರಾತ್ರಿಯಲ್ಲಿ ಮನೆಗೆ ಹೋಗಿ ತಾಯಿಯನ್ನು ಎಚ್ಚರಮಾಡುವದಕ್ಕಿಂತ ಇಲ್ಲೇ ಕಾದು ಕುಳಿತು ಪ್ರೇತಗಳ ಶೋಧನೆಯನ್ನು ಮಾಡಬಾರದೇ ಎಂದೆನಿಸಿತು. 'ಇದೇನು ವಾರ' ಎಂದು ಯೋಚಿಸಿದನು. ಮಂಗಳೂರಿಗೆ ಹೋದವನಿಗೆ ವಾರ—ತಿಥಿ—ನಕ್ಷತ್ರಗಳೆಲ್ಲ ಮರವೆಯಾಗಿದ್ದವು. 'ವಾರ ನನಗೇಕೆ? ನಾನೇನು ಸರಸಮ್ಮನಿಗೆ ಹರಕೆಹೊರುತ್ತೇನೆಯೋ? ಹರಕೆ ಹೊರುವುದಾದರೆ ಗುರುವಾರ. ನನಗೀಗ ಯಾವ ವಾರವಾದರೂ ಸರಿಯೇ' ಎಂದು ಒಂದು ಕಡೆಯಲ್ಲಿ ಸುಮ್ಮನೆ ಕುಳಿತನು. ಅರ್ಧತಾಸು ಸರಿಯಿತು. ಏನು ಕೇಳಿಸದು.

ಕತ್ತಲಲ್ಲಿ ದೂರದ ಬಸ, ಒಂದೆರಡು ಮರಗಳು ಮಂಜಾಗಿ ಕಾಣುತ್ತಿದ್ದು ವಲ್ಲದೆ ಬೇರೇನು ಇರಲಿಲ್ಲ. ಅಲ್ಲಿಂದೆದ್ದು ಹತ್ತುಮೂರು ಮುಂದುವರಿದು ಇನ್ನೊಂದು ದಿನ್ನೆಯ ಮೇಲೆ ಕುಳಿತನು. ಮನಸ್ಸಿನಲ್ಲಿ ಬೆಳ್ಳಮ್ಮ, ಜಲಜಾಕ್ಷಿಯರ ರೂಪುಗಳು ಆವೃತ್ತಿಯಿಂದ ಹಾಯುವಂತೆ ಕಂಡಿತು. 'ಥೂ ಹಾಳಾಗ–ಮನೆಗೆ ಹೋಗುವ' ಎಂದು ಎಣಿಸಿದನು. ಆಗಲೇ, ದೂರದಲ್ಲಿ ಏನೊ ಗೊಣಗುವ ಸದ್ದು ಕೇಳಿಸಿತು. ಸರಸಮ್ಮನ ಗುಡಿಯಿಂದೆರಡು ಕರಿಯ ಛಾಯೆಗಳು ಅಲೆಯುವಂತೆ ಕಂಡಿತು. ಅವನ ಕಡೆಗೆನೇ ಅವು ಬರುತ್ತಿದ್ದವು. ಅವನು ಅಲ್ಲಿಂದೆದ್ದನು. ಅವಕ್ಕೆ ಹಾದಿ ಬಿಟ್ಟು ಅಲ್ಲೊಂದು ಮರದ ತಾಳಿಗೆ ಒರಗಿ ಮರೆಯಾಗಿ ನಿಂತನು. ಅವುಗಳ ಮಾತು ಸ್ಪಷ್ಟವಾಗುತ್ತ ಬಂದಿತು. ಎರಡು ಹೆಣ್ಣು ಧ್ವನಿಗಳು 'ಇಂದು ಗುರುವಾರವೇ?' ಎಂದು ಏಣಿಕೆ ಹಾಕಿದನು. ಮೂರುನಾಲ್ಕಾವೃತ್ತಿ ಎಣಿಸಿ, ಗುಣಿಸಿ ಗುರುವಾರವೆಂದೇ ತೀರ್ಮಾನಿಸಿದನು. ಮಾತುಗಳು ತೀರ ಕೇಳುವಂತಾಯಿತು.

'ಸರಸಮ್ಮನು ಕಾಯದಿದ್ದರೆ, ಅವಳ ತೀರ್ಥದಲ್ಲಿ ಹಾರಿ ಪ್ರಾಣ ಬಿಡುತ್ತೇನೆ.'

'ನಿಮಗೆ ಹುಚ್ಚು. ಗಂಡನಿಗೆ ಹೆಂಡತಿ ಬೇಡವಾದರೆ, ಹೆಂಡತಿಗೆ ಗಂಡನೇಕೆ?—'

'ತಂದೆಯು ಮನೆಗೆ ಹೋಗುವುದೇ?'

'ಹೋದರೇನು?'

'ಅಯ್ಯೋ–ಅಪ್ಪನ ಎದೆಯೊಡೆದೀತು.'

'ಕೆರೆ-ಗಿರೆ ಹಾರಿಕೊಂಡರೆ?'

'ಅದನ್ನು ನೆನೆದರೆ ಭೀತಿಯಾಗುತ್ತದೆ....

'ನಾನೆನ್ನುವುದಾದರೆ—ನಾನು ನನ್ನಿಷ್ಟದಂತೆ ಸಂಸಾರ ಮಾಡುತ್ತೇನೆ ಎಂದು ಗದರಿಸಿ'

'ನನ್ನಿಷ್ಟದಂತೆ....?'

'ಅವರ ಮುಂದೆಯೇ ಬೇರೆಯುವರನ್ನು ಕರೆಯುತ್ತೇನೆ ಎಂದರೆ–ಹೆದರಿಕೊಂಡಾದರೂ ಬುದ್ಧಿ ತಿಳಿದಾರು?'

'ಅವರಿಗೆ ಬುದ್ಧಿ ಬರುವುದುಂಟೇ? ಕಾಸೇ ದೇವರಾಗಿರುವಾಗ?

'ಮರ್ಯಾದೆ ಹೋಗುತ್ತದೆ ಎಂದರೆ ತನ್ನಂತೆ ಬುದ್ಧಿಬರುತ್ತದೆ.'

ಅಂತೂ ಯಾವ ನಿರ್ಧಾರವೂ ಅಲ್ಲಿ ಆಗಲಿಲ್ಲ. ಅವರು ಚಂದ್ರಯ್ಯನು ಅಡಗಿದ ಸ್ಥಳದ ಬಳಿಯಿಂದಲೇ ಮುಂದೆ ಸರಿದರು. ಒಬ್ಬಳು ಚಿಕ್ಕ ವಯಸ್ಸಿನ ಹೆಂಗಸು. ಇನ್ನೊಬ್ಬಳು ಹಿರಿಯಳು. ಇಬ್ಬರೂ ಕಪ್ಪುಬಟ್ಟೆ ತೊಟ್ಟಿದ್ದರು. ಮಾತನ್ನು ಕೇಳಿದವರಿಗೆ ಅದು ಭೂತ ಪ್ರೇತಗಳ ಬಳಗ ವಲ್ಲವೆಂದು ಸ್ಪಷ್ಟವಾದೀತು. ಚಂದ್ರಯ್ಯನ ಆತುರವು ಹೆಚ್ಚಾಯಿತು. ಅವರು ಯಾರೆಂದು ನೋಡಲು ಬೆಳ್ಳಮ್ಮನ ಮೋರೆಗೆ 'ಟಾರ್ಚು' ಹಿಡಿದಂತೆ ಈಗಲೂ ಹಿಡಿಯಲೇ ಎಂದು ಯೋಚಿಸಿದನು. ತನ್ನ ಕೃತಿಯ ಅರ್ಥ ತಾನೇ ತಿಳಿಯದವನಂತೆ ಮರೆಯಿಂದೀಚೆ ಸರಿದು ಅವರನ್ನು ಎರಡು ಹೆಜ್ಜೆ ಹಿಂಬಾಲಿಸಿ 'ಯಾರು. ನಿಲ್ಲಿ....' ಎಂದು ಬೆಳಕನ್ನು ಅವರ ಮೋರೆಗೆ ಹಾಯಿಸಿದನು. ಅವರಿಬ್ಬರ ಎದೆ ಧಸಕ್ಕೆಂದಿತು. ಅಯ್ಯೋ ಎಂದು ತಿರುಗಿ ನಿಂದರು. ಮೋರೆಯ ಮೇಲೆ 'ಬೆಟರಿ' ಬೆಳಕು ಬಿದ್ದಿತು. ಮುಖ ಕಂದಿದ ಯೌವನದ ಮೋರೆಯೊಂದು; ಇನ್ನೊಂದು ಮುವತ್ತು ನಾಲ್ವತ್ತು ವಯಸ್ಸಿನ ಜಡಜೀವನದ ಮುಖ. ಅವರಿಬ್ಬರ ಬಾಯಿಂದಲೂ ಉಸಿರು ಹೊರಡಲಿಲ್ಲ. ಚಂದ್ರಯ್ಯನು ಮೋರೆಯನ್ನು ನೋಡಿ 'ಅಮ್ಮ, ಯಾರಿಲ್ಲ ಹೋಗಿ. ನಾನು ಚಂದ್ರಯ್ಯ.. ತಪ್ಪಾಯಿತು.. ಯಾರೆಂದು ತಿಳಿಯದೆ'—ಎಂದು ಮಾತು ನಿಲ್ಲಿಸಿದನು. 'ಮಂಜೇಶ್ವರ ಅಲ್ಲವೇ..?' ಎಂದೂ ಕೇಳಿದನು. ಅಲ್ಲೆಲ್ಲೋ ನೋಡಿದ ನೆನಪು. ಬಂದ ಉದ್ದೇಶವು ತಿಳಿಯಿತು. ತಾನು ಅವರನ್ನು ತಡೆದುದು ತಪ್ಪೆಂದು ತೋರಿತು. 'ತಪ್ಪಾಯ್ತು, ಹೋಗಿ' ಎಂದು ಇನ್ನೊಮ್ಮೆ ಬಿನ್ನವಿಸಿದನು.

ಅವರಿಗೆ ಕದಲುವ ಸಾಹಸ ಇನ್ನೂ ಉಂಟಾಗಲಿಲ್ಲ. ಕಿರಿಯಳು ಸುನಾಲಿನಿ. ಅವಳೇ ಧೈರ್ಯಮಾಡಿ—'ಯಾರು ನೀವು?' ಎಂದು ಕೇಳಿದಳು.

ಚಂದ್ರಯ್ಯನು 'ನಾನಮ್ಮ ಮೂಡುಬೈಲು ಚಂದ್ರಯ್ಯ. ಪೇಟೆಯಿಂದ ಮನೆಗೆ ಹೋಗುತ್ತಿದ್ದೆ. ಅಣ್ಣಪ್ಪಯ್ಯನ ಅಂಗಡಿಯಲ್ಲಿ ಮಾತನಾಡುತ್ತ ಕುಳಿತು ಹೊತ್ತಾಯಿತು....ತಡವಾಗಿ ಬರುತ್ತಿದ್ದೆ.... ದೂರದ ನಿಮ್ಮ ಛಾಯೆಯನ್ನು ನೋಡಿ ಮರೆಯಾದೆ....ಇಲ್ಲ, ತಾವು ಹೋಗಿ....' ಎಂದನು.

ಸುನಾಲಿನಿಯು ಗೆಳತಿಯನ್ನು ಕುರಿತು 'ಹೂಂ, ನಾಳೆ ಊರಲ್ಲೆಲ್ಲಾ ಸುದ್ದಿಯಾಗುತ್ತದೆ. ಅಯ್ಯೋ ದೇವರೇ' ಎಂದಳು. ಚಂದ್ರಯ್ಯನಿಗೆ ನಿಜಕ್ಕೂ ವ್ಯಥೆಯಾಯಿತು. 'ಇಲ್ಲಮ್ಮ—ನಾನು ಯಾರಿಗೂ ಹೇಳುವವನಲ್ಲ. ನೀವು ಯಾರೆಂದು ನನಗೆ ತಿಳಿಯದು. ಪೇಟೆಯವರೆಂದು ಕಂಡೊಡನೆ ತಿಳಿಯಿತಷ್ಟೆ. ನನಗ್ಯಾಕೆ ನಿಮ್ಮ ತಂಟೆ?' ಎಂದು ಸಮಾಧಾನಪಡಿಸಿದನು.

ಸುನಾಲಿನಿಯು ಗೆಳತಿಯ ಜತೆಯಲ್ಲಿ ಕಣ್ಮರೆಯಾದಳು. ಜತೆಯವಳು ಅವಳ ಮನೆಯ ಕೆಲಸದ ಹೆಂಗಸು ಲಚ್ಮಿ. ಸುನಾಲಿನಿಯ ದುಃಖಕೆಲ್ಲಾ ಅವಳು ಪಾಲುಗಾರ್ತಿ. ಲಚ್ಮಿಯ ಉಪದೇಶದಿಂದ ಸರಸಮ್ಮನ ಗುಡಿಗೆ ಯಾತ್ರೆ ಬೆಳಸಿದುದು. ಅಷ್ಟನ್ನು ಸಾಧ್ಯಮಾಡಲು ಅವಳೂ ಸುನಾಲಿನಿಯೂ ಸೇರಿ ನೂರು ಸುಳ್ಳುಗಳನ್ನು ಹಣೆದು ನೆಪ ಹುಡುಕಬೇಕಾಗಿತ್ತು. ಈಗ ಅದೆಲ್ಲಾ ವ್ಯರ್ಥವಾಯಿತೆಂಬ ಚಿಂತೆಯಿಂದ ಅವರು ಮರಳಿದರು. ಸುನಾಲಿನಿ ಲಚ್ಮಿಯ ಮನೆಯಲ್ಲಿ ಒಂದು 'ಧಾರೆ' ಇದೆ ಎಂದು ಅತ್ತೆಗೆ ನಂಬಿಕೆ ಹುಟ್ಟಿಸಿ, ಬಂದಿದ್ದಳು. ಈ ಬಾರಿ ಅವಳು ಹರಕೆ ಹೊತ್ತುದನ್ನು ಯಾರಾದರೂ ಕಂಡರೆ, ಮುಂದಿನ ವಾರದಲ್ಲಿ ತಿರುಗಿ ಗುಡಿಗೆ ಬರಲು ಯಾವ ನೆಪವನ್ನು ಹೇಳಬೇಕು?

ಸುನಾಲಿನಿಯ ಪಾಡು ಸುನಾಲಿನಿಗೆ—ಚಂದ್ರಯ್ಯನ ಪಾಡು ಚಂದ್ರಯ್ಯನಿಗೆ ಎನ್ನಲು ಬಂದೀತೇ? ತಾನೇನೊ ಅನ್ಯಾಯ ಮಾಡಿದೆನಲ್ಲಾ ಎಂದು ಅವನ ಮನಸ್ಸು ತಪಿಸುತ್ತಿತ್ತು. ಮನೆಗೆ ಹೋಗೋಣ ಎಂದು ಯೋಚಿಸಿ ಆ ಹಾದಿ ಹಿಡಿದನು. ಅಂಥ ಸ್ಥಿತಿಯಲ್ಲಿ ಮನಸ್ಸಿಗೆ ಹೋಗುವುದಕ್ಕೂ ಸಮಾಧಾನ ದೊರೆಯಲಿಲ್ಲ. ಹಾಗೆಂದು ಸರಸಮ್ಮನ

ಗುಡಿಯನ್ನೇ ಸೇರಿದನು. ಗುಡಿಯಲ್ಲಿ ಸುನಾಲಿನಿಯು ಉರಿಸಿಹೋದ ದೀಪವು ಮಿಣಮಿಣನೆ ಉರಿಯುತಿತ್ತು. ಅಲ್ಲಿ ನಿಲ್ಲಲು ಧೈರ್ಯವಾಗದೆ ಎದುರಿನ ಕೆರೆದಂಡೆಗೆ ಬಂದನು. ಅಲ್ಲೇ ನಿಂತನು. ಕಾಲು ಸೋಲುವ ತನಕ ನಿಂತು ಕೊನೆಗೆ ದಂಡೆಯ ಮೇಲೆ ಕುಳಿತನು. ಕಣ್ಣು ಬಾಡಿತು. ಮನಸ್ಸಿನಲ್ಲಿ ನೂರಾರು ಚಿತ್ರಗಳು ಮೂಡಿದವು. ಈ ಬಾರಿ ಹಳೆಯ ಚಿತ್ರವೊಂದೂ ಅಲ್ಲ. ಬೆಳ್ಳಮ್ಮ–ಜಲಜಾಕ್ಷಿ–ಸುನಾಲಿನಿ–ಯಾರೂ ಅಂಕುರಿಸಲಿಲ್ಲ. ಬೇರೆ ಬೇರೆ ಬಣ್ಣಗಳು ಕುಣಿದಾಡಿದವು. ಕೊನೆಗೆ ಆ ಬಣ್ಣಗಳೆಲ್ಲಾ ಬೆರತಂತೆ ಕಂಡಿತು. ಎಲ್ಲಾ ಸೇರಿ ಹಾಲಿನಂತೆ ಬೆಳ್ಳಗಾಯಿತು. ಆದರಿಂದಲೇ ಒಂದು ಹೊಸ ರೂಪ ಉದ್ಭವಿಸಿತು. ಬಿಳಿಯ ಸೀರೆಯನ್ನುಟ್ಟ ಸ್ತ್ರೀರೂಪ, ಬಣ್ಣಿಸಲಸದಳವಾದ ಚೆಲವು. ಅಲಂಕಾರ ವಿಲ್ಲ. ಸಹಜರೂಪ. ಬಿಡಿಸಿದ ತಲೆಗೂದಲೇ ಆಭರಣಗಳು. ಕೊರಳ ಮೇಲೆ ತಂಗಾಳಿ ಆ ತಲೆಗೂದಲನ್ನು ಗಿಡುಗನ ತೇಲಾಟದಂತೆ ತೇಲಿಸುತಿತ್ತು. ಆ ರೂಪು, ನಿಂತುಕೊಂಡು ಚಂದ್ರಯ್ಯನನ್ನು ಬೊಗಸೆಗಣ್ಣುಗಳಿಂದ ನೋಡುತಿತ್ತು. ಬಾಯಾರಿದ ಅರಬನ ಒಂಟೆ ಜಲಾಶಯವನ್ನೇ ಬರಿದು ಮಾಡುವ ಆತುರದಿಂದ ಬಾಯ್ದೆರೆವಂತೆ ಕಣ್ಣುಗಳಲ್ಲಿ ಅತೃಪ್ತ ಆಸೆಯೊಂದು ಉರಿಯುತಿತ್ತು.

ಬಲುಹೊತ್ತಿನ ತನಕ ಅದೇ ಮೂರ್ತಿಯು ಕದಲದೆ ನಿಂತಿತು. ಚಂದ್ರಯ್ಯನು ಕದಲದೆ ಕುಳಿತಿದ್ದನು. ನಿದ್ರೆ ಒಡೆದಂತೆ 'ಹಂ–ಎಂದು ಕಣ್ಣು ತೆರೆದನು' ಅದೇ ರೂಪು ಕೆರೆಯ ಆಚಿನ ದಡದಲ್ಲಿ ಅಲುಗದೆ ನಿಂತುದು ಕಂಡಿತು. ಚಂದ್ರಯ್ಯನು ಗಾಬರಿಯಿಂದ ಎದ್ದು ನಿಂತನು. 'ನಗುತ್ತಿದ್ದಾಳೆ'—ಎಂದು ಚಂದ್ರಯ್ಯನ ಕಲ್ಪನೆ. ಚಂದ್ರಯ್ಯನಿಗೆ ತಾನು ಬಂದುದು, ಅಲ್ಲಿ ನಿಂತುದು, ಎಲ್ಲವು ನೆನಪಾದವು. ತಿರುತಿರುಗಿ ಮಂಜೇಶ್ವರದಿಂದ ಅಲ್ಲಿಗೆ ಬಂದ ಪಯಣವನ್ನು ಸ್ಮರಿಸಿಕೊಂಡನು. ತಾನು ಸ್ವಪ್ನದಲಿಲ್ಲೆಂಬುದನ್ನು ಸ್ಪಷ್ಟಗೊಳಿಸಿಕೊಂಡನು. ಆದರೂ ಆ ಲಾವಣ್ಯದ ಗೊಂಬೆ ಎದುರಿಗೇನೆ ನಿಂತಿತ್ತು. ಚಂದ್ರಯ್ಯನ ತುಟಿಗಳು ನಗುವಿನಿಂದ ಕೊಂಕಿದವು. ಹೊಗೆಯಂತೆ ಆಕೆಯ ಮೈಮೇಲಿನ

ತೆರೆಯು ಕಳಚಿತು. ಪುತ್ಥಲಿ ಶರೀರ....ಬರೀ ಬತ್ತಲೆ ರೂಪು ಮಾತ್ರ ಕಾಣಿಸಿತು......'ಬೆಳ್ಳಕ್ಕನೊ?' ಎನ್ನುವಷ್ಟರಲ್ಲಿ ನೀರಿಗೆ ಹಾರಿದ ಸದ್ದಾಯಿತು. ಕಾಲುತಾಸಿನ ತನಕ ನೀರಿಂದ ಯಾರೂ ಏಳಲಿಲ್ಲ,

'ಛೀ—ಇದು ಕನಸು' ಎಂದು ಎಣಿಸಿ ಚಂದ್ರಯ್ಯನು ಮನೆಯ ಹಾದಿಯನ್ನು ಹಿಡಿದನು. ಆಗ ಬೆಳಗಿನ ಜಾವವಾಗಿದ್ದಿರಬೇಕು. ಕಾರಣ ಬೆಳಕು ಮೊದಲಿಗಿಂತ ಹೆಚ್ಚಿತ್ತು. ಅವನು ಈಗ ಬೀಸಬೀಸನೆ ಹೆಜ್ಜೆ ಹಾಕಿದನು. ಹತ್ತುಮಾರು ಪೂರ್ತಿ ನಡೆಯಲಿಲ್ಲ. ಅವನ ಮುಂದೆಯೇ ಶ್ವೇತಾಂಬರಧಾರಿಯಾದ ಕನ್ನೆ ಕುಣಿಕುಣಿದು ಸರಿಯುತ್ತಿದ್ದಳು. ಈಗ ಅವಳು ದಿಗಂಬರೆಯಲ್ಲ. ಚಂದ್ರಯ್ಯನ ಕಾಲುಗಳು ನಿಂತರೆ ಆಕೆ ನಿಲ್ಲುವಳು. ಅವನು ಹೆಜ್ಜೆಯಿಟ್ಟರೆ ಅವಳೂ ಮುಂದುವರಿಯುವಳು.

ಚಂದ್ರಯ್ಯನ ಮೈಯಿಂದ ಬೆವರು ಚಳಿಗಾಲದ ಮಂಜಿನಂತೆ ಪಟ ಪಟನೆ ಉದುರತೊಡಗಿತು. ಇದು ಬೆಳ್ಳಕ್ಕನ ರೂಪು ಎಂಬುದು ಅವನಿಗೆ ನಿಶ್ಚಯವಾಗುತ್ತ ಬಂತು. ಅವನ ಅನ್ವೇಷಣ ಬುದ್ಧಿ, ಉತ್ಸಾಹಗಳೆಲ್ಲವೂ ಮಾಯವಾಗಿ ಬರಿಯ ಭೀತಿ ಮಾತ್ರ ಎದೆಯನ್ನು ಕುಲುಕುತಿತ್ತು. ಅವನೀಗ ನಡೆಯುವ ಬದಲು ಶರೀರವನ್ನು ಎಳೆದುಕೊಂಡು ಬಯಲಿನ ಸೆರಗನ್ನು ದಾಟಿದನು. ಬಯಲು ಕಳೆಯಿತು; ರೂಪು ಮಾಯವಾಯಿತು, ಚಂದ್ರಯ್ಯನು ನೇರಾಗಿ ಮನೆಗೆ ಹೋದವನು ಯಾರನ್ನು ಎಚ್ಚರಿಸದೆ ಮನೆಯ ಹೊರಜಗಲಿಯಲ್ಲಿ ಮಲಗಿದನು. ನಿದ್ರೆ ಅವನನ್ನು ತನ್ನ ಸೀಮೆಗೆ ಅರೆಕ್ಷಣದಲ್ಲಿ ಸಾಗಿಸಿತು.

———

## ೧೧

# ಹಿರಣ್ಯನ ಹಟಸಾಧನೆ

ಹಿರಣ್ಯನ ಅನಿಶ್ಚಿತ ಮನಸ್ಸು ಯಾವುದೊಂದು ಗುರಿಯನ್ನೂ ಕಾಣದೆ ಹತ್ತು ದಿವಸಗಳು ಸಂದವು. ಅವನು ಸರಸಮ್ಮನಿಗೆ ಹರಕೆ ಸಲಿಸಿದ ಮರುದಿನವೇ ಗುಡಿಯ ಕೆರೆಯನ್ನು ಕಾಣಹೋದನು. ಕೆರೆಯಲ್ಲಿ ತೆಂಗಿನಕಾಯಿ ಕಾಣಿಸಲಿಲ್ಲ. ತನ್ನಾಸೆ ಕೈಗೂಡುವುದೆಂದು ಆದರಿಂದ ನಿರ್ಧರಿಸಿದನು. ಆದರೂ ಭಾಗೀರಥಿಯನ್ನು ಕಾಣಹೋಗುವ ಸಾಹಸವು ಅವನಿಗೆ ಬರಲಾರದು. ತಾಯಿಗಾದರೂ ತಿಳಿಸದೆ ಹೊರಡುವುದೇ? ಭಾಗೀರಥಿಯನ್ನು ಪಡೆದು ಮನೆಗೆ ಬರುವಂತಿಲ್ಲ. ಪಡೆಯದೆ ಮನಸ್ಸಿಗೆ ನೆಮ್ಮದಿಯಿಲ್ಲ. ಇತ್ತ ತಂದೆಯು ದಿನಕ್ಕೊಂದು ಸಂಬಂಧವನ್ನು ಕುರಿತು ಪ್ರಸ್ತಾಪಿಸಿ, ಜಾತಕಗಳನ್ನು ಹೊಂದಿಸಲೆತ್ನಿಸುತ್ತಾನೆ. ತಂದೆಯೊಡನೆ ಧೈರ್ಯವಾಗಿ ಮಾತಾಡುವ ಸಹಾಸವನ್ನು ಬೆಳೆಯಿಸಿಕೊಂಡೇ ಬರಲಿಲ್ಲ. ಅಂಥಾ ಸ್ಥಿತಿಯಲ್ಲಿ ಒಂದು ದಿನ ವೆಂಕಟರಮಣಯ್ಯನಿಂದಾಗಿ ಮಾತು ಬಯಲಾಯಿತು. ಅವರು ಹೊಸತೊಂದು ನೆಂಟಸ್ತಿಕೆಯನ್ನು ನಿಶ್ಚಯಿಸಿಯೇ ಬಂದರು. ಮಗನಿಗೆ ತಿಳಿಸುವುದಷ್ಟೇ ಉಳಿದಿದೆ. ಸಂಬಂಧ ದೊಡ್ಡವರ ಮನೆಯದು.

ಆ ದಿನ ಮನೆಗೆ ಬಂದವರೇ 'ಕೂಸೇ' ಎಂದು ಹೆಂಡತಿಯನ್ನು ಕರೆದರು. ಕೂಸು ಬಂದಿತು! 'ನೋಡು ಹಿರಣ್ಯನಿಗೆ ಗೊತ್ತುಮಾಡಿ ಬಂದೆ—ಸಾವಿರ ರೂಪಾಯಿಯ ಚಿನ್ನ..ಮೈಮೇಲೆ ಹೊರಿಸಿ ಕಳುಹಿಸುತ್ತಾರೆ. ಉಪ್ಪಿನಂಗಡಿಯಿಂದ ಏನು ಎರಡು ಮೈಲು ಆಗುತ್ತದೆಯೋ ಮೂರು ಮೈಲು ಆಗುತ್ತದೆಯೋ—ಇವರು ಇಲ್ಲವೆ—ನಿಡುಬೈಲು ಚಂದ್ರಶೇಖರಯ್ಯನವರ ಮಗಳು. ಹುಡುಗಿಯೆನ್ನುತ್ತೀಯಾ?..ರತಿ..ರತಿ. ಇನ್ನು ಅಂಥಾ ಸಂಬಂಧವಿಲ್ಲ. ಮಗನಿಗೆ ಹೇಳಿ ಬಿಡು...' ಎಂದರು.

'ನೀವೇ ಹೇಳಿಯಪ್ಪ. ಹಿರಣ್ಯ ಯಾಕೋ ಅಷ್ಟು ಸಹ ಸರಿ ಊಟ

ಮಾಡುವುದಿಲ್ಲ. ಏನು ಎಂದು ಕೇಳಿದರೆ ಮಾತನಾಡುವುದಿಲ್ಲ. ನೀವೇ ಅವನನ್ನು ಮಾತನಾಡಿಸಿರಿ.'

'ಈ ಹುಡುಗಿಯನ್ನು ಕಂಡರೆ. ಮೂರುಪಾವಕ್ಕಿಯ ಊಟ ಮಾಡಿಯಾನು. ಏನೆನ್ನುತ್ತಿ ?......ಅಂಥಾ ಬೆಳ್ಳಂ ಬೆಳ್ಳಗೆ..ಇನ್ನು ಮುಖಲಕ್ಷಣವೇ' ಹೀಗೆಂದು ಹಿರಣ್ಯನನ್ನು ಕರೆದರು.

ಹಿರಣ್ಯನೆದ್ದು ಒಳಗಿಂದ ಬಂದನು. ಈಗ ಯಾವಾಗಲೂ ಅವನು ಅರೆಮರುಳನಂತೆ ಕಾಣುತ್ತಾನೆ. ಅವನ ಬಾಡಿದ ಮುಖವನ್ನು ಕಂಡು ತಂದೆಯು 'ಏನು ನಿದ್ರೆಯಿಲ್ಲವೆ ? ಹೊಟ್ಟೆ ಸರಿಯಿಲ್ಲವೆ ? ಹೊಟ್ಟೆ ಸರಿ ಇಲ್ಲವಾದರೆ ಒಂದು ಸಾಸಿವೆಯಷ್ಟು—ಇಡಿಬೇಡ—ಜಾಪಾಳ ಮಾತ್ರೆ ಯನ್ನು ತೆಯ್ದು ತೆಗೆದುಕೊ, ಜಾಸ್ತಿ ತೆಗೆದುಕೊಂಡರೆ ಪೂರ್ವಾಷಾಢ ಶುರುವಾದೀತು....ನಾನು ಕರೆದುದು ಮತ್ತೇಕಲ್ಲ—ನಿನಗೆ ನಿಡುಬೈಲು ಚಂದ್ರಶೇಖರಯ್ಯನ ಗುರುತಿಲ್ಲವೇ ?'

'ಯಾರು ಚಂದ್ರಶೇಖರಯ್ಯ ?..'

'ಯಾಕೆ ಬೆಪ್ಪನ ಹಾಗೆ ಮಾಡುತ್ತಿ ? ಆ ದಿವಸ ವಕೀಲ ಅಚ್ಯುತ ಭಟ್ಟರಲ್ಲಿಗೆ ಹೋದಾಗ, ಕುಳಿತಿದ್ದರಲ್ಲ ಜರಿಶಾಲು ಹೊದ್ದುಕೊಂಡು. ಮೂರುಸಾವಿರ ರೂಪಾಯಿ ಸರಕಾರಕೆ ಹಣ (ಕಂದಾಯ) ಕೊಡು ತ್ತಾರೆ. ಅವರ ಮಗಳನ್ನೇ ಗೊತ್ತುಮಾಡಿದ್ದೇನೆ. ಹುಡುಗಿಯನ್ನು ಬೇಕಾದರೆ ನೀನೇ ಪಾಯುಸು (pass) ಮಾಡಿ ಬಾ. ರೂಪವೂ ಹಾಗಿದೆ. ಸಾವಿರ ರೂಪಾಯಿ ಚಿನ್ನವನ್ನು ಹಾಕುತ್ತಾರೆ. ಅಲ್ಲದೆ ಮರ್ಯಾದಸ್ತರ ಕುಟುಂಬ. ಈ ಹುಡುಗಿಯ ಮುಂದೆ ಆ ಭಾಗೀರಥಿಯನ್ನು ಒಲೆಗೆ ಹಾಕಬೇಕು.'

'ಹೌದು ಮಗು, ನಿಶ್ಚಯಮಾಡಿದ್ದಾರಂತೆ. ಸುಮ್ಮನೆ ಮದುವೆ ಇಲ್ಲದೆ ಎಷ್ಟು ದಿನ ಇರುತ್ತೀಯಾ ? ಅವಳಂತು ಅಡ್ಡಹಾದಿ ಹಿಡಿದಳು—' ಎಂದು ತಾಯಿ ಹೇಳಿದಳು. ಹಿರಣ್ಯಗೆ ಎಲ್ಲ ಟೀಕೆಗಳ ಅರ್ಥವು ಸ್ಪಷ್ಟ ವಾಯಿತು. ಮೌನವಾಗಿ ಕುಳಿತರೆ ಅದೇ ಸಮ್ಮತಿಯೆಂದು ತಿಳಿಯುವ

ಮನೆ. ಮಾತನಾಡದೆ ಮಾರ್ಗವಿಲ್ಲ. ಹೇಗೋ ಧೈರ್ಯವನ್ನು ತಂದು ಕೊಂಡು 'ಅಪ್ಪಾ ನನಗೋಸ್ಕರ ಯಾವ ಸಂಬಂಧವೂ ಬೇಡ. ನಾನು ಬೇರೆ ಮದುವೆಯಾಗುವುದಿಲ್ಲ' ಎಂದು ಹೇಳಿ ನೇರಾಗಿ ಒಳಗೆ ಹೋಗಿ ಬಿಟ್ಟನು.

ತಾಯಿ ತಂದೆಯರಿಬ್ಬರೂ ತಬ್ಬಿಬ್ಬಾದರು. ವೆಂಕಟರಮಣಯ್ಯಗೆ ರೇಗಿಹೋಯಿತು. ಮಗನ ಪ್ರತ್ಯುತ್ತರವೆಂದರೆ ತಾನು ಕಟ್ಟಿದ ಅರಮನೆ ಯನ್ನು ಕಿತ್ತೆಸೆಯುವುದೆಂದೇ ಲೆಕ್ಕ. ನಿಡುಬೈಲಿನವರೊಡನೆ ಕೊಟ್ಟ ಮಾತಿಗೆ ಬದಲಾಡುವುದೇ? ಅಥವಾ ಅದಕ್ಕೂ ಮಿಗಿಲಾದ ಸಂಬಂಧ ಬೇರೊಂದು ದೊರೆತೀತೇ? ಆದರೂ ಇರಲಿ— 'ಬೇರೆ ಮದುವೆಯಾಗ ಲಾರೆ' ಎಂಬುದರ ಅರ್ಥವೇನು? ಹೀಗೆಂದು ಬಲುಹೊತ್ತು ಯೋಚಿಸಿ ಕುಳಿತರು. ಕೊನೆಗೆ 'ಕೂಸೇ ಎಂದು ಕರೆದರು. ಆಕೆ ಅಲ್ಲೇ ಪಕ್ಕದಲ್ಲಿ ಕುಳಿತಿದ್ದಳು. ಕೂಸೆ ಎಂಬುದನ್ನು ಕೇಳಿ 'ಆಂ' ಎಂದು ಉತ್ತರವಿತ್ತಳು.

'ಅವನಂದದ್ದೇನು? ನಿನಗೇನಾದರೂ ತಿಳಿದಿದೆಯೇ? ಬೇರೆ ಮದುವೆಯಾಗುವುದಿಲ್ಲ, ಎಂದರೆ ಭಾಗೀರಥಿಯನ್ನು ಬಾಳಿಸುತ್ತೇನೆ ಎಂಬ ಛಲವೇ ಅವನದು?'

'ನನಗೊಂದೂ ತಿಳಿಯದು. ಮಾಣಿ ಒಂದು ದಿವಸವಾದರೂ ಹೊಟ್ಟೆತುಂಬಾ ಉಂಡುದನ್ನು ಮಾತ್ರ ನಾನು ಕಾಣೆ. ಮನೆತುಂಬಿಸ ಲಿಕ್ಕೆ ಬಂದಾಗ ನೀವಂದಿರಲ್ಲ ಒಂದು ದಿವಸ—ಅವರಿಬ್ಬರು ಮಾತನಾಡು ತ್ತಿದ್ದುದಕ್ಕೆ. ಅಂದಿನಿಂದ ನನಗೇಕೊ ಅವನ ಮನಸ್ಸಿನ ನೆಲೆಯೇ ಸಿಗಲೊಲ್ಲದು'

'ನೀನೊಬ್ಬಳು ಹುಚ್ಚಿ, ಅವನಿಗೆ ಆ ಮಾತೆಲ್ಲಿ ನೆನಪಿದೆ ಎನ್ನುತ್ತೀಯಾ?'

'ನಿಮಗಿರಲಿಕ್ಕಿಲ್ಲ, ಅವನಿಗೆ ಭಾಗೀರಥಿ ಮನೆಗೆ ಬಂದದ್ದು ಎಂದರೆ ಹೊಟ್ಟೆ ತುಂಬಿದ ಹಾಗಿತ್ತು.'

'ಅದು ಸರಿ. ಆದರೆ ಈಗಲೇನಂತೆ? ಅವಳು ಗಂಡನ ಮನೆಗೆ

ಬರುವುದಿಲ್ಲ ಎಂದ ಮೇಲೆ. ಅಲ್ಲದೆ ಊರಲ್ಲಿ ಹುಟ್ಟಿದ ಸುದ್ದಿ ಪುಕಾರು ಗಳೆಲ್ಲ ಸುಳ್ಳೆನ್ನುತ್ತೀಯಾ? ಯಾರಾರ ಹಿಂದೆ ಅವಳು ತಿರುಗುತಿದ್ದಾಳಂತೆ. ಅಂಥವಳನ್ನು ತಂದು ಬಾಳ್ವೆಮಾಡುವ ಯೋಚನೆಯೇ..'

ವೆಂಕಟರಮಣಯ್ಯನ ವಿಚಾರಸರಣಿಯು ಮುಂದುವರಿದು, ಮುಂದುವರಿದು ಹಾದಿಗಾಣದೆ ತಟಸ್ಥವಾಯಿತು. ಸಂಬಂಧ, ಹಿರಣ್ಯ, ಭಾಗೀರಥಿ ಇವೆಲ್ಲಾ ಮರವೆಯಾಗಿ ತನ್ನ ಮಾತು, ಪ್ರತಿಷ್ಠೆಗಳ ಕಡೆಗೆ ಹರಿಯಿತು. ಉಗಿಯನ್ನು ತುಂಬಿಸಿಕೊಂಡು ಒಮ್ಮೆಗೆ ಸ್ಫೋಟವಾಗುವ ಜ್ವಾಲಾಮುಖಿಯಂತೆ 'ಮಾಣಿ.... ಹಿರಣ್ಯ' ಎಂದು ಕರೆದರು. ಮಾತಿನ ಆ ತೀವ್ರತೆ, ಆವೇಗವನ್ನು ಕಂಡು ಅವರ ಮಡದಿಯು ಅಂಜಿದಳು. 'ಬೇಡ, ಈಗ ಬೇಡ. ಸಂಜೆ ನಾನು ಮಾತನಾಡಿಸಿ ನೋಡು ತ್ತೇನೆ' ಎಂದಳು.

'ನನ್ನನ್ನು ಕೇಳದವನು ನಿನ್ನನ್ನು ಕೇಳುತ್ತಾನಂತೇನು.. ಹಿರಣ್ಯ ..ನೋಡು ಇಷ್ಟರಲ್ಲಿ ಅವನ ಕಿವಿ ಕಿವುಡಾಯಿತೇ?' ಎಂದು ಗದರಿಸಿದರು. ತಂದೆಯ ಕರೆಯನ್ನು ಅಲಕ್ಷಿಸಿದರೆ ಹಿರಣ್ಯನ ಪಾಡು ನೆಟ್ಟಗಾಗದೆಂದು ಅವಳಿಗೆ ತಿಳಿದುದರಿಂದ ಅವಳು ಅವಸರದಿಂದ ಒಳಕ್ಕೆ ಹೋಗಳು, ಮಗನನ್ನು ಸಮಾಧಾನಪಡಿಸಿ ಕರೆತರುವೆನೆಂದು.

'ಏನು, ಅವನು ಬರುವುದಿಲ್ಲವಂತೇನು?'

ಅವರ ಹೆಂಡತಿಯು ಮಗನನ್ನು ಒಳಗೆ ಕಾಣದೆ ಇಲ್ಲಲ್ಲ—ಹಿತ್ತಲಿಗೆ ಹೋದನೇನೊ—ಕರೆದು ತರುತ್ತೇನೆ; ನೀವು ಸುಮ್ಮನೆ ಬುಸುಗುಟ್ಟ ಬೇಡಿ' ಎಂದಳು.

'ಬುಸುಗುಟ್ಟುವುದಲ್ಲ; ಅವನು ತನ್ನ ಹಟವನ್ನು ಗಟ್ಟಿಮಾಡಿದರೆ ಅದಕ್ಕೂ ಹೆಚ್ಚಿನ ಬುದ್ಧಿ ಕಲಿಸುತ್ತೇನೆ. ನನಗೆ ಇವನೊಬ್ಬನೇ ಮಗನಲ್ಲ. ಇನ್ನೆರಡು ಮಕ್ಕಳಿದ್ದಾವೆ. ಲಕ್ಷ್ಮೀನಾರಾಯಣನಿಗೆ ತರುತ್ತೇನೆ ಆ ಹುಡುಗಿಯನ್ನು. ಮೊದಲನೇಯ ಸಂಬಂಧವೆಂದರೆ ಚಂದ್ರಶೇಖರಯ್ಯ ನೆಗೆದು ಕುಣಿದಾರು. ಆ ಮೇಲೆ ಇವನ ಕೈಗೆ ಭಿಕ್ಷಾಪಾತ್ರೆಯೇ ಸರಿ. ನನ್ನ ಮಾತನ್ನು ಕೇಳದವರು ನನ್ನ ಅನ್ನದ ಋಣಕ್ಕೆ ಬೀಳಬಾರದು.'

ವೆಂಕಟರಮಣಯ್ಯನ ಆರ್ಭಟೆ ಒಂದೇ ಸವನೆ ಮುಂದುವರಿಯು ತಿತ್ತು. ಆದರೆ ಕೇಳುವವರಾರು ಇರಲಿಲ್ಲ. ಮಕ್ಕಳು ಬಯಲಿಗೆ ಹೋಗಿದ್ದರು. ಹಿರಣ್ಯನನ್ನು ಹಿಂಬಾಲಿಸಿ ಹೆಂಡತಿ ಹೋಗಿದ್ದಳು. ಇವರು ಹಿರಣ್ಯನ ಕಲ್ಪನಾಚಿತ್ರವನ್ನು ಬರೆದು ಅದರೊಡನೆ ಕನ್ನಡಿಯುದ್ಧವನ್ನು ಮಾಡುತ್ತಿದ್ದರು. ಎಷ್ಟರತನಕ ಹೀಗೆ ನಡೆಯುತಿತ್ತೊ ಯಾರಿಗೂ ತಿಳಿಯದು.

ಮನೆಯವಳು ಬರುವಾಗ ಎರಡು ತಾಸು ಕಳೆದಿತ್ತು. ಆಕೆ ಪಾಪ, ಓಡಿ ಓಡಿ ಬಂದು ಅಳುತ್ತ ' ಹಿರಣ್ಯ ಹೋದ–ಮನೆಬಿಟ್ಟು ಹೋದ... ನಾನು ಆ ಗುಡ್ಡದ ತನಕ ಹೋದೆ. ಕೂಗಿದೆ. ಕರೆದೆ, ಕೇಳಿಯೂ ಕೇಳದ ಹಾಗೆ ಹೊರಟು ಹೋದ. ಖಂಡಿತಕ್ಕೂ ಅವನು ಭಾಗೀರಥಿಯನ್ನು ಬಿಡುವುದಿಲ್ಲ....ಸುಮ್ಮನೆ ಊರಿನ ಪ್ರಕಾರುಗಳನ್ನು ನಂಬಿ ನೀವು ಮನಸ್ಸು ಕಲ್ಲುಮಾಡಿಕೊಂಡರೆ. ..' ಎಂದು ಅತ್ತಳು. ಅವರ ಲಕ್ಷ್ಯವು ಈಗ ಪ್ರತ್ಯಕ್ಷವಸ್ತುವಿಗೆ ಸರಿಯಿತು. ' ನೀನು, ನೀನು ಹಿರಣ್ಯನನ್ನು ಹಾಗೆ ಬೆಳೆಸಿದವಳು. ನಿನ್ನ ಗಾಳಿಯಿಲ್ಲದೆ ಹಿರಣ್ಯನಿಗೆ ಎಂದೂ ಆ ಬುದ್ಧಿ ಬರಲಿಕ್ಕಿಲ್ಲ–ಅವನು ಹೋಗಲಿ, ಮನೆಯಲ್ಲಿ ಯಾರೂ ಇಲ್ಲವೆ ? ಎಲ್ಲಿ ಎಲ್ಲಿ ಸತ್ತರು...?'

ಅಷ್ಟಕ್ಕೆ ಲಕ್ಷ್ಮೀನಾರಾಯಣನೂ, ಅವನ ತಮ್ಮನೂ ಬಾಳೆ ಎಲೆಯ ಕಟ್ಟುಗಳನ್ನು ಹೊತ್ತುಕೊಂಡು, ಅಡಿಕೆ ತೋಟದಿಂದ ಮನೆಗೆ ಬಂದರು. ಕೂಡಲೆ ವೆಂಕಟರಮಣಯ್ಯನು 'ಲಕ್ಷ್ಮೀನಾರಾಯಣ' ಎಂದು ಥಟಕ್ಕನೆ ಕರೆದರು.

ಲಕ್ಷ್ಮೀನಾರಾಯಣ ಏನೆಂದು ತಿಳಿಯದೆ ' ಏನು ಅಪ್ಪಯ್ಯ ' ಎಂದನು.

' ಏನು–ಗೀನು ಇಲ್ಲ. ನಾಳಿನ ಬಿದಿಗೆಗೆ ಲಗ್ನ ನಿಶ್ಚಯ ಮಾಡಿದ್ದೇನೆ. ಗೊತ್ತಾಯಿತೇ ? ನಿಡುಬೈಲವರ ಮಗಳನ್ನು. ನೀನು ಅಣ್ಣನ ಹಾಗೆ ಬೇಡ ಎಂದರೆ ಅವನಿಗಾದ ಗತಿಯೆ ನಿನಗೆ...' ಹೀಗೆಂದು

'ಬಿಸಿನೀರಾಗಿದೆಯೇ' ಎಂದು ಕೇಳಿದರು. ಕೋಪದ ಭರದಲ್ಲಿ ವೆಂಕಟರಮಣಯ್ಯ ಹಂಡೆಯಿಂದ ನೀರನ್ನು ಗೋರಿ ಗೋರಿ * ಸುರಿದುಕೊಳ್ಳುತ್ತಿದ್ದನು. ನೀರತಪಲೆ ಹಂಡೆಯನ್ನು ಗರಪುತ್ತದೆ. ಆದರೂ ಧ್ಯಾಸವಿಲ್ಲ. ಒಂದೇ ಸವನೆ ಶಿವಲಿಂಗದ ಮೇಲೆ ರುದ್ರಾಭಿಷೇಕವನ್ನು ಮಾಡುವಂತೆ ಬಿಸಿನೀರಭಿಷೇಕ ನಡೆಯುತಿತ್ತು.

ಲಕ್ಷ್ಮೀನಾರಾಯಣನು ತಾಯಿಯನ್ನು ಕುರಿತು 'ಏನಮ್ಮ ಇದು' ಎಂದು ಕೇಳುತಿದ್ದಾನೆ.

---

## ೧೨

## ತಾನೂ ಒಂದು ಪ್ರೇತದಂತೆ

ಬೆಳ್ಳಕ್ಕನ ದರ್ಶನವಾದಂದಿನಿಂದ ಚಂದ್ರಯ್ಯನ ರೀತಿಯೂ ಪ್ರೇತಾವಸ್ಥೆಗೇನೇ ಮುಟ್ಟಿದೆ. ಅವನ ಯಾವ ಮಾತಿಗೂ ತಾಳ, ತಂತಿಗಳು ಇಲ್ಲ. ಹೆಚ್ಚಿನ ಸಮಯವನ್ನು ಮನೆಯಲ್ಲೇ ಕಳೆಯುತ್ತಿದ್ದನು. ಅದೂ ಕದವಿಕ್ಕಿಕೊಂಡು. ತಾಯಿ ಬಲವಂತದಿಂದ ಊಟಕ್ಕೆ ಕರೆದರೆ ಊಟಕ್ಕೆ ಹೋಗುತ್ತಾನೆ. ಇಲ್ಲವಾದರೆ ಇಲ್ಲ. ಅವನ ಮನಸ್ಸು ನೂರಾರು ಪ್ರವಾಹಗಳಿಗೆ ಸಿಲುಕಿ ಹರಿಹಂಚಾಗಿದೆ. ಅವನ ಈ ಸ್ಥಿತಿಯನ್ನು ಕಂಡು ಮುಪ್ಪಿನ ತಾಯಿ ದಿಗಿಲುಪಟ್ಟಳು. ಇಷ್ಟು ದಿವಸ ಮಗನ ಯಾವ ನಡತೆಯನ್ನೂ ಅವಳು ಪ್ರಶ್ನಿಸದವಳು; ಈಗಲೂ ಪ್ರಶ್ನಿಸಲು ಧೈರ್ಯ ಸಾಲದು. ಆದರೆ ಇಷ್ಟೊಂದು ದಿನ ಅವನು ಅವಿವಾಹಿತನಾಗಿದ್ದಾನೆಂಬ ಚಿಂತೆ ಅವಳಿಗಿತ್ತಾದರೂ, ಅವನು ಸುಖಿಯಾಗಿದ್ದನು ಎಂಬ ಸಂತೋಷವಿತ್ತು. ಅವಳು ನಾಲ್ಕಾರು ಬಾರಿ ಮಗನೊಡನೆ 'ಚಂದ್ರು, ಎಲ್ಲೂ ಹುಡುಗಿ ಕೊಡುವವರಿಲ್ಲವೇ?' ಎನ್ನುತ್ತಿದ್ದಳು. ಇತ್ತ ಆಲಂಬಾಡಿಗೆ

* ಪಾತ್ರೆಯನ್ನು ತೆರೆದು ಸದ್ದುಮಾಡಿ ನೀರನ್ನು ತೆಗೆಯುವಿಕೆ.

ಹೋಗಿ ಬಂದ ಬಳಿಕ ರಾಮಯ್ಯನೇ ತಾಯಿಯೊಡನೆ ಪ್ರಸ್ತಾಪವನ್ನೆತ್ತಿದ್ದನು. ಜಲಜಾಕ್ಷಿಯನ್ನು ಅವಳು ಕಂಡಿರದಿದ್ದರೂ 'ಯಾಕಾಗಬಾರದು?'—ಎಂದು ಅವಳಿಗನಿಸಿತ್ತು. ಆದರೆ ಆ ಮತಸ್ಥರಲ್ಲಿ ಜನಸಂಖ್ಯೆಯ ಅಭಾವದಿಂದ ಮನಸ್ಸಿಗೆ ಬೇಕಾದ ಕನ್ನೆ ದೊರೆಯುವಂತೆ ಇಲ್ಲ. ಹೆಚ್ಚಿನವರು ಬಡವರು. ಕಾಸಿದ್ದರಲ್ಲವೇ ವಿದ್ಯೆ.

ಈ ದಿವಸ ಧೈರ್ಯಮಾಡಿ ಅವಳು ಮಗನ ಬಳಿಗೆ ಬಂದು 'ಚಂದ್ರು, ನಿನಗೇನೊ ಆಗಿದೆ. ನಾನೊನ್ನುವುದನ್ನು ಕೇಳು. ನಾನು ಮುದುಕಿ. ಎಷ್ಟು ದಿವಸ ಇರಬಲ್ಲೆ. ನನ್ನ ಬಳಿಕ ನಿನಗೆ ನಿನ್ನವರು ಒಬ್ಬರು ಬೇಡವೇ? ಸುಮ್ಮನೆ ವಿದ್ಯಾವತಿ—ಎಂದು ಕಾದು ಕುಳಿತು ಆಯುಷ್ಯವೇ ಸರಿಯುತ್ತಿದೆ. ಅಲಂಬಾಡಿಗೆ ಹೋಗಿದ್ದಿಯಲ್ಲ; ಆ ಸಂಬಂಧ ಆಗದೇನು?' ಎಂದಳು. ಚಂದ್ರಯ್ಯನು ಮಾತನಾಡಲೇ ಇಲ್ಲ. ತಾಯಿ ತಟಸ್ಥಳಾದಳು.

ಒಂದೆರಡು ದಿವಸ ಚಂದ್ರಯ್ಯನು ಮನೆಯ ಹೊರಕ್ಕೆ ಕಾಲಿಡಲಿಲ್ಲ. ಒಮ್ಮೊಮ್ಮೆ ಜಲಜಾಕ್ಷಿಯ ನೆನಪು ಅವನಿಗೆ ಬರುವುದು. ಜಲಜಾಕ್ಷಿಯು ಬರಹವಿಲ್ಲದವಳು. ತನಗೇನೂ ಪರಿಚಿತಳಲ್ಲ. ಮನೆಗೆ ತಂದ ಮೇಲೆ ಏನೆಂದು ತಿಳಿಯಬೇಕು. ಕೊರಳಿಗೆ ಕಟ್ಟಿಕೊಂಡರೆ ಸರಿಹೋಗುತ್ತದೆ ಎಂದು ಹೇಗೆ ನಿರ್ಧಾರ?

ಹಾಗಾದರೆ ಒಂಟಿ ಜೀವನ ಎಷ್ಟು ದಿನ ಸಾಗೀತು? ಶರೀರದ ಬಯಕೆಯನ್ನು ಯಾರಾದರೂ ಪೂರೈಸಬಹುದು. ಗುಲಾಬಿಯಂಥವಳಿಲ್ಲವಾದರೆ ಇನ್ನೊಬ್ಬಳು. ಆದರೆ ಅದು ಕೇವಲ ಶರೀರದ ಬಯಕೆ. .ಆದರೆ ಮನಸ್ಸಿನ ತೃಪ್ತಿಗೆ, ಒಡನಾಟಕ್ಕೆ ಯಾರು ದೊರೆತಾರು? ತಮ್ಮ ಜಾತಿಯವರಲ್ಲಿ ಅದನ್ನು ಹುಡುಕುವುದು ದುರ್ಲಭ. ಇನ್ನೆಲ್ಲಿ ಹುಡುಕಲಿ?. . ಯಾರಾದರೇನು? ಜಾತಿಯೇನು? ಎಲ್ಲಿನವರಾದರೇನು. . . .ಮನಸ್ಸಿಗೆ ಸರಿಯಾದರೆ ಆಯಿತು.

ಮರುಕ್ಷಣಕ್ಕೆ ಮದುವೆಯ ಮೇಲೇನೆ ಅವಿಶ್ವಾಸ ಹಾಯುವುದು. ಮದುವೆಮಾಡಿಕೊಂಡದರಿಂದಲೇ ಜತೆಗಾರ್ತಿ ಸಿಗುವಳೇ? ಜತೆಯಲ್ಲಿ ವಾಸಿಸಬಹದು, ಉಣ್ಣಬಹುದು, ತಿನ್ನಬಹುದು—ಆದರೆ

ಜತೆಯಿಂದ ಸಾಗುವುದು ಸಾಧ್ಯವೇ? ಅದಲ್ಲದೆ ಮದುವೆ—ಶಾಸ್ತ್ರ, ಪದ್ಧತಿ ಇವಕ್ಕೇನು ಬೆಲೆ!

ಮದುವೆಯ ಬೆಲೆಯನ್ನು ಸರಸಮ್ಮನ ಗುಡಿಯನ್ನು ಸುತ್ತುವ ಜನರನ್ನು ಕಂಡೇ ತಿಳಿಯಬೇಕು. ಶುಕ್ರವಾರದಿವಸ ಗುಡಿಗೆ ಅಷ್ಟೊಂದು ಜನರು ಬರಬೇಕೇಕೆ?

ಸರಿ, ಸರಸಮ್ಮನ ಗುಡಿಯಿಂದ ಮನಸ್ಸು ಒಮ್ಮೆಗೇ ಪಾಪದ ಸುನಾಲಿನಿಯ ಕಡೆಗೆ ಹರಿಯಿತು. ಸುನಾಲಿನಿ ಯಾರೆಂದು ತಿಳಿಯದು, ಅವಳ ಹೆಸರು ತಿಳಿಯದು. 'ಆ ಪೇಟೆಯ ಹುಡುಗಿ ನೋಟಕ್ಕೆ ಎಷ್ಟು ಚೆನ್ನ! ಅವಳ ಮುಖ ಎಷ್ಟು ಲಕ್ಷಣ ಪೂರ್ಣ. ಅಂಥವಳು ಸರಸಮ್ಮ ನಲ್ಲಿಗೆ ಬಂದಳೆಂದರೆ! ಅದರಿಂದ ಅವಳ ಸಂಕಟ ಪರಿಹಾರವಾದೀತೇ? ಆ ಪೇಟೆಯ ಹುಡುಗಿ ಯಾರು? ಎಲ್ಲಿ ನೋಡಿದ್ದವಳನ್ನು? ಅಂಥವಳೊ ಬ್ಬಳು ದೊರೆಯಳೇ? ಎಲ್ಲಿಂದು ಹುಡುಕಲಿ? ಛೇ—ಇನ್ನೊಬ್ಬರ ತುತ್ತನ್ನು ಕಿತ್ತು ತಾನು ಸುಖಿಯಾಗುವುದೇ? ಏನು ತಪ್ಪು—ಇನ್ನೊ ಬ್ಬರು ಅದರ ಬೆಲೆಯನ್ನರಿಯದೆ ಎಸೆದಿರುವಾಗ?

ಇಲ್ಲ, ಆಕೆ ಯಾರೆಂದು ತಿಳಿದು ಒಲಿಸಲು ಯತ್ನಮಾಡುವೆನು— ಆದರೆ ಅವಳು ಆ ದಿನ ತನ್ನನ್ನು ಕಂಡು ಕಂಗಾಲಾದ ನೋಟವು ಏನು ಹೇಳುತ್ತದೆ? ಪಾಪ–ಅವಳ ಆಸೆಯು ತನ್ನನ್ನು ತಿರಸ್ಕರಿಸುವ ಯಜಮಾ ನನ ಕಡೆಗೇನೆ ಇದೆಯೆಂದಲ್ಲವೆ? ಅದನ್ನು ತಾನು ತಪ್ಪಿಸುವುದೇ?

ಈ ವಿಚಾರಗಳು ತುಸು ಸಮಯ ಮನಸ್ಸಿನಲ್ಲಿ ಸರಿದು ಮಾಯ ವಾದುವು. ಆಗ ತನ್ನ ಯೌವನದ ಒಂದು ಪ್ರಣಯ ವ್ಯಾಪಾರವು ಅವನ ಮನಸ್ಸಿಗೆ ಹೊಳೆಯಿತು....ಅಯ್ಯೋ, ಎಷ್ಟು ಮೂರ್ಖನು ತಾನು— ನನ್ನವಳಾಗುವವಳನ್ನು ಮರೆತಿದ್ದೆನಲ್ಲ ಎಂದು ಹಂಬಲಿಸಿದನು.

ಅದೊಂದು ವಿಚಿತ್ರ ಪ್ರಸಂಗ. ಅದರ ಪ್ರತಿಬಿಂಬವು ಸುಮಾರು ಒಂದು ವರ್ಷದ ಬಳಿಕ ಅವನ ಸ್ಮೃತಿಯಲ್ಲಿ ಚಿತ್ರಮಾಲಿಕೆಯಾಗಿ ಹಾಯಿತು. ಒಂದು ವರ್ಷದ ಹಿಂದೆ ನೆರೆಯೂರಿನ ಸ್ನೇಹಿತರೊಬ್ಬರ ಮನೆಗೆ ಅವನು ಹೋಗಿದ್ದನು. ಅವರ ಮನೆಯಲ್ಲಿ ಕುಳಿತಾಗ ಒಂದು

ಸುಂದರ ಜೋಪಿ ಅವನ ಕಣ್ಣೆದುರಿಗೆ ಹಾದುದು ಕಂಡಿತು. ತುಂಬು ಯೌವನ, ಎಳೆ ಚಿಗುರಿಯ ಸಡಿಗೆ. ಬಲುಹೊತ್ತಿನ ತನಕ ಅವಳನ್ನು ನೋಡುತ್ತ ನಿಂತಿದ್ದನು. ಅವಳೂ ಇವನನ್ನು ಕಣ್ತುಂಬ ಕಂಡಳು. ಅವಳನ್ನು ಮಾತನಾಡಿಸುವ ಹಂಬಲದಿಂದ ಮರುದಿವಸವೂ ಅದೇ ಮನೆಯಲ್ಲಿ ಉಳಿದುಕೊಂಡನು. ಅವಳು ನೆರೆಮನೆಯವಳೆಂದು ತಿಳಿಯಿತು. ಸಂಜೆ ಬಯಲಲ್ಲಿ ಸುತ್ತಾಡಿ ಬರುವಾಗ, ಊರಿನ ದೇಗುಲಕ್ಕೆ ಹೋಗುತ್ತಿದ್ದ ಅವಳು ಪ್ರತ್ಯಕ್ಷಳಾದಳು. ಇಬ್ಬರೂ ಮೈಮರೆದು ಒಬ್ಬರನ್ನೊಬ್ಬರು ನಿಂತು ನೋಡಿದರು. ಯಾರೋ ಬರುವುದನ್ನು ಕಂಡು ಇಬ್ಬರೂ ಸರಿದು ಹೋದರು. ಆಗ ನಿಜಕ್ಕು ಉಭಯತರು ನಷ್ಟಮನಸ್ಸಿನವರಾಗಿದ್ದರು. ಈ ದೂರದ ಅನಿಷ್ಟಗಳು ಬಾರದಿದ್ದರೆ ಪರಸ್ಪರ ಮಾತನಾಡುತ್ತಿದ್ದರೊ ಏನೋ. ಆಕೆ ದೊರೆಯುತ್ತಿದ್ದಳೋ ಏನೊ.

ಚಂದ್ರಯ್ಯನು ಊರಿಗೆ ಹಿಂದಿರುಗಿ ಬಹಳ ದಿವಸಗಳ ತನಕ ಅವನ ಮನಸ್ಸಿನಿಂದ ಅವಳು ಮರವೆಯಾಗಲಿಲ್ಲ. ಆವಳು ಯಾರೆಂದು ತಿಳಿಯನು— 'ಹಿರಣ್ಯನ ಹೆಂಡತಿ ಭಾಗೀರಥಿ' ಎಂದು ತಿಳಿಯಿತು. ಅದರಿಂದ ಮನಸ್ಸು ಹಿಮ್ಮೆಟ್ಟಿತು. ಈಗ ಹಿರಣ್ಯನಿಗೆ ಬೇರೆ ಲಗ್ನವಾಗುವುದೆಂಬ ಸುದ್ದಿ ಊರಲ್ಲಿ ತುಂಬಿದೆ. ತಾನು ಅಲ್ಲಿಗೆ ಹೋದರೆ ಅವಳು ತನ್ನವಳಾಗಬಹುದೊ? ಆದರೆ....ಯಾವ ರೂಪದಿಂದ?—ಕಳ್ಳತನ, ಅಪಮಾನ....

ಛೀ, ಅದೇ ಕಲ್ಪನೆಯು ಬಲವಾಯಿತು. ನಾಳಿನ ದಿನವೇ ಭಾಗೀರಥಿಯನ್ನು ಕಾಣುವ ನಿಶ್ಚಯಮಾಡಿದನು. ಏಕೆ? ಅವಳಿಗೆ ಮುಂದಾಗಿ ಪತ್ರ ಬರೆಯಲೇ....ಅವಳಿಗೆ ಬರಹವಿದೆಯೋ....ಉಂಟೆಂದು ತಿಳಿದಿತ್ತಲ್ಲಾ....ನಗು ಬಂದಿತು, ತಾನೇಕೆ ಒಂದು ವರ್ಷ ಕಾಲ ಅವಳನ್ನು ಮರೆತಿದ್ದೆನೆಂದು. ಈ ವಿಚಾರವಾಗಿ ಲೋಕನೀತಿಯ ಕಟ್ಟು ತಡೆಯಾಗಲಿಲ್ಲ. ಅವನು ಅದನ್ನು ಯೋಚಿಸಲಿಲ್ಲ. ಜನರು ಮೊದಲಿಗೆ ದುಡುಕುತ್ತಾರೆ. ಏನಾದರೊಂದು ಅಪವಾದ, ಗಂಡಾಂತರ ಬಂದ ಮೇಲೆಯೇ ಯೋಚಿಸುತ್ತಾರೆ.

ಈ ಸವಿಗನಸಿನಿಂದ ಅವನ ಆಯಾಸಗೊಂಡ ಶರೀರಕ್ಕೆ ಕುಳಿತಲ್ಲೇ

ನಿದ್ದೆಹತ್ತಿತು. ನಾಳೆಗೇ ಪತ್ರಬರೆದು ಗುಪ್ತವಾಗಿ ಅವಳ ಮನಸ್ಸನ್ನು ತಿಳಿಯುವನೆಂದೂ ಇಲ್ಲವಾದರೆ ತಾನೇ ಹೋಗಿ ಪ್ರೇಮಭಿಕ್ಷೆ ಬೇಡುವೆನೆಂದೂ ಎಣಿಸಿದನು....ಆದರೆ ತಾನೂ ಭಾಗೀರಥಿಯೂ ಕಲೆತು ಊರಲ್ಲಿರಲು ಬಂದೀತೆ?..ಮರ್ಯಾದೆಯಿಂದ? ಅಂದರೆ ವಾಡಿಕೆಯು ತಿಳಿಯುವ ಮರ್ಯಾದೆಯ ರೀತಿಯಿಂದ?

ನಿದ್ರೆಗೆ ಮೊದಲು ಇಷ್ಟು ತರಂಗಗಳು ಅವನ ಮನಸ್ಸಿನಲ್ಲಿ ಉರುಳಾಡಿದರೆ ನಿದ್ರೆಯಲ್ಲಿ ಬೇರೆಯೇ ವಿಪ್ಲವವಾಯಿತು. ಎಲ್ಲ ರೂಪುಗಳನ್ನು ಬೆಳ್ಯಕ್ಕನ ರೂಪು ನುಂಗಿತು. ಛೇ–ಬೆಳ್ಯಕ್ಕನೇ ನನ್ನವಳಾದರೆ? ಅವಳು ಏಕೆ ತನ್ನ ಮುಂದೆ ನಗ್ನಳಾಗಿ ಕೆರೆಯಲ್ಲಿ ಧುಮುಕುತ್ತಾಳೆ. ಇದು ಬರಿಯ ಚೇಷ್ಟೆಯೇ? ಹಾಗಿದ್ದರೆ ಬೆಳ್ಯಕ್ಕನು ಅಷ್ಟು ಬಿರುಗಣ್ಣಿನಿಂದ, ಬೇಡುಗಣ್ಣಿಂದ ತನ್ನನ್ನು ಕಂಡಳೇಕೆ? ಅವನ ಕನಸಿನ ಪ್ರತಿಕ್ಷಣವನ್ನು ಈಗ ಬೆಳ್ಯಕ್ಕ ಆವರಿಸಿದಳು.

ನಿದ್ದೆಯಿಂದ ಎಚ್ಚರವಾಯಿತು. ಬಲು ಅಪೂರ್ವದ ಈಶ್ವರಭಟ್ಟರು ಮನೆಗೆ ಬಂದುದು ಕಾಣಿಸಿತು. ಚಂದ್ರಯ್ಯನೀಗ ತೀರಾ ವಿಶ್ರಾಂತಿಗೊಂಡವನಂತೆ ಅವರನ್ನು ಭೇಟಿಯಾದನು. ತೆಗೆದ ಬಾಯಿಗೇ 'ಭಟ್ಟರೇ.. ಪ್ರೇತಗಳಲ್ಲಿ ಹೆಣ್ಣುಗಂಡಿದಿಯೇ?......ನೀವು ನಿಮ್ಮಪ್ಪನ ಕಥೆ ಹೇಳಿದಿರಲ್ಲ....ಹಾಗೇಕೆ ಬೆಳ್ಯಕ್ಕ ಅವರನ್ನು ಚೇಷ್ಟೆ ಮಾಡಿದಳು! ಪ್ರೇತಗಳ ಶರೀರವು ಸ್ಥೂಲವೇ? ಅವಕ್ಕೆ ಭೋಗಾಪೇಕ್ಷೆ ಇಲ್ಲವೇ?'

ಈಶ್ವರಭಟ್ಟರು 'ಇಷ್ಟು ಸಮಯ ಕಳೆದರೂ ನಿನಗೆ ಪ್ರೇತಗಳನ್ನು ಕಾಣುವ ಹುಚ್ಚು ಮರೆಯಲಿಲ್ಲವೇ?' ಎಂದರು. ಅವರೊಡನೆ ತಾನು ಬೆಳ್ಯಕ್ಕನನ್ನು ಕಂಡಿರುವೆನೆಂಬ ಮಾತನ್ನು ಅವನು ಪ್ರಸ್ತಾಪಿಸಲಿಲ್ಲ. ಹೇಳಿದ್ದಾದರೆ ಅವರು ನಂಬುವುದೂ ಕಷ್ಟ. ನಂಬಿದರೂ ಇವನ ಉಡಾಳ ಯೋಚನೆಗಳಿಗೆ ಅವರಿಂದ ಬೆಂಬಲ ದೊರೆತೀತೇ? ಭಟ್ಟರು–ಅದನ್ನೆಲ್ಲಾ ತೆಗೆದುಕೊಂಡೇನು ಯೋಚನೆ ಮಾಡುತ್ತೀ? ಪ್ರೇತಗಳು ಸೂಕ್ಷ್ಮ ಶರೀರದಲ್ಲಿರುವುವು. ಆದರೆ ಎಷ್ಟೊ ಸಾರಿ ಪಂಚೇಂದ್ರಿಯಗಳಿಂದ ಸುಖಪಡುವ ಆಸೆ ತೀರಿಸಿಕೊಳ್ಳಲು ಬೇರೆಯವರ ಶರೀರವನ್ನು ಬಯಸುತ್ತವೆ'

'ಅದಕ್ಕಾಗಿ ಬೆಳ್ಳಕ್ಕ ಹಾಗೆ ಬತ್ತಲೆ ನಿಂತು ಕೆರೆಗೆ ಧುಮುಕಿದುದು?'

'ಮತ್ತೇಕೆ? ಎಲ್ಲಾದರೂ ನಮ್ಮಪ್ಪ ಹತ್ತಿರ ಹೋಗಿದ್ದರೆ ಸೋಂಕು ತೆಗೆಯಬೇಕಿತ್ತು!'

'ಅದು ಹೆದರಿದರೆ, ಅವುಗಳಿಗೆ ನಮ್ಮಿಂದ ಕೆಲಸವಾಗಬೇಕಿದ್ದರೆ, ಆಗ ಕೇಡು ಮಾಡಿಯಾವೇ?'

ಅದಕ್ಕೆ ಭಟ್ಟರು ಪ್ರತ್ಯುತ್ತರವನ್ನು ಕೊಡುವ ಬದಲು— ಕಲ್ಲು ಕುಟಿಗ, ಒಬ್ಬತಿ ಮೊದಲಾದ ಹಲವು ಭೂತಗಳು ಮನುಷ್ಯರನ್ನು ವಂಚಿಸಿ ರಕ್ತಕಾರಿಸಿ ಕೊಲ್ಲಿಸಿದ ಅನೇಕ ಕಥೆಗಳನ್ನು ಹೇಳಿದರು. ಆ ಕಥೆಗಳಿಂದ ಚಂದ್ರಯ್ಯನಿಗೆ ತುಸು ಅಧೈರ್ಯವಾಯಿತು. ಹಾಗೆ ತನಗೇನಾದರೂ ಮಾಡಿದರೆ ಎಂಬ ಭೀತಿ ಉಂಟಾಯಿತು.

'ಹಾಗಾದರೆ ಮಂತ್ರವಾದಿಗಳು ಏನು ಮಾಡುತ್ತಾರೆ?'

'ಅವರೇ! ತಮ್ಮ ಮಂತ್ರಶಕ್ತಿಯಿಂದ ಅವನ್ನು ಕುಣಿಸುವುದುಂಟು. ನಡುವೆ ಮಂತ್ರಬಲ ಸಾಲದಿದ್ದರೆ ಮಂತ್ರವಾದಿಗೆ ಮೋಸ· ಹಾಗೆ ಪ್ರಾಣ ಕಳೆದುಕೊಂಡು ಇಲ್ಲವೆ ಹುಚ್ಚು ಹಿಡಿಸಿಕೊಂಡ ಮಂತ್ರವಾದಿಗಳು ಬಹಳ ಇದ್ದಾರೆ......' ಅದಕ್ಕೂ ಒಂದೆರಡು ಕಥೆಯನ್ನು ಹೇಳಿದರು.

ಸರಿ, ಚಂದ್ರಯ್ಯನ ಮನಸ್ಸು ಈಗ ಒಂದು ರೀತಿಯ ಸ್ಥಿಮಿತಕ್ಕೆ ಬಂದಿತು. ಬೆಳ್ಳಕ್ಕನ ಶೋಧೆ ಪೂರ್ಣವಾಗಬೇಕು. ಅವಳು ಯಾರು, ಯಾಕೆ ಹಾಗೆ ಮಾಡುತ್ತಾಳೆ– ಎಂಬುದನ್ನು ಹಟಹಿಡಿದು ತಿಳಿಯಬೇಕು. ಆದರೆ ಮಂತ್ರವಾದಿಗಳನ್ನು ಕರೆಯಿಸಿ ಪ್ರೇತಕ್ಕೆ ತಾಪಕೊಡಬಾರದು. ಇತ್ತ ಅವಳ ರೂಪ ಒಯ್ಯಾರಗಳಿಗೆ ತಾನು ಬಲಿಯಾಗಲೂ ಬಾರದು.

ಇನ್ನೊಂದು ಕೆಲಸ—ಸುನಾಲಿನಿ, ಜಲಜಾಕ್ಷಿಯರೆಂದು ಇಲ್ಲದ ಭ್ರಮೆಗಳಿಗೆ ತಾನು ಗುರಿಯಾಗಬಾರದು. ಆದಿನ ತನ್ನನ್ನು ಬಯಸಿದ ಭಾಗೀರಥಿ ಒಬ್ಬಳನ್ನೇ ಒಲಿಸಬೇಕು. ಆದರಿಂದ ಬಂದದ್ದು ಬರಲಿ—ಎಂದು.

ಸರಿ— ಭಾಗೀರಥಿಯ ಮನಸ್ಸು ಈ ಒಂದು ವರ್ಷದಲ್ಲಿ ಹೇಗಾಗಿದೆಯೋ-ಏನೋ? ಎಳೆಯ ವಯಸ್ಸಿನ ಬಾಲೆ. ಅಂಥವಳ ರೂಪಕ್ಕಾಗಿ

ಯಾವ ಯುವಕನೂ ಬಾಯ್ಬಿಡಬಹುದು, ಕಳ್ಳತನದಲ್ಲಿ ನಡೆಯುವ ಪ್ರಣಯಗಳಿಗೆ ಶಾಸ್ತ್ರ ಸಮಾಜಗಳೆರಡರ ಭೀತಿಯೂ ಇಲ್ಲ. ಹೀಗಿರುವಾಗ ತನ್ನ ದೀರ್ಘಕಾಲಾನಂತರದ ಯೋಜನೆಯು ಸಫಲವಾಗಲು ಇತರರು ಈ ಮೊದಲೇ ವಿಘ್ನಕಾರಿಗಳಾಗಿದ್ದರೆ?

ತಿರುಗಿ ತಳಮಳವೇ ಮನಸ್ಸಿಗೆ ಪ್ರಾಪ್ತಿ. ಅಂತೂ ನಾಳಿನ ದಿನ ಏನು ನಡೆದೀತು. ಚಂದ್ರಯ್ಯನೇನು ಮಾಡುತ್ತಾನೆಂದು ಅವನಿಗೇ ತಿಳಿಯದು.

---

## ೧೩

# ಚಂದ್ರ ದರ್ಶನ

ಭಾಗೀರಥಿಯು ಮಾವನ ಮನೆಯಲ್ಲಿ ಕೇಳಿದ ಕಟೂಕ್ತಿಯು ಅವಳಲ್ಲಿ ಅಳಿಯಲಾರದ ಗಾಯವನ್ನುಂಟುಮಾಡಿತು. ತಾನು ತಿರುಗಿ ಆ ಮನೆಗೆ ಕಾಲಿಡುವುದಿಲ್ಲವೆಂದು ಅವಳು ನಿಶ್ಚಯಿಸಿದಳು. ಹಿರಣ್ಯನ ಮೇಲೆ ಅವಳಿಗೆ ಪ್ರಥಮದಲ್ಲಿ ಬೇಸರವಾಗಿರಲಿಲ್ಲವಾದರೂ, ತಂದೆ ನುಡಿದಂತೆ ತಪ್ಪು ಒಪ್ಪುಗಳ ಎಣಿಕೆಯಿಲ್ಲದೆ ಕುಣಿಯುವ ಮಗನಾದರೆ ತನಗೆ ಆ ಮನೆಯಲ್ಲಿ ಯಾವ ಮರ್ಯಾದೆ ದೊರೆತೀತೆಂಬ ಸಂಶಯ ಬಂದಿತ್ತು. ಅದರಿಂದ ಒಮ್ಮೆಗೇ ಅವಳ ಮನಸ್ಸು ಮುರಿದಿತ್ತು. ಎರಡು ಮೂರು ಬಾರಿ ಭಾಗೀರಥಿಯ ತಂದೆಯು ಅವಳನ್ನು ಗಂಡನ ಮನೆಗೆ ಕಳುಹಿಸಲು ಪ್ರಯತ್ನಿಸಿದನು. ಆದರೆ ಭಾಗೀರಥಿಯು 'ಆ ಮನೆಯಲ್ಲಿ ತಾನು ಕಾಲಿಡಲಾರೆ. ಅವರಿಗೆ ಕಾಲಿಂದ ತಲೆಗಿರಿಸುವ ಒಡವೆ ವಸ್ತುಗಳು ಬೇಡ—ಕಾಲಿನ ಕೆರವಾಗಿ ಗಂಡನ ಮನೆಯಲ್ಲಿ ಬಾಳುವುದಕ್ಕಿಂತ ಬಾವಿಗೆ ಹಾರುವುದು ಒಳಿತು' ಎಂದು ಉತ್ತರವಿತ್ತಳು.

'ವೆಂಕಟರಮಣಯ್ಯ ಏನೋ ಒಂದು ಸಾರಿ ತಪ್ಪಿ ಮಾತನಾಡಿದು ದಕ್ಕೆ ನೀನು ಅಷ್ಟು ಸಿಟ್ಟಾಗುವುದೇ' ಎಂದು ಸಮಾಧಾನ ತಂದೆ ಪಡಿಸಿದರೂ ವ್ಯರ್ಥವಾಯಿತು. ಕಾರಣ, ವೆಂಕಟರಮಣಯ್ಯನೇ ತಮ್ಮ ಹೆಂಡತಿಯೊಡನೆ ಆಡಿದ ಮಾತುಗಳು ಬಾಯಿತಪ್ಪಿ ಆಡಿದವುಗಳಲ್ಲ. ಅವರು ಸ್ವಾಭಾವಿಕವಾಗಿ ಸ್ತ್ರೀಯರನ್ನು ತೂಗಿ ಬೆಲೆಕಟ್ಟುವ ರೀತಿ ಯನ್ನು ಸಾರುತ್ತದೆ. ಭಾಗೀರಥಿ ಅಭಿಮಾನದ ಹುಡುಗಿ; ಸಾಕಷ್ಟು ಛಲವಾರಿಯೂ ಅಹುದು.

ಸರಿ, ತಂದೆ ಭಾಗೀರಥಿಯನ್ನು ತವರುಮನೆಗೆ ಕಳುಹಿಸಲಿಲ್ಲ. ಇತ್ತ ಮಾವನ ಮನೆಯಿಂದ ಕರೆಯೂ ಬರಲಿಲ್ಲ. ಈ ಮೊದಲೇ ಹಿರಣ್ಯನು ಬಂದು ಸಮಾಧಾನಪಡಿಸಿದ್ದರೆ ಏನಾದರಾಗುತಿತ್ತು. ಅವನು ಹಾಗೆ ಮಾಡದೆ ಅವಳ ಮನಸ್ಸಿನ ವಿಷಮತೆಯನ್ನು ಬೆಳೆಯಗೊಟ್ಟನು. ಮುಂದೆ ಅದು 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗಿತೇ?' ಎಂಬಂತೆ ಆಯಿತು.

ಗಂಡನ ಮನೆಯಿಂದ ಬಂದ ಒಂದು ವರ್ಷ ಕಾಲ ಭಾಗೀರಥಿಯು ಬೇರೊಬ್ಬರನ್ನು ಕುರಿತು ಚಿಂತಿಸಲಿಲ್ಲ. ತನ್ನ ಜೀವನ ಮುಳುಗಿತು— ಎಂದಿಷ್ಟೆ ತಿಳಿದಳು. ಒಂದು ವರ್ಷ ಪೂರ್ತಿಯಾಗುವುದರಲ್ಲಿ 'ಹಿರಣ್ಯನಿಗೆ ಎರಡನೆ ಲಗ್ನ ಮಾಡುತ್ತಾರೆ' ಎಂಬ ಮಾವನ ಬಾಯಿಮಾತಿನ ಅಬ್ಬರವು ಕೇಳಿಸಿತು. ಆ ಸುದ್ದಿಯನ್ನು ಕೇಳಿದ ತಕ್ಷಣ ದುಡುಕಿನಿಂದ ಹುಡು ಗಿಯೂ 'ನನಗೂ ಎರಡನೆ ಲಗ್ನವಾಗಲು ಬಂದೀತು'—ಎಂದಾಡಿಕೊಂ ಡಳು. ಮಾತಿಗೆ ಮಾತು! ಆದರೆ ಅದು ತಾನಿರುವ ಸಮಾಜದಲ್ಲಿ ಅಸಾಧ್ಯವೆಂಬುದೇನು ಅವಳಿಗೆ ಗೊತ್ತು?

ಇದಾಗಿ ಒಂದೆರಡು ತಿಂಗಳು ಕಳೆಯಲಿಲ್ಲ—ತನ್ನ ನೆರೆಮನೆಗೆ ಹೋದಾಗ ಚಂದ್ರಯ್ಯನ ದರ್ಶನವಾಯಿತು. ನೆರೆಮನೆಯ ಚಾವಡಿಯಲ್ಲಿ ರಸಿಕನಾಗಿ ಮಾತನಾಡುತ್ತಿರುವ ಅವನನ್ನು ಕಂಡು ಅವಳು ಮುಗ್ಧಳಾ ದಳು. ಬಲುಹೊತ್ತಿನ ತನಕ ಅವನನ್ನೇ ನೋಡುತ್ತಿದ್ದಳು. ಅದೇ ದಿನ ಸಂಜೆ ದೇಗುಲದ ಸುತ್ತಿನಲ್ಲಿ ಅಲೆಯುವಾಗ ಅವನು ಭೇಟಿಯಾದುದ ರಿಂದ ಅವಳ ಬಯಕೆ ಕೈಗೂಡಿದಂತೆ ಕಂಡಿತು. ಆಗಿನ ಅವಳ ನೋಟ

ತೃಪ್ತಿಕರವಾಗುತಿತ್ತು. ಅವಳಿಗೂ ಅವನೊಡನೆ ಮಾತನಾಡುವ ಲವ-ಲವಿಕೆಯಾಯಿತು. ತನ್ನ ಜೀವನಕ್ಕೆ ಇನ್ನು ತಾನೇ ನಾಯಕಿಯೆಂದು ನಿರ್ಧರಿಸಿದ್ದ ಅವಳು ಯಾವುದಕ್ಕೂ ಹಿಂದುಮುಂದು ನೋಡುವವಳಲ್ಲ. ಆದರೆ ಅಂದಿನ ಆ ಮಿಲನವು ಬೇರೊಬ್ಬರ ಆಗಮನದಿಂದ ತುಂಡಾಯಿತು. ತಿರುಗಿ ಚಂದ್ರಯ್ಯನನ್ನು ಸೇರುವ ಹಂಬಲವು ಸಾಧ್ಯವಾಗಲಿಲ್ಲ. ಮಿಲನದ ಪರಿಣಾಮವೆಂದರೆ 'ಗಂಡನ ಮನೆಗೆ ಹೋಗದ ಹುಡುಗಿ, ಮತ್ತೇನು ಬೇರೆಯವರನ್ನು ಕರೆಯತೊಡಗಿದ್ದಾಳೆ' ಎಂಬ ಸುದ್ದಿಗೆ ಮಾತ್ರ ಅವಕಾಶ ಕೊಟ್ಟಿತು. ಆಯಿತು—ಯೋಚನೆಗೂ ಮೀರಿ ವಾರ್ತೆಯು ಪ್ರಚಾರವಾಯಿತು.

ಅಂದಿನಿಂದ ಅವಳ ಮನಸ್ಸಿನ ಮುಂದೆ ಚಂದ್ರಯ್ಯನ ರಸಿಕ ರೂಪು ನಲಿದಾಡುತಿತ್ತು. ಅವನಾರೆಂದು ಕೊನೆಯ ಮಿಲನದ ಗಳಿಗೆಯ ತನಕ ಅವಳಿಗೆ ತಿಳಿದಿರಲಿಲ್ಲ. ಆದರೆ ಊರ ಸುದ್ದಿಯು ಪ್ರಣಯಿಯ ವಿಳಾಸವನ್ನು ದೊರಕಿಸಿಕೊಟ್ಟಿತು. ಚಂದ್ರಯ್ಯ ತನ್ನನ್ನು ನೋಡಿದ ರೀತಿಯಿಂದ ತಿರುಗಿ ತನ್ನಲ್ಲಿಗೆ ಬಾರದಿದ್ದಾನೆಯೇ—ಎಂದು ಮೇಲಿಂದ ಮೇಲೆ ಎಣಿಸುತ್ತಿದ್ದಳು. ಆಗಾಗ ನೆರೆಮನೆಗೆ ಹೋಗುತ್ತಿದ್ದಳು. ನೆರೆಮನೆಯ ಸ್ನೇಹಿತನಲ್ಲವೆ ಚಂದ್ರಯ್ಯ. ಆದರೆ ಯಾವುದೊಂದು ಆಸೆಯ ಸುದ್ದಿಯೂ ಅವಳ ಬಳಿಗೆ ಬರಲಿಲ್ಲ. 'ಗಂಡಸರೇ ಹೀಗೆ' ಎಂಬ ಮಾತು ಅವಳ ಮನಸ್ಸಿನಲ್ಲಿ ಮೊಳೆಯತೊಡಗಿತು.

ಅದೊಂದು ದಿನ ಸಂಜೆ, ಅವಳು ದೇವಾಲಯದ ಮುರಿದುಬಿದ್ದ ಪೌಳಿಯ ಮೇಲೆ ಕುಳಿತಿದ್ದಳು. ಅವಳ ಮನೆಗೆ ತೀರ ಸಮೀಪದ ಶಿವಾ-ಲಯ; ಹಳೆಯ ಗುಡಿ. ತಸದೀಕು ಬರುತ್ತಲಿಲ್ಲ ಎಂದಮೇಲೆ ಅದರ ಸ್ಥಿತಿಯನ್ನು ಕೇಳಬೇಕಿಲ್ಲ. ಆದುದರಿಂದಲೇ ಪೌಳಿಯು, ಆವರಣವಾಗುವ ಬದಲು ಆಸನವಾಗುತಿತ್ತು. ಇತ್ತ ಗುಡಿಗೆ ಪ್ರತಿ ಸೋಮವಾರ ಸಂಜೆಗೆ ಭಕುತಾವಳಿ ಬರುವ ರೂಢಿ. ಉಳಿದ ದಿನಗಳಲ್ಲಿ ಬರುತ್ತಾರೆಂದರೆ ಅರ್ಚಕನೊಬ್ಬನು; ಒಬ್ಬಿಬ್ಬರು ಸಾಯಲಾದ ಮುದುಕಿಯರು. ಉಳಿದವರು ದೂರದಿಂದಲೇ ಶಿವನಿಗೆ ಶರಣುಹೋಗುತ್ತಾರೆ. ಭಾಗೀರಥಿಗೆ ಮನೆಯಲ್ಲಿ

ಹೊತ್ತು ಸರಿಯುವುದಿಲ್ಲ. ಅವಳು ಮನೆಗೆಲಸವನ್ನು ಉತ್ಸಾಹದಿಂದ ಮಾಡುವುದಿಲ್ಲ. ಮಾಡೆಂದು ತಂದೆ, (ತಾಯಿಯಿಲ್ಲದ ಹುಡುಗಿ) ಬಲವಂತ ಮಾಡುವೂದೂ ಇಲ್ಲ. ಹೀಗಾಗಿ ಸಂಜೆ ವಿರಾಮವನ್ನು ಪೌಳಿಯ ಮೇಲೆ ಕುಳಿತು ಕಳೆಯುವಳು. ಊರಿನ ನಾಲ್ಕಾರು ದನಕಾಯುವ ಬಾಲಕರು ಅಲ್ಲಿಗೆ ಬರುತ್ತಾರೆ. ಅವರು ದನಕರುಗಳನ್ನು ದೇಗುಲದ ಆವರಣದೊಳಗೆ ಅಟ್ಟಿ, ಹೆಬ್ಬಾಗಿಲಿನ ನಡೆಯಲ್ಲಿ ಕುಳಿತು, ಗಜ್ಜುಗ, ಚೆನ್ನಮಣೆ, ಚಿಬಿಲಿ ಆಡುತ್ತಿರುತ್ತಾರೆ. ಒಳಗೆ ದನಕರುಗಳು ಹುಲ್ಲು ಮೇಯುತ್ತವೆ. ಸಂಜೆಯಾಯಿತೆಂದರೆ ಅವನ್ನು ಅಟ್ಟಿಕೊಂಡು ಹೋಗುವ ಕೆಲಸ. ಅವರು ಹೊರಟುಹೋದ ಬಳಿಕವೂ ಭಾಗೀರಥಿ ಅಲ್ಲಿರುತ್ತಾಳೆ. 'ಭಾಗೀ, ಮನೆಗೆ ಬರುವುದಿಲ್ಲವೇ?' ಎಂದು ಅವರು ಕರೆದರೆ 'ಅಷ್ಟೇನು ಅವಸರ?' ಎನ್ನುವಳು. ದನಕಾಯುವವರು ಸಂಜೆಯ ಮುಂದೆ ಕರೆಯುವ ಹಸುಗಳನ್ನು ಹಟ್ಟಿಗೆ ಅಟ್ಟಲೇಬೇಕಲ್ಲ. ಅವರು ಹೋಗುತ್ತಾರೆ. ದನಗಳು ಹೋಗುವ ಗಳಿಗೆ, ಶಿವಾಲಯದ ಮೇಲುಪ್ಪರಿಗೆಯಿಂದ ಒಂದೊಂದಾಗಿ ಬಾವಲಿಗಳು ಹೊರಬೀಳುವ ಸಮಯ ಎರಡೂ ಸಮವಾಗುವುದು. ಅದನ್ನು ನೋಡುವುದೆಂದರೆ ಭಾಗೀರಥಿಗೆ ಬಲು ಇಷ್ಟ. ಸೂರ್ಯರಶ್ಮಿ ಅಡಗುವುದರಲ್ಲಿ ಸಾವಿರಾರು ಬಾವಲಿಗಳು ಹಾರಾಡತೊಡಗುವವು. ಸ್ಥಳಿಕ ಹುಳು ಹಾತೆಗಳ ಶಿಖಾರಿ ಆಯಿತೆಂದರೆ ದೂರದ ಪ್ರಯಾಣಕ್ಕೆ ಬಾವಲಿಗಳು ಅನುವಾಗುವವು. ಬಾವಲಿಗಳು ಹೊರಬಿದ್ದ ಒಂದೆರಡು ಕ್ಷಣಗಳಲ್ಲಿ ಅಲ್ಲಿನ ಮೋಳಬೆಕ್ಕು* ಗಳು ಹೊರಬೀಳುವವು. ಪೌಳಿಯಲ್ಲಿ ಕುಳಿತರೆ ಅವುಗಳ ಕೆಂಡದಂತಹ ಕಣ್ಣುಗಳು ಮಿನುಗುವುದು ಕಾಣಿಸುವುದು. ಮಾರುದ್ದದ ಬಾಲವನ್ನು ಆಡಿಸಿ, ಕಳ್ಳತನದ ಹೆಜ್ಜೆಯನ್ನಿಟ್ಟು ಅವು ಹೊರಗೆ ಬರುವಾಗ 'ಶಿವನು ಇಂಥವರಿಗೆಲ್ಲಾ ಆಶ್ರಯ ಕೊಡುತ್ತಾನಲ್ಲಾ' ಎನಿಸಬೇಕು. ಶಿವಾಲಯದ ಹಗಲಿನ ಪಾರುಪತ್ಯ ಅಸಂಖ್ಯಾತ ಕಾಡು ಪಾರಿವಾಳಗಳಿಗೆ. ಸಂಜೆ ಬೇರೆಯವರದೇ ದರ್ಬಾರು. ಅವನ್ನೆಲ್ಲ ನೋಡುವುದೆಂದರೆ ಭಾಗೀರಥಿಗೆ

* ತೀರ ಉದ್ದಬಾಲದ ಕಾಡು ಕಬ್ಬೆಕ್ಕು.

ತಣಿಯುದ ಆಸೆ. ಇಂದೂ ನೋಡುತಿದ್ದಾಳೆ. ಸಾಲದುದಕ್ಕೆ ಪಂಚಮಿಯ ಚಂದ್ರನು ಕ್ಷೀಣ ಬೆಳಕನ್ನು ಎಲ್ಲೆಲ್ಲೂ ಹಾಯಿಸುತ್ತಾನೆ. ಅವನ್ನು ನೋಡುತ್ತಾ ಕತ್ತಲಾಗುವುದೂ ಉಂಟು. ಆಗ ತಂದೆಯು ಮನೆಯ ಅಂಗಣದಿಂದಲೇ 'ಭಾಗೀ' ಎಂದು ಕೂಗುತ್ತಾನೆ. ಮನೆಗೆ ಓಡಿ ಹೋಗಲು ಐದು ನಿಮಿಷಗಳೂ ಬೇಡ.

ಈ ದಿನವು ಎಂದಿನ ಕೆಲಸವೇ ಅವಳದು. ಬಾವಲಿಗಳನ್ನೆಣಿಸು ವುದು, ಕಾಡಬೆಕ್ಕನ್ನು ದಿಟ್ಟಿಸುವುದು—ಕೊನೆಗೆ ಚಂದ್ರನ ಮೋರೆ ಯನ್ನು ಹರಿದು ತಿಂದವರಾರೆಂದು ನೋಡುವುದು—ಎಷ್ಟು ಹೀಗಿ- ದ್ದಾಳೊ....ಅವಳ ಧ್ಯಾನವು ನಿಟ್ಟುಸಿರೊಂದರಿಂದ ಧ್ವಂಸವಾಯಿತು. ತಿರುಗಿ ನೋಡುತ್ತಾಳೆ—ಪೌಳಿಯ ಆ ಕಡೆಯಿಂದ ಯಾರೋ ನಿಂತು ಅವಳನ್ನು ನೋಡುತ್ತಿದ್ದಾರೆ. ಒಮ್ಮೆಗೇ ಮುಖ ಅರಳಿತು. ಅಲ್ಲಿಂದ ಕೆಳಗೆ ಅವರಿದ್ದ ಕಡೆಗೆ ಧುಮುಕ ಹೋದಳು....ಕೊನೆಗೆ ನಲ್ಲದೆಂದು 'ಈಚೆಗೆ ಬರುತ್ತೀರಾ?' ಎಂದು ಕೇಳಿದಳು..ಹೊಸದಾಗಿ ಬಂದವನು ಚಂದ್ರಯ್ಯ. ಅವನು ಅಲ್ಲಿಂದಲೇ ಪೌಳಿಯ ಮೇಲೆ ಜಿಗಿದು ಈಚೆ ಬಂದನು. ಭಾಗೀರಥಿ ಕುಳಿತವಳು ಎದ್ದು ನಿಂತು 'ಇಷ್ಟುದಿನ?' ಎಂದಳು. ..ಚಂದ್ರಯ್ಯ ಮಾತನಾಡಲಿಲ್ಲ. ತಿರುಗಿ ಭಾಗಿಯು 'ಇಷ್ಟುದಿನ?' ಎಂದು ಕೇಳಿದಳು. ಆಗವನು 'ಈಗ ಬಂದೆನಲ್ಲಾ..ಇಷ್ಟುದಿನ ಧೈರ್ಯ ಬರಲಿಲ್ಲ....' ಹೀಗೆಂದು ಒಮ್ಮೆಗೇ ಅವಳ ಕರವನ್ನು ಹಿಡಿದು 'ನನ್ನ ನೆನಪು ಮಾಸಲಿಲ್ಲವೇ. ಒಂದು ವರ್ಷವಾಯಿತು' ಎಂದನು. 'ಮಾಸು ವಂತಿದ್ದರೆ ಹಾಗೆ ಕಣ್ಣಿಂದ ಬೇಡುತ್ತಿದ್ದೆನೋ?'

ನಿಜ, ಚಂದ್ರಯ್ಯನಿಗೆ ಅವಳ ಅಂದಿನ ದೃಷ್ಟಿಯಾಚನೆಯು ಎಂದಿಗೂ ಮರೆಯುವಂತಿರಲಿಲ್ಲ. ಅಷ್ಟರಲ್ಲಿ ಮನೆಯಿಂದ ತಂದೆಯ ಕೂಗು ಕೇಳಿ ಸಿತು. 'ಭಾಗೀ' ಎಂದು. ಈ ಶಂಖಧ್ವನಿಗೆ 'ಹೋ' ಎನ್ನದಿದ್ದರೆ ಇನ್ನೊಂದು ಕರೆ ಬರುವುದೆಂದು 'ಬಂದೇ ಎಂದಳು.'

'ಯಾರು?'

'ನಮ್ಮಪ್ಪ. ಕತ್ತಲೆಯಾಯಿತಲ್ಲವೇ?'

'ಮನೆಗೆ ಹೋಗುತ್ತೀಯಾ? ಇನ್ನೊಮ್ಮೆ ಬರಲೇ?'

'ಮನೆಗೆ ಬರಬಾರದು?'

'ನಾನು? ಹೇಗಾದೀತು? ಈ ದಿನ ಅಜ್ಜಿ ಮನೆಯಲ್ಲಿರುತ್ತೇನೆ. ಕಳೆದಾವೃತ್ತಿ ಬಂದಾಗ ನಿಂತೆನಲ್ಲ ಆ ಮನೆ. ಆಗದೆ..?

'ಆಗಲಿ....ನಾಳೆ ಇದೇ ಹೊತ್ತಿಗೆ ಇಲ್ಲವೆ ಮೊದಲು ಬರುತ್ತೀರಾ....ಕರೆದುಕೊಂಡು ಹೋಗುತ್ತೀರಾ....'

'ಸಾಧ್ಯವಿದ್ದರೆ'

ಅಷ್ಟರಲ್ಲಿ ತಂದೆಯ ಎರಡನೆ 'ಭಾಗೀ' ಎಂಬ ಕರೆಯು ಕೇಳಿಸಿತು. ಭಾಗಿ ಓಡಿಹೋದಳು.

ಚಂದ್ರಯ್ಯನು ನಿರಾಶೆಗೊಂಡೇ ಬಂದಿದ್ದನು. ತಿರುಗಿ ಭಾಗಿ ಕಾಣಸಿಗುವಳು–ತಾನಾಗಿ ಎಂದಾದರೂ ಕಾದಿದ್ದಾಳು–ಎಂಬುದನ್ನು ಎಣಿಸಿರಲಿಲ್ಲ. ಈಗ ಅವನ ಮನಸ್ಸು ಭಾಗಿಯ ವಿಚಾರದಲ್ಲಿ ಅಭಿಮಾನವನ್ನು ತಾಳಿತು. ಆದರೆ ತಮ್ಮ ಮುಂದಿನ ಜೀವಮಾನ ಯಾವ ರೂಪವನ್ನು ತಾಳುವುದೆಂದು ಮಾತ್ರ ಊಹಿಸಲಾರನು.

೧೪

# ಮಿಂಚಿದ ಕಾರ್ಯ

ಅದೇ ಪಂಚಮಿ. ಈ ದಿನದ ಅರ್ಧಕಥೆಯನ್ನು ಈಗಾಗಲೇ ಕೇಳಿಯಾಯಿತು ವೆಂಕಟರಮಣಯ್ಯನ ಮನೆಯ ಕೋಲಾಹಲವನ್ನು. ವೆಂಕಟರಮಣಯ್ಯ ಹಂಡೆಯ ನೀರನ್ನು ಬರಿದು ಮಾಡಿ ನೀರಿಲ್ಲವೆಂದು ತಿಳಿದ ಮೇಲೆ ಸ್ನಾನವಾಯಿತೆಂದು ತಿಳಿದು ದೇವರ ಮನೆಗೆ ಬಂದರು. ಆ ಒಂದು ದಿನ ದೇವರು ಅನುಭವಿಸಿದ ಕಷ್ಟ ಹೇಳಿ ತೀರದು. ಒಂದೊಂದು ಮಂತ್ರವೂ–ಮನೆ ದೇವರು ಲಕ್ಷ್ಮೀನರಸಿಂಹನನ್ನು, ಒಂದೊಂದು ಅಂಬಿನಂತೆ ನಾಟುತ್ತಿತ್ತು. ಕೊನೆಯ 'ಲಕ್ಷ್ಮೀನರಸಿಂಹಾಯನಮಃ' ಎಂದುದು ಅವನಿಗೆ ಕಿವಿಯಿದ್ದುದಾದರೆ 'ಥೂ ಕತ್ತೆ ಕರುವೇ' ಎಂದ ಹಾಗೆ ಕೇಳಿಸಬೇಕು. ಅವರು ಜಾಗಟೆ ಹಿಡಿದರೆ ಗದೆ ಹಿಡಿದಂತೆ ಕಂಡಿತು. ಆರತಿ ಹಿಡಿದರೆ ನಾರಸಿಂಹನ ಕೇಸರಕ್ಕೆ ಮೋಸಬಂದಂತೆ ಕಂಡಿತು. ವೆಂಕಟರಮಣಯ್ಯನ ಹಸಿವು ಬಲವಾದುದರಿಂದ ಲಕ್ಷ್ಮೀನರಸಿಂಹನು ಬೇಗನೆ 'ಬಚಾಯಿಸಿ 'ಕೊಂಡೆನೆನ್ನಬೇಕು.

ಅಡುಗೆ ಮನೆಗೆ ದಯಮಾಡಿಸಿದರು. ಅವರ ಒಂದೊಂದು ಮಾತು ಒಂದೊಂದು ಶೃತಿಯಲ್ಲಿ ಉದುರುತ್ತಿತ್ತು. ಆರ್ಭಟೆ, ಘರ್ಜನೆ, ಹೇಷಾರವ–ಎಲ್ಲವನ್ನು ಕೂಡಿಸಿದ ಧ್ವನಿಯಿಂದ 'ಏನು–ಬಡಿಸಬಾರದೆ?' ಎಂದು ಕೇಳಿದರು. ಎಲೆಯ ಮೇಲೆ ಬಡಿಸಿದ ಅನ್ನವೂ ಅವರಿಗೆ ಕಾಣಿಸಲಿಲ್ಲ. ಏನು ಉಂಡರೋ, ಪಾಪ ಹೇಳಲಾಗದು. ಮಾತುಮಾತಿಗೆ ಆರ್ಭಟೆ.. 'ನಿಮ್ಮನ್ನೆಲ್ಲಾ ಸಾಕುವ ಬದಲು ನಾಯಿಗಳನ್ನು ಸಾಕಬಹುದಿತ್ತು. ಅವಕ್ಕಾದರೂ ಯಜಮಾನನೆಂದರೆ ಬಾಲ ಅಲ್ಲಾಡಿಸಲಿಕ್ಕೆ ಬರುತ್ತದೆ....ನೋಡುವ, ಮನೆಯನ್ನು ಬಿಟ್ಟು ಎಲ್ಲಿ ಹೋಗುತ್ತಾನೆಂದು ನೋಡುವ.' ಎಂದುಕೊಂಡೇ ಎದ್ದರು.

ಇತ್ತಂಡ ವಾದ ಉಪಯೋಗವಿಲ್ಲವೆಂದು ಅವರ ಹೆಂಡತಿಗೆ

ಗೊತ್ತು. ಉಸಿರು ಖರ್ಚಾದೊಡನೆ ಅವರ ಶಂಖಧ್ವನಿ ತನ್ನಂತೆ ನಿಲ್ಲುತ್ತದೆ. ಎಂದು ಅವಳಿಗೆ ಅನುಭವ. ಅನ್ನ ಬಿದ್ದಂತೆ ದಮ್ಮು ಹೊರಡಿಸುವುದು ಕಷ್ಟವಾಯಿತು. ಮಾತಾಡುತ್ತಾ ಮಾತಾಡುತ್ತಾ ಊಟ ಮಾಡಿ ಗಂಟಲಿಗೆ ಎರಡು ಮೂರಾವೃತ್ತಿ ಅನ್ನದ ಅಗಳು ಸಿಲುಕಿ–ಹತ್ತು ನಿಮಿಷ ಕೆಮ್ಮಿ, ಎರಡು ಬಿಂದಿಗೆ ನೀರನ್ನು ಕುಡಿದು, ಅರ್ಧ ಔನ್ಸು ಕಣ್ಣೀರು ಸುರಿಸಿ–' ಹಾಳು ಊಟ ಇದೊಂದು ' ಎಂದು ಎದ್ದರು. ಊಟ ಮಾಡಿ ಎಲೆ ಅಡಿಕೆಯನ್ನು ತಿನ್ನಲಿಲ್ಲ. ಒಂದು ಕೊಡೆಯನ್ನು, ಒಂದು ಪಂಚೆಯನ್ನು ಕಂಕುಳಲ್ಲಿ ತುರುಕಿಕೊಂಡು ನಡೆದೇ ಬಿಟ್ಟರು.

ಹಿರಣ್ಯನು ಅವಸರ ಅವಸರದಿಂದ ಹೊರಟು ಬಿಸಿಲಿನಲ್ಲಿ ಮಾವನ ಮನೆಯಿರುವ ಗ್ರಾಮವನ್ನು ಸೇರಿದನು. ಇನ್ನೊಂದು ಗುಡ್ಡದಾಟಿದರೆ-ಕೆಳಗೆ ಬಯಲಿನ ಶಿವಾಲಯ ಸಿಗುವುದು. ಅದನ್ನು ಕಳೆದು ಆರು ಗದ್ದೆಗಳನ್ನು ದಾಟಿದರೆ ಮುಂದಿರುವುದು ಮಾವನ ಮನೆ. ಗುಡ್ಡದ ತುದಿಯಿಂದ ಮಾವನ ಮನೆ, ಶಿವಾಲಯಗಳೆಲ್ಲಾ ಮರಗಳ ಸಂದಿನಲ್ಲಿ ತಲೆಯೆತ್ತಿ ಕಾಣುತ್ತವೆ. ಅದನ್ನು ಕಂಡೊಡನೆ ಹಿರಣ್ಯನ ಕಾಲು ತಟಸ್ಥವಾಯಿತು. ' ಅಲ್ಲಿಗೆ ನೇರಾಗಿ ಹೋಗಲೇ ಬೇಡವೇ ಮನೆಯಲ್ಲಿ ಭಾಗಿ ಇದ್ದಾಳೆಯೋ ? ಮಾವ ಇದ್ದಾನೆಯೋ. ಎರಡು ವರುಷದ ಬಳಿಕ ಬರುವ ತನ್ನನ್ನು ಅವರು ಮಾತನಾಡಿಸುವರೊ ? ತಾನು ಹೋಗುವುದು, ಅವರು ಮೂಸದಿರುವುದು, ಈ ಸುದ್ದಿ ಊರೆಲ್ಲ ಹಬ್ಬಿದರೆ ಎಂಥಾ ಮಾನಗೇಡಿ ಅಳಿಯನಪ್ಪಾ ಎಂದು ಅಪಕೀರ್ತಿ ಬರುವುದು . .' ಅದನ್ನೆಲ್ಲಾ ನೆನೆದು ಅವನಿಗೆ ಭೀತಿಯಾಯಿತು. ಯೋಚನೆಯಿಂದ ಅವನ ಕಾಲು ಮುಂದೆ ಸರಿಯುವ ಬದಲು ಅಡ್ಡ ಹಾದಿ ತಿರುಗಿತು. ಅಲ್ಲೊಂದು ಒಂಟಿ ನಾಗ ಸಂಪಗೆ ಮರವಿತ್ತು. ಅದರ ಕೆಳಗೆ ಹೋಗಿ ಕುಳಿತನು. ಆಯಾಸವೂ ಆಗಿತ್ತು. ಕೈಕಾಲು ನಡುಗುತ್ತಿತ್ತು. ಕಣ್ಣುಗಳು ಉಬ್ಬಿ ಕೆಂಪಾಗಿದ್ದವು. ಮನಸ್ಸು ಶೂನ್ಯವಾಗಿ ಅಲ್ಲಿಂದಿಲ್ಲಿಗೆ, ಇಲ್ಲಿಂದಲ್ಲಿಗೆ ನೆಗೆಯುತ್ತಿತ್ತು.

ಪಡುವನ್ನು ನೋಡಿದರೆ ಹೊತ್ತು ತಿರುಗಿತ್ತು. ಮೂರುಗಂಟೆಯಾಗಿರಬಹುದು. ' ಹೇಗೂ ಬಂದಿದ್ದೇನೆ–ಇನ್ನು ಮನೆಗೆ ಹೋಗುವಂತಿಲ್ಲ. ಮತ್ತೇನಾದರೇನು ? ' ಎಂದು ಧೈರ್ಯಮಾಡಿ ಗುಡ್ಡವನ್ನು

ಇಳಿಯತೊಡಗಿದನು. ಅವನ ಬೀಸು ಹೆಜ್ಜೆಯು ಅರೆಗಳಿಗೆಯಲ್ಲಿ ಅವನನ್ನು ಮಾವನ ಮನೆಗೆ ತಂದಿತು. ಮನೆ ಮುಂದಿನ ಅಂಗಣದಲ್ಲಿ ಒಂದು ತೆಂಗಿನ ಹೆಡೆಯನ್ನು ಸವರುತ್ತಾ ಮಾವ ಗೋಪಾಲಯ್ಯ ನಿಂತಿದ್ದರು. ಬಿದ್ದ ಗರಿಗಳಿಂದ ಕಡ್ಡಿಗಳನ್ನು ಆಯುತ್ತಾ ಭಾಗೀರಥಿ ಕುಳಿತಿದ್ದಳು. ಹಿತ್ತಿಲ ತೊಡಮೆ ದಾಟುತ್ತಲೇ ಹಿರಣ್ಯನಿಗೆ ಇಬ್ಬರ ದರ್ಶನವಾಯಿತು. ತಮ್ಮ ಕೆಲಸದಲ್ಲಿ ನಿರತರಾದ ಅವರಿಗೆ ಹಿರಣ್ಯನು ತೀರಾ ಹತ್ತಿರ ಬರುವತನಕ ತಿಳಿಯಲಿಲ್ಲ. ಅವನನ್ನು ಮೊದಲಿಗೆ ಕಂಡವಳು ಭಾಗೀರಥಿ. ಮುಖವೆತ್ತಿ ಕಂಡವಳು, ಅಲ್ಲಿಂದೆದ್ದು ನೆಟ್ಟಗೆ ಮನೆಯನ್ನು ಸೇರಿದಳು; ಮಗಳು ಹೊರಟಳೇಕೆಂದು ಗೋಪಾಲಯ್ಯ ತಿರುವಿ ನೋಡಿದರೆ– 'ಅಳಿಯ ರಾಯರು' ಬಂದಿದ್ದಾರೆ. ಅವನನ್ನು ಕಂಡು ಮುಖದಲ್ಲಿ ತಿರಸ್ಕಾರವುಂಟಾಯಿತು. ಆದರೆ ಹಿರಣ್ಯನ ಭ್ರಮಿತ ಕಣ್ಣುಗಳನ್ನೂ ಬೆವರುವ ಮುಖ ಮೈಗಳನ್ನೂ ಕಂಡು ಚಕಿತರಾದರು. 'ಬನ್ನಿ' ಎಂದು ಮನೆಗೆ ಕರೆದೊಯ್ದು, ಚಾಪೆಯನ್ನು ಬಿಡಿಸಿದರು. 'ಬಾಯಾರಿಕೆ ಬೇಕೊ?' ಎಂದು ಕೇಳಿದರು.

'ಹಿರಣ್ಯ' ಬೇಡವೆಂದರೂ, ಅವನು ದಣಿದಿದ್ದನೆಂಬುದನ್ನು ಬಲ್ಲ ಗೋಪಾಲಯ್ಯ ಮನೆಯೊಳಗೆ ಹೋದರು. ಬಾಯಾರಿಕೆ ತಯಾರಿಸುವುದಕ್ಕೂ ಸರಿಯೆ! ಭಾಗಿಗೆ 'ಬರಟಾಗಬೇಡ' ಎನ್ನಲಿಕ್ಕೂ ಸರಿಯೆ. ಒಳಗೆ ಹೋಗಿ 'ಭಾಗೀ, ಒಂದಿಷ್ಟು ಕಾಫಿ ಮಾಡುತ್ತೀಯಾ?' ಎಂದು ಕೇಳಿದರು.

'ಅವರಿಗೆ?'

ಆ ಮಾತು ತುಸು ಬೇಸರವನ್ನುಂಟು ಮಾಡಿತು— 'ಅವರಿಗಲ್ಲ, ಮನೆಗೆ ಬಂದವರಿಗೆ' ಎಂದನು.

ಭಾಗಿಯು ತನ್ನ ಬಿರುನುಡಿಗಾಗಿ ವ್ಯಸನಗೊಂಡಳು. 'ಮಾಡುತ್ತೇನೆ' ಎಂದಳು.

'ತಿಂಡಿ?'

'ಉಪ್ಪಿಟ್ಟು ಮಾಡಲೇ?'

ಸರಿ, ಮನಸ್ಸಿಲ್ಲಿ ಇದ್ದರೂ ಭಾಗಿಯು ಹಿರಣ್ಯನ ಸನ್ಮಾನಕ್ಕೆ ಅಣಿಯಾದಳು. ಗೋಪಾಲಯ್ಯ ಹೊರಗೆ ಬಂದು ಅಳಿಯನಿಗೆ ಕಾಲುತೊಳೆಯಲು ನೀರು ಕೊಟ್ಟು 'ಕ್ಷೇಮವೇ' ಎಂದು ಕೇಳಿದರು. 'ಕ್ಷೇಮವೇ' ಎಂಬ ಮಾತು ಅವನ ಬಾಯಿಯಿಂದಲೂ ಬಂದಿತು. ಕಣ್ಣಿನಿಂದ ಒಂದು ತೊಟ್ಟು ನೀರು ಸುರಿಯಿತು. ಅದನ್ನು ಕಂಡು 'ಇದೇನು ವಿಚಿತ್ರ ನಡೆದಿರಬೇಕು' ಎಂದು ಅನಿಸಿತು. 'ಮೊದಲು ಕಾಲು ತೊಳೆಯಿರಿ' ಎಂದರು. 'ಬೇಡ' ಎಂದನು ಹಿರಣ್ಯ. ಆದರೂ ಬಲವಂತಕ್ಕೆ ಕಾಲು ತೊಳೆದು ಬಂದು ಚಾಪೆಯ ಮೇಲೆ ಕುಳಿತನು. ಯಾರೂ ಏನೂ ಮಾತಾಡಲಿಲ್ಲ. ಏನೆಂದು ಮಾತನ್ನು ಮುಂದುವರಿಸುವುದು? ಕಾಫಿ ಬರುವತನಕವೂ ಹೀಗೇ ತಡೆಯಿತು. ಭಾಗೀರಥಿಯು ಕಾಫಿ, ಉಪ್ಪಿಟ್ಟನ್ನು ತಂದಿರಿಸಿ ಸಟಕ್ಕನೆ ಒಳಗೆ ನಡೆದಳು. ಉಪ್ಪಿಟ್ಟಿನ ತಟ್ಟೆಯು ಸದ್ದು ಮಾಡಿಕೊಂಡು ನೆಲವನ್ನು ಅಪ್ಪಳಿಸಿತು.... ಅಷ್ಟೊಂದು ಮನಸ್ಸು ಕೃತಿಯಲ್ಲಿ ಬಯಲಾಯಿತು. ಆದರೆ ಹಿರಣ್ಯನಿಗೆ 'ಭಾಗೀರಥಿಯು ಅಷ್ಟನ್ನು ತಂದಳಲ್ಲ' ಎಂದು ಧೈರ್ಯವಾಯಿತು. ಗೋಪಾಲಯ್ಯ 'ಬಾಯಾರಿಕೆ ತೀರಿಸಿ, ಆಮೇಲೆ ಮಾತನಾಡುವ' ಎಂದರು. 'ಆಮೇಲೇನು ಈಗೇನು' ಎಂದು ಹಿರಣ್ಯನು ಗದ್ಗದಿತನಾಗಿ ಹೇಳಿದನು......

ಉಪ್ಪಿಟ್ಟು ತಿನ್ನುವುದು; ಉಪ್ಪಿಗೆ ಕಣ್ಣೀರುಪ್ಪನ್ನು ಸೇರಿಸುವುದು ಒಂದೊಂದು ನುಡಿಯನ್ನು ಆಡಲು ಯತ್ನಿಸುವುದು– ಹಿರಣ್ಯನ ಕೆಲಸ. ಬಲು ಕಷ್ಟದಿಂದ ತಾಳಮೇಳವಾಗದ ರೀತಿಯಲ್ಲಿ ಮಾತನಾಡಿ ಕೊನೆಗೆ ಉಪಸಂಹಾರವೆಂಬಂತೆ—'ನಮ್ಮ ಮನೆಯ ಋಣವನ್ನು ಹರಿಸಿ ಭಾಗಿಯನ್ನು ಬೇಡಲಿಕ್ಕೆ ಬಂದಿದ್ದೇನೆ.' ಎಂದನು. ಮುಂದೆ ಅವನ ಬಾಯಿಯಿಂದ ಮಾತು ಹೊರಡದು. ಗೋಪಾಲಯ್ಯನದು ಧಾರಾಳ ಮನಸ್ಸು....ಅಳಿಯನು ಅಸ್ಪಷ್ಟವಾಗಿ ನುಡಿದರೂ, ವೆಂಕಟರಮಣಯ್ಯನೇ ಇಷ್ಟೆಲ್ಲಕ್ಕೂ ಕಾರಣರೆಂಬುದು ತಿಳಿದವರಾದುದರಿಂದ ಹಿರಣ್ಯನನ್ನು ಸಮಾಧಾನ ಪಡಿಸಿದರು. 'ಈಗೇನು ಅವಸರ? ನಾಲ್ಕು ದಿವಸ ಮನೆಯಲ್ಲಿರಿ: ಭಾಗಿಗೂ ದೇವರು ಒಳ್ಳೇ ಬುದ್ಧಿ ಕೊಟ್ಟಾನು'–ಎಂದರು.

ಆ ಮಾತುಗಳು ಹೊರಬೀಳುವಾಗ ಭಾಗೀರಥಿಯು ಅವರ ಮುಂದಿಂದಲೇ ಹಾದು ನೆರೆಮನೆಗೆ ಹೊರಟು ಹೋದಳು.

ಗೋಪಾಲಯ್ಯನು ಬಲುಹೊತ್ತಿನತನಕ ಕುಳಿತಿದ್ದರು. ಅಳಿಯನ ದಣಿವು, ದುಃಖಗಳು ಸಾಕಷ್ಟು ಶಾಂತವಾದ ಬಳಿಕ ನಡೆದ ವಾರ್ತೆಯನ್ನು ಇನ್ನೊಮ್ಮೆ ಸಮಗ್ರವಾಗಿ ಕೇಳಿದರು. ಅವರ ಅಂತರಂಗದಲ್ಲಿ ಭಾಗಿಗೆ ಒಳ್ಳೇ ದಿನಗಳು ಬಂದವು ಎಂದು ಹೊಳೆಯಿತು. ಜಾತಕವನ್ನು ತೋರಿಸಿದಾಗಲೂ 'ಈ ಎರಡು ವರುಷ ಕಠಿಣ ಶನಿದೆಸೆ. ಅದು ಕಳೆದ ಮೇಲೆ ಅವಳು ಸುಖಿಯಾಗುತ್ತಾಳೆ' ಎಂದಿದ್ದರು. ಈಗ ಆ ಘಟಿಕಾಲ ಒದಗಿರಬೇಕು.

---

೧೫

# ಎಣಿಸಿದಷ್ಟು ಸುಲಭವಲ್ಲ

ಹಿರಣ್ಯ–ಗೋಪಾಲಯ್ಯ–ಚಂದ್ರಯ್ಯ–ಭಾಗೀರಥಿ ಈ ಒಬ್ಬೊಬ್ಬರು ಒಂದೊಂದನ್ನು ಎಣಿಸಿದ್ದರು. ಯಾರ ಎಣಿಕೆಯು ಕಾರ್ಯಕ್ಷೇತ್ರದಲ್ಲಿ ಸಫಲವಾಗುವುದೆಂಬುದು ತಿಳಿಯದ ವಿಷಯ. ಊಹೆಗೆ ವಿಚಾರಿದ ಪ್ರಸಂಗ. ಒಂದೊಂದು ಮನಸ್ಸುಗಳು ಇತ್ತಡಿಯನ್ನು ಸೇರಲೆತ್ನಿಸುತ್ತವೆ. ನಾಲ್ವರು ಎಂಟು ಬಗೆಯಾಗಿ ಯೋಚಿಸುತ್ತಾರೆ. ಇದರಲ್ಲಿ ನಿರ್ಧಾರ, ಒಂದು ಮತವೆಂದರೆ ಗೋಪಾಲಯ್ಯನದು. ಮಗಳೂ ಅಳಿಯನೂ ಕೂಡಿ ಸುಖವಾಗಿರಲಿ, ಮನೆ ಅಳಿಯ ಆದರೂ ಚಿಂತೆ ಇಲ್ಲ. ಅವರಿಗಿರುವ ಮೂವರು ಹೆಣ್ಣುಮಕ್ಕಳಲ್ಲಿ ಒಬ್ಬಳ ಮದುವೆಯಾಗಿ ದೂರ ಹೋಗಿದ್ದಾಳೆ. ನಡುವಿನವಳು ಭಾಗೀರಥಿ. ಕಿರಿಯವಳು ಒರಿಯ ಆರೇಳು ವರ್ಷದ ಕೂಸು. ಹಿರಣ್ಯನು ಮನೆಗೆ ಭಿಕ್ಷಾರ್ಥಿಯಾಗಿ ಬಂದಿದ್ದಾನೆ. ಎಂದಬಳಿಕ ಮರುಮಾತಿಲ್ಲ. ಎಂಥ ತಪ್ಪಿದ್ದರೂ ಕ್ಷಮೆಯೆ.

ನ್ಯಾಯವಾಗಿ ತೋರುವ ಆ ಒಂದು ಹಾದಿಯನ್ನು ಮುಚ್ಚಿದರೆ ಬೇರೆ ಯದು ಚಲುವಿನ ದಾರಿಯಿಲ್ಲ, ಲೋಕದಲ್ಲಿ ಕೀರ್ತಿಯನ್ನು ತರುವಂಥ ದಲ್ಲ.

ರಾತ್ರಿ ಊಟವಾದ ಬಳಿಕ ಗೋಪಾಲಯ್ಯನು ಮಗಳನ್ನು ಕಿರು ಮನೆಗೆ ಕರೆದುಕೊಂಡು ಹೋಗಿ 'ಭಾಗಿ, ಕೊನೆಗೂ ಅವರಿಗೆ ಬುದ್ಧಿ ಬಂದಿತು. ಹಿರಣ್ಯನು ಪಾಪದವ. ನಾನು ಮೊದಲೇ ಅನ್ನಲಿಲ್ಲವೇ? ಈಗ ನಿನಗಾಗಿ ಮನೆಯನ್ನು ಬಿಟ್ಟಿದ್ದಾನೆ. ಮಾತಿಗೆ ಮೀರಿದ ಮಗನನ್ನು ತಂದೆ ತಿರಸ್ಕರಿಸಿದ್ದಾನೆ. ಹಿರಣ್ಯನನ್ನು ಇತ್ತಟ್ಟಿನ ಸಂಕಟಕ್ಕೆ ಒಡ್ಡ ಬಾರದು' ಎಂದರು. ಭಾಗೀರಥಿ ಒಂದಕ್ಕೂ ಮಾತನಾಡುವಂತಿಲ್ಲ. ಬಾಯ್ದೆರೆದು 'ನಾನು ಚಂದ್ರಯ್ಯನ ಹಿಂದೆ ಹೋಗುತ್ತೇನೆ. ಅವನೂ ಕರೆಯಲು ಬಂದಿದ್ದಾನೆ. ನನ್ನ ಯೋಚನೆಯನ್ನು ಬಿಟ್ಟುಬಿಡಿ—ನಾನು ತಿದ್ದುಪಡಿಗೆ ಮೀರಿದವಳು" ಎನ್ನುವ ಮನಸ್ಸು. ಆದರೆ ನಾಲಿಗೆ ತಡ ವರಿಸುತ್ತದೆ. ಅಲ್ಲದೆ ಅವಳೂ ಯೋಚನೆಗೀಡಾಗಿದ್ದಾಳೆ. ಸಂಜೆ ನೆರೆ ಮನೆಗೆ ಹೋದಳಷ್ಟೆ; ಅಲ್ಲಿ ಚಂದ್ರಯ್ಯನು ಕಾಣಸಿಗಲಿಲ್ಲ. ಸಂಜೆಗೆ ಸಮನಾಗಿ ಶಿವಾಲಯದ ಪೌಳಿಯ ಮೇಲೆ ಕಾದು ಕುಳಿತಳು. ಅವನಿಂದ ತೀರ್ಮಾನವನ್ನು ಪಡೆದು ಬೆಳಗಾಗುವುದರಲ್ಲಿ ಆ ಹಳ್ಳಿಯಿಂದಲೇ ಮರೆ ಯಾಗಬಹುದೆಂದು ಎಣಿಸಿದ್ದಳು. ಆದರೆ ಚಂದ್ರಯ್ಯನು ಬರಲೇ ಇಲ್ಲ. ಕತ್ತಲು ಹರಿದು ಬಹಳ ಹೊತ್ತಾದರೂ ಬರಲಿಲ್ಲ. ತಂದೆಯು ಬಂದು ಅವಳನ್ನು ಮನೆಗೆ ಕರೆದೊಯ್ದನು. ಅವಳು ಅಲ್ಲಿ ಕಾದು ಕುಳಿತಳೇಕೆಂದು ತಂದೆಗೆ ತಿಳಿಯದು. ಚಂದ್ರಯ್ಯನೇಕೆ ಮಾಯವಾದನೆಂದು ಅವಳು ಊಹಿಸಲಾರಳು. ಅಷ್ಟು ಆತುರಪಟ್ಟು ಬಂದವನು. ನಡುವೆ ಏನಾದರೂ ಕಾರ್ಯವು ಅವನನ್ನು ಸೆಳೆದಿರಬೇಕು; ಹೋಗಿರಬಹುದು. ಆದರೆ ಒಂದು ವರ್ಷದಿಂದ ಬಾಯಾರಿದವನು ಈ ದಿನವಾದರೂ ಗೆಳೆತನದ ತೃಷೆಯನ್ನು ತೀರಿಸಲಾರನೇ . . ಬರುವನು . . ತನ್ನ ಅಭಿಪ್ರಾಯವನ್ನು ತಿಳಿದಾಯಿತು. ಎಲ್ಲಾದರೂ ಕಣ್ಮರೆಯಾಗಲು ಸಿದ್ಧತೆ ಮಾಡಿಕೊಂಡು ಬರಬಹುದು. ಹೀಗೆಂದು ಕನಸಿನ ಅರಮನೆಗಳನ್ನು ರಚಿಸುತ್ತಾಳೆ.

ಈ ಯೋಚನೆಗಳ ತಿಕ್ಕಾಟವಾಗುತ್ತಿದೆ. ನಡುವೆ ನಿರ್ಧಾರದ ಪ್ರತ್ಯುತ್ತರ ದೊರೆಯುವ ತನಕ ಗೋಪಾಲಯ್ಯ ಕದಲುವಂತಿಲ್ಲ. 'ಹೀಗೆ ಮಾಡದೆ ಬೇರೆ ಏನು ಮಾಡುತ್ತೀ? ನಿನಗೆ ಯಾರಿದ್ದಾರೆ? ನಾನೆಷ್ಟು ದಿವಸ ಬದುಕಿಯೇನು?' ಎಂದು ಹೇಳಿದರೆ 'ನನಗೆ ನಾನು ಇದ್ದೇನೆ—ಯಾರೂ ಬೇಡ. ಇವರಂತೂ ಬೇಡ. ಇವರಿಗೆ ನನ್ನನ್ನು ಕಾಯುವ ಬುದ್ಧಿ ಇದ್ದಿದ್ದರೆ ಆ ದಿನವೇ ಬರಬೇಕಿತ್ತು. ಆಗ ಬೇಡದವಳು ಈಗೇಕೆ ನಾನು?' ಎಂದಳು.

'ಅದೊಂದು ಮಾತೇ!'

'ಆ ಒಂದು ಗಳಿಗೆಯಲ್ಲಿ ಅವನು ತಪ್ಪಿದನು. ಅದು ತಪ್ಪು ಎಂದು ಅವನೇ ಹೇಳುತ್ತಾನಲ್ಲ.'

'ಅವನು ಹೇಳಿದರೆ ಈಗೇನು ಮಾಡಲಿ. . ನಾನು ಬೇರೆಯುವರಿಗೆ . .

ಈ ಮಾತೊಂದಕ್ಕೆ ಅವಕಾಶವಿದೆಯೆಂದು ಗೋಪಾಲಯ್ಯ ತಿಳಿದಿರಲಿಲ್ಲ. ಊರಲ್ಲಿ ಅಪವಾದವಿತ್ತು. ಅಪವಾದವನ್ನು ಕಿವಿಯಿಂದ ಕಿವಿಗೆ ನಾಗಿಸುವವರು ಬರಿಯ ಚಾಡಿಯಲ್ಲಿ ತೃಪ್ತರು. ಇನ್ನೊಬ್ಬರು ಹಾಳಾಗುವರಲ್ಲ—ಎಂದು ವ್ಯಸನಪಡುವಂತೆ ಅವರು ತೋರಿಸಿಕೊಂಡರೂ ಅವರ ಕುಲ ಅಂಥದಲ್ಲ. ಅವು ಅಪ್ರಾಮಾಣಿಕ ಜೀವಿಗಳು. ತಮ್ಮ ಚಾಡಿಯ ಬೆಂಕಿ ಬೆಳೆಯಲು ಯೋಗ್ಯ ಕಟ್ಟಿಗೆ ದೊರೆತರಾಯಿತು ಅವರಿಗೆ. ಚಾಡಿಕಾರರು ಪ್ರತ್ಯಕ್ಷವಾಗಿ ಹಿತಬೋಧಿಗಳಂತೆ ಮಗಳ ಕುರಿತು ಕೇಳಿದ್ದನ್ನು ತಂದೆಗೆ ಹೇಳರು. ತೀರ ಆಪ್ತರಾದಂತೆ ಅವರು ಸುದ್ದಿಗೆ ದೂರ. ಚಾಡಿಗೆ ಎದೆಗಾರಿಕೆ ಬೇಡ—ಕುಯುಕ್ತಿ ಸಾಕು; ಆದರೆ ಪ್ರತ್ಯಕ್ಷ ಹಿತಕಾಂಕ್ಷಿಗೆ ಧೈರ್ಯಬೇಕು. ನಿರ್ವಂಚನೆಬೇಕು. . . . ಹೀಗಿರಲು ಗೋಪಾಲಯ್ಯನಿಗೆ ಚಾಡಿಸುದ್ದಿಗಳು ಸೇರಲಿಲ್ಲ. ಇಂದು ಭಾಗಿಯು ತಾನಾಗಿ 'ನಾನು ಬೇರೆಯುವರಿಗೆ. . . .' ಎನ್ನಲು ಅವನ ಎದೆ ಹಾರಿತು 'ನನ್ನ ಮಾನ ತೆಗೆಯುತ್ತಿಯಾ? ನಿನ್ನ ಅನ್ನವನ್ನು ಬಿಟ್ಟು ಎಂಜಲು ಅನ್ನಕ್ಕೆ ಕೈ ಹಾಕುತ್ತಿಯಾ?'

'ನನಗೆ ಮೊದಲು ಕೊಟ್ಟದ್ದು ಎಂಜಲು ಅನ್ನ. ಧಾರೆಮಂಟಪ ದಿಂದ ಇಲ್ಲಿಗೆ ಬರುವತನಕ ಎಂಜಲೇ ಗತಿ. ಈಗ ಅನ್ನ ಕೊಡು ವವರೊಬ್ಬರು ದೊರೆತಿದ್ದಾರೆ. ಪ್ರೀತಿಸ ಬಂದವರು ಬೆಲೆಯರಿಯದೆ ಕೊಂಡವರಲ್ಲ.'

ಗೋಪಾಲಯ್ಯನ ತಲೆ ಬಿಸಿಯಾಯಿತು. ತನ್ನ ಮಗಳು ಸಪತಿ ವಿಧವೆಯಾಗಿ ಇರುವುದು ಸಾಧ್ಯವಿಲ್ಲೆಂದೂ, ಅವಳಂಥವಳು ಕಾಮುಕ್ಕೆ ಬಲಿಯಾದರೆ ಅದು ಮಾಂಸದ ಶೀಲವೆಂದೂ ಒಲ್ಲರು. ಆದರೆ ಅದು ಅಂತ ರಂಗದಲ್ಲಿ. ಬಹಿರಂಗದಲ್ಲಿ ಹಾಗೆ ಅನ್ನಲು ಬಂದೀತೆ? ಒಪ್ಪಲು ಬಂದೀತೆ?

'ಮುಂದೆ ಮಾತನಾಡಲಾರದೆ ಯೋಚಿಸಿ ನೋಡು. ಬೇರೆ ಯಾವ ದಾರಿಯಿಂದಲೂ ಚಿರವಾದ ಅಪವಾದ ನಿಂದೆಗಳೇ ಗತಿ. ಯೋಚಿಸಿ ನೋಡು. ಬೆಳಗ್ಗೆ ಆದರೂ ಹಿರಣ್ಯಸಿಗೆ ಹೇಳಬೇಕಲ್ಲ ಒಂದು ಉತ್ತರ. ಪಾಪ–' ಎಂದು ಹೊರಬಿದ್ದರು. ಇವರ ಮುಖವನ್ನು ಕಾಣುತ್ತಲೇ ಹಿರಣ್ಯನ ಉತ್ಸಾಹ ಕುಗ್ಗಿತು. ಇಲ್ಲವಾಯಿತು. 'ಏನು..ಇನ್ನೂ ಹಟ ದಲ್ಲಿದ್ದಾಳೆಯೋ' ಎಂದು ಕೇಳಿದನು.

'ಪಾಪ, ಅವಳಿಗೇನು ಸಾರಾಸಾರ ವಿಚಾರಗೊತ್ತು. ಬೆಳಗ್ಗೆ ಅವಳನ್ನು ಸಮಾಧಾನ ಪಡಿಸುತ್ತೇನೆ. ನೀವು ಸ್ವಸ್ಥವಾಗಿ ಮಲಗಿಕೊಳ್ಳಿ. ಸುಮ್ಮನೆ ಯಾರಾರು ಅವಳ ಕಿವಿಯನ್ನು ಚುಚ್ಚಿರಬೇಕು.'

'ಸ್ವಸ್ಥವಾಗಿ ಮಲಗುವುದೇ? ಇರಲಿ ನಾನೊಮ್ಮೆ ಒಳಗೆ ಹೋಗಲೇ? ಪ್ರತ್ಯಕ್ಷ ಕ್ಷಮೆ ಕೇಳುತ್ತೇನೆ. ಕಾರಣ ನನ್ನದೇ ತಪ್ಪು. ಅವಳ ಮನಸ್ಸು ಅಷ್ಟು ನೊಂದುದರಿಂದಲೇ ಅಷ್ಟು ಕಠಿಣವಾಗಿದ್ದಾಳೆ.. ಅಲ್ಲವಾದರೂ ನನಗೆ ಬೇರೆ ಹಾದಿಯೇನು? ಅವಳು ಬಂದರೆ ಎಲ್ಲಾದರೂ ಬೇಡಿತಿಂದು ಬಾಳ್ವೆ....ಇಲ್ಲವಾದರೆ ಮಸಣ..'

'ಹಿರಣ್ಯನನ್ನು ಕಂಡು ಮಗಳಿಗೆ ಕನಿಕರ ಹುಟ್ಟೀತು ಎಂದು ತಿಳಿದು 'ಆಗಲಿ, ಒಳಗೆ ಕಿರುಮನೆಯಲ್ಲಿದ್ದಾಳೆ' ಎಂದರು.

ಕಿರುಮನೆ–ಅದೇ ಕಿರುಮನೆಯಲ್ಲಿ ನಾಲ್ಕು ದಿನ ನಡೆದ ಉರುಟಣೆ, ಆರತಿಯ ಸಂಭ್ರಮಗಳು, ಆ ಜನರ ಸಮುದಾಯದಲ್ಲಿ ಒಬ್ಬರು ಇನ್ನೊಬ್ಬರನ್ನು ಕದ್ದು ನೋಡಲು ಮಾಡಿದ ಯತ್ನಗಳು, ಅವನ ಮನಸ್ಸಿಗೆ ಹಸುರಾಗಿ ಹೊಳೆದುವು. ಕಣ್ಣೆದುರಿಗೆ ಮದುಮಣಿಗಿತ್ತಿ ಭಾಗೀರಥಿಯೇ ಕಾಣಿಸಿದಳು. ಕಿವಿಗೆ 'ವಧುಬೇಕೇ ಚಪ್ಪರಕೆ....' ಎಂಬ ಶೋಭಾನೆ ಹಾಡು ನಾಗಸ್ವರದಂತೆ ಕೇಳುತ್ತಿತ್ತು. ಹಿರಣ್ಯನು ಸಪ್ಪೆಮೋರೆಯಿಂದ ಕಿರುಮನೆಗೆ ಕಾಲಿಟ್ಟನು. ಭಾಗಿ ಒಂದು ಕಾಲುದೀಪಕ್ಕೆ ಎದುರಾಗಿ ತಲೆ ತಗ್ಗಿಸಿ ಕುಳಿತಿದ್ದಳು. ಹಿರಣ್ಯನು ದೀಪಕ್ಕೆ ಎದುರಾಗಿ ಕುಳಿತನು. ಎರಡು ಮೂರ್ತಿಗಳ ನಡುವೆ ಮಿಣ್ಣಗೆ ಉರಿಯುವ ಕಾಲುದೀಪ. ತಲೆ ಎತ್ತಿ ನೋಡೆನೆಂದು ಬಾಗಿದ ಭಾಗೀರಥಿ–ಎದುರಿಗೆ ಹೊಳೆವ ಕಂಬನಿಗಳಿಂದ ಕೂಡಿದ ಹಿರಣ್ಯ. ಮಾತನಾಡಿಸುವ ಆತುರ....ಕಟ್ಟಿದ ಗಂಟಲು. ಕಣ್ಣಿನಿಂದ ನಾಲ್ಕು ತೊಟ್ಟು ಹನಿಗಳು ಸಟಕ್ಕನೆ ನೆಲಕ್ಕೆ ಉದುರಿದುವು. ನೆಲ ನೋಡುತ್ತಿದ್ದ ಭಾಗೀರಥಿಯು ಚಕಿತಳಾಗಿ ತಲೆ ಎತ್ತಿದ್ದಳು. ಹಿರಣ್ಯನ ಮೌನತುಂಬಿದ ತುಟಿಗಳು ಮಾರುದ್ದ ಮಾತನಾಡುತ್ತಿದ್ದುವು. ನೀಲಾಂಜನದ ಬೆಳಕು ಕಪೋಲವನ್ನು ತೊಯ್ಯುತ್ತಿದ್ದ ಕಣ್ಣೀರಿನ ಮೇಲೆ ಪುಟ್ಟ ಮಿಂಚಿನಂತೆ ಕಾಣಿಸುತ್ತಿತ್ತು. ಅವಳೂ ಹಾಗೆಯೇ ನೋಡುತ್ತ ನಿಂತಳು.

'ಭಾಗಿ....' ಎಂದನು. ಮಾತು ಮುಂದುವರಿಯದು. ಬಲು ಹೊತ್ತಿನ ಬಳಿಕ 'ಭಾಗಿ, ನಿನಗಾಗಿ ತಂದೆಯನ್ನಗಲಿ ಬಂದಿದ್ದೇನೆ. ಬಂದರೆ ಬದುಕುತ್ತೇನೆ. ಇಲ್ಲವಾದರೆ ತೆರಳುತ್ತೇನೆ..'

ಹೆಚ್ಚಿನ ಬೇಡಿಕೆ ಅವನದಿಲ್ಲ. ಕ್ಷಮೆ ಕೇಳುವೆನೆಂದವನು ಕೇಳಲೂ ಇಲ್ಲ..ಭಾಗಿ ಎಷ್ಟು ಹೊತ್ತು ಮೌನವಿದ್ದಾಳು. ಅವಳದೂ ಹೃದಯ. ಕಬ್ಬಿಣ ಬೇರೆಯಲ್ಲ. ತನ್ನನ್ನೇ ನೋಡುವಂತೆ ಪರರನ್ನು ನೋಡಬಲ್ಲಳು.

'ಸರಿ; ನನ್ನ ಮಾತನ್ನು ಕೇಳುತ್ತೀರಾ?'

'ಏನು?

'ಕೇಳುತ್ತೀರಾ..ಆ ಮೇಲೆ ಏನೆಂದು ತಿಳಿದೀತು.'

'ಏನು ಹೇಳು..'

ಈಗ ಭಾಗೀರಥಿಯ ಸರದಿ, ಮಾವನ ಮನೆಯಿಂದ ತಾನು ಬಂದಂದಿನಿಂದ ನಡೆದ ಕಥೆಯನ್ನು ತಡೆ ಇಲ್ಲದೆ, ಆವೇಶವಿಲ್ಲದೆ, ಶಾಂತವಾಗಿ ಹೇಳತೊಡಗಿದಳು. ಬಂದುದು— ಮನಸ್ಸಿಲ್ಲದಾದುದು— ಚಂದ್ರಯ್ಯನನ್ನು ಕಂಡುದು — ಆಬಳಿಕ ಚಂದ್ರಯ್ಯನಿಗಾಗಿ ಮನಸ್ಸನ್ನು ಧಾರೆಯಿತ್ತುದು—ತಿರುಗಿ ನಿನ್ನೆ ದಿವಸ ಅವನು ಬಂದುದು—ತಾನು ಹಿಗ್ಗಿದುದು. ಅವನ ಕೈ ಹಿಡಿದು.... ಎಲ್ಲವನ್ನೂ ಹೇಳಿದಳು.

ಚಂದ್ರಯ್ಯನು ಹಿರಣ್ಯನಿಗೆ ತಿಳಿಯದವನಲ್ಲ. ಸಾಮಾನ್ಯ ದೃಷ್ಟಿಯಿಂದ ಭಾಗೀರಥಿಯ ನಡೆಯು ಭೂಷಣ ತರುವಂತಿರಲಿಲ್ಲ. ಹಿರಣ್ಯನು ಎಲ್ಲವನ್ನೂ ಕೇಳಿದನು. ಭಾಗಿ ಹೇಳಿದಷ್ಟೇ ತಾಳ್ಮೆಯಿಂದ ಕೇಳಿದನು. ಅವನು ಬಲು ಬರಹವಿಲ್ಲದವನು. ನವೀನ ಸಮಾಜಕ್ರಾಂತಿಯ ಸುಳಿಗಾಳಿಗೆ ನಿಲುಕದವನು. ಆದರೆ ಜೀವನವನ್ನು ತಿಳಿದವನು. ತನ್ನ ಸ್ಥಿತಿಯನ್ನು ಎಣಿಸುವ ಮೊದಲು ಬೇರೆಯವರ ಸುಖದುಃಖವನ್ನು ಎಣಿಸಬಲ್ಲವನು.

ಭಾಗೀರಥಿಯು ಅಷ್ಟನ್ನು ಹೇಳಿ 'ಈಗೇನೆನ್ನುತ್ತೀರಿ? ನಿಮ್ಮಲ್ಲಿ ನನಗೆ ವೈರವಿಲ್ಲ' ಎಂದಳು.

'ಭಾಗಿ, ನಾವು ಗಂಡಸರು ತಪ್ಪಿದರೆ ಯಾರೂ ಹೆಚ್ಚೆಂದು ತಿಳಿಯುವುದಿಲ್ಲ. ಆದರೆ ಸ್ತ್ರೀಯ ನಡತೆಯನ್ನು ನೋಡುವಾಗ, ನೋಡುವ ದೃಷ್ಟಿಯೂ ಬೇರಾಗುತ್ತದೆ. ಅಳತೆಯೂ ಬೇರಾಗುತ್ತದೆ. ಆದರೆ ನಾನು ಅಂಥವನಲ್ಲ. ನೀನೇನು ಮಾಡಿದ್ದರು ನನ್ನ ತಪ್ಪಿನಿಂದ ಮಾಡಿದೆ.. ಆ ತಪ್ಪು ನನ್ನದು.'

ಭಾಗೀರಥಿ :– 'ಇನ್ನು ಬಾ ಎನ್ನುತ್ತೀರಾ?

ಹಿರಣ್ಯ :– ನಿನ್ನಂಥವಳನ್ನು ಎಂದೂ ಹಾಗೆನ್ನುತ್ತೇನೆ. ನೀನಲ್ಲದೆ ಬೇರೆ ಯಾರು ಸರಳವಾಗಿ ಮಾತನಾಡುತ್ತಿದ್ದರು.

ಭಾಗೀರಥಿ :– ಅದಕ್ಕೂ ಹೆಚ್ಚಿನದೊಂದಿದೆ.

ಹಿರಣ್ಯ :– ಹೇಳು.

ಭಾಗೀರಥಿ:– ಅವರು ನಿನ್ನೆ ಬಂದಿದ್ದರು. ನೀವು ನನ್ನನ್ನು ಕರೆದಿದ್ದೀರಿ. ನನ್ನ ಮನಸ್ಸು ಸಿದ್ಧವಾಗಿದೆ. ಅದು ಸರಿ ಎಂದೂ ಕಾಣುತ್ತದೆ. ಆದರೆ ಅವರ ಮನಸ್ಸಿನ ಸ್ಥಿತಿ....?

ಹಿರಣ್ಯ:– ಅವನದು ತಪ್ಪು ಕೆಲಸವಲ್ಲವೆ? ಪರರ ಹೆಂಡಿರನ್ನು..

ಭಾಗೀರಥಿ:– ನೀವು ಬೇರೆ ಲಗ್ನವಾಗುವಿರೆಂದು ಸುದ್ದಿ ಹಾಕಿಲ್ಲವೇ? ಆಗ ಬಿದ್ದವಳೊಬ್ಬಳನ್ನು ಎತ್ತಿದಂತಾಗಲಿಲ್ಲವೇ? ಅವರೂ ಅಂದರು– ಒಂದು ವರ್ಷದ ಹಿಂದೆ ಭೇಟಿಯಾದರೂ ನಿನ್ನೆಯತನಕ ಬರಲು ಧೈರ್ಯವಾಗಲಿಲ್ಲೆಂದು.

ಇರಲಿ, ನಾಲ್ಕು ದಿವಸವಾದರೂ ನನ್ನ ಮನಸ್ಸು ನಿಮ್ಮನ್ನು ಪ್ರೀತಿಸಿದೆ. ಆಗ ಪ್ರೀತಿಸಬೇಕೆಂದು ಪ್ರೀತಿಸಿದುದು. ಅವರನ್ನು ಪ್ರೀತಿಸಿದುದು ಸ್ವಭಾವದಿಂದ.... ಅದನ್ನು ಮರೆಯಲು ಬಂದೀತೆ?

ಹಿರಣ್ಯ:– ಹಾಗಾದರೆ ಅವರ ಬಳಿಗೇ ಹೋಗುವೆ ಎನ್ನುತ್ತೀಯಾ?

ಭಾಗೀರಥಿ:– ಹಾಗಲ್ಲ, ನಿಮ್ಮ ಜತೆಯಲ್ಲಿದ್ದು, ಅವರಿಂದ ಮನಸ್ಸನ್ನು ಕೀಳಲು ಸಾಧ್ಯವಾಗದೆ ಹೋದರೆ.. ನಾನು ಮನಃಪೂರ್ವಕ ಯತ್ನಿಸಿದರೂ ಆಗದೆ ಹೋದರೆ.. ನಿಮ್ಮನ್ನು ಸಂಕಟಕ್ಕೆ ಗುರಿಮಾಡಿದಂತಾಗಲಿಲ್ಲವೇ?

ಹಿರಣ್ಯ:– ನಾನೀಗ ಸುಖವಾಗಿದ್ದೇನೆಯೋ....?

ಭಾಗಿ:– ಬರಬೇಕೇ....?

ಹಿರಣ್ಯ:– ನಿನ್ನಿಷ್ಟ.

ಭಾಗೀರಥಿ:– ಬರುತ್ತೇನೆ.

---

೧೬

# ಕನ್ಯೆಯಿಂದ ಕನ್ಯಾ ಪ್ರೇತಕ್ಕೆ

ಚಂದ್ರಯ್ಯನು ತನ್ನ ಗೆಳೆಯರ ಮನೆಯಲ್ಲಿ ವಿರಮಿಸುತ್ತಿದ್ದನು. ಹಿಂದಿನ ರಾತ್ರಿ ಅವನ ಮನಸ್ಸು ಸುಖ ಸ್ವರ್ಗದಲ್ಲಿ ತೇಲಾಡುತ್ತಿತ್ತು. ಬೆಳಕು ಎಂದು ಹರಿಯುವುದು—ತಿರುಗಿ ಎಂದು ಸಂಜೆ ಬರುವುದು ಎಂದು ಇದಿರು ಕಾಯುತ್ತಿದ್ದನು. ಮಧ್ಯಾಹ್ನ ಊಟವನ್ನು ಮುಗಿಸಿ ಗಾಳಿಗೆ ಮೈಯೊಡ್ಡಿ ಮನೆಯ ಹೊರಚಾವಡಿಯಲ್ಲಿ ಒರಗಿದ್ದನು. ಹೊರಗಿನಲ್ಲಿ ಬಿಸಿಲಿನ ಜಳ. ಅದಕ್ಕೆ ಬರಿ ನೆಲವು 'ಹಾ' ಎನಿಸುತ್ತಿತ್ತು. ಮನಸ್ಸಿನಲ್ಲಿ ಮಂಡಿಗೆಗಳು ಬೇಯುತ್ತಲೇ ಇದ್ದುವು. ಅವನ ಸವಿಗನಸು ಆ ಹಾದಿಯಾಗಿ ಬರುತ್ತಿದ್ದ ಹಿರಣ್ಯನನ್ನು ಕಂಡು ಭಂಗವಾಯಿತು. ಹಿರಣ್ಯನು ಗೋಪಾಲರಾಯರ ಮನೆಗೆ ಹೋದುದೂ ಕಂಡಿತು. ಅವನಿಗೆ ತಿರುಗಿ ಲಗ್ನವಾಗುವುದು ನಿಜವಾದರೆ ಅವನೆಂದಾದರೂ ಮೊದಲಿನ ಹೆಂಡತಿಯ ಮನೆಗೆ ಬಂದಾನೆ? ಅಷ್ಟುಮಾತ್ರವಲ್ಲ—ಹಿರಣ್ಯನು ಮನೆಯಲ್ಲಿರುವಾಗಲೇ ಭಾಗೀರಥಿಯು ತನ್ನನ್ನು ಭೇಟಿಯಾಗಲು ಸಾಧ್ಯವೇ—ಎಂದೆನಿಸಿತು.

ಹಿರಣ್ಯನು ಕರೆಯಲು ಬಂದಿರಬೇಕು. ಭಾಗೀರಥಿಯು ತಾನಿರದಿರುತ್ತಿದ್ದರೆ ಹೇಗೆ ವರ್ತಿಸುತ್ತಿದ್ದಳೋ? ಅವರವರ ಮನಃಕ್ಲೇಶಗಳೊಂದೂ ಇವನಿಗೆ ತಿಳಿಯದು. ಆದರಿಂದ ಫಲವನ್ನುಣ್ಣಿಸುವ ಹಾಗೂ ಇಲ್ಲ. ಅಂತು ಇಂದು ಕುಳಿತಿರುವುದು ವ್ಯರ್ಥ. ಅಲ್ಲದೆ ತಾನೇ ಭಾಗೀರಥಿ ಹಿರಣ್ಯರ ದಾಂಪತ್ಯ ನಡುವೆ ಬಂದರೆ ಅದೂ ಅಪರಾಧ. ಎಷ್ಟು ಸವಿಯಾದ ಕಾರ್ಯವೆನಿಸಿದರೂ ಪರರನ್ನು ದುಃಖಕ್ಕೆ ತಳ್ಳಿ ತನಗೆ ಸಿಗುವ ಸುಖವದು. ಅವನ ಬುದ್ಧಿಯು ಮಂಕಾಯಿತು. ತಾನು ಅಲ್ಲಿರುವುದರಿಂದ ಭಾಗೀರಥಿಯ ನಿರಾತಂಕವಾದ ಯೋಚನೆಗೆ ಅಡ್ಡಿಬಾರದಿರುತ್ತಿದೆಯೇ? ತಾನು ಕುಳಿತುದರಿಂದ ಹೆಚ್ಚಿನ ಲಾಭವಿದೆಯೇ? ಗಂಡನೆದುರಿಗೆ ಅವನದಾದ ವಸ್ತುವನ್ನು ತಾನು ಸೆಳೆದೊಯ್ಯುವುದೇ, . . . . ಕಾಲ ಬಂದಿಲ್ಲವೆಂದು ಅಲ್ಲಿಂದ ನೇರಾಗಿ ಊರಿಗೆ ಮರಳಿದನು. ಭಾಗೀರಥಿಯು ಅವನ್ನು

ಕಾಣುವ ಹಂಬಲದಿಂದ ನೆರೆಮನೆಗೆ ಬಂದಾಗ ಅವನು ಹೋಗಿಯೂ ಆಗಿತ್ತು. ಇದ್ದಿದ್ದರೆ ಅವನೊಡನೆ ಪ್ರಸಂಗವನ್ನು ಯೋಚಿಸುತ್ತಿದ್ದಳೋ ಏನೋ.

ಸರಿ, ಚಂದ್ರಯ್ಯನು ಏತಕ್ಕೂ ಬಗೆಹರಿಯದವನಾಗಿ ಮನೆಯನ್ನು ಸೇರಿದನು. ಕದವಿಕ್ಕಿ ಕುಳಿತುಕೊಂಡನು. ಕೊಟಡಿಯ ಮುಚ್ಚಿಗೆಯನ್ನು ನೋಡುತ್ತಾ ನಗತೊಡಗಿದನು. ಕಣ್ಣೀರು ಸುರಿಯುತ್ತಲೇ ಇತ್ತು. ತನ್ನ ಜೀವನದ ವೈಚಿತ್ರ್ಯವೇ ಅವನಿಗೆ ನಗುವನ್ನು ಹುಟ್ಟಿಸಿತು. 'ತಾನು ಹೋದ ಕಾಲವೇ ಹಿರಣ್ಯನು ಬರುವ ಕಾಲವಾಗಬೇಕೇ?' ಎಂದು ಮೇಲಿಂದ ಮೇಲೆ ಅನಿಸಿತು. ತನಗೆ 'ಜಲಜಾಕ್ಷಿ'ಯಾದರೇನು ? ಯಾವ ಆತಂಕವೂ ಇಲ್ಲ. ನಿಜ—ಅದು ವಸ್ತುವನ್ನು ದೊರಕಿಸಲು. ಆದರೆ ಅದು ತನಗೆ ಬೇಕಾದ ವಸ್ತುವೆಂದು ತಿಳಿಯುವ ದಾರಿಯಾವುದು ? ಮುಂದಾದರೂ ತನ್ನದಾದೀತೆಂದು ತಿಳಿಯಲೇನು ? ಇಲ್ಲಿ, ಈ ಎರಡು ಪ್ರಶ್ನೆಗಳಲ್ಲಿ ಏನು ಅಂತರ ? ಒಂದನ್ನು ಬಯಸಿದನು. ಪ್ರತ್ಯುತ್ತರ ದೊರೆಯಿತು. ಒಮ್ಮೆಗೆ ಇದು ತನಗೆ ಒಪ್ಪಿರುವುದು ಎಂದೆನಿಸಿತು. ಜಲಜಾಕ್ಷಿಯ ವಿಚಾರದಲ್ಲಿ ಇದು ತಗಲುವುದೇ, ಇಲ್ಲ—ಇದು ವಿಚಿತ್ರ.

ಸಂಜೆಯತನಕ ಈ ವಿಚಿತ್ರಗಳನ್ನು ನೆನೆಯುತ್ತ ಕುಳಿತನು. ಕತ್ತಲಾಯಿತು. ತಾಯಿಯು ಹೊರಗಿನ ಕದ ತಟ್ಟಿದಳು. ಸರಿ, ಊಟಕ್ಕೆ ತೆರಳಿದನು. ಊಟವಾಗಿ ಮನೆಯ ಹೊರಗೆ ಬಂದನು. ತೆಳ್ಳಗಿನ ಮುಗಿಲಿನ ಪರೆಯಲ್ಲಿ ಕ್ಷೀಣ ಚಂದ್ರನು ತೇಲಾಡುತ್ತಿದ್ದನು. 'ಕೊಟಡಿಯಲ್ಲಿ ಕುಳಿತೇನು ಮಾಡುವುದು ? ತಿರುಗಾಟಕ್ಕಾದರೂ ಹೋಗುವೆನು ಎಂದು ಬೆತ್ತವೊಂದನ್ನು ಹಿಡಿದು ಒಂಟಿಯಾಗಿ ಹೊರಬಿದ್ದನು. ಬಯಲಿನ ಅಂಚುಗಳನ್ನೆಲ್ಲಾ ತುಳಿದನು. ಛೇ, ಇಲ್ಲಿ ಗಾಳಿಯೂ ಇಲ್ಲ. ಮೇಲೆ * ಪದವು ಏರುವ ಎಂದು ಮುಂದುವರಿದನು. ಚಿಕ್ಕ ಗುಡ್ಡವನ್ನೇರಿದರೆ ಮುಂದೆ ಬರುವುದೇ ಪದವು. ವಿಶಾಲವಾದ ಬೋಳುಮೈದಾನು. ಹಗಲಿಗೆ ದೂರದ ಕಡಲೂ ಕಾಣಿಸುವುದು. ರಾತ್ರಿ ಅದರ ಘರ್ಜನೆ ಕೇಳಿಸುವುದು.

* ಉನ್ನತವಾದ ಬೆಟ್ಟು ಜಾಗ.

ಮಳೆಗಾಲವಾದರೆ ಆ ಪದವಿನ ಕೆಳಗೇನೆ ಭೂಮಿ ಕುದಿಯುತ್ತಿದೆ ಎಂಬಂಥ ಸಾಗರರಾಜನ ಘರ್ಜನೆ ಕೇಳಿಸುತ್ತಿತ್ತು. ಈಗ ಅಹುದೋ ಇಲ್ಲವೆಂಬಷ್ಟು ಕಡಿಮೆ ಸದ್ದು. ತೀರ ದೂರದಲ್ಲಿ ಕಳ್ಳತನದಿಂದ ಕಲ್ಲುಗಳ ಮೇಲೆ ಹರಿಯುವ ಹಳ್ಳವೊಂದರ ಕಿರುದನಿಯಂತಿದೆ.

ಬೆತ್ತವನ್ನು ಬಡಿಯುತ್ತ ನೆಲವನ್ನು ನೋಡುತ್ತ 'ಶತಪಥ' ಮಾಡುವವರಂತೆ ಅಲೆಯತೊಡಗಿದನು. ಯಾರೋ ನಕ್ಕ ಧ್ವನಿ ಕೇಳಿತು. ಬೆಳದಿಂಗಳು ಮುಗಿಲಿನ ದಟ್ಟಣೆಯಿಂದ ಬಲು ಕಡಿಮೆಯಾಗಿತ್ತು. ಇಲ್ಲವೆ ಚಂದ್ರನು ಅಸ್ತಮಿಸಿರಲೂ ಬಹುದು..ನಕ್ಕವರಾರೆಂದು ತಲೆ ಎತ್ತಿ ನೋಡಿದರೆ ಹತ್ತುಮಾರು ದೂರದಲ್ಲಿ ಬಿಳಿಯರೂಪೊಂದು ಕಾಣಿಸಿತು. ಇವನು ನಕ್ಕನು. ಅವನಿಗೆ ಇಂದು ಏನನ್ನು ಕಂಡರೂ ನಗುಬರುತ್ತಿದೆ. ಮನುಷ್ಯ ಜೀವನವು ವಿಚಿತ್ರವೆನಿಸಿದೆ—ಪ್ರೇತ ಜೀವನವೂ ಹಾಗೇ ಅನಿಸಿದೆ. ಈಗಂತು ಪ್ರತ್ಯಕ್ಷ ಪ್ರೇತ ಸಮಾಗಮವಾಯಿತು.

ಮೈತುಂಬ ಮುಸುಕಿರಿಸಿಕೊಂಡ ರೂಪು. ತಲೆಯ ಬುರುಕೆಯನ್ನು ತೆಗೆದಂತೆ ಕಂಡಿತು. ಆದರೂ ಅಷ್ಟು ಸ್ಪಷ್ಟವಾಗಿ ಮುಖವು ಕಾಣಿಸಲಿಲ್ಲ. ಟಾರ್ಚನ್ನು ತಂದಿರುವೆನೆಂಬ ಭ್ರಮೆಯಿಂದ ಬೆತ್ತದ ಹಿಡಿಯನ್ನು ಒತ್ತಿದನು. ಎಲ್ಲಿನ ಬೆಳಕು? ಇವನ ಇಚ್ಛೆಯನ್ನು ಈಡೇರಿಸುವಂತೆ ಅದರ ಮುಖವೇ ಬೆಳಗಿತು. ಅವಳ ಸೌಂದರ್ಯ ಅಸಾಮಾನ್ಯವಾಗಿತ್ತು..ಕೆಲವು ನಿಮಿಷಗಳ ತನಕ ಇಬ್ಬರೂ ಕದಲಲಿಲ್ಲ. ಬೆಳ್ಯಕ್ಕನು ಒಂದೊಂದೇ ಹೆಜ್ಜೆ ಸರಿಯುತ್ತಿದ್ದಳು. ಚಂದ್ರಯ್ಯನು ಹಾಗೆ ಒಂದೊಂದೆ ಅಡಿಯನ್ನು ಮುಂದುವರಿಸುತ್ತಿದ್ದನು. ಬೆಳ್ಯಕ್ಕ ತಿರುಗಿ ನಿಂತಳು; ನಕ್ಕಳು. ಅದು ಲಘುವಾದ ಮುಕ್ಕಳ ನಗುವಿನಂತಿತ್ತು. ಆ ನಗು ಎಲ್ಲ ಕಡೆಯಲ್ಲೂ ಮರುಧ್ವನಿಸಿದಂತೆ ಅವನಿಗೆ ಕೇಳಿಸಿತು. ಅವಳ ರೂಪವು ಅವನನ್ನು ಅಂಜಿಸಲಿಲ್ಲ. ಆದರೆ ಧ್ವನಿ ಮಾತ್ರ ಎದೆಯನ್ನು ಅಲುಗಿಸುತ್ತಿತ್ತು. ಮಾತನಾಡಿಸಲೇ? ಎಂದು ಚಂದ್ರಯ್ಯನೆಣಿಸಿದನು. ಈಶ್ವರ ಭಟ್ಟರು ಹೇಳಿದುದು ನೆನಪಾಯಿತು. ಬೇಕಾದರೆ ಅದೇ ಮಾತನಾಡಿಸಲಿ.

ಅದೂ ಮಾತನಾಡಿಸಲಿಲ್ಲ. ಬದಲು ಸ್ವಲ್ಪಸ್ವಲ್ಪವಾಗಿ ಇವನಿಗೆ

ತಿಳಿಯದಂತೆ ಇವನ ಕಾಲುಗಳನ್ನು ಸೆಳೆಯುತ್ತಿತ್ತು. ಕೊನೆಗೆ ಕೆಲ ವೊಂದು ಬಂಡೆಗಳು ಉರುಳಿ ನಿಂತಲ್ಲಿಗೆ ಅವನನ್ನು ಒಯ್ದಿತು. ಅಲ್ಲಿಗೆ ಬಂದ ಬಳಿಕವೇ ತಾನು ಇಷ್ಟರ ತನಕ ನಡೆದು ಬೆಳ್ಯಕ್ಕನನ್ನು ಹಿಂಬಾಲಿ-ಸುತ್ತಿದ್ದೆನೆಂಬ ಪರವೆಯು ಚಂದ್ರಯ್ಯನಿಗುಂಟಾಯಿತು. ಆಗ ನಿಜಕ್ಕೂ ಭೀತಿಯಾಯಿತು. ಬೆಳ್ಯಕ್ಕನು ಒಂದು ಬಂಡೆಯ ಮೇಲೆ ಕುಳಿತುಕೊಂ ಡಳು. ಕುಳಿತುಕೊಂಡು 'ಅಂಜಿಕೆಯೇ?' ಎಂದು ಕೇಳಿದಳು.

ಮಾತನಾಡುವುದನ್ನು ಕೇಳಿ ಚಂದ್ರಯ್ಯನಿಗೆ ಏನೇನೋ ತೋಚಿತು. ಅವನು ಉತ್ತರಿಸಲಿಲ್ಲ. 'ಬದಲು ಏನು ಬೇಕು?' ಎಂದನು· 'ಬೇಕಾದುದನ್ನು ಕೊಡುವವನೇ?'

ಸುಮ್ಮನೆ ಹಾಸ್ಯಕ್ಕೆಂಬಂತೆ 'ಏಕಾಗಬಾರದು?' ಎಂದನು. ಮಾತನಾಡಿದ ಮರುಕ್ಷಣ ತನ್ನ ಮಾತಿನ ಪರ್ಯವಸಾನವನ್ನು ವಿಚಾ ರಿಸತೊಡಗಿದನು. ಅದು ತನ್ನನ್ನು ಮಾತಿಗೆ ಸಿಲುಕಿಸಿ ಅಪಾಯಕ್ಕೆಳೆದರೆ ..ಕೆಣಕಿದರೆ? ಆದರೆ ಎಂಥ ಭೀತಭಾವನೆಯುಂಟಾದರೂ ಅಂಥ ಸುಂದರ ರೂಪು..ಆ ಮಧುರ ನಯನಗಳು ಕ್ರೌರ್ಯ, ಕುಯುಕ್ತಿಗಳ ಪ್ರಪಂಚ-ದಲ್ಲಿಲ್ಲವೆಂದು ಅವನಿಗೆ ಹೇಳುತ್ತಿದ್ದುವು.

'ಕೊಡುವಿಯಾ?'

'ನನ್ನಿಂದಾದರೆ....ಪ್ರಾಣವಿದ್ದರೆ..ನನ್ನನ್ನು ನೀನು ಕೆಡುಕಿಗೆ ಗುರಿಮಾಡದಿದ್ದರೆ'

'ಕೆಡುಕಿಗೆ ಗುರಿಮಾಡುವುದೇ?'

'ಅಹುದು'

'ನಿನ್ನ ಮೇಲೆ ನನಗೇತರ ಸಿಟ್ಟು?'

'ಹಾಗಾದರೆ ನೀನಾರು?'

'ನಾನಾರೆಂದು ತಿಳಿದೆ....'

'ಊರವರನ್ನುತ್ತಾರೆ ನೀನು ಬೆಳ್ಯಕ್ಕನೆಂದು. ಅವಳ ಪ್ರೇತವೆಂದು. ನೀನು ಪ್ರೇತವೇ?'

'ನಾನು ಪ್ರೇತವೇನೋ ಸರಿ; ಆದರೆ ಬೆಳ್ಯಕ್ಕನಲ್ಲ..'

'ಬೆಳ್ಳಕ್ಕನಲ್ಲ' ಈ ಮಾತಿಗೆ ಪ್ರೇತವೂ ಅಲ್ಲವೆಂಬ ಭಾವನೆಯು ಅವನಿಗುಂಟಾಯಿತು. ನೋಡುತ್ತಾನೆ ಪ್ರೇತವು ಅವನಿಗೆ ತೀರ ಸಮೀಪವಾಗಿ ಕುಳಿತಿದೆ. ಅವನು ಕೈಯಲ್ಲಿ ಹಿಡಿದಿದ್ದ ಬೆತ್ತವನ್ನು ತಿರುವಿದನು. ಬೆತ್ತವು ತಡೆಯಿಲ್ಲದೆ ಆ ಶ್ವೇತಶರೀರವನ್ನು ಹಾದು ಈಚೆ ಬಂದಿತು.

'ನಿನಗೆ ಶರೀರವಿಲ್ಲವೆ?' ಪುನಃ ಪ್ರಶ್ನಿಸಿದನು.

'ಕಾಣುವುದಿಲ್ಲವೇ'

'ಆದರೆ ಬೆತ್ತಕ್ಕೆ ಸಿಗಲಿಲ್ಲ....'

'ಏಟು ಹೊಡೆಯುವೆನೆಂದು ಎಣಿಸಿದ್ದೆಯಾ'

'ಅಲ್ಲ—ನಿನ್ನ ಶರೀರ ಸ್ಥೂಲವೇ ಸೂಕ್ಷ್ಮವೇ ಎಂದು ನೋಡಿದೆ. ತಪ್ಪಾಯಿತೇ? ಇರಲಿ—ನೀನು ಬೆಳ್ಳಕ್ಕನಲ್ಲ....'

'ಅಲ್ಲ'

'ಹಾಗಾದರೆ ನಿನ್ನನ್ನು ಕಂಡವರು ನಿನ್ನ ಬಿಳಿಯ ರೂಪವನ್ನು ಕಂಡು ಹಾಗೆ ಕರೆದರೇ?'

'ಕರೆದವರಿಗೇ ಗೊತ್ತು'

'ನೀನಾರು?'

'ಅದನ್ನು ಮಾತ್ರ ಕೇಳಬಾರದು. ಅದರಿಂದ ನಿನಗೆ ಲಾಭವಿಲ್ಲ. ನನಗೆ ವ್ಯಥೆ. ನಾನು ಪ್ರೇತ. ಒಂದು ಕಾಲದಲ್ಲಿ ಮಾನವಿಯು. ಅದಿರಲಿ, ನನ್ನ ಪ್ರಶ್ನೆಯನ್ನೇಕೆ ಅಡ್ಡ ತೇಲಿಸುವೆ?'

'ಏನದು?

'ನಾನು ಕೇಳಿದ್ದನ್ನು ಕೊಡುವೆಯಾ?'

'ಸಾಧ್ಯವಾದರೆ'

'ಅಸಾಧ್ಯವಲ್ಲ, ಮನಸ್ಸುಮಾಡಿದರೆ'

'ಏನು ಹೇಳು'

'ಎಲ್ಲರಂತೆ ನೀನೂ ಓಡಿಹೋದರೆ'

'ನೀನು ಅಂಜಿಸುತ್ತೀಯಾ?'

'ಇಲ್ಲ....ನನ್ನ ರೂಪ ಅಂಜಿಕೆಯನ್ನು ತೋರುವುದೇ? ನನಗೆ ಈ ಶ್ವೇತವಸ್ತ್ರ....ಇದು ನವೀನ; ನನಗೆ ಒಪ್ಪದು....ಬರಿದೆ ನಿಂತರೆ ನನಗೆ ಸ್ವಾಭಾವಿಕ. ಅದು ನನ್ನದು. ಇದು ಹೊರಗಿನ ತೊಗಟೆ'

ಹೀಗೆಂದು ಬೆಳ್ಯಕ್ಕ ದಿಗಂಬರೆಯಾದಳು. ಆದರೆ ಮುಖದಲ್ಲಿ ಯಾವ ತೆರನ ಒಯ್ಯಾರವಾಗಲಿ, ಉನ್ಮಾದವಾಗಲಿ ಕಾಣಿಸಲಿಲ್ಲ. ಅದೇ ದನಿ, ಅದೇ ಮುಖಭಾವ.

'ನಾಚಿಕೆಯೋ?'

'ನನಗೆ! ನನಗೇಕೆ? ಅಂಥದೇನಿದೆ'

'ನಾನು ಪ್ರೇಮಭಿಕ್ಷೆಯನ್ನು ಕೇಳುತ್ತೇನೆ ಕೊಡುತ್ತೀಯಾ? ಈ ತನಕ ಯಾರನ್ನೂ ಕೇಳಲಿಲ್ಲ. ಹಲವರನ್ನು ಸೆಳೆಯಲು ಯತ್ನಿಸಿದೆ. ನನ್ನ ಜೀವನ ಬರಿದಾಗಿತ್ತು. ಆದರೆ ಪ್ರೇತವೆಂಬ ಭೀತಿಯಿಂದ ಯಾರೂ ಬಳಿಗೆ ಬರಲೊಲ್ಲರು. ನೀನೊಬ್ಬನು ಮಾತ್ರ ಪ್ರೇತವು ಒಂದು ಜೀವ ಎಂದು ಬಂದೆ'

'ಮರ್ಯಾದೆಗೆ ತಕ್ಕ ಜೀವವು ಅಹುದು'

'ನನ್ನ ಬೇಡಿಕೆ..'

'ನಾನು ನಿನ್ನನ್ನು ವಂಚಿಸಲೂ ಬಾರದು, ನನ್ನನ್ನು ನೀನು ವಂಚಿಸಲೂ ಬಾರದು. ಈಗಲೇ ನನ್ನ ಮನಸ್ಸಿನಲ್ಲಿ ಹಲವು ಪ್ರೇಮ, ಪ್ರಣಯ, ಅನುರಾಗ, ಭ್ರಾಂತುಗಳ ಚಿತ್ರವಿದೆ. ಅವುಗಳ ನಿರ್ಧಾರ ನನಗೆ ಉಂಟಾಗಿಲ್ಲ. ಆದಾಗುವ ತನಕ ಅವಕಾಶ ಕೊಡುತ್ತೀಯಾ!'

'ಅವಕಾಶವೇ? ಇಷ್ಟು ದಿನ ಕಾದವಳು ಇನ್ನಷ್ಟು ಕಾಯಲಾರೆನೇ?'

'ಕೆಲವು ದಿನಗಳಲ್ಲಿ ತೀರ್ಮಾನಿಸಿ ಹೇಳುತ್ತೇನೆ..'

ಬೆಳ್ಯಕ್ಕನು ಹಾಗೆಯೇ ಎದ್ದುನಿಂತಳು. ಕೈ ನೀಡಿ ಚಂದ್ರಯ್ಯನನ್ನು ಎಬ್ಬಿಸಿದಳು. ಅವಳು ಹಿಡಿದುದು ಕಾಣುತ್ತದೆ. ಆದರೆ ಸ್ಪರ್ಶಾನುಭವವಿಲ್ಲ.

'ಹೋಗಿ ಬಾ' ಎಂದು ಅವನನ್ನು ಬಯಲಿನ ಸೆರಗಿನ ತನಕ ಮುಟ್ಟಿಸಿತು. ಬೀಳ್ಕೊಡುವ ಗಳಿಗೆಯು ಸಂಭವಿಸಿತೆಂದು 'ಇನ್ನೆಂದು?' ಎಂದು ಕೇಳಿತು.

'ತೀರ್ವಾನವಾಗುವ ಮೊದಲಲ್ಲಿ'

'ಆಗಲಿ' ಆ ಮಾತಿನೊಂದಿಗೆ ರೂಪವು ಅದೃಶ್ಯವಾಯಿತು. ಬಯಲು ತುಂಬ ಮಂಜು ಕವಿದಿತ್ತು. ಅಷ್ಟು ದಟ್ಟ ಮಂಜು ಕಡಲ ತೀರದ ಹಳ್ಳಿಯಲ್ಲಿ ಕವಿಯುವುದು ಅಪೂರ್ವ. ಆದರಲ್ಲೇ ಚಂದ್ರಯ್ಯನು ಅದೇ ರೂಪವನ್ನು ಸ್ಮರಿಸುತ್ತ ಸಹಜವಾದೊಂದು ಅನುರಾಗ ಸಮಸ್ಯೆಯನ್ನು ತರ್ಕಿಸಲು ಯತ್ನಿಸುವವನಂತೆ ಯೋಚನೆಗೀಡಾಗಿ ಮನೆಗೆ ಹಿಂದಿರುಗಿದನು.

ಮನೆಯ ಕದವನ್ನು ತಟ್ಟಿದನು. ತಾಯಿ ಎಚ್ಚೆತ್ತು ಕದವನ್ನು ತೆರೆದಳು. 'ಇಷ್ಟು ಹೊತ್ತೇನು ಮಾಡುತ್ತಿದ್ದೆ? ಎಲ್ಲಿಗೆ ಹೋಗಿದ್ದೆ?' ಎಂದು ಕೇಳಿದಳು.

'ಬೇಸರವಾಯಿತು. ಪದವಿಗೆ ಹೋಗಿದ್ದೆ. ಅಲ್ಲಿ ವೇಳೆ ಕಳೆದುದು ತಿಳಿಯಲಿಲ್ಲ. ಏನು ಬಹಳ ಸಮಯವಾಯಿತೇ?' 'ಬೆಳಗಿನ ಜಾವವಾಗಿರಬೇಕು'—ತಾಯಿ ನಿಟ್ಟುಸಿರು ಬಿಟ್ಟಳು. 'ಮಗು, ನಿನಗೇನೊ ಚಿಂತೆ ಹಿಡಿದಿದೆ. ನನಗೂ ಹೇಳುವುದಿಲ್ಲ—ಅಲ್ಲವೇ?'

ಹೀಗೆಂದು ಅವಳು ವ್ಯಥೆಗೊಂಡು ಮಲಗಹೋದಳು. ಚಂದ್ರಯ್ಯನು ತನ್ನ ಮಲಗುವ ಕೊಟಡಿಯನ್ನು ಸೇರಿದನು.

೧೭

# ನಾಗವೇಣಿಯ ಮದುವೆ

ಜಾನಕಿಯು ಸರಸಮ್ಮನ ಗುಡಿಯಿಂದ ಮರಳಿದಳು. ಅದೇ ಶುಕ್ರವಾರ ಸೀತಕ್ಕನು ಸರಸಮ್ಮನ ತೀರ್ಥವನ್ನು ಕಂಡು, ಅಲ್ಲಿ ತೆಂಗಿನ-ಕಾಯಿ ತೇಲುತ್ತಿರಲಿಲ್ಲವೆಂದೂ ಹೇಳಿದಳು. ಮರುದಿವಸವೇ ತಿಮ್ಮಪ್ಪಯ್ಯನ ಸವಾರಿ ಮನೆಗೆ ಬಂದಿತು. ಬರುವವರು ಮಂಗಳೂರಿನ ಆಪ್ಪೀಲನ್ನು ಮುಗಿಸಿಕೊಂಡು ಹತ್ತಿಪ್ಪತ್ತು ರೂಪಾಯಿಗಳ ಗಿಲೀಟು ಬಂಗಾರವನ್ನು ಹಿಡಿದುಕೊಂಡು ಬಂದರು. ಬಂದು, ಹೆಂಡತಿಯು ಮುಂದೆ ಅವನ್ನಿರಿಸಿ 'ನಿನ್ನ ಕರೆಕರೆಗೆ ಬೆಂಕಿ ಬಿತ್ತು. ವಕೀಲರ ಹತ್ತಿರ ನೋಟಿನ (Promisary) ಮೇಲೆ ಇನ್ನೂರು ರೂಪಾಯಿ ಸಾಲಮಾಡಿ ಇಷ್ಟು ಚಿನ್ನ ಮಾಡಿಸಿ ತಂದೆ. ಪುರುಸೊತ್ತಿನಲ್ಲಿ ಆಗುವುದಾದರೆ ಇದಕ್ಕಿಂತ ಎಷ್ಟೊ ಚೆನ್ನಾಗಿದ್ದುದನ್ನು ಮಾಡಿಸಬಹುದಿತ್ತು' ಎಂದರು. ಜಾನಕಿಗೆ ಇದು ಸರಸಮ್ಮನ ವರಪ್ರಸಾದವೆಂದು ಹೊಳೆಯಿತು. ಅವಳು ಚಿನ್ನವನ್ನು ನೋಡಿ ಸಂತೋಷಪಟ್ಟಳು. ಅವಳಿಗೆ ಅದು ಗಿಲಿಟಿನ ಚಿನ್ನವೆಂದು ತಿಳಿಯದು. 'ಅಷ್ಟು ಮಾಡುವವರು ಸುಮ್ಮನೆ ಜಗಳ ಕಾದಿರಲ್ಲ' ಎಂದಳು. 'ಆದಾಯ್ತು—ಇನ್ನಾದರೂ ಹಪ್ಪಳ ಸಂಡಿಗೆ ಕೆಲಸ ಶುರು ಮಾಡು. ನೆಂಟಸ್ತಿಕೆ ವಿಷಯ, ಇನ್ನು ಪಿರಿಪಿರಿ ಮಾಡಬೇಡ. ಅದೇನು ಎಮ್ಮೆ, ದನ ಸಾಟಿ ಮಾಡಿದ ಹಾಗಲ್ಲ; ಗಳಿಗೆಗೆ ಬಂದೊಂದು ಜಾತಕ ನಿಶ್ಚಯಮಾಡಲಿಕ್ಕೆ' ಎಂದರು. ಹೋ, ಇವರು ಇನ್ನೂ ಬಂಟಿ ಕಣ್ಣಿನ ಅಳಿಯನನ್ನೇ ನಿಜಮಾಡಿದ್ದಾರೆ ಎಂಬುದು ಅವಳಿಗೆ ಆಗ ಹೊಳೆಯಿತು. 'ನನಗೇನು, ಸರಸಮ್ಮನಿಗೆ ನನಗಿಂತ ಹೆಚ್ಚು ಗೊತ್ತಿಲ್ಲವೇ?' ಎಂದು ಎಣಿಸಿ ಸುಮ್ಮನಾದಳು.

ಮರುದಿವಸ ವಿಟ್ಲಸೀಮೆಯಿಂದ ಹುಡುಗನ ಹಿರಿಯರು ಅಲ್ಲಿಗೆ ಬಂದರು. ಹುಡುಗನ ತಂದೆ ಬಂದು 'ತಿಮ್ಮಪ್ಪಯ್ಯ, ಹುಡುಗಿಗೆ ಏನೆಲ್ಲಾ ಚಿನ್ನವಿದೆ' ಎಂದು ಕೇಳಿದರು. ತಿಮ್ಮಪ್ಪಯ್ಯನು ಸಟಕ್ಕನೆ

'ಎಲ್ಲ ಮಾಡಿಸಲಿಕ್ಕೆ ಹಾಕಿ ಬಂದಿದ್ದೇನೆ. ನಮ್ಮ ವಕೀಲ ರಾಮಭಟ್ಟರಲ್ಲಿ ಒಬ್ಬ ಹುಷಾರಿನ ಅಕ್ಕಸಾಲಿ ಇದ್ದಾನೆ' ಎಂದರು. 'ಅಲ್ಲೇ ವಕೀಲರ ಹತ್ತಿರ ಸಾಲಮಾಡಿ– ಪವನಿಗೆ ೨೩ ರಂತೆ ದಂಡ ಕೊಟ್ಟು ಬುಗುಡಿ, ಸರಪಳಿ, ಒಂದು ಜತೆ ಬಳೆ, ಗೆಜ್ಜೆಟಿಕೆ ಇಷ್ಟೆಲ್ಲಾ ಮಾಡಲು ಹಾಕಿ ಬಂದಿದ್ದೇನೆ'– ಎಂದರು.

'ಅದು ಯಾವಾಗ ಬರುವುದು?'

'ಮದುವೆಯೊಳಗೆ ಬಾರದಿರುತ್ತದೆಯೇ?'

'ಎಲ್ಲಾದರೂ ಕಾಕುಪೋಕು ಚಿನ್ನವಾದರೆ ನಾನು ಹುಡುಗಿಯನ್ನು ಕೊಂಡು ಹೋಗಲಿಕ್ಕಿಲ್ಲ. ಇನ್ನೂರು ರೂಪಾಯಿಯ ಚಿನ್ನ ಎಂದರೆ ಅಷ್ಟಾದರೂ ಹಾಕಬೇಕು. ಇಲ್ಲವಾದರೆ ಗತಿಗೋತ್ರವಿಲ್ಲದ ಸಂಟಸ್ತಿಕೆ ಎಂದು ಯಾರಾದರೂ ತಿಳಿದಾರು.'

'ಕಾಕುಪೋಕು ಚಿನ್ನವೆಂದರೆ?'

'ಗಿಲ್ಟು, ರೋಲ್ಡುಗೋಲ್ಡು ಅಂತ ಈಗ ಎಲ್ಲೆಲ್ಲಿಯೂ ಥಕಥಕ ಮಾಡುತ್ತಾರಲ್ಲ–ಅದು ಎಂದೆ'

'ಛೆ, ಉಂಟೇ.. ಅಂಥದು ಹಾಕುವುದಕ್ಕಿಂತ ಹಾಕದಿದ್ದರೇನು.'

ಸರಿ, ಮಾತುಗಳು ಮುಂದುವರಿದುವು. ಮದುವೆಯ ದಿನವೂ ನಿಶ್ಚಯವಾಯಿತು. ಮರುದಿನ ನೆಂಟರು ಪಟ್ಲಸೀಮೆಗೆ ತೆರಳಿದರು. ಅವರ ಹಿಂದೇನೆ ತಿಮ್ಮಪ್ಪಯ್ಯನು ಜನ ಕಳುಹಿಸಿದನು. 'ಒತ್ತೆ ಕಣ್ಣಿನ ಹುಡುಗನನ್ನು ಹುಡುಗಿ ಬೇಡೆನ್ನುತ್ತಾಳೆ' ಎಂದು. ನಂಟರು ಮನೆ ಸೇರುವ ಮೊದಲೇ ಆತುರದಿಂದ ಓಡಿದ ದೂತನು ಅವರ ಮನೆಯನ್ನು ಸೇರಿ ಬರವನ್ನು ಕಾದು ಕುಳಿತಿದ್ದನು– ನಂಟಸ್ತಿಕೆ ಮುರಿಯಿತು.

ಆ ದಿನ ಪಟ್ಲದಿಂದ ಚಿನ್ನದ ವಿಚಾರ ಮಾತನಾಡಲು ಹೋದುದೇಕೆಂದರೆ, ಇವರು ಗಿಲ್ಟಿನ ಚಿನ್ನ ತಂದಿದ್ದಾರೆ ಎಂದು ವಾರ್ತೆ ಕೇಳಿ. ಅದನ್ನು ಖರೀದಿ ಮಾಡುವಾಗ ಊರಿನವರೊಬ್ಬರಿದ್ದರು. ಇತ್ತ ತಿಮ್ಮಪ್ಪಯ್ಯನಿಗೆ ಗಿಲ್ಟಿನ ನಾಟ್ಯ ದಾಟಿಸಲು ಬರುವುದಿಲ್ಲ ಎಂಬ ಕೋಪಕ್ಕೆ ಸಂಟಸ್ತಿಕೆ ಮುರಿದರು. 'ಕಾರಣ ಮಾತ್ರ– ಮಗಳು

ಕೊಟ್ಟುದು' ಹೀಗೆ ಮುರಿದದ್ದು ಜಾನಕಿಗೆ ತಿಳಿಯಲು 'ಅವಳಿನ್ನೂ ಮಗಳನ್ನು ಸಮಾಧಾನಪಡಿಸುತ್ತಿದ್ದಾಳೆ. 'ಮಗು, ಒಂದು ಕಣ್ಣಾದರೂ ಇಲ್ಲವೆ? ಗಂಡನಿಗೆ ಎರಡು ಕಣ್ಣುಗಳಿದ್ದರೇನು ಸುಖ; ಇಲ್ಲವಾದರೆ ಇಲ್ಲ ಎನ್ನುತ್ತೀಯಾ....' ಎಂದು. ಅಂತರಂಗದಲ್ಲಿ ತನಗೇ ನೋವಿತ್ತು.

ನೆಂಟಸ್ತಿಕೆ ಮುರಿದ ಸುದ್ದಿ ಸೀತಕ್ಕನ ಕಿವಿಗೆ ಬಿದ್ದು, ಮರುದಿವಸ ಜಾನಕಿಗೆ ಮುಟ್ಟಿತು.

'ಅದೇನು!' ಎಂದು ವಿಸ್ಮಯದಿಂದ ಅವಳು ವಿಚಾರಿಸಿದಳು.

ಸೀತಕ್ಕ ಊರಲ್ಲಿ ತಾನು ಕೇಳಿದ ಕಥೆಯನ್ನು ತಿಳಿಸಿದಳು. 'ಇವರೇನೋ ಗಿಲಿಟಿನ ನಗ ತಂದರಂತೆ, ಅದು ನೆಂಟರಿಗೆ ತಿಳಿದು ಆಗದೆಂದರಂತೆ. ಅದಕ್ಕೆ ಸಿಟ್ಟಿನಿಂದ 'ಒತ್ತೆಕಣ್ಣಿನವರಿಗೆ ನಾವು ಹುಡುಗಿ ಕೊಡುವುದಿಲ್ಲ' ಎಂದರಂತೆ! ನೋಡಿದಿಯಾ, ಇದೆಲ್ಲ ಸರಸಮ್ಮನ ಅನುಗ್ರಹ! ಸರಸಮ್ಮ ನಂಬಿದವರಿಗೆ ಮೋಸಕೊಟ್ಟಾಳೇ'– ಎಂದು ಸಮಸ್ಯೆಯನ್ನು ಪೂರ್ತಿಮಾಡಿದಳು.

ಜಾನಕಿ ಅವಸರದಿಂದ ನಾಗಿಯ ಕಿವಿಗೆ ನೆಂಟಸ್ತಿಕೆಯನ್ನು ಮುರಿದ ಸುದ್ದಿಯನ್ನು ತಿಳಿಸಿದಳು. ನಾಗಿಯು ಹರ್ಷಗೊಂಡಳು. 'ಈಗ ಮುರಿಯಿತು. ಇನ್ನೊಬ್ಬ ಕುರುಡನ ಇಲ್ಲವೆ ಮೂಕನ ನೆಂಟಸ್ತಿಕೆ ತರುತ್ತಾರೆ' ಎಂದಳು. 'ಹಾಗೆಲ್ಲ' ಮಾತನಾಡಬಾರದು ಎಂದು ಆಜ್ಞೆಯಾಯಿತು.

ನಾಲ್ಕು ದಿವಸ ಕಳೆಯಲಿಲ್ಲ. ತಿಮ್ಮಪ್ಪಯ್ಯನು ಪಮ್ಮನಾಯ್ಕನ ಒಂದು ದಾವೆಯ ಬಾಲವನ್ನು ಹಿಡಿದು ಮಂಗಳೂರಿಗೆ ಇನ್ನೊಮ್ಮೆ ಹೋಗಿ ಬಂದರು. ಬಂದವರು ನೆಲದ ಮೇಲೆಯೇ ಇಲ್ಲ. ಅಂಗಳ, ಜಗುಲಿ, ಅಡುಗೆಮನೆ ಎಲ್ಲ ಧೂಳೆಬ್ಬಿಸುತ್ತಿದ್ದಾರೆ. 'ಏ, ಇವಳೇ, ಇವಳೇ' ಎಂದು ಒದರುತ್ತಿದ್ದಾರೆ. ಆ ಇವಳು ಐದು ಮಕ್ಕಳನ್ನು ಕಟ್ಟಿಕೊಂಡು ಸೀತಕ್ಕನ ಮನೆಯಲ್ಲಿ ಮಾತನಾಡುತ್ತ ಕುಳಿತಿದ್ದಳು. ಇವರ ಗಂಟಲಧ್ವನಿಯನ್ನು ಕೇಳಿ ಓಡಿ ಬಂದಳು. 'ಛೆ, ಇವಳೆಲ್ಲಿ ಸತ್ತಳಪ್ಪ' ಎನ್ನಲಿಕ್ಕೂ ಅದೇ ಸತ್ತವಳು ಎದ್ದು ಬರಲಿಕ್ಕೂ ಸರಿಯಾಯಿತು.

ತಿಮ್ಮಪ್ಪಯ್ಯನು ಬರಬರನೆ ತುದಿಬುಡವಿಲ್ಲದಂತೆ ಮಾತನಾಡಿದನು. 'ಆಯಿತಲ್ಲ ಆ ನೆಂಟಸ್ತಿಕೆ ಮುರಿದು ಇನ್ನೊಂದು....ನಿನ್ನ ನಾಗಿಗೆ ಬಿ. ಎ. ಕಲಿತ ಗಂಡ. ಅದೃಷ್ಟ ಒಳ್ಳೇದಿದ್ದರೆ ಇವನ ಕೈ ಹಿಡಿದ ಗಳಿಗೆಗೆ ಅವನು ಬಿ. ಎಲ್. ಆಗಿ ನಾಳೆ ಮಂಗಳೂರಲ್ಲಿ ಬಿ. ಎ.ಬಿ. ಯಲ್. ವಕೀಲ. ಮಂಗಳೂರಿಗೆ ಬೇಡವಾದರೆ ಪುತ್ತೂರಿಗೇ ತರಿಸಬಹುದು. ಏನೆನ್ನುತ್ತಿ?'

'ನೀವೇನೆನ್ನುತ್ತೀರೋ ನನಗೆ ತಿಳಿಯದು'

'ಅಷ್ಟು ತಿಳಿಯಲಿಕ್ಕೆ ತಲೆ ಎಲ್ಲಿಂದ ಬರಬೇಕು? ಹೋಗಾಚೆ. ಹಪ್ಪಳ, ಸಂಡಿಗೆ ಸ್ವಲ್ಪ ಮಾಡಿದರೆ ಸಾಕು. ನಾಲ್ಕು ದಿವಸದ ಲಗ್ನ ವೆಂದು ನೆಲವನ್ನೆಲ್ಲಾ ಪಾಯಸದಿಂದ ಸಾರಿಸುವುದು ಬೇಡ. ಅದು ಅವರಿಗೂ ಇಷ್ಟವಿಲ್ಲ ತಿಳಿಯಿತೇ. ವಕೀಲ ರಾಮಭಟ್ಟರೆಂದರೆ ಊರಿಂ ದೂರಿಗೇ ಗೊತ್ತು. ಅವರ ಸಂಬಂಧ ಎಂದರೆ ನಾಲ್ಕು ಹೋಳಿಗೆಗಳಿಂದ ಹೆಚ್ಚಾಗಲಿಕ್ಕಿಲ್ಲ; ಎರಡು ಸುಕ್ಕಿನುಂಡೆಗಳಿಂದ ಕಡಿಮೆಯಾಗಲಿಕ್ಕಿಲ್ಲ.. ಲಗ್ನ ಇಲ್ಲಲ್ಲ. ಇಲ್ಲಿ ಬರಿಯ ಒಂದು ಆರತಿ, ಅಕ್ಷತೆ ಅಷ್ಟೆ. ಅದೂ ಚುಟುಕಿನಲ್ಲಿ. ಲಗ್ನ ಕಣ್ವತೀರ್ಥದಲ್ಲಿ. ಅವರು ಆ ದಿನ ರೈಲಿಗೆ ಬರು ತ್ತಾರೆ. ನಾವು ಬೆಳಗಿನ ಜಾವಕ್ಕೆ ಹೋದರಾಯಿತು. ಎಲ್ಲ ಗಳಿಗೆ ಒಂದ ರಲ್ಲಿ ಪಡ್ಡ....ತಿಳಿಯಿತೇ?'

'ಯಾವ ಹುಡುಗ, ಏನು ಕಥೆ?'

'ಅಯ್ಯೋ, ನಿನಗೆ ನಾನೆಷ್ಟು ತಲೆ ಚುಚ್ಚಿಕೊಳ್ಳಲಿ. ವಕೀಲ ರಾಮ ಭಟ್ಟರ ತಮ್ಮನನ್ನು ತರುವುದೆಂದು ನಿಶ್ಚಯಮಾಡಿದ್ದೇನೆ. ಅವರೇ ಹೇಳಿದರು. ಹುಡುಗನಿಗೆ ಮೂವತ್ತು ವರುಷ. ಏನು ದೊಡ್ಡ ಪ್ರಾಯ ವಲ್ಲ. ಮೊದಲಿನ ಎರಡು ಸಂಬಂಧ ಹಾಳಾಯಿತು; ಅಂದರೆ ಪಾಪ, ಹೆಂಡಿರು ಸತ್ತುಹೋದರು. ಹುಡುಗ ಬಿ. ಎ. ಓದಿ ಬಿ. ಎಲ್. ಹೋಗಿ ದ್ದಾನೆ ಅಂದರು. ಅವನು ಮದುವೆಯೇ ಬೇಡ ಎನ್ನುತ್ತಾನೆ ಅಂದರು.. ಕೊನೆಗೆ ಅವರ ಒತ್ತಾಯದಿಂದ ಆಯಿತು ಎಂದನಂತೆ! ಬಿ. ಎ. ಬಿ. ಎಲ್. ಅಳಿಯ—ಎಂದರೆ ನಾಳೆ ಬೊಂಬಕ್ಕನ ಹಾಗೆ ಸೀನೇ ಉಬ್ಬಿ ತಿರುಗಾ ಡುತ್ತಿ. ಈಗ ಗೊತ್ತಾಯಿತಲ್ಲ.'

'ಅಷ್ಟು ದೊಡ್ಡವರಿಗೆ ನಮ್ಮ ಮನೆ ಹ್ಯಾಗೆ ಕಣ್ಣಿಗೆ ಹಿಡಿಯಿತು? ಅದೂ ಇಂಗ್ಲೀಸು ಕಲಿತ ಮಕ್ಕಳು ಹುಡುಗಿ ಕಾಣದೆ ಆಯ್ತು ಅಂದಾರೆ?'

'ತಕೊಳ್ಳಿ..ನಿನ್ನ ಅಧಿಕಪ್ರಸಂಗ!'

'ಇಂಗ್ಲೀಷ್ ಕಲಿತ ಕೂಡಲೆ ಕೊಂಬು ಬರುತ್ತದೆಯೇ? ಅದು ನಿನ್ನಂಥವರಿಗೆ ಸಿಂಹ ಸಿಂಹವೇ?'

ಆ ದಿನ ಸಂಜೆಯೊಳಗೆ ತಿಮ್ಮಪ್ಪಯ್ಯನು ಕೆಲಸವಿಲ್ಲದಿದ್ದರೂ ನೆರೆ ಕರೆಯವರ ಮನೆಯನ್ನೆಲ್ಲಾ ಸುತ್ತಿ 'ನಮ್ಮ ನಾಗವೇಣಿಗೆ ಬಿ. ಎ. ಕಲಿತ ಗಂಡ ಬರುತ್ತಾನೆ' ಎಂದು ಸಾರಿದರು. ನಿಜಕ್ಕೂ ಈ ವಾರ್ತೆ ಯಿಂದ ಜಾನಕಿಗೂ ಆನಂದವಾಯಿತು. ನಾಗವೇಣಿಗೂ ಸುದ್ದಿ ಸಿಕ್ಕಿತು. ಅವಳಿಗೆ ಒಕ್ಕಣ್ಣನ ನಂಟಸ್ತಿಕೆ ತಪ್ಪಿತೆಂದು ಆನಂದವೇ ಆಯಿತು. ಆದರೆ..ಇಂಗ್ಲೀಷು ಕಲಿತ ಗಂಡನೆಂದರೆ ಅಂಜಿಕೆಯಾಯಿತು. ಅವನು ಬಲು ಜೋರಿನವನಾದರೆ?

ರಾಮಭಟ್ಟರು ತಮ್ಮ ತಮ್ಮನಿಗೆ ಮೂರನೆಯ ಸಂಬಂಧವಾದರೂ ಈ ಹಳ್ಳಿಯ ನೆಂಟಸ್ತಿಕೆಯನ್ನು ಏಕೆ ಹುಡುಕಿದರೋ ತಿಳಿಯದು. ಹಿಂದಿನ ಎರಡು ಸಂಬಂಧಗಳಲ್ಲಿ ಅವರ ತಮ್ಮ ಸೀತಾರಾಮನಿಗೆ ಮಕ್ಕ ಳಿರಲಿಲ್ಲ. ಸೀತಾರಾಮನು ಬಿ. ಎ. ಮುಗಿಸಿರಬೇಕು. ಬಿ. ಎಲ್. ಕಲಿ ಯಲು ಮದ್ರಾಸಿಗೆ ಹೋದುದೂ ನಿಜ. ಆದರೆ ಏನನ್ನು ಕಲಿಯುವುದೂ ಅವನಿಗೆ ರುಚಿಸುವ ಉದ್ಯೋಗವಾಗಿರಲಿಲ್ಲ. ಊರಲ್ಲೆಲ್ಲಾ 'ನಿರು ದ್ಯೋಗ' ಬಂತಲ್ಲ ಎಂದು ಯೋಚಿಸುತಿದ್ದರೆ ಈತನು ಉದ್ಯೋಗಕ್ಕೆ ಅಂಜಿ ಬೀಳುತ್ತಾನೆ. ಈಗೀಗ ಅವನಿಗೆ ಊರೂರು ತಿರುಗುವುದೇ ಆನಂದ ಕರವಾಗಿ ಕಾಣುತ್ತದೆ. ಸುಮ್ಮನೆ ಸಂಸಾರದೊಂದು ಕೊದಂಟೆ * ಕೊರಳಿಗೆ ಕಟ್ಟಿಕೊಂಡರೆ ಸ್ವಾತಂತ್ರ್ಯಕ್ಕೊಂದು ತಡೆ, ಇದಾದರೆ ಯಾರ ಹಂಗೂ ಇಲ್ಲ. ಯಾವ ತಡೆಯೂ ಇಲ್ಲ. ಯಾರಾದರೂ ದುಡಿಯುತ್ತಾರೆ. ಇವನು ಅಣ್ಣನ ತಮ್ಮನೆಂಬ ಹಕ್ಕಿನಿಂದ ಕಾಗದ ಬರೆದರಾಯಿತು.

---

* ದನಕರುಗಳು ಓಡಿ ಹೋಗದಂತೆ ಕೊರಳಿಗೆ ಕಟ್ಟುವ ಮರದ ಬಡಿಗೆ.

ಬರಿಯ ಕಾಗದಕ್ಕೆ ಉತ್ತರ ಕೊಡದಿದ್ದರೆ ತಂತಿ ಬಿಟ್ಟರಾಯಿತು. ನೂರನ್ನೊ, ಐವತ್ತನ್ನೋ ತರಿಸಿಕೊಂಡು 'ಮಜಾ'ದಲ್ಲಿ ಕರಗಿಸಿ ಬಿಟ್ಟ ರಾಯಿತು. ಸೀತಾರಾಮನು ಬಿ. ಎ. ಕಲಿತು ನಾಲ್ಕು ವರ್ಷವಾದುವು. ಇನ್ನೂ ಮದ್ರಾಸಿನಲ್ಲಿ ಮೊಕ್ಕಾಂ. ಅವನು ಸೇರಿದ ಸ್ಪೆಷಲ್ ಕಾಲೇಜು 'ಮೇ' ರಜೆಗೂ ಮುಚ್ಚುವಂತಿಲ್ಲ. ಅಣ್ಣನು ಬಲವಂತದಿಂದ ಕಾಗದ ಬರೆದು 'ಹೀಗೆ ಮಾಡಿದರೆ ಹಣವನ್ನು ಕಳುಹಿಸುವಂತಿಲ್ಲ' ಎಂದು ಬರೆದರೆ ಒಂದು ದಿನ ಬಂದು ಮೂರುದಿನವಿದ್ದು 'ಯಾಕೋ ಇಲ್ಲಿನ ಹವೆಯೇ ಈಗೀಗ ಹಿಡಿಯುವುದಿಲ್ಲ' ಎನ್ನುತ್ತಾನೆ.

ಅಂಥ ತಮ್ಮನನ್ನು ಒಂದು ಉದ್ಯೋಗಕ್ಕೆ ಹಿಡಿಸಬೇಕು. ಸಂಸಾರದ ಹೊರೆ ಹೊರಿಸಿದರೆ ಏನಾದರೂ ಹಾದಿಗೆ ಬಂದಾನು ಎಂದು ರಾಮಭಟ್ಟರ ಯೋಚನೆ. ಮೊದಲಿನ ಎರಡು ಮದುವೆಗಳಲ್ಲೂ ಸಂಸಾರ ತಿಳಿಯುವ ಮೊದಲೇ ಹುಡುಗಿಯರು ತೀರಿಕೊಂಡರು. ಆದುದರಿಂದ ಈ ಬಾರಿ ನಾಗವೇಣಿಯಂತಹ ಬೆಳೆದ ಹುಡುಗಿಯನ್ನು ತಂದರೆ ಮೋಹಕ್ಕಾದರೂ ಒಳಗಾಗಿ ಈ ಅನಾವಶ್ಯಕ ಅಲೆದಾಡುವುದನ್ನು ಬಿಟ್ಟಾನೆಂದು ಯೋಚನೆ. ನಾಗವೇಣಿಯನ್ನು ಇಲೆಕ್ಷನ್ ಸಮಯ ಯಾರಿಗಾಗಿಯೊ ಊರುಸುತ್ತಲು ಬಂದಾಗ ಅವರೊಮ್ಮೆ ಕಂಡಿದ್ದರು. ಹುಡುಗಿ ಬೆಳೆದಿದ್ದಳು—ರೂಪವತಿ. ವಯಸ್ಸು 'ಹದಿನೆಂಟು' ಎಂದು ತಿಮ್ಮಪ್ಪಯ್ಯ ಹೇಳುತ್ತಾರೆ—ಹಾಗಿದ್ದರೆ ಏಕಾಗಬಾರದು? ಮನೆಮಾಡಿಕೊಂಡಿರಲು ತಕ್ಕವಳು ಎಂದು ಅವರ ಯೋಚನೆ. ಅವಳನ್ನು ಅಣ್ಣನ ಜತೆಯಲ್ಲಿ ಒಮ್ಮೆ ಬಂದ ತಮ್ಮನೂ ಕಂಡಿದ್ದಾನೆ. ಹೀಗಾಗಿ ಹುಡುಗಿ 'ಪಾಸಾ'ಯಿತು.

ತಿಮ್ಮಪ್ಪಯ್ಯನು ಕಾರ್ಯ ಸಾಧನೆಗೆ ಸುಲಭವಾಗಲೆಂದು—ವಯಸ್ಸೆನ್ನೋ ಹದಿನಾರರಿಂದ ಹದಿನೆಂಟಕ್ಕೆ ಏರಿಸಿದ್ದರು. ಚಿಕ್ಕ ಹುಡುಗಿ ಬೇಕೆಂದಿದ್ದರೆ ಹದಿನಾಲ್ಕಕ್ಕೆ ಇಳಿಯುವುದಕ್ಕೂ ಕಷ್ಟವಿಲ್ಲ. ಇತ್ತ ಕಲಿತ ಹುಡುಗಿಯರು ರಾಮಭಟ್ಟರ ಹವ್ಯಕ ಕುಟುಂಬಗಳಲ್ಲಿ ಕೈಯಿಂದೆಣಿಸುವಷ್ಟು ಸಿಗಲಾರರು. ರಾಮಭಟ್ಟರು ಈ ಮೊದಲೇ ಕೆಲವು ಕಡೆ ಯತ್ನವನ್ನು ಮಾಡಿದ್ದರು. ಹುಡುಗನ ಜಾತಕವನ್ನು ಒಯ್ದವರು

ಮರಳಿ ಒರಲಿಲ್ಲ. ಹುಡುಗ 'ಉಂಡಾಡಿ' ಎಂಬುದರಿಂದ ಯಾರಿಗೂ ಧೈರ್ಯ ಸಾಲದು. ಅಲ್ಲದೆ ಎರಡಾದ್ದು ಮೂರಾದರೆ ಎಂದು ಮೂರನೇ ಲಗ್ನದ ವಿಷಯದಲ್ಲಿ ಒಳಗಿನ ಚಳಿಯೊಂದು.

ಅಂತು ತಿಮ್ಮಪ್ಪಯ್ಯನ ಸಾಹಸದಿಂದ ಸಂಟಸ್ಸಿಕೆ ಹೊಂದಿಬಿಟ್ಟಿತು. ಅದೇ ದಿನ ಥಟ್ಟನೆ ಮನೆಗೆ ಸೀತಾರಾಮನೂ ಬಂದನು. ರಾತ್ರಿ ಉಳಿದು ಮರುದಿನ ತೆರಳಿದನು. ಆದರಿಂದ ಸೆಂಟಸ್ಸಿಕೆ ಗಟ್ಟಿಯೇ ಆಯಿತು.

---

## ೧೮

# ಕಣ್ವಮುನಿಯ ಸಾಕ್ಷಿ

ಬಡ ಕಣ್ವಋಷಿಯು ಶಕುಂತಳೆಯನ್ನು ಸಾಕಿ, ಸಲಹಿ, ದುಷ್ಯಂತ ಮಹಾರಾಯನ ಧೂರ್ತತನಕ್ಕೆ ಬಲಿಯಾದ ಆವಳನ್ನು ಕಟ್ಟಿಕೊಂಡು ದುಃಖಿಸಿದುದು ಸಾಲದೆಂಬಂತೆ—ಈಗ ವರ್ಷಕ್ಕೆ ಹತ್ತೆಂಟುಪತ್ತು ಲಗ್ನಗಳಿಗೆ ಸಾಕ್ಷಿಯಾಗುತಿದ್ದಾನೆ. ಆ ದಿನ ದುಷ್ಯಂತನು, ರಾಜಮರ್ಯಾದೆಯನ್ನು ಒಲ್ಲವನು, ಋಷ್ಯಾಶ್ರಮದಲ್ಲಿ ಅಬಲೆಯಾಗಿ ಬೆಳೆದ ಶಕುಂತಳೆಯನ್ನು ವಂಚಿಸಿ ತನ್ನ ಪ್ರಣಯ ಮುದ್ರೆಯೊತ್ತಿದಂದೇ ಈಗಿನ ಕಾಲದಲ್ಲಿ ಕ್ರಿಮಿನಲ್ ಮೊಕದ್ದಮೆಗೆ ಸಾಕಷ್ಟು ಆಧಾರವಾಗುತ್ತಿತ್ತು. ತನ್ನ ಮಗಳ ಸುಖ ಕೆಡಬಾರದೆಂದು ದೂರ್ವಾಸನಂತೆ ಶಾಪಕೊಡದೆ ಆವನು ಮೌನದಿಂದ ಈ 'ಅಮಾನುಷ' ರಾಜನೀತಿಯನ್ನು ಸಹಿಸಿದನು.

ಶಕುಂತಳೆಯು ಪತಿಗೃಹಕ್ಕೆ ಹೋಗಿ ತಿರಸ್ಕೃತಳಾದಳು. ಆಗ ತನ್ನ ಕೃತಿಯನ್ನು ಬಹಿರಂಗವಾಗಿ ಒಪ್ಪಲಾರದ ರಾಜನನ್ನು ಶಾಪದಿಂದಲಾದರೂ ಸುಟ್ಟುಬಿಡಬಾರದಿತ್ತೇ? 'ಪ್ರಾಯಶಃ ಮಗಳು ವಿಧವೆಯಾದರೆ' ಎಂಬ ಅಂಜಿಕೆಯು ಕಣ್ವನಿಗೆ ಬಂದಿರಬೇಕು. ಅದೇ ಪುಣ್ಯಾತ್ಮನು

ಕೊನೆಗೆ, ಅಂದರೆ ಶಕುಂತಳೆಯ ಯೌವನವು ಚಿಂತೆಯಿಂದ ನಾಶವಾದ ಬಳಿಕ, ಅವಳನ್ನು ಸ್ವೀಕರಿಸಿ ಮಹದುಪಕಾರ ಮಾಡುತ್ತಾನೆ. ಕಾಳಿದಾಸನು ನಾಟಕವನ್ನು ಬರೆದುದರಿಂದ ದುಷ್ಯಂತನು ಆರಾಧ್ಯ ಪುರುಷನಾಗುತ್ತಾನೆ. ಕಣ್ವನು ಶಕ್ತಿಹೀನನೆನಿಸುವ ಬದಲು ಕ್ಷಮಾಶೀಲನೆನಿಸುತ್ತಾನೆ.

ಅದನ್ನು ತಿಳಿದೋ ಏನೋ ದಕ್ಷಿಣ ಕನ್ನಡದ ಬ್ರಾಹ್ಮಣವೃಂದವು ಆವನನ್ನು ಒಂದು ಸಾಕ್ಷಿ ಕಂಟವಾಗಿ ಎಣಿಸಿಬಿಟ್ಟಿದೆ. ಮಂಜೇಶ್ವರದ ಒಳಿಯಲ್ಲೊಂದು ತೀರ್ಥವಿದೆ. ಅದು ಕಣ್ವತೀರ್ಥವೆನಿಸಿಕೊಂಡಿದೆ. ಪ್ರಾಯಶಃ ದುಷ್ಯಂತ ಶಕುಂತಳಾ ಪ್ರಕರಣದ ಒಳಿಕ, ಆ ಋಷಿಯು ಆರ್ಯಾವರ್ತವನ್ನು ಬಿಟ್ಟು, ಪರಶುರಾಮ ಸೃಷ್ಟಿಗೆ ಬಂದು, ಯಾರ ತೊಂದರೆಗೂ ಸಿಲುಕಬಾರದೆಂದು, ಇಲ್ಲಿ ತಪೋವನವನ್ನು ನಿರ್ಮಿಸಿರಬೇಕು. ಆದರೆ ಅಷ್ಟೇ ಕೆಲಸ ಮಾಡಿ ಸುಮ್ಮನಿರಲಿಲ್ಲ. ಗೀರ್ವಾಣ ಭಾಷೆಯ ಸಾಹಿತ್ಯಕ್ಕೆ ಗುರಿಯಾದ ಮುನಿಯಲ್ಲವೇ? ಅವನನ್ನು ಅಹಿಚ್ಛತ್ರದಿಂದ ಪರಶುರಾಮ ಸೃಷ್ಟಿಗೆ ಬಂದ ಬ್ರಾಹ್ಮಣರು ಬಿಡುವರೇ? ಕಣ್ವನು ಸುಮ್ಮನೆ ತಪಸ್ಸು ಮಾಡುತ್ತಿರುವುದು ಬೇಡ. ನಡನಡುವೆ ಒಂದೊಂದು ಲಗ್ನಕ್ಕೆ ಸಾಕ್ಷಿಯಾಗಲೆಂದು ಅವನ ಆಶ್ರಮವನ್ನು ವಿವಾಹಕ್ಷೇತ್ರವನ್ನಾಗಿ ಮಾಡಿದರು. ತಮ್ಮ ಹಳ್ಳಿಯಲ್ಲಿ ಬಹಿರಂಗವಾಗಿಯೋ ಸಂಭ್ರಮದಿಂದಲೋ ವಿವಾಹವಿಧಿಗಳು ಜರುಗಲು ಸಂಕೋಚವಾದವರೆಲ್ಲಾ ಇಲ್ಲಿಗೆ ಬರುವರು. ಇಲ್ಲಿ ಒಂದೆರಡು ನಿಮಿಷಗಳಲ್ಲಿ ವಧೂವರರ ದಾಂಪತ್ಯ ಕೂಟ ನೆರವೇರುವುದು. ತೀರ ಅಪರಿಚಿತ ಹೆಣ್ಣುಗಂಡುಗಳು ಇಲ್ಲಿಗೆ ಬಂದು ಒರಿಯ ನಿಮಿಷದಲ್ಲಿ ಹತ್ತೆಂಟು ರೂಪಾಯಿಗಳ ತೆರಿಗೆಯನ್ನು ತೆತ್ತು ಗಂಡ-ಹೆಂಡಿರಾಗುವರು. ಸುಮ್ಮನೆ ನಾಲ್ಕು ದಿನಗಳ ಉರುಟಣೆ ಜನವಿಶೇಷಗಳ ಗದ್ದಲ ಬೇಡ. ಆದರೆ ಒಂದು ಕೆಲಸ ಮಾಡುತ್ತಾರೆ; ವಧುವನ್ನು ವರನು ಕಣ್ವನ ಬಳಿಯಲ್ಲೇ ದುಷ್ಯಂತನಂತೆ ಬಿಟ್ಟು ಹೋಗುವುದಿಲ್ಲ.

ಇಲ್ಲಾಗುವ ಚುಟುಕಿನ ಪ್ರೇಮ ಸಂಬಂಧಗಳಿಗೆ ಹೆಚ್ಚಿನ ಗದ್ದಲಗಳಿಲ್ಲ. ಅದಕ್ಕೂ ಋಷಿಯೊಬ್ಬನು ಕಾರಣನು. ಕಣ್ವನ ಮಹಿಮೆಯನ್ನು

ಕೇಳಿ ಒಂದೆರಡು ಶತಮಾನದ ಹಿಂದೆ ಬೇರೊಬ್ಬ ಋಷಿಯು ಇಲ್ಲಿಗೆ ಬಂದನು. ಆ ಋಷಿವರ್ಯನು ಇಲ್ಲಿ ಪುರಾಣ ಪ್ರವಚನ ನಡೆಸುತ್ತಿರಲು ಆಶ್ರಮದ ಮುಂದಿನ ಅಶ್ವತ್ಥವೃಕ್ಷದ ಎಲೆಯೊಂದು ಅಲುಗಿತಂತೆ. ಆದರಿಂದ ಋಷಿಯ ಏಕಾಗ್ರಚಿತ್ತವು ಭಂಗವಾಯಿತು. ಕೂಡಲೇ ಬೆರಳನ್ನು ಆ ಗಿಡಕ್ಕೆ ತೋರಿಸಿದರು. ಎಲೆಯು ಅಲುಗಾಡುವುದನ್ನು ನಿಲ್ಲಿಸಿತು. ಈಗಲೂ ಅದು 'ಕೆಸಬಿಯಾಂಕ' ನಂತೆ— ಅಲುಗಾಡದೆ ನಿಂತಿದೆಯೆಂದು ಹೇಳುತ್ತಾರೆ. ಈಗ ಅಲುಗಾಡದ ಎಲೆಯ ಅಶ್ವತ್ಥನನ್ನು ನೋಡಲು ಬರುವವರೇ ಅಧಿಕ. ತಮ್ಮನ್ನು ಅನುಜ್ಞೆಮಾಡಿದ ಋಷಿಯು ಲೋಕವನ್ನು ಬಿಟ್ಟರೂ ಅಶ್ವತ್ಥಮರದ ಎಲೆಗಳು ಅಲುಗುವುದೇ ಇಲ್ಲ. ಮರಕ್ಕೆ ಪಕ್ಷಪಾತವೇ ಉಂಟಾಗಿದೆ. ಎಲೆಯು ಅಲುಗಾಡದಿದ್ದುದನ್ನು ಕಂಡು— ತೀರ್ಥದ ನೀರು, ಅದರೊಳಗಿನ ಮೀನು ಕಪ್ಪೆಗಳು ಸಹ ಅಲುಗುವುದನ್ನು ಬಿಟ್ಟುವೆಂದು ಹೇಳುತ್ತಾರೆ. ಅಂತೂ ಈ ಋಷಿಗಳ ಮಹಾತ್ಮೆಯಿಂದ ಅಲ್ಲಿನ ಲಗ್ನಗಳಲ್ಲಿ ವಿಶೇಷ ಗದ್ದಲಗಳಿರುವುದಿಲ್ಲ. ಪ್ರಾಯಶಃ ಸಮಾಧಿಸ್ಥನಾದ ಆ ಋಷಿಯ ತಪಸ್ಸಿಗೆ ಭಂಗ ಬರುತ್ತದೆ ಎಂದು ಅಂಜಿಯೋ ಏನೋ.

ಅಂಥ ಕಣ್ವ ಮಹಾಮುನಿಯ ಕ್ಷೇತ್ರದಲ್ಲಿ ಈ ದಿನ ನಾಗವೇಣಿಯನ್ನು ಸೀತಾರಾಮನಿಗೆ ಕೊಟ್ಟು ಲಗ್ನಮಾಡುತ್ತಾರೆ. ತಿಮ್ಮಪ್ಪಯ್ಯನು ನಾಗವೇಣಿಯನ್ನು ಕೊಡಲು ನಿಶ್ಚಯಿಸಿದ್ದಾನೆ. ಸೀತಾರಾಮನು ಕೊಳ್ಳುವನೋ ಅಥವಾ ದುಷ್ಯಂತ ಪ್ರಭೃತಿಯಂತೆ ಹೆಂಡತಿಯನ್ನು ಮಾವನ 'ತಾಬೆ' ಯಲ್ಲಿರಿಸಿ ಹೋಗುವನೋ ಯಾರಿಗೆ ಗೊತ್ತು?

ಬೆಳಗಿನ ರೈಲು ೯॥ ಘಂಟೆಗೆ ಮಂಜೇಶ್ವರವನ್ನು ಸೇರಿತು. ನಂಟರೆಲ್ಲರೂ ಈಗಾಗಲೇ ಬರುತ್ತಾರೆಂದು ಹುಡುಗಿಯ ಕಡೆಯವರು ನಿರೀಕ್ಷಿಸುತ್ತಿದ್ದಾರೆ. ತಿಮ್ಮಪ್ಪಯ್ಯನ ಕಡೆಯಿಂದ ಹತ್ತೆಂಟು ಮಂದಿ ಬಂದಿದ್ದಾರೆ. ಮನೆಯವರೇ ಅದರಲ್ಲಿ ಐವಾರು ಮಂದಿಯಾಗುತ್ತಾರೆ. ಇನ್ನೊಬ್ಬ ಪುರೋಹಿತ ಚಕ್ರವರ್ತಿಯೂ ಇದ್ದಾನೆ. ಹತ್ತೂವರೆ ಘಂಟೆಗೆ ಸಮನಾಗಿ ವಕೀಲರ ಕಡೆಯ ದಿಬ್ಬಣ ಬಂದಿತು. ಸರಿ ಮತ್ತೇನು?

ಗಡಿ–ಬಿಡಿ. ಎರಡು ಮೂರು ತಾಸಿನ ಅವಧಿಯಲ್ಲಿ ವಿವಾಹ ವಿಧಿಯು ಮುಗಿದು, ಅಗ್ನಿ ಸಾಕ್ಷಾತ್ಕಾರದಿಂದ ನಾಗವೇಣಿಯು ಸೀತಾರಾಮನ ಹಕ್ಕಿನ, 'ಧರ್ಮ' * ದ ಪತ್ನಿಯಾದಳು.

ಮಧ್ಯಾಹ್ನ ಊಟವಾಯಿತು. ಇನ್ನೇನು ನಂತರು ಸಂಜೆಯ ಗಾಡಿಯಲ್ಲಿ ಚೆದರುವರು. ವಕೀಲರಿಗೆ ಮಂಗಳೂರನ್ನು ಸೇರಿದ ರಾಯಿತು. ತಿಮ್ಮಪ್ಪಯ್ಯನ ಮನೆ 'ಓ ಇಲ್ಲೇ ಇದೆ'. ಜಾನಕಿಯು ತೃಪ್ತಿಸಾಗರದಲ್ಲಿ ತೇಲಾಡಿದಳು. 'ಸೀತಾರಾಮ ಒಳ್ಳೇ ಲಕ್ಷಣವಾಗಿ ದ್ದಾನೆ. ನಾಗವೇಣಿಯಂತೆ ಇನ್ನು ನಾಲ್ಕು ಮಕ್ಕಳಿಗೂ ಒಂದೊಂದು ಸಂಬಂಧ ಆಗಿದ್ದರೆ.... ಸರಸಮ್ಮ ನಡೆಯಿಸಿಯಾಳು....' ಎಂದು ಕೊಂಡಳು ಅವಳು.

ಊಟ ಮುಗಿಯಿತು. ಅಳಿಯತನಕ್ಕೆ ಸೀತಾರಾಮ ರೂಢಿಯಾದ ವನು. ಪಾಯಸ ಚೆನ್ನಾಗಿತ್ತೆಂದು ಬಿಮ್ಮಗೆ 'ಸುರಿ' ‡ ದಿದ್ದನು. ಬಳಿಯಲ್ಲಿದ್ದ ನಾಗವೇಣಿ ನಾಚಿಗೆಯಿಂದಲೂ ಮುಂದಿನ ಜೀವನದ ಕಲ್ಪನೆಯಿಂದಲೂ ಅರೆಹೊಟ್ಟೆ ಊಟಮಾಡಿದ್ದಳು. ಊಟ ಮುಗಿದ ಮೇಲೆ ಸೀತಾರಾಮನು ಸಿಗರೇಟೊಂದನ್ನು ಹೊತ್ತಿಸಿ ಹೊಗೆ ಹಾರಿಸು ತ್ತಿದ್ದನು. ಅವನಿಂದಲೇ ಒಂದನ್ನು ಇಸಕೊಂಡು ವಕೀಲರೂ ತುಷ್ಟ ರಾಗಿದ್ದರು. ನಾಗವೇಣಿಯು ತಲೆ ಬಗ್ಗಿಸಿ ಕುಳಿತಿದ್ದರೂ ಅರೆಗಣ್ಣಿನಿಂದ ಪತಿಯ ಈ ವಿಲಾಸವನ್ನು ನೋಡುತ್ತಿದ್ದಳು. ನುರಿತ ಗಂಡನಾದ ಸೀತಾರಾಮನು 'ಏನು ಸಿಗರೇಟು ಬೇಕೇ?' ಎಂದು ಒಳದನಿಯಲ್ಲಿ ಅವಳನ್ನು ಕೇಳಿದನು. ನಾಗವೇಣಿಗೆ ಏನು ಮಾತಾಡುವುದೆಂದು ತೋಚಲಿಲ್ಲ. ಅವಳಿಂದ ಉತ್ತರ ಬಾರದುದನ್ನು ಕಂಡು ಸೀತಾರಾಮನು 'ಹೂಂ, ನಿನ್ನ ಬಗ್ಗೆ ನಾನೇ ಎಳೆಯುತ್ತೇನೆ.' ಎಂದು ಮೊದಲಿನ ಸಿಗರೇಟಿನ ಕಿಡಿಗೆ ಹೊಸತೊಂದನ್ನು ಹೂಡಿ, ಅದನ್ನು ತುಟಿಗೇರಿಸಿದನು. ಬರಿಯ ನಾಗವೇಣಿಯ ಬಗ್ಗೇನು, ಅಲ್ಲಿ ಸೇರಿದವರಲ್ಲಿ ತಂಬಾಕಿನ

---

* ಬೆಲೆಯಿಲ್ಲದ ದೋಟಿತ

‡ ಸದ್ದೆಬ್ಬಿಸಿ ಊಟಮಾಡುವುದು

ಚಟವಿಲ್ಲದವರೆಲ್ಲರ ಪಾಲನ್ನು ಅವನೇ ಪೂರೈಸುವ ಹಾಗಿತ್ತು. ತಿಮ್ಮ-ಪ್ಪಯ್ಯನೂ ಅದೇ ವಿಚಿತ್ರವನ್ನು ನೋಡುತ್ತಿದ್ದರು. 'ಈ ಅಳಿಯನಿಗೆ ಸಿಗರೇಟು ಕೊಟ್ಟು ತನ್ನಿಂದ ಪೂರೈಸೀತೇ ಎಂದು ಅವರಿಗೆ ತೋಚಿತು. ತಿಮ್ಮಪ್ಪಯ್ಯನ ಮುಖದ ವಿಚಿತ್ರ ನಗುವನ್ನು ಕಂಡು ವಕೀಲರು 'ಅವನು ಲಗ್ನಕಾಲದಲ್ಲಿ ಎಳೆಯದಿದ್ದುದು ದೊಡ್ಡದು' ಎಂದರು.

ವೇಳೆಯಾಯಿತೆಂದು ನಂಟರು 'ಉಭಯ ಕುಶಲೋಪರಿ' ಮಾಡಿದರು. ಜಾನಕಿಯು ಮಗಳ ವಿಯೋಗವನ್ನು ನೆನಸಿ ಕಣ್ಣೀರು ಕರೆದಳು. 'ನಾಗಿಯ ಜತೆಗೆ ಪುಟ್ಟುಮಣಿ ಅವಳ ಒತ್ತಿನವಳು! ನಾಲ್ಕು ದಿನ ಹೋಗಿ ಬರಲಿ' ಎಂದು ತಿಮ್ಮಪ್ಪಯ್ಯ ಠರಾಯಿಸಿದರು. ಎಲ್ಲರೂ ಕಾಲು ನಡೆಯಿಂದ ರೈಲು ನಿಲ್ದಾಣಕ್ಕೆ ಬಂದರು. ತಿಮ್ಮಪ್ಪಯ್ಯನು ಮಡದಿ ಸಮೇತ ಊರಿಗೆ ತೆರಳಬೇಕೆಂದಿದ್ದವರು..'ಇಲ್ಲಿಂದಿಲ್ಲೆ ಅಲ್ಲವೇ' ಎಂದು ರೈಲು ಸ್ಟೇಶನಿಗೆ ಬಂದರು.

ಎಲ್ಲರೂ ಹೊರಡಲು ಅಣಿಯಾದರು. ಮಂಗಳೂರಿನ ಬಂಡಿಯೊಂದು ಈ ಕಡೆಗೆ ಬಂದಿತು. ಇನ್ನು ಕಾಸರಗೋಡಿನ ಬಂಡಿ ಮಂಗಳೂರಿಗೆ ಬರುತ್ತದೆ. ಸೀತಾರಾಮನು ಅಣ್ಣನನ್ನು ಕರೆದು ಕಿವಿಯಲ್ಲೇನೋ ಹೇಳಿ, 'ಅಣ್ಣಾ, ಎರಡು ಟಿಕೇಟುಗಳಿರಲಿ' ಎಂದನು. ಬಂಡಿ ಬರಲು ಸೀತಾರಾಮನು ಹುಡುಗಿಯ ಕೈಯನ್ನು ಹಿಡಿದು 'ಹೂಂ ಹತ್ತು' ಎಂದನು. ಅವಳೂ ಏರಿದಳು.. ಸೀತಾರಾಮನೂ ಏರಿದನು. ಟಿಕೇಟನ್ನು ರಾಮಭಟ್ಟರು ತಮ್ಮನ ಕೈಯಲ್ಲಿ ತಂದಿರಿಸಿ, ಅದರ ಜತೆಗೆ ಒಂದೆರಡು ನೋಟುಗಳನ್ನು ಕೊಟ್ಟರು.

ನಾಗವೇಣಿ ಬಂಡಿಯಿಂದ ಇಣಿಕಿ ನೋಡುತ್ತಾಳೆ; ಉಳಿದವರು ಬಂಡಿಯನ್ನೇರುವುದಿಲ್ಲ. ತಿಮ್ಮಪ್ಪಯ್ಯ ಕಕ್ಕಾಬಿಕ್ಕಿಯಾದರು. ರಾಮಭಟ್ಟರು 'ಹುಡುಗಬುದ್ಧಿ, ಬೇಕಲಕ್ಕೆ ಹನಿಮೂನಿಗೆ ಹೋಗುತ್ತಾನೆ' ಎಂದರು. 'ಅವರೇ ಗಂಡಹೆಂಡಿರಲ್ಲವೇ ?' ಎಂದರು. 'ಹನಿಮೂನಿಗೆ!' ಎಂದು ವಕೀಲರ ಮಾತನ್ನು ಮರುಕಳಿಸಿ ಏನೂ ತಿಳಿಯದವರಂತೆ ತಿಮ್ಮಪ್ಪಯ್ಯ ನಿಂತರು. 'ಪುಟ್ಟುಮಣಿಯನ್ನು ಕರೆದುಕೊಂಡು ಹೋಗಬಹುದಿತ್ತು. ನಾಗಿಗೆ ಬೇಸರವಾದರೆ? ಅಲ್ಲದೆ ಹಳ್ಳಿಯ ಹುಡುಗಿ ನೋಡ

ನಾಚಿಕೆಗೀಚಿಕೆಯಿಂದ ಗಂಡನೊಡನೆ ಮಾತಾಡುತ್ತಾಳೋ ಇಲ್ಲವೊ ಇವರು ಇಂಗ್ಲಿಸಿನವರು' ಎಂದರು.

'ಹನಿಮೂನಿಗೆ ಆದುದರಿಂದ ಪುಟ್ಟುಮಣಿಯನ್ನು ಬಿಟ್ಟು ಹೋದನು.'

'ಅದೇನು ಕ್ಷೇತ್ರವೇ..?'

'ನಿಮಗಿಷ್ಟು ತಲೆಗೆ ಹೋಗುವುದಿಲ್ಲವೇ? ಬೇಕಲಕ್ಕೆ ತಿರುಗಾಟಕ್ಕೆ ಒಂದೆರಡು ದಿನ ಮಜಾ ಮಾಡಲಿಕ್ಕೆ ಹೋದನು. ಹುಡುಗಬುದ್ಧಿಯಲ್ಲವೆ.'

ಬೇರೆ ರೈಲು ಬಂದಿತು. ರಾಮಭಟ್ಟರು ಮಂಗಳೂರಿಗೆ ಹೋದರು. ತಿಮ್ಮಪ್ಪಯ್ಯ ಪುಟ್ಟುಮಣಿಯನ್ನು ಕರೆದುಕೊಂಡು 'ಎಂಥ ಹನಿಮೂನೋ? ಯಾರಿಗೆ ಗೊತ್ತು?' ಎಂದು ನಡೆದುಕೊಂಡು ಕತ್ತಲೆಯ ಮೇಲೆ ಮನೆಯನ್ನು ಸೇರಿದನು.

ಪುಟ್ಟುಮಣಿಯು ಒಳಗೆ ಓಡಿ, ಈಗಾಗಲೇ ಮನೆಯನ್ನು ಸೇರಿದ ತಾಯಿಯ ಬಳಿಗೆ ಓಡಿಹೋಗಿ 'ಅಮ್ಮ, ನಾಗವೇಣಿ ಅವರೊಟ್ಟಿಗೆ ಹಸಿಮೂನಿಗೆ ಹೋದಳು.' ಎಂದು ಸುದ್ದಿ ಕೇಳು.

ತಾಯಿ :– 'ಹಸಿಮೂನಿಗೆ?'

## ೧೯

# ದಾಂಪತ್ಯದ ಘೋರರಾತ್ರಿ

ಸೀತಾರಾಮನು ನಾಗವೇಣಿಯೊಡನೆ ಪಳ್ಳಿಕೆರೆ ರೈಲ್ವೆ ಸಿಲ್ದಾಣಕ್ಕೆ ಬರುವಾಗ ಸಂಜೆಯ ಸೂರ್ಯ ಮುಳುಗಿದ್ದನು. ಜನರಿಂದ ತುಂಬಿದ ಗಾಡಿಯಲ್ಲಿ ಸೀತಾರಾಮನು ಬಾಯಿ ಬಿಡಲಾರದ ಮಡದಿಯನ್ನು ಮಾತನಾಡಿಸುವುದು ಸಾಧ್ಯವೇ ಇರಲಿಲ್ಲ. ಅವಳಿಗೆ ತನ್ನನ್ನು ಯಾವ ಊರಿಗೆ ಒಯ್ಯುತ್ತಾರೆಂದು ತಿಳಿದಿರಲಿಲ್ಲ. ಕಾಸರಗೋಡು ಸಿಲ್ದಾಣ ಬಂದೊಡನೆಯೇ ಸೀತಾರಾಮನು ಮುಂಜಾಗ್ರತೆಯಿಂದ ಮಾರಾಟಕ್ಕೆ ಬಂದಿದ್ದ ಹಣ್ಣುಗಳನ್ನಿಷ್ಟು ಕೊಂಡುಕೊಂಡನು. ಕಾಸರಗೋಡು ಕಳೆದ ತುಸು ಹೊತ್ತಿನಲ್ಲಿ ಪಳ್ಳಿಕೆರೆ ಬಂದಿತು. ಅದು ಬೇಕಲಕ್ಕೆ ಇಳಿಯುವ ಸ್ಟೇಷನು. ಸ್ಟೇಷನಿನ ಗುರುತೆಂಬಂತೆ ತೀರ ಚಿಕ್ಕದೊಂದು ಮನೆಯಿದೆ. 'ಕೆಳಗಿಳಿಯುವ' ಎಂದು ಸೀತಾರಾಮನು ನಾಗವೇಣಿಯನ್ನು ಕರೆದನು. ನಾಗವೇಣಿಯ ಮನಸ್ಸು ಎಲ್ಲೆಲ್ಲ ಸುತ್ತುತ್ತಿತ್ತೆಂದು ಹೇಳುವುದು ಕಷ್ಟ. ಹಗಲುಕನಸ್ಸಿನಿಂದ ಅವಳೀಗ ಎಚ್ಚೆತ್ತಳು.

ಇಬ್ಬರೂ ಕೆಳಗಿಳಿದರು. ಆಫೀಸಿನ ಗೇಟಿನ ಬಳಿ ನಿಂತರು. ಅಲ್ಲಿ ತಂಗಿದ ಹತ್ತೆಂಟು ಮಾಪಿಳ್ಳೆಯರು ಟಿಕೇಟನ್ನು ಒಪ್ಪಿಸಿ, ಸ್ಥಳವನ್ನು ಬಿಟ್ಟಬಳಿಕ, ಇವರೂ ಒಪ್ಪಿಸಿ ನಡೆದರು. ಬೆಳದಿಂಗಳು ಆಗ ಚೆನ್ನಾಗಿ ಚೆಲ್ಲಿತ್ತು. ಸೀತಾರಾಮ ಸ್ಟೇಷನಿನಿಂದ ಹೊರಕ್ಕೆ 'ಎಲ್ಲಿಗೆ ಹೋಗುವೆವೆಂದು ಗೊತ್ತಾಯಿತೇ?' ಎಂದು ಕೇಳಿದನು. ನಾಗವೇಣಿಯು ಅವನ ಮೋರೆಯನ್ನೇ ನಿರೀಕ್ಷಿಸಿದಳು. 'ಓ ಅಲ್ಲಿ....ಕೇಳಿಲ್ಲವೇ?..ಬೇಕಲ ಕೋಟೆ....ಓ ಅದು..ಬಹಳ ಚಂದದ ಸ್ಥಳ.' ಎಂದನು.

ಇಬ್ಬರೂ ಹೆಜ್ಜೆ ಇರಿಸುತ್ತ, ಮರಳಿನ ದಂಡೆಯನ್ನು ದಾಟಿ ಕಡಲಿನ ಅಂಚಿಗೆ ಬಂದರು. ತಿಂಗಳುಬೆಳಕು ಕಡಲಿನ ಮುರಿಯುವ ತೆರೆಗಳನ್ನು ಮೋಹಕವಾಗಿ ಬೆಳಗಿತ್ತು. ಸೀತಾರಾಮನು....'ಚೆನ್ನಾಗಿಲ್ಲವೆ?' ಎಂದು ಕೇಳಿದನು. ನಾಗವೇಣಿ ಮೊದಲನೆ ಬಾರಿಗೆ 'ಏನು?'

ಎಂದು ಮಾತನಾಡಿದಳು. 'ಸಮುದ್ರ, ನೋಡು...ಆ ಕೋಟೆ.. ಇದೆಲ್ಲ..' ನಾಗವೇಣಿಯು ಪ್ರಪಂಚ ಬೇರೆಯೆ ತೆರನದಿತ್ತು. 'ಈ ಸೀರೆ ಚೆನ್ನಾಗಿಲ್ಲವೇ?' 'ಈ ಹೂ ಚೆನ್ನಾಗಿಲ್ಲವೇ?' 'ಈ ಒಂಕಿ ಚೆನ್ನಾಗಿಲ್ಲವೇ?, ಎಂದು ಕೇಳಿದ್ದರೆ ಅವಳು ಹೇಳಬಲ್ಲಳು. 'ಕಡಲು ಚೆನ್ನಾಗಿಲ್ಲವೇ?' 'ಗುಡ್ಡ ಚೆನ್ನಾಗಿಲ್ಲವೇ?' ಎಂದರೆ! ಹಳ್ಳಿಯ ಹುಡುಗಿ, ಕಡಲನ್ನು ಸಾವಿರ ಸಾರಿ ಕಂಡಾಕೆ, ಬೆಟ್ಟದ ಎಡೆಯಲ್ಲೇ ನಲಿದಾಕೆ. .ಅವುಗಳಲ್ಲಿ ಒಂದು ಚೆನ್ನ ..ಚೆಲುವು ಏನಿದೆಯಂತೆ ಎಂದು ತಿಳಿಯುವುದೇ ಸರಿ. ಸೀತಾರಾಮನ ಒಂದು ಕೈಯಲ್ಲಿ ಹಣ್ಣುಗಳಿದ್ದುವು. ಅವನ್ನು ಎದೆಗೆ ಒತ್ತಿ ಹಿಡಿದಿದ್ದನು. ಇನ್ನೊಂದು ಕೈಯನ್ನು ತನಗಿಂತ ಮೆಲ್ಲಗೆ ನಡೆಯುತ್ತಿದ್ದ ನಾಗವೇಣಿಗೆ ಕೊಟ್ಟನು. ನಾಗವೇಣಿಗೆ ಅದನ್ನು ಹಿಡಿಯಲು ನಾಚಿಕೆ. ನಾಲ್ಕು ದಿನದ ಲಗ್ನಗಳಲ್ಲಿ ಆಗಾಗ ಕೈ ಹಿಡಿದು ರೂಢಿಯಾಗುವಂತೆ ಅದಕ್ಕೂ ರೂಢಿಯಾಗಿಲ್ಲ. ಅವಳ ಕೈಯನ್ನು ತಾವಾಗಿ ಹಿಡಿದು 'ಬಂಡಿಯೇರು' ಎಂದಾಗಲೇ ಅವಳ ಮೈ ಜುಮ್ಮೆಂದಿತ್ತು. ಈಗ ಕೈ ನೀಡಿದರೆ ಅವಳಾಗಿ ಹಿಡಿದಾಳೆಯೇ? ಸೀತಾರಾಮನು 'ನಾಚಿಕೆಯೆ?' ಎಂದು ಹೇಳುತ್ತ ಅವಳ ಕರವನ್ನು ಹಿಡಿದನು. ಮೃತದೇಹದಂತೆ ಸ್ಪರ್ಶಸುಖ ವನ್ನು ಅನುಭವಿಸಲು ಯೋಗ್ಯತೆ ಇಲ್ಲದಂತೆ ನಾಗವೇಣಿಯು ಹಸ್ತವು ಸೀತಾರಾಮನ ಹಿಡಿತದಲ್ಲಿ ಬಿದ್ದಿತು. ಅವನು ನಡೆಯುತ್ತ ನಡೆಯುತ್ತ ಮುಷ್ಟಿಯನ್ನು ಬಿಗಿದನು. ಬೇರೆ ಪ್ರಸಂಗವಾಗಿದ್ದರೆ 'ಅಯ್ಯೋ' ಒಂದು ಚೀರುತ್ತಿದ್ದಳೋ ಏನೋ. ಗಂಡನೆದುರು ಹಾಗೆ ಮಾಡಲು ನಾಚುಗೆ.

ಈಗ ಗುಡ್ಡದ ಬುಡ ಬಂದಿತು. ಕಡಲ ಅಲೆಗಳು, ಅಲ್ಲಿನ ಬಂಡೆ ಗಳನ್ನು ಬಡಿದು ಸಿಡಿದು ನೊರೆಯಾಗುವ ನೋಟವನ್ನು ಕಂಡು 'ನೋಡು ಎಷ್ಟು ಚೆನ್ನಾಗಿದೆ' ಎಂದನು ಸೀತಾರಾಮ. ನಾಗವೇಣಿ ಮೌನ. 'ನೀನು ಮೂಕಿಯೇ?'.. ನಾಗಿ—ಲಜ್ಜೆಯಿಂದ ಕುಸಿದಳು.

ಇವರಿಬ್ಬರೂ ಗುಡ್ಡವನ್ನೇರಿದರು. ಸೀತಾರಾಮನು ಕೋಟೆಯ ಗುಪ್ತದ್ವಾರವನ್ನು ಸೇರಿ 'ಇದು ಗುಪ್ತದ್ವಾರ....ಹೆದರಬೇಡ, ಈಗ ಬೆಳಕು ಬರುವದು' ಎಂದು ಅವಳ ಕೈಯನ್ನು ಕೈ ಬಿಟ್ಟು ತೋಳನ್ನು

ಹಿಡಿದು, ಗೋಡೆಯ ಒಳಕ್ಕೆ ಕರದೊಯ್ದನು. ಅದು ಒಂದೆರಡು ನಿಮಿಷದ ಹಾದಿಯೂ ಇಲ್ಲ. ಆದರೆ ಈ ವಿಚಿತ್ರವನ್ನರಿಯದ ನಾಗವೇಣಿಗೆ ತನ್ನನ್ನೇನು ಮಾಡುವರೋ' ಎಂದೆನಿಸಿತು.

ಅಷ್ಟರಲ್ಲಿ ಚಂದ್ರಬಿಂಬ ಮುಖಕ್ಕೆ ಹೊಳೆಯಿತು. ಕೋಟೆಯ ನಡು ಬಯಲು ಬಂದಿತು. ಸೀತಾರಾಮನು 'ನೋಡು ಅದು ಬಂಗ್ಲೆ ಎಂದನು. ಇಬ್ಬರೂ ಅಲ್ಲಿಗೆ ಹೋದರು. ಸೀತಾರಾಮನು ಹೋದವನೇ 'ವಾಚರ್, ವಾಚರ್' ಎಂದು ಕೂಗಿದನು. ಕತ್ತಲಾದಮೇಲೆ ಅಲ್ಲಿ ಜನರು ಬರುತ್ತಾರೇನು? ಆದುದರಿಂದ ವಾಚರನು ಇದ್ದಿರಲಿಲ್ಲ. ಅವನನ್ನು ಶಪಿಸುತ್ತ ಬಂಗ್ಲೆ ಕಿಡಿಕಿಯ ಕೀಲಿ ತಪ್ಪಿಸಲು ಬರುವುದೋ ಎಂದು ಯತ್ನಿಸಿದನು. ಅದು ಸಾಧ್ಯವಾಗಲಿಲ್ಲ.

'ನಾಗವೇಣಿ—ಹಾಗಲ್ಲವೇ ಕರೆಯಬೇಕು. ನಾವು ಬಂದುದು ತಡವಾಯಿತು. ವಾಚರ್ ಇಲ್ಲ. ಇವತ್ತು ಹೊರಜಗುಲಿಯಲ್ಲಿಯೇ ಕಳೆಯಬೇಕು. ಹೋಗಲಿ, ಯಾವುದಕ್ಕೂ ಹಣ್ಣು ಮುಗಿಸುವ'

ಪ್ರಥಮ ಕಾಣಿಕೆಯಾಗಿ ಒಂದು ಬಾಳೆಯ ಹಣ್ಣನ್ನು ಸುಲಿದು ಅವಳ ಬಾಯಿಗೆ ತುರುಕಹೋದನು. ಆದರಿಂದ ನಾಗವೇಣಿಯ ಮುಖವೆಲ್ಲ ಹಣ್ಣಿನ ಕುಸುರಾಯಿತೇ ವಿನಾ ಆವಳು ಅದನ್ನು ತಿನ್ನಲಿಲ್ಲ. ಕೈಯಿಂದ ಹಿಡಿದುಕೊಂಡಳು. ಸೀತಾರಾಮನು ನಕ್ಕನು. ಆ ಬಳಿಕ ತಾನು ಹಣ್ಣನ್ನು ತಿನ್ನತೊಡಗಿದನು. ನೀನೂ ತೆಗೆದುಕೋ; ಊಟವಿಲ್ಲ ತಿಳಿಯಿತೇ ಎಂದನು. ಅವಳಿಗೆ ಹಸಿವು ಸಾಕಷ್ಟು ಆಗಿತ್ತು. ಆದುದರಿಂದ ಹಣ್ಣು ತಿನ್ನತೊಡಗಿದಳು. ಅವಳು ಒಂದು ತಿನ್ನುವುದರಲ್ಲಿ ಸೀತಾರಾಮನು ಮೂರನ್ನು ಮುಗಿಸಿದ್ದನು. ಅಂತೂ ರಾತ್ರಿ ನಿಜವಾದ ಫಲಾಹಾರವಾಯಿತು.

'ನಾಗವೇಣಿ, ಮಾತನ್ನೇ ಆಡುವುದಿಲ್ಲವೇ?' ಎಂದು ಕೇಳಿದನು. ನಾಗವೇಣಿ ಏನೆನ್ನಬೇಕು 'ಆಡುತ್ತೇನೆ' ಎಂದಳು.

'ಬಾ ಹೋಗುವ. . ಇಲ್ಲಿ ಬೇಡ. . ಸಮುದ್ರದಂಡೆಗೆ ಹೋಗುವ' ಎಂದು, ಅವಳನ್ನು ಕರೆದುಕೊಂಡು, ಕೋಟೆಯ ಪಡುಬಾಗಿಲಿನಿಂದಳಿದು

ಕಡಲ ಅಂಚಿನ ಬಂಡೆಗಳ ಮೇಲೆ ಕುಳಿತನು. ಕಡಲ ನೀರು ಕುಣಿ-ಕುಣಿದು ಬಂಡೆಗೆ ಅಪ್ಪಳಿಸುತ್ತಿತ್ತು. 'ನೋಡಿದಿಯಾ, ಎಷ್ಟು ಚೆಂದವಾಗಿದೆ' ಎಂದು ಸೀತಾರಾಮು ಹೇಳಿದನು. ನಾಗವೇಣಿಯ ಎದೆಯೊಳಗೆ ಅದರಂತೆಯೇ ಏನೋ ಅಪ್ಪಳಿಸುವ ಸದ್ದು ಕೇಳುತ್ತಿತ್ತು. ಸೀತಾ-ರಾಮನು ಅವಳ ಮೈಗೆ ತನ್ನ ಮೈಯನ್ನು ತಾಗಿಸಿ ಕುಳಿತುಕೊಳ್ಳಲು ಪ್ರಯತ್ನಿಸಿದನು. ಅವಳು ನಾಚುಗೆಯಿಂದ ಇವನಿಂದ ಸರಿದಳು.

'ನಿನ್ನ ಹೆಸರೇನೇ' ಎಂದು ಕೇಳಿದನು.

'ನಾಗವೇಣಿ' ಎನ್ನಲು ಅವಳಿಗೆ ಬಲು ಕಷ್ಟವಾಯಿತು.

'ನನ್ನದು?'

ಎಂದಾದರೂ ಉತ್ತರ ಬಂದೀತೇ! ಸೀತಾರಾಮುನದು ಒಮ್ಮುಖ ಪ್ರಣಯ. ಅದರಿಂದ ಅವನಿಗೆ ಬೇಸರ ಬಂದಿತು. 'ನೋಡು, ಅಲ್ಲಿ ಮರಳಿನ ದಿನ್ನೆ..ಹೋಗುವ ಬಾ' ಎಂದು ಅವಳನ್ನು ಕರೆದೊಯ್ದನು. ಬಂಡೆಗೆ ತಾಗಿ ಬಲು ದೂರದ ತನಕ ಮರಳು ಹಾಸಿತ್ತು. ಮೂಡು ಮಗ್ಗುಲಿನಲ್ಲಿ ತೆಂಗಿನ ಗರಿಗಳು ಗಾಳಿಗೆ ಗಾನ ಮಾಡುತ್ತಿದ್ದುವು. ಪಡುವಲಿಗೆ ಕಡಲ ಆರ್ಭಟೆ.

ಸೀತಾರಾಮುನು ಮರಳಿನ ಮೇಲೆ ದಫಕ್ಕನೆ ಕುಳಿತನು. ಅವನಿಗೆ ತುಸು ದೂರದಲ್ಲಿ ನಾಗವೇಣಿ ಕುಳಿತಳು; ಮೆಲ್ಲಗೆ, ನೆಲಕ್ಕೆ ನೋವಾಗದಷ್ಟು ಮೆಲ್ಲಗೆ ಕುಳಿತಳು. 'ದೂರ ಕುಳಿತೆಯೇಕೆ? ನಾನ್ಯಾರು' ಎಂದು ಸೀತಾರಾಮು ಕೇಳಿದನು. ಗಂಡನಿಗೆ ಸಿಟ್ಟು ಬಂದೀತೆಂದು ಅಂಜಿ ಬಳಿಗೆ ಬಂದಳು. ಸೀತಾರಾಮುನು ತಬ್ಬಿ ಹಿಡಿದನು. ನಾಗವೇಣಿಯು ಬೆವರಿದಳು. ಅವಳ ಮುಖವು ಕೆಂಪಡರಿತು. ಅವನು ಅವಳ ಸ್ಪರ್ಶಸುಖವನ್ನು ಅನುಭವಿಸುತ್ತಿದ್ದನು. ಆದರೆ ನಾಗವೇಣಿ ಮಾತ್ರ ಒಮ್ಮೆಗೇ ತಪ್ಪಿಸಿಕೊಂಡು ಹೋಗೋಣವೆಂಬ ಭೀತಿಗೆ ಗುರಿಯಾಗಿದ್ದಳು. ಸೀತಾರಾಮುನ ಕೈ ಸಡಲಿತು. ಅವನ ಮೈಗೋ ಬೆವರಿನ ಸ್ಪರ್ಶವಾಗಿ 'ಯಾಕೆ ಬೆವರುತ್ತಿ? ಸೆಕೆಯಾಗುತ್ತದೆಯೇ; ಆಯಾಸವೇ.....ಹಾಗಾದರೆ

ಮಲಗುವಾ....ಬಂಗ್ಲೆಗೆ ಹೋಗೋಣವೇ..ಅಲ್ಲಿ ಗಟ್ಟಿ ನೆಲ..ಇಲ್ಲಿ ಎಷ್ಟು ಮೆತ್ತನೆ ಇದೆ. ಇಲ್ಲೇ ನಿದ್ರೆಮಾಡುವ.'

'ಹೂಂ'

ಸೀತಾರಾಮನು ನೆಲವನ್ನು ಕೈಯಿಂದ ಸವರಿ ಮಟ್ಟವಾಗಿಮಾಡಿ ಅದರ ಮೇಲೆ ತಾನು ಹೊದೆದ ದೊಡ್ಡ ಶಲ್ಲೆಯನ್ನು ಹಾಸಿದನು. ತೆಳ್ಳಗಿನ ಆ ಶಾಲನ್ನು ಬಿಡಿಸಿ ಹಾಸಿದಷ್ಟಕ್ಕೆ ಅದು ಚಾಪೆಯಂತೆ ಸುರುಳಿಯಾಗಿ ಸುತ್ತುತ್ತಿತ್ತು 'ಆ ತುದಿ ಹಿಡಿದುಕೋ' ಎನ್ನಲು ನಾಗವೇಣಿ ಶಾಲಿನ ತುದಿಯನ್ನು ಹಿಡಿದಳು. ಹೀಗೆ ಉಭಯತರಿಂದ ಶಯ್ಯೆಯು ನಿರ್ಮಾಣವಾಯಿತು.

ಸೀತಾರಾಮನು ಮಲಗಿಕೊಂಡನು. 'ಬಾ....ನಿದ್ದೆಬರುತ್ತದೆಯಾದರೆ ಮಲಗಿಕೋ; ಬಲು ಸಂಕೋಚದವಳಪ್ಪ ನೀನು' ಎಂದನು. ಆಕೆಯು ನಿಜಕ್ಕೂ ಸಂಕೋಚದಿಂದ ಶಲ್ಲೆಯ ತೀರ ತುದಿಗೆ ಮಲಗಿದಳು. ಹಾಗೆನ್ನುವುದಕ್ಕಿಂತ, ಮರಳಿನ ಮೇಲೆ ಶಲ್ಲೆಗೆ ತಾಗಿ ಮಲಗಿದಳು ಎನ್ನಬಹುದು.

ಆಕೆಯ ಮನಸ್ಸು ಇನ್ನುಮುಂದೆ 'ತನ್ನ ಸ್ಥಿತಿ ಏನೋ—ಗಂಡನ ಮನೆಯೆಂದರೆ ಎಂಥದೋ—ಎಂದು ವಿಚಿತ್ರ ಯೋಚನೆಗಳನ್ನು ಮಾಡುತ್ತಿತ್ತು. ಅವಳ ಶರೀರಕ್ಕೆ ತುಂಬಾ ಆಯಾಸವಾಗಿತ್ತು. ಇತ್ತ ಕಡಲ ಗಾಳಿಯು ಮೈಮೇಲೆ ಬೀಸುತ್ತಿತ್ತು. ಕಡಲಿನ ಜೋಗುಳ ಬೇರೆ ಇಂಪಾಗಿ ಕೇಳಿಸುತ್ತಿತ್ತು. ನಿಮಿಷದಲ್ಲಿ ಯೋಚನೆಗಳೆಲ್ಲ ಮರೆತು ಅವಳಿಗೆ ನಿದ್ದೆಹತ್ತಿತು. ಎಷ್ಟುಹೊತ್ತು ಹೀಗೆ ನಿದ್ರಿಸಿದಳೋ ತಿಳಿಯದು.

ಒಮ್ಮೆಗೇ ಚೀರಿದಳು. ತಿಂಗಳು ಕಂತುತ್ತಿತ್ತಷ್ಟೆ. ಅವಳಿಗೆ ಒಮ್ಮೆಗೇ ಭೀತಿಯಾಯಿತು. ಅವಳು ಸೀತಾರಾಮನ ಹಿಡಿತದಲ್ಲಿ ಕುಳಿತಿದ್ದಳು..'ಅಯ್ಯೋ ಅಯ್ಯೋ' ಎಂದು ಕಿರಚಿದಳು..'ಸೀತಾರಾಮನು ನಾನಲ್ಲವೇ' ಎಂದು ಹೇಳುತ್ತ, ಅವಳು ತಪ್ಪಿಸಿಕೊಳ್ಳಲು ಯತ್ನಿಸುವುದಕ್ಕಿಂತ ಬಲವಾಗಿ ಆಲಿಂಗಿಸಿದ್ದನು. ತಾನು ಗಂಡನ ಹಿಡಿತದಲ್ಲಿರುವೆನೆಂದು ಅವಳಿಗೆ ನೆನವರಿಕೆಯಾಯಿತು. ಗಂಡನ ಅಧಿಕಾರವನ್ನು

ಅನುಭವಿಸಬೇಕೆಂದೂ ತಿಳಿಯಿತು. ಆದರೆ ಅವರೇತಕ್ಕೆ ಹೀಗೆ ಮಾಡುವ ರೆಂದು ಮಾತ್ರ ಅರ್ಥವಾಗಲಿಲ್ಲ.

ಕೆಲವು ನಿಮಿಷಗಳ ತನಕ ಪತಿಯ ಕಾಮ-ಪ್ರೇಮಗಳ ಸಂಭಾವನೆಯನ್ನು ಅನುಭವಿಸಿದಳು. ಸೀತಾರಾಮನ ಹಿಡಿತದಿಂದ ನಾಗವೇಣಿಯು ದೂರವಾದಳು. ಜಿಗುಪ್ಸೆ, ಕೋಪ, ವ್ಯಥೆ, ತಿರಸ್ಕಾರಗಳಿಂದ ದೂರ ಮರಳಿನಲ್ಲಿ ಹೋಗಿ ಕುಳಿತು ಅಳತೊಡಗಿದಳು. ಕಡಲತೆರೆಯ ಉಕ್ಕುವಿಕೆಗೆ ಮಿಗಿಲಾಗಿರುವ ದುಃಖವು ಅವಳ ಎದೆಯಿಂದ ಉಕ್ಕುತ್ತಿತ್ತು. ಸೀತಾರಾಮನಿಗೆ ಬುದ್ಧಿ ಬಂದಿತು. ಅವಳು ಅಳುತ್ತಿದ್ದಳೆಂಬುದು ತಿಳಿಯಿತು! ಆದರೆ ಅವಳನ್ನು ಮಾತನಾಡಿಸುವ ಧೈರ್ಯವಿಲ್ಲ. ಅವನು ಮಲಗಿಕೊಂಡನು. ತೆರೆಗಣ್ಣಿಂದ ನಾಗವೇಣಿ ಮಾತ್ರ ಕುಳಿತಲ್ಲೇ ಕುಳಿತು, ತಲೆತಗ್ಗಿಸಿ ಕಣ್ಣೀರನ್ನು ಕರೆಯುತ್ತಿದ್ದಳು. ಮರಳಿನ ಆ ಹಾಸುಗೆ ಬೋರೆಂದು ಇವಳು ಕರೆದ ಕಣ್ಣೀರನ್ನೆಲ್ಲಾ ಕುಡಿಯುತ್ತಿತ್ತು.

ಮರುದಿನ-ಬೆಳಗಾಯಿತು; ಸೀತಾರಾಮನಿಗೆ ಗಾಢನಿದ್ರೆಯೂ ಕಳೆದಿತ್ತು. ಅವನು ಉರಿಮುಖದಿಂದ ನಾಗವೇಣಿಯನ್ನು ಕರೆದು 'ಬಾ ಹೋಗುವಾ' ಎಂದನು. ಗಂಡನನ್ನು ಅವಳು ಹಿಂಬಾಲಿಸಿದಳು. ಸೀತಾರಾಮನು ಬಂಗಲೆಗೆ ಹೋದನು. ಬಂಗ್ಲೆಯ ಗೋಡೆಗೆ ಒರಗಿ ಯಾವನೊಬ್ಬನು ಕುಳಿತಿದ್ದನು. ಇವರಿಬ್ಬರನ್ನು ಅವನು ನೋಡುತ್ತಾ ಕುಳಿತಿದ್ದನು. ಅದರಿಂದ ಸೀತಾರಾಮನು ಬಂಗ್ಲೆಯ ದಿಕ್ಕಿಗೆ ಹಾಯಲಿಲ್ಲ. ಮೊದಲು ಬಂದ ಗುಪ್ತಮಾರ್ಗದಿಂದ ಇಳಿದನು. ನಾಗವೇಣಿಗೆ 'ಇಲ್ಲೇ ತನ್ನ ಸಮಾಧಿಯಾಗಿದ್ದರೆ' ಎಂದೆನಿಸಿತು. . .

' ಸೀತಾರಾಮನು ಅವಳನ್ನು ಕರೆದುಕೊಂಡು ರೈಲ್ವೆ ನಿಲ್ದಾಣಕ್ಕೆ ಬಂದನು. ಬೆಳಗಿನ ಬಂಡಿಗೆ ಇನ್ನೂ ಅರ್ಧ ತಾಸಿತ್ತು. ಟಿಕೇಟು ಕೊಡುವ ತನಕ ಇಬ್ಬರೂ ಹಾಗೆಯೇ ಇದ್ದರು. ಸೀತಾರಾಮನು ಮಂಗಳೂರಿಗೆ ಎರಡು ಟಿಕೇಟುಗಳನ್ನು ಕೊಂಡನು. ಅವನ ಹಸಿಮೋಸು ಒಂದು ರಾತ್ರಿಯಲ್ಲಿ ಮುರಿಯಿತು. 'ಹಾಳಾದ ಹಳ್ಳಿಯ ಹುಡುಗಿ' ಎಂದು ಶಪಿಸುತ್ತಾ ನಿಂತಿದ್ದನು.

ರೈಲು ಬಂದಿತು. ಇಬ್ಬರೂ ಬಂಡಿಯನ್ನು ಏರಿದರು. 'ದಡಕ್ಕನೆ–ಘಡಕ್ಕನೆ' ಎಂದು ನಾಗವೇಣಿಯು ಎದೆಬಡಿತವನ್ನು ಅನುಕರಿಸುತ್ತ ಬಂಡಿಯೂ ಸರಿಯಿತು. ಬಂಡಿ ಕುಂಬಳೆ ಮಂಗಲ್ಪಾಡಿಗಳನ್ನು ದಾಟಿ ಮಂಜೇಶ್ವರಕ್ಕೆ ಬಂದಿತು. ತಾವು ಏರಿದ ರೈಲು ನಿಲ್ದಾಣ, ಬಂಡಿ ಹೊರಡುವಲ್ಲಾಯಿತು. ಥಟಕ್ಕನೆ ನಾಗವೇಣಿಯು ಕದ ತೆರೆದು ಕೆಳಕ್ಕೆ ಇಳಿದೇ ಬಿಟ್ಟಳು. 'ಇದು ಮಂಗಳೂರಲ್ಲ' ಎಂದು ಸೀತಾರಾಮನೆಂದನು. ಬಂಡಿ ಹೊರಟಿತು. ಎರಡು ನಿಮಿಷ ದೆವ್ವ ಬಡಿದಂತೆ ಬಂಡಿಯಿಂದಲೇ ಸೀತಾರಾಮ ನೋಡುತ್ತ ನಿಂತನು. ಬಳಿಕ ಬಂಡಿಗೆ ಆ ವೇಗ ಬರಲಿಲ್ಲವಾದುದರಿಂದ ತಾನೂ ಚಲಿಸುವ ಬಂಡಿಯ ಕದವನ್ನು ತೆರೆದು ಇಳಿದನು.

ಇಬ್ಬರೂ ತಿರುಗಿ ಪಯಣ ಹೊರಟರು. 'ನಿಮ್ಮ ಮನೆಯ ಹಾದಿ ಯಾವುದು?' ಎಂದು ಕೇಳಿದನು. ಆಕೆ ಮಾತನಾಡದೆ ಮನೆಯ ಹಾದಿ ಹಿಡಿದಳು. ಸೀತಾರಾಮ ಹಿಂಬಾಲಿಸಿದನು.

ಮಧ್ಯಾಹ್ನ ಹೊತ್ತು ನಡುನೆತ್ತಿಗೇರಿದೆ. ಪುಟ್ಟಮಣಿಯು ಜಾನಕಿಯನ್ನು ಕರೆದು 'ಅಮ್ಮ, ಅಕ್ಕನೂ ಭಾವನೂ ಬಂದರು' ಎಂಬ ಸುವಾರ್ತೆಯನ್ನು ಸಾರಿದಳು.

# ೨೦

# ಅನಿಶ್ಚಿತ ಮನಸ್ಸು

ಬೇಕಲದ ಬಂಗಲೆಯಲ್ಲಿ ಬೆಳಕು ಹರಿಯುವಾಗಲೇ ಜಗುಲಿಯನ್ನೇರಿ ಕುಳಿತ ಸೀತಾರಾಮು–ನಾಗವೇಣಿಯರನ್ನು ಬಿರಬಿರನೆ ನೋಡುತಿದ್ದ ವ್ಯಕ್ತಿಯ ಪರಿಚಯವಾಗಬೇಡವೇ? ಅವನಿಗೆ ನಾಗವೇಣಿಯನ್ನು ಕಂಡ ನೆನಪು ಮೇಲಿಂದ ಮೇಲೆ ಬರುತ್ತಿತ್ತು. ಆದರೆ 'ಈತ?..ಅವಳನ್ನೆಲ್ಲಿ ಕಂಡುದು' ಎಂದು ನಿಶ್ಚಯವಾಗುವುದಿಲ್ಲ. ಸಾಲದುದಕ್ಕೆ ಹಿಂದಿನ ರಾತ್ರಿ ಯಾವದೇ ಕಿರುಚಾಟ ಕೇಳಿದಾಗ ಅವನು ಕೋಟೆಯ ಗೋಡೆಯ ಮೇಲೆ ಕುಳಿತಿದ್ದನು. ವ್ಯಥೆಯನ್ನು ತುಂಬಿದ ಮನಸ್ಸನ್ನು ಹೊತ್ತು ಅವನು ಆಕಾಶ–ಕಡಲುಗಳನ್ನು ಕಾಣುತ್ತಿದ್ದನು. ಹೆಣ್ಣು ದನಿಯೊಂದು ಕೂಗಿದುದು; ಬಳಿಕ ಆ ಉಸಿರು ನಿಂತುದು, ಅವನಿಗೆ ಕೇಳಿಸಿತ್ತು. ಇವೆಲ್ಲ ತನ್ನ ಮನಸ್ಸಿನ ಕಲ್ಪನೆಯೊ ಎಂದು ತಿಳಿದನು.

ಒಲು ರಾತ್ರಿ ಸರಿದ ಮೇಲೆ ಅವನು ಜಗುಲಿಯ ಮೇಲೆ ಬಂದು ಹೊರಳಾಡುತಿದ್ದನು. ನಿದ್ದೆ ಬರಲೊಲ್ಲದು. ಬೆಳಕು ಹರಿದಾಗಲೂ ಅವನ ಯೋಚನೆ ತಗ್ಗಲಿಲ್ಲ. ಮನಸ್ಸು ಸ್ಥಿಮಿತಗೊಳ್ಳಲಿಲ್ಲ. ಎದುರಿಗೆ ಹೋದ ಈ ಎರಡು ವ್ಯಕ್ತಿಗಳನ್ನು ಕಂಡು 'ಇವರದೇ ಕೂಗಾಟವೇ?' ಎನಿಸಿತು. ನಾಗವೇಣಿಯು ಸೀತಾರಾಮುನನ್ನು ಹಿಂಬಾಲಿಸಿ ಕಾಲೆಳೆದುಕೊಂಡು ಹೋಗುತಿದ್ದುದು, ಸೀತಾರಾಮುನು ಅಂಜುತ್ತ ಅವನನ್ನು ಕಂಡುದು–ಇನ್ನಷ್ಟು ಮನಸ್ಸಿನ ಭ್ರಮೆಯನ್ನು ಹೆಚ್ಚಿಸಿ ಇವರಾರು? ದಾಂಪತ್ಯದೊಳಗಿನವರೇ, ಹೊರಗಿನವರೇ? ನಿನ್ನೆಯ ಕೂಗು ಇವಳದೇ? ಹಾಗಿದ್ದರೆ ಅವನ ಹಿಂದೆ ಸರಿಯುತ್ತಾಳೇಕೆ? ಹೆಣ್ಣು ಗಂಡುಗಳ ಕೂಟ, ಗೆಳೆತನಗಳೆಲ್ಲ ತೀರಗರ್ಭದಲ್ಲಿ ದುಃಖದ ರೌರವಗಳೇನು? ಹೊರಗೆ ಮಾತ್ರ ಸುಖದ ಸೋಗೇ? ಅಥವಾ ಅದು ಸಹ ಪ್ರೇಕ್ಷಕನ ಕಲ್ಪನೆಯೇ? ಇಂಥ ವಿಚಿತ್ರ ಸಂಶಯ ಭ್ರಮೆಗಳ ರಾಜ್ಯ ಚಂದ್ರಯ್ಯನಿಗೆ ಒಪ್ಪದೆ ಇನ್ನಾರಿಗೆ ಒಪ್ಪೀತು.

ಅವನು ಬೆಳ್ಳಕ್ಕನನ್ನು ಕಂಡು ಮನೆಗೆ ಬಂದವನು ಎರಡು ದಿವಸಗಳತನಕ ಹೊರಬೀಳಲಿಲ್ಲ. ತನ್ನ ಭಗ್ನ ಪ್ರಣಯದ ತೀರ್ಮಾನವನ್ನು ಎಂದು ಮಾಡಲಿ! ಅದನ್ನು ಮಾಡದೆ ಬೆಳ್ಳಕ್ಕನಿಗೆ ಹೇಗೆ ಸಂಧಿಯಾಗಲಿ? ಅವಳನ್ನು ತಾನು ಭೇಟಿಯಾಗದೆ ಹೋದರೇನು? ಅದೂ ಸರಿಯಲ್ಲ. ಕಾರಣ, ಬೆಳ್ಳಕ್ಕ ಪ್ರಾಮಾಣಿಕಳಾಗಿ ಇವನನ್ನು ಯಾಚಿಸಿದ್ದಾಳೆ. ತಾನು ಭಾಗೀರಥಿಯನ್ನು ಯಾಚಿಸಿದೆ, ಅವಳು ದೊರೆಯಲಿಲ್ಲ. ತನ್ನನ್ನು ಬೇರೆಯವರು ಯಾಚಿಸಿದರೆ, ತಾನು ದೊರೆಯದಿದ್ದರೆ.. ಎಲ್ಲರ ದುಃಖವು ಒಂದೇ ಬಗೆಯವಲ್ಲವೇ?

ಅವನು ಭಾಗೀರಥಿಯಿಂದ ಮರಳಿದ ಮಾರನೆಯ ದಿನವೇ ಊರಲ್ಲಿ 'ಹಿರಣ್ಯಾ ಗೋಪಾಲಯ್ಯನ ಮನೆಯ ಅಳಿಯನಾದ'ನೆಂದು ಸುದ್ದಿ ಹರಡಿತು. ಅದು ಭಾಗೀರಥಿಯನ್ನು ಕುರಿತಾದ ನಿರಾಶೆಗೆ ಸಹಾಯವಾಯಿತು. ಇನ್ನು ತಾನು ಅವರ ನಡುವೆ ಹಾಯಬಾರದು ಎಂದು ನಿಶ್ಚಯವಾಯಿತು. ಆದರೆ ಅವನ ಮನಸ್ಸು ಭಾಗೀರಥಿಯನ್ನು ಮರೆಯುವುದು ಸುಲಭ ಸಾಧ್ಯವೇ? ಈಗೀಗ ಆ ಮನಸ್ಸಿನಲ್ಲಿ ಜಲಜಾಕ್ಷಿಯು ಸ್ಥಾನಶೂನ್ಯಳು. ಪ್ರೇಮಕ್ಕೆ ತಕ್ಕ ನೆಲೆಗಟ್ಟು ಉಭಯತರಲ್ಲಿ ಬೆಳೆದಿರಲಿಲ್ಲ; ಬೆಳೆಯುವಂತಿಲ್ಲ. ಆ ಒಂದು ವಿಚಾರ ನಿಶ್ಚಯವಾಯಿತು. ಆದರೆ ಭಾಗೀರಥಿಯನ್ನು ಮರೆಯಲಾರನು! ಅವಳು ಸಿಗಲಾರಳು. ಹಾಗಿದ್ದರೆ ಬೆಳ್ಳಕ್ಕನನ್ನು ನಿರಾಕರಿಸುವ ಕಾರಣವೇನು. ಅದಕ್ಕೆ ಹಿಂದಿನ ಅನುಭವವು ತಡೆಯಾಗುತ್ತದೆ. ಬೆಳ್ಳಕ್ಕನು ತನ್ನ ಪಾಲಿಗೆ ಸ್ಪರ್ಶಜೀವಿಯಲ್ಲ. ಇವನಿಂದ ಅವಳಿಗೆ ಸುಖ ದೊರೆಯಬಹುದು. ಆದರೆ, ಬೆಳ್ಳಕ್ಕ ನೋಟದ ಗೊಂಬೆ. ಸಿನೇಮಾ ಚಿತ್ರನಟಿ! ಪ್ರತ್ಯಕ್ಷ ಗ್ರಾಹ್ಯಳಾಗುವುದಿದೆಯೇ? ಅಂಥ ಒಂದು ವಸ್ತುವಿನಿಂದ ಮನಸ್ಸು ವಿಶೇಷವಾದ ಕೊರತೆಯೊಂದನ್ನು ಉಂಟು ಮಾಡಿಕೊಂಡು ಸರಳತೊಡಗಿದರೆ ಮುಂದೇನು? ಬೆಳ್ಳಕ್ಕನ ಛಾಯಾ ಶರೀರವನ್ನೇ ಅನವರತ ಕಂಡು ಸುಖಪಡಲು ಬಂದೀತೆಂದು ಅವನು ಎಣಿಸುವುದಿಲ್ಲ.

ತನ್ನ ನಿರ್ಧಾರವಾಗುವತನಕ ಅವನು ಯಾರೊಡನೆಯೂ ಸೇರಲಾರನು. ಅವನ ಮನಸ್ಸು ಇವರ ಮಾತುಗಳಿಂದ ತೃಪ್ತಿಪಡೆಯದು. ತನ್ನ ಅಂತರಂಗವನ್ನು ಗೆಳೆಯರ ಮುಂದಾಗಲಿ, ಚಾಡಿ ಚಾಕರ ಮುಂದಾಗಲಿ ಇರಿಸಿ ಉಪಯೋಗವೂ ಇಲ್ಲ. ಈ ಯತ್ನದಲ್ಲಿ ಯಾವ ಗೆಳೆಯರ ಯೋಚನೆಯೂ ನೆರವಾಗದು. ಅವರಂತೆ, ಅಂಥದೇ ಪ್ರಸಂಗಗಳಿಗೆ ಗುರಿಯಾದವರಿದ್ದರೆ, ಆಗ ಅವರ ಅನುಭವ ಉಪಯೋಗವಾದೀತು. ಇಲ್ಲವಾದರೆ ಅವು ಶಾಂತಿಯನ್ನು ಕೊಡಲಾರದ ಉಪದೇಶಗಳಾದಾವು. ಅವನಿಗೆ ಈಗ ಮೂಡಂಬೈಲಿನಲ್ಲಿರಲು ಅಂಜಿಕೆಯಾಗಿದೆ. ಬೆಳ್ಯಕ್ಕನು ಬಂದು ಮನೆ ಬಾಗಿಲನ್ನು ತಟ್ಟಿಯಾಳೇ ಎಂಬ ಭೀತಿ.

ಹಾಗಿರಲು ಮಂಗಳೂರಿಗೆ ಹೋಗುವೆನೆಂದು ಮಂಜೇಶ್ವರಕ್ಕೆ ಬಂದನು. ರೇಲ್ವೆ ನಿಲ್ದಾಣದಲ್ಲಿ ಕೆಲವು ಗೆಳೆಯರು ಭೇಟಿಯಾದರು. 'ಹೀಗೇನು ಇದ್ದಿ, ಚಂದ್ರಯ್ಯ? ಆರೋಗ್ಯವಿಲ್ಲವೇ?.... ಏನು ಯೋಚನೆ' ಎಂದು ಕೇಳಿದರು. ಚಂದ್ರಯ್ಯನ ಸ್ವಭಾವ, ಶೀಲ, ಲಘುತೆ, ನಗುಗಳು ಅವನಲ್ಲಿ ಉಳಿದಿರಲಿಲ್ಲ.. ಅವರ ಪ್ರಶ್ನೆಗಳನ್ನು ಕೇಳಿ ತಾನು ಗೆಳೆಯರಿಲ್ಲದಲ್ಲಿ ಸಮಯ ಕಳೆಯಬೇಕೆಂದು ರೈಲು ಬಂಡಿಯನ್ನು ಹತ್ತಿ ಪಳ್ಳಿಕೆರೆಗೆ ಬಂದು ಇಳಿದನು.

ಸೀತಾರಾಮ ನಾಗವೇಣಿಯರು ಏರಿ ಇಳಿದ ಬಂಡಿಯಲ್ಲೇ ಅವನೂ ಬಂದಿದ್ದನು. ಬಂದವನು ನೇರಾಗಿ ಕಡಲು ದಂಡೆಗೆ ಹೋಗಿ ಕುಳಿತು ಧ್ಯಾನ ಮಾಡತೊಡಗಿದನು. ತಿಂಗಳು ಕಂತುವ ತುಸು ಮೊದಲು ಕೋಟೆಗೆ ಹೋದನು. ಗೋಡೆಯ ಮೇಲೆ ದೆವ್ವನಂತೆ ಪಹರೆ ಮಾಡುತ್ತ ಅಲೆದನು. ಆಯಾಸಗೊಂಡು ಕುಳಿತನು. ಆಗಲೇ ನಾಗವೇಣಿಯ ಚೀತ್ಕಾರ ಕೇಳಿಸಿದುದು.

ಬೆಳಿಗ್ಗೆ ಅವಳನ್ನು ಕಂಡು—'ಎಲ್ಲಿಯೋ ನೋಡಿದ್ದೇನೆ' ಎಂದು ತರ್ಕಿಸಿದನು. ಬಲು ಹೊತ್ತಿನನಂತರ 'ಈ ಹುಡುಗಿ ನಮ್ಮ ಊರಿನವಳಲ್ಲವೇ? ಎಲ್ಲಿ ಏನು' ಮುಖ ತಿಮ್ಮಪ್ಪಯ್ಯನ ಛಾಯೆ..ಹೋ ಅವರ ಮಗಳು. ಲಗ್ನವಾಗುತ್ತದೆ ಎಂದಿತ್ತು, ಆಗಿರಬೇಕು. ಇವನೇನು

ಗಂಡ ? ಆದರೆ ಯಾರವನು ? ನನ್ನನ್ನು ನೋಡಿ ಹಾಗೇಕೆ ಮಾಡಿದನು ? ಗಂಡನು ಬಳಿಯಲ್ಲಿರುವಾಗ ಹುಡುಗಿ ಹಾಗೇಕೆ ಚೀತ್ಕರಿಸಿದಳು ಎಂದು ವಿಚಾರ ಮಾಡುತ್ತ ಕುಳಿತನು.

ಹೊತ್ತು ನೆತ್ತಿಗೇರಿತು. ದನಕಾಯುವ ಹುಡುಗರು ಅವನಿದ್ದ ಕೋಟೆಯನ್ನು ಪ್ರವೇಶಿಸಿದರು. ಆದರೆ ಅವರಷ್ಟಕ್ಕೆ ಅವರು ಆಡಿ ಕಿರುಚು ತಿದ್ದರು. ಇವನಷ್ಟಕ್ಕೆ ಇವನು ಬಂಗ್ಲೆಯ ಜಗುಲಿಯ ಮೇಲೆ ಕುಳಿ ತಿದ್ದನು. ಬಂಗ್ಲೆಯ ಕಾವಲಿಗನು ಬಂದನು. 'ಯಾರು ? ಎಲ್ಲಿ ?' ಎಂದು ಕೇಳಿದನು. ಇವನು ಸುಮ್ಮನಾದನು. 'ಇಲ್ಲಿಂದ ಹೋಗಬೇಕು.. ಈಗಿನ ಗಾಡಿಗೆ ಕಲೆಕ್ಟರ ದೊರೆಗಳು ಬರುತ್ತಾರೆ' ಎಂದು ಹೇಳಿದನು. ಅವನಾಗ 'ಹೂಂ' ಎಂದು ಎದ್ದನು. ಎದ್ದು ಹತ್ತು ಮಾರು ಬರುವುದ ರೊಳಗೆ ಬಲು ದೊಡ್ಡ ಸಂತೆಯ ಗುಲ್ಲು ಕೇಳಿಸಿತು. ಕಾಲೇಜಿನ ಹುಡು ಗರ ಗುಂಪೊಂದು ಕ್ಯಾಂಪಿಗೆ ಬಂದಿತ್ತು. ಕಡಲಿನ ಸ್ವರಕ್ಕೂ ಇವರ ಗಂಟಲಿಗೂ ಸ್ಪರ್ಧೆಯಾಗುವಲ್ಲಿ ನಾನಿದ್ದರೆ ಫಲವಿಲ್ಲ–ಎಂದು ಹೊರಟೇ ಬಿಟ್ಟನು.

ತಿರುಗಿ ಇನ್ನೆಲ್ಲಿಗೆ ಹೋಗಲಿ ಎಂದು ಅವನಿಗೆ ಸೂಚಿಸಲಿಲ್ಲ. ರೈಲ್ವೆ ನಿಲ್ದಾಣಕ್ಕೆ ಬಂದು ಕುಳಿತನು. ಮಧ್ಯಾಹ್ನದ ಗಾಡಿಯಲ್ಲಿ ಕುಳಿತು.. ಮಂಜೇಶ್ವರಕ್ಕೆ ಬಂದನು. ಮಂಜೇಶ್ವರದಿಂದ ಮೂಡಂಬೈಲಿಗೇನು ? ಅದಕ್ಕೆ ಅವನ ಮನಸ್ಸು ಒಪ್ಪಲಿಲ್ಲ. ಮಂಗಳೂರಿಗೆ ಹೋಗಬಹುದಿತ್ತಲ್ಲ. ಅದು ಶುದ್ಧ ಸಂತೆ ಹಾಗಿದ್ದರೆ..?

ತತ್ಕಾಲಕ್ಕೆ ಅಣ್ಣಪ್ಪ ಕಮ್ತಿಯರ ಅಂಗಡಿಗೆ ಹೋಗೋಣವೆಂದು ಹೊರಟನು. ಅಂಗಡಿಗೆ ಹೋಗುವಾಗ ಕಮ್ತಿಯರು ಊಟಕ್ಕೆ ಹೋಗಿ ದ್ದರು. ಇನ್ನು ಊಟಮಾಡಿ ಈಗ ಬರುತ್ತಾರೆ ಎಂದು ಕಾದು ಕುಳಿತರೆ– ಎರಡು ತಾಸಾದರೂ ಅವರು ಬರಲಿಲ್ಲ. ಅವರು ಬಂದಿದ್ದರೆ ಹಿಂದಿನ ಕಾಲದ ಅವರಿವರ ಹಿರಿಯರ ಉಭಯತೋಪಿ ಸ್ನೇಹವನ್ನು ಕುರಿತು ಮಾತನಾಡಿ ಸಮಯ ಹೋಗುತಿತ್ತು. ಅವರು ಮತ್ತೂ ಬಾರದುದನ್ನು ಕಂಡು 'ಕಮ್ತಿಯರೇನು ಇಷ್ಟು ತಡ?' ಎಂದು ಕೇಳಿದನು. ಅಂಗಡಿಯ ಪ್ರಾಕಿನ

ಗುಮಾಸ್ತರು '..ಅಹುದು ಬರಲಿಲ್ಲ.' ಎಂದರು. ಹಣಿಗೆ ಕನ್ನಡಕ ಸಿಕ್ಕಿಸಿ ಮೂಗು ಮೊನಚು ಮಾಡಿ ಮಾತನಾಡುವ ಹಳೆಯಗುಮಾಸ್ತರ ಜಾತಿ. ಯಜಮಾನರಿಲ್ಲದಾಗ ಅವರಿಗೇ ಆ ಪಟ್ಟ; ಆ ರೀತಿ ನಂಬು ಗೆಯೂ ಇರುತ್ತಿತ್ತು. ಆದರೆ ಚಂದ್ರಯ್ಯನಿಗೆ ಅಷ್ಟು ಹಿಡಿಸುವ ಮೋರೆ ಯಾಗಿರಲಿಲ್ಲ.

'ಏನು ಬರಲಿಲ್ಲ? ಮನೆಯಲ್ಲಿದ್ದಾರೆಯೇ?' ಎಂದು ಕೇಳಿದನು. 'ಇರಬಹುದೆಂ'ದು ಉತ್ತರ ಬಂದಿತು. ತನಗೆ ಕೆಲಸವಿಲ್ಲೆಂದು ಗೊತ್ತಿದ್ದರೂ ಅಣ್ಣಪ್ಪ ಕಮ್ತಿಯರನ್ನು ಹುಡುಕಿ, ಅವರ ಮನೆಗೆ ಹೋದನು.

---

## ೨೧

# ಸುನಾಲಿನಿಯ ಪ್ರಪಂಚ

ಸುನಾಲಿನಿಯು ಸರಸಮ್ಮನ ಗುಡಿಯಿಂದ ಹಿಂತಿರುಗಿ ಬಹಳ ದಿನ ಗಳಾದುವು. ಬಂದ ಒಂದೆರಡು ದಿವಸಗಳ ತನಕ ಅವಳ ಮನಸ್ಸು ಸಮಾಧಾನವಾಗಿತ್ತು. ಸರಸಿಯ ಕೃಪೆಯಿಂದ ತನ್ನ ಸಂಸಾರ ಚೆಲುವಿನ ಹಾದಿಯನ್ನು ಹಿಡಿಯಬಹುದೆಂದು ಊಹಿಸಿದ್ದಳು. ಆದರೆ ಗಂಡನ ಬುದ್ಧಿಯು ನಾಲ್ಕೆಂಟು ದಿವಸವಾದರೂ ಒಂದೇ ತೆರನಾಗಿದೆ. ಅವನು ಬಂದು ಹೋಗುವುದರಲ್ಲಿ, ಮಾತುಕಥೆಗಳಲ್ಲಿ ಅವಳ ಕಡೆಗೆ ಉದಾಸೀನ ನಾಗಿಯೇ ಇದ್ದನು. ಮನೆಯ ಕೆಲಸದವಳು....'ಇಲ್ಲಮ್ಮ, ಎಂಟು ಹತ್ತು ದಿವಸದೊಳಗೆ ಎಲ್ಲಾ ಸರಿಯಾಗಬೇಕು—ಎಂದರೆ ಮನುಷ್ಯ ರಲ್ಲವೇ. ದೇವರಾದರೂ ಮನುಷ್ಯರನ್ನು ಒಂದೇ ಸಾರಿ ತಿರುಗಿಸಲಿಕ್ಕೆ ಬರುತ್ತದೆಯೇ' ಎಂದು ಸಮಾಧಾನ ಹೇಳಿದಳು.

'ನಿನಗೆ ತಿಳಿಯದು—ಬೆಳೆದವರ ಬುದ್ಧಿ ತಿರುಗುವುದು; ಹಾದಿಗೆ ಬರುವುದು ಒಂದೇ ದಿವಸ'

'ಶುಕ್ರವಾರ ಆ ಮೇಲೆ ಗುಡಿಗೆ ಹೋಗಲಿಲ್ಲ. ಕಾಯಿ ಅಲ್ಲಿತ್ತೆ, ಇರಲಿಲ್ಲವೆ ಎಂದು ಕಾಣಲಿಲ್ಲ. ನೀವು ಮನೆಗೆ ಹೋಗುವಾ ಎಂದು ಹಟ ಮಾಡಿದಿರಿ'

'ಅಂದರೆ—ನಾನೊಬ್ಬಳೇ ಹೋಗಿ ಅದನ್ನು ಅಲ್ಲಿ ಬಿಟ್ಟಮೇಲೆ ಅದು ಮುಳುಗಲೇಬೇಕಲ್ಲ....'

'ಸರಿಯೇ, ಯಾರಾದರೂ ದರಿದ್ರ ಕಣ್ಣಿನವರು ಕಂಡಿದ್ದರೆ..ಆ ಅವನೊಬ್ಬನು ಮುಖಕ್ಕೇ ಬರುವಾಗ ಬೆಳಕು ಹಿಡಿಯಲಿಲ್ಲವೇ?'

'ಯಾಕೆ ಸುಮ್ಮನೆ ಯಾರಾರನ್ನು ಬಯ್ಯುತ್ತಿ..ಅವನು ಆ ದಿನ ನಮ್ಮನ್ನು ಕಂಡು ಹೆದರಲಿಲ್ಲವೆ? ಆ ಮೇಲೆ ಅವನು ಮಾತನಾಡಿದ್ದು ನೋಡು..'

ಇವರ ಸಂಭಾಷಣೆ ನಡೆಯುವಾಗ ಅತ್ತೆಯು ಆ ಕಡೆಯಿಂದ ಹಾದಳು. ಕೆಲಸದವಳು ಅಲ್ಲಿಂದ ಹೊರಟು ತನ್ನ ಕೆಲಸಕ್ಕೆ ಹೋದಳು. ಅತ್ತೆಯು ಸೊಸೆಯ ಬಳಿಗೆ ಬಂದು 'ಸ್ವಲ್ಪ ಒಲೆಯನ್ನು ನೋಡಿಕೋ, ನಾನು ಮಾಳಪ್ಪ ಮನೆಗೆ ಹೋಗಿಬರುತ್ತೇನೆ.' ಎಂದಳು. ಪ್ರತ್ಯುತ್ತರ ನಿರೀಕ್ಷಣೆ ಎಂಬುದಿಲ್ಲ. ಹಾಗೆಯೇ ಎದ್ದು ಹೊರಟುಹೋದಳು.

ಸುನಾಲಿನಿಯು ಒಂಟಿಯಾದಳು. ಅವಳ ದುಃಖವನ್ನು ಕೆಲಸದವಳೊಡನೆ ಹೇಳಿಕೊಳ್ಳುವೆನೆಂದರೂ ಅನಿಷ್ಟದ ಅತ್ತೆ ಬಿಡಲಾರಳು. ಸುನಾಲಿನಿಯ ಪ್ರತಿಯೊಂದು ರೀತಿ ನಡೆಗಳೂ ಅವಳ ಮನಸ್ಸಿಗೆ ಆಗದುವು. ಅದಂತೂ ಮೊನ್ನೆಯ ಗದ್ದಲ. ಗೋಪಿಗೂ ತಿನ್ನಲಿಕ್ಕೆ ಉಂಟು ಎಂದುದು—ಆ ಬಳಿಕ ಹೇಳಲಾರದ ಕೋಪ ಅತ್ತೆಗೆ. ಅಣ್ಣಪ್ಪಯ್ಯನಿಗೆ ಹೆಂಡತಿ ಎಂದರೆ ಹೆದರಿಕೆ. ಹುಡುಗಿ ಸ್ಫುರದ್ರೂಪಿಯೆಂದು ಅವನು ಲಗ್ನವಾದನು. ಆದರೆ ಇಂಗ್ಲಿಸ್ ಕಲಿತವಳು—ತಾನು ಕಲಿಯದ ಗೊಡ್ಡ ಎಂದೆನಿಸಲಿಲ್ಲ. ತಾನು ಸಾವಿರಾರು ರೂಪಾಯಿಯ ಧನಿಕ ಎಂಬುದೊಂದೇ ಮನಸ್ಸಿಗೆ ಹೋಯಿತು. ಸುನಾಲಿನಿಗೆ ಸಿಕ್ಕಿದುದನ್ನು ಓದುವ

ಸಿಕ್ಕಿದುದನ್ನು ತಿಳಿಯುವ ಆತುರ. ಅವಳು ಏನೇನನ್ನು ಕೇಳುವಳು ಅದೆಲ್ಲ ಗಂಡನಿಗೆ ತಿಳಿದಿರಬೇಕೇ? ತನಗೆ ತಿಳಿದಿಲ್ಲ—ಎನ್ನಲು ನಾಚಿಕೆ. ಇತ್ತ ಅವರ ಪೇಟೆಯ ಧಾರಣೆ, ಸಾಬರ್ಮತಿ ಆಗಬೋಟುಗಳ ವಿಚಾರ ಇವಳಿಗೆ ಬೇಡ—ಇವಳು ಕೇಳುವ ಯಾವ ಸಂಗತಿಯೂ ಅವರಿಗೆ ಬೇಡ. ಹೀಗೆ ಅವರ ಸಂಸಾರ ತೀರ ಸಮೀಪದ ಸಮಾನಾಂತರ ರೇಖೆಗಳಂತೆ ಸಾಗುತ್ತಿತ್ತು. ಅಷ್ಟೊಂದು ದಿನ ಅವರು ಸಾಗಿದುದೇ ಸ್ವಾರಸ್ಯ. ಈಗೀಗ ಅವಳ ವ್ಯಾಘ್ರಸೌಂದರ್ಯವೊಂದೇ ಕಾಣಿಸುತ್ತದೆ.

ಮೊನ್ನೆಯ ದಿವಸ ತನ್ನ ತಂದೆಯ ವಿಷಯದ ಟೀಕೆ ಬಂದಿತು. ಇಷ್ಟೆಲ್ಲಾ ಮಾತನಾಡಿದವರು 'ದೇವೇಂದ್ರ ಶೇಣ್ಯೆ'ಗಳ ಮುಂದೆ ಹೀಗೆ ನುಡಿಯುತ್ತಿದ್ದರೇ. ಅವರು ದಿವಾಳಿಯಾದ ಮೇಲೆಯೂ ಅವರೊಡನೆ ಹುಡುಗಿ ಬೇಡಲು ಯಾಕೆ ಹೋದುದು? ಪ್ರಾಯಶಃ ಅವರ ದಿವಾಳಿ ಯೆಂದರೆ ಆಸ್ತಿಯನ್ನೂ ಹಣವನ್ನೂ ಹಂಡತಿ ಮಕ್ಕಳ ಹೆಸರಿಗೆ ಮಾಡಿ ರಿ:, ಸಾಲಗಾರರಿಗೆ ನಾಮ ತೋರಿಸಲಿಕ್ಕೆ ಎಂದು ತಿಳಿಪರೇನು..?'

ಆಕೆಯ ಯೋಚನೆ ತನ್ನ ಕಡೆಗೆ ಮಾತ್ರವಲ್ಲ—ತನ್ನಂತಿರುವ ಉಳಿದ ಹೆಂಗಸರು ಸುಖಿಯಾಗಿದ್ದಾರೆಯೋ—ಎಂಬ ಕಡೆಗೂ ಹರಿ ಯಿತು. ಎಷ್ಟೋ ಮನೆಯಲ್ಲಿ ಸುಖಿಗಳೆಂಬಂತೆ—ಚಿನ್ನ ಸೀರೆ ತೊಟ್ಟು ತಿರುಗುತ್ತಾರೆ. ಗಂಡಂದಿರು ಮನೆಯ ಹೊರಗೇನೇ ಇರುತ್ತಾರೆ. ಅವರ 'ಸಾಹುಕಾರ ಕುಲದಲ್ಲಿ ಅದಕ್ಕೆ ಆಕ್ಷೇಪವಿಲ್ಲವೆಂಬುದು ನಿಜ. ಅವಳ ತಂದೆಯ ಊರಿನಲ್ಲಿ ಎಷ್ಟು ಗೆಳೆಯರ ಮನೆಯನ್ನು ಅವಳು ನೋಡಿಲ್ಲ! ಗಂಡಸರ ಜಾತಿ ಸಂಜೆ ಹತ್ತು ಘಂಟೆಗೇನೇ ಬರುವುದು. ಮಧ್ಯಾಹ್ನ ಅಣ್ಣಪ್ಪಯ್ಯನಂತೆ ಗಂಡಹೆಂಡಿರಿಗೆ 'ತಂತಿ ಮುಲಾಖತ್'. ಅದು ಊಟಕ್ಕೆ ಮಾತ್ರ. ಹೆಂಗಸರ ಕೆಲಸ 'ಅಡುಗೆ-ಗಿಡುಗೆಯಾಯಿತೆಂದರೆ ನೆರೆಮನೆಗೆ ತಾವು ಹೋಗುವುದು, ಇಲ್ಲವಾದರೆ ತಮ್ಮ ಮನೆಗೆ ನೆರೆ ಮನೆಯವರನ್ನು ಆಮಂತ್ರಿಸುವುದು. ಅಲ್ಲಿಂದ ಜನಾರ್ಧನ ಕಛೇರಿಗೆ ಶುರು. 'ಅವರ ಮನೆಯಲ್ಲಿ ಹೀಗೆ, ಇವರ ಮನೆಯಲ್ಲಿ ಹೀಗೆ. ಅವಳನ್ನು ಗಂಡ ಬಿಟ್ಟನಂತೆ, ಇವಳು ಗಂಡನನ್ನು ಬಿಟ್ಟಳಂತೆ..' ಕಿವಿಗೆ ಜಿಗುಪ್ಸೆ

ಬರುವಷ್ಟು ಇದೇ ಸುದ್ದಿ. ಆದರೂ ಯಾರೂ ಅತೃಪ್ತರಂತೆ ಕಾಣುವ ದಿಲ್ಲ. ತಮ್ಮ ವಿಷಯದಲ್ಲಿ ಸುಖವನ್ನು ಅನುಭವಿಸುತ್ತಾರೇನು? ಇವರೊಡನೆ ತನ್ನನ್ನು ಹೋಲಿಸಿದರೆ ತಾನೊಬ್ಬಳೇ ದುಡುಕಿಯೆನಿಸುತ್ತೇನಲ್ಲ.

ಇಲ್ಲವೆ ನೂರಾರು ಸ್ತ್ರೀಯರಂತೆ ತಾನು ಸಹ—'ಇದು ವಿಧಿ ಎಂದುಕೊಳ್ಳಲೇ? ಗಂಡಹೆಂಡಿರಿಬ್ಬರೂ ಬಾಯ್ತೆರೆದರೆ ಜಗಳ; ಇಲ್ಲವಾದರೆ 'ಥೂ ಕತ್ತೆ....ಥೂ ಹೇಸಿ'ಯೆಂದರೂ ಮೌನದಿಂದ ಕೇಳುವವರಿದ್ದಾರೆ. ಪಾತಿವ್ರತ್ಯ ಹಾಗಿರುವುದೋ ಏನೋ. ಪ್ರಾಯಶಃ ಹೆಂಗುಸಿಗೆ ಅಭಿಮಾನವೆಂಬುದಿರಬಾರದು. ಅವಳು ತಾನೆಂಬುದನ್ನು ಅಳಿಸಿರಬೇಕು. ಮದುವೆಯಾದ ಬಳಿಕ ತಾನು, ತನ್ನ ಮನುಷ್ಯತ್ವ ಇವೆಲ್ಲವನ್ನೂ ಗಂಡನ ಕಾಲುತುಳಿತಕ್ಕೆ ಬಲಿಕೊಡಬೇಕು. ಹಾಗೆ ಮಾಡಿದರೆ ಕತ್ತೆ, ನಾಯಿ, ಕೋತಿಯೆಂದು ಯಾವ ಬೈಗಳನ್ನೂ ಸಹಿಸಬಹುದು, ಒದೆಯನ್ನು ತಾಳಬಹುದು. ಅಷ್ಟು ನಿಂದೆಯಿಂದ ಕಂಡ ಸ್ತ್ರೀ ಜಂತು ಉಚ್ಚ ಪೀಠದಮೇಲೆ ಕುಳಿತ ಪುರುಷದೇವನಿಗೆ ರಾತ್ರಿ ಕಾಲಕ್ಕೆ ಅನಿವಾರ್ಯ. ಭೂತಕ್ಕೆ ಸುಳಿದೆಸೆಯುವ ಕೋಳಿಯಂತೆ, ಕಾಮಕ್ಕೆ ಸುಳಿದೆಸೆಯುವ ಕೋಳಿ ಹೆಣ್ಣಲ್ಲವೇ?

ತಾನು ಇಂಗ್ಲಿಷು ಕಲಿತವಳೆಂದು ಗಂಡನಿಗೆ ತನ್ನಲ್ಲಿ ಇಷ್ಟು ಸಿಟ್ಟೆ? ಕಲಿತರೇನು? ಬೇರೆಯವರು ಕಲಿತಿಲ್ಲವೇ? ಕಲಿತು ಇದಕ್ಕೂ ಚೆನ್ನಾಗಿ ತಮ್ಮನ್ನು ಮರೆತು ದಾಂಪತ್ಯ ನಡೆಯಿಸುತ್ತಲಿಲ್ಲವೆ? ಮದುವೆಯಾದ ಮೇಲೆ ತಮಗೆ ಬಾಯಿಯಿಲ್ಲ, ಅಧಿಕಾರವಿಲ್ಲ. ಬೇರೆ ಮದುವೆಯಾಗುವಂತಿಲ್ಲ. ಆದುದರಿಂದ ಈ ಮರಣಾಂತದ ಟಾಪವನ್ನು ಸ್ವೀಕರಿಸಬೇಕು. .. ನಿಜ .. ದಾಂಪತ್ಯವೆಂದರೆ ಎರಡು ಜೀವಿಗಳ ಸಾರಸ್ಯದ ಮಿಲನ. ಅವು ತಿಕ್ಕಾಡಬಾರದು. ಅವು ಹೊಂದಿಕೊಳ್ಳಬೇಕಾದರೆ ಮನಸ್ಸು ಹೊಂದಿಕೊಳ್ಳಬೇಕು. ಅದಕ್ಕೆ ಮನಸ್ಸು ಬೆಳೆಯಬೇಕು. ಒಬ್ಬರು ಇನ್ನೊಬ್ಬರ ಮನಸ್ಸು ಏನೆಂದು ತಿಳಿಯಬೇಕು. ಆದರೆ ಮನಸ್ಸಿಗಿಂತ ಮಾಂಸಕ್ಕೆ ಬೆಲೆ ಕೊಡುವ ಮನುಷ್ಯನು ಕಸಾಯಿ ಖಾನೆಯಲ್ಲಿ. ಆಗ—ಯಾರಾದರೂ ಒಬ್ಬರು ವಿಧೇಯರಾಗಬೇಕು. ಎಂದರೆ—

ಪಾತಿವ್ರತ್ಯದ ಹೆಸರಿನಲ್ಲಿ ಪರಂಪರೆ, ಅಂಧಶ್ರದ್ಧೆ, ಪಾತಿವ್ರತ್ಯಗಳ ಅಫೀಮನ್ನು ಮೆದ್ದು–ತಾವು ಜೀವನ್ಮೃತರಾಗಬೇಕು. ಅದೇ ಅಲ್ಲವೇ ವಿಧೇಯತೆ. ಗಂಡನ ಪ್ರತಿಯೊಂದು ಅನ್ಯಾಯವನ್ನು ಸಹಿಸಿ ಬಾಳ್ವೆ ಮಾಡುವುದೆಂದರೆ.. ನಿಜ, ದಾಂಪತ್ಯದ ಒಂದು ಭಾಗ ಅಭಿಮಾನಶೂನ್ಯ ಹೆಣವಾದರೆ ಆಗ ದಾಂಪತ್ಯ ಸುಖವಾಗಿ ಸಾಗುತ್ತದೆ. ಪತಿಗೇನು ಬೇಕು? ಪತ್ನಿಯ ಮನಸ್ಸು ಬೇಡ; ತನ್ನ ಕಾಮುಕ್ಕೆ ಬಲಿಕೊಡಲು ಮಾಂಸ ಬೇಕು– ಅದನ್ನಷ್ಟು ಒಪ್ಪಿಸಿದರಾಯಿತು.. ಹೀಗೆಂದು ನಕ್ಕಳು.

ಕಳೆದ ವಾರದ ಕೋಲಾಹಲ ನಡೆಯುವ ತನಕ ಅವಳು ಗಂಡನಿಗೆ ತುಸು ಮಾನವನ್ನು ಕೊಡುತ್ತ ಬಂದಿದ್ದಳು. ತನ್ನವರ ಮಾನವನ್ನು ಕಳೆದುದನ್ನು ಕಂಡು ಅವರ ಮಾನದ ಪರಿವೆಯೇ ಅವಳಿಗೆ ಹೋಯಿತು. ಅಲ್ಲಿಯ ತನಕ ಅವಳು ಗಂಡನ ಬಯಕೆಗೆ ಶರೀರವನ್ನಾದರೂ ಒಪ್ಪಿಸುತ್ತಿದ್ದಳು. ಆ ಬಳಿಕ ಸ್ಪಷ್ಟವಾಗಿ ಅಂದಳು 'ನಾನು ಬೇಕೆಂದಿದ್ದರೆ ಮಾತ್ರ....ಬರಿಯ ಭೋಗಕ್ಕಲ್ಲ' ಎಂದಳು.

ಮರುದಿವಸ ಅಣ್ಣಪ್ಪ ಕಪ್ಪುತ್ತಿಯು ಕೋಪದಲ್ಲಿ ಕುದಿಯುತ್ತಿದ್ದರು. 'ದಿನದಿನಕ್ಕೆ ಒಂದೊಂದು ಮೆಟ್ಟಿಲು ಏರುತ್ತದೆ ಇವಳ ಅಹಂಕಾರ. ಈಗ ಇಲ್ಲಿಗೂ ಬಂದಿತೇ? ಕೋರ್ಟಿನಲ್ಲಿ ಹಕ್ಕಿನಿಂದ ಭೋಗದ ಅಧಿಕಾರವನ್ನು ಕೇಳಲು ಬಂದೀತೆಂದು ಇವಳಿಗೇನು ಗೊತ್ತು.' ಎಂದು ಕಾನೂನು ಪೈಂಟನ್ನು ಯೋಚಿಸಿದನು. ಆದರೆ ಅದಕ್ಕಾಗಿ ಕೋರ್ಟಿಗೇರುವುದು ಛಲವೇ, ಮಾನಗೇಡಿತನವೇ–ಎಂಬುದು ಮಾತ್ರ ಹೊಳೆಯಲಿಲ್ಲ.

ಮರುದಿವಸ ಅಣ್ಣಪ್ಪಯ್ಯರು ಅಂಗಡಿಯ ವ್ಯಾಪಾರವನ್ನು ಮಾಡುವುದಕ್ಕೆ ಮನಸ್ಸು ಇಲ್ಲದವರಾದರು. ತಾಯಿಯೊಡನೆ ದೂರು ಕೊಟ್ಟರು. ತನ್ನ ಬಾಯಿಗಿಂತ ರಾಜೀವಿಯ ಬಾಯಿ ಬಲವೆಂದು ತಿಳಿದಿತ್ತು. ರಾಜೀವಿಯು 'ನಿನಗೆ ಮಾನವಿಲ್ಲ, ಮರ್ಯಾದೆಯಿಲ್ಲ. ಮೀಸೆಬಂದ ಗಂಡಸಿಗೀತ ಪೌರುಷ ಮಾತನಾಡುತ್ತಿ.. ನಿನ್ನನ್ನು ತವರುಮನೆಗೆ ಕಳುಹಿಸುತ್ತೇವೆ' ಎಂದಳು.

'ಯಾರು?'

'ನಾನೂ ನಿನ್ನ ಗಂಡನೂ'

ಆಗ ಅಣ್ಣಪ್ಪಯ್ಯನು 'ಅಹುದು—ನಿನ್ನನ್ನು ಸಾಕಲು ನಮಗೆ ಬರುವುದಿಲ್ಲ. ಅಂಗಡಿ ವ್ಯಾಪಾರ ಇಲ್ಲವಾಗಿದ್ದರೆ ಇಡೀ ದಿವಸ ಇಲ್ಲಿ ಕುಳಿತು ನಿನ್ನನ್ನು ಹದ ಮಾಡುತ್ತಿದ್ದೆ..ಆದರೆ ಈಗ ಹಾಗಲ್ಲ..ಅಂಗಡಿ ಇದೆ..ನಿನ್ನೊಬ್ಬಳನ್ನು ಬಿಟ್ಟರೆ ನೀನು ಅಮ್ಮನನ್ನು ನುಂಗುತ್ತಿ.... ನನಗೇ ಹಾಗೆಂದವಳು....'

ತಾಯಿಯಾಗ 'ನೀನು ಹಾಗೆಲ್ಲಾ ಬಳಸಿ ಮಾತನಾಡುವುದು ವುದು ಬೇಡ. ಸ್ಪಷ್ಟ ಹೇಳು..ನಿನ್ನನ್ನು ಬೇರೆ ಕಳುಹಿಸಿ, ನಾನು ಬೇರೆ ಮದುವೆಯಾಗುತ್ತೇನೆ—ಅನ್ನು'

'ಹೌದು, ನೀನು ಹೇಳಿದ ಮಾತು ಕೇಳದಿದ್ದರೆ ನಿನ್ನನ್ನು ಬಿಟ್ಟು'

'ಇಷ್ಟರ ತನಕ ನನ್ನನ್ನು ಹಿಡಿದಿದ್ದೀರಾ....'

'ಮಾತಿಗೆ ಮಾತು ಪ್ರಯೋಜನವಿಲ್ಲ....ನಾನು ಹೇಳುವುದು ಖಂಡಿತ. ಇವತ್ತು ನನಗೆ ಪುರುಸೊತ್ತಿಲ್ಲ..ನಾಳೆಗೆ ನಿನ್ನನ್ನು ಮಂಗಳೂರಿಗೆ ರವಾನೆ ಹಾಕುತ್ತೇನೆ. ನಿಮ್ಮಪ್ಪನ ಹತ್ತಿರ ಹೋಗಿ 'ಇದು ನಮ್ಮಿಂದ ಬಾಳಿಸಲು ಬಾರದ ಮಾಲು' ಎಂದು ಬರುತ್ತೇನೆ.

'ಅಷ್ಟೆಯೇ, ಈ ಮನೆ ನಿಮ್ಮದಾದಷ್ಟೇ ನನ್ನದು ಸರಿ, ತಿಳಿಯಿತೇ. ಇಲ್ಲಿಂದ ಕಾಲು ಹೊರಗೆ ತೆಗೆಯುವುದಿಲ್ಲ. ಅಪ್ಪನ ಮನೆಗೆ ತಿರುಗಿ ಬಿಡುವವರು ಇಲ್ಲಿ ಕರೆತಂದಿರೇಕೆ?'

'ಕರೆತಂದಿರೇಕೆ?—ನಿನ್ನ ಹಣೆಬರಹ ತಿಳಿಯುದೆ!'

ತಾಯಿ:—'ಇಲ್ಲಿರಲಿ ಅವಳು. ಅವಳೆದುರಿಗೆ ಬೇರೆ ಹೆಂಡತಿ ಕಟ್ಟಿಕೊಂಡಿರುವುದನ್ನು ನೋಡಿ ಸಂತೋಷಪಡಲಿ'

'ಕೊನೆಗೆ ಅದೇ ಮದ್ದು. ಇಲ್ಲೇ ಇರು ನೀನು. ನಿನ್ನೆದುರಿಗೇ ಇನ್ನೊಂದು ಮದುವೆಯಾಗಿ..'

'ಛೇ—ನಾಲ್ಕು ಲಗ್ನವಾಗಿರಿ. . ಬೇಡವೆನ್ನುವುದಿಲ್ಲ. . ನಿಮ್ಮಂತೆ ನಾನೂ ಇದೇ ಮನೆಯಲ್ಲಿ ನಾಲ್ಕು ಮಂದಿಯನ್ನು ಕರೆಯಬಲ್ಲೆ. . . . ಹ್ಯಾಗೂ ಮರ್ಯಾದಸ್ಥರ ಮನೆ'

ಅಣ್ಣಪ್ಪಯ್ಯನ ಗಂಟಲು ಬತ್ತಿತು. ಅವಳು ಹಾಗೆಂದಾಳೆಂದು ಅವನು ಎಣಿಸಿರಲಿಲ್ಲ. ಹೆಂಡತಿಯ ಮುಂದೆ ತಾಯಿ ಹೇಳಿಕೊಟ್ಟ ಪಾಠ ಒಪ್ಪಿಸಿದನು. ಹಾಗೆ ಬೇರೆ ಲಗ್ನಕ್ಕೆ ತಯಾರಿದ್ದನು. ಇದು ಪೂರೈಸದ ಮ್ಹಾಲು ಎಂದು ಗೊತ್ತಿತ್ತು. ಆದರೆ ಅವಳು ಮನೆಯಿಂದ ಏಳುವುದಿಲ್ಲ ವೆನ್ನುತ್ತಾಳೆ. . ತನ್ನೆದುರಿಗೆ ಬೇರೆಯವರನ್ನು ಕರೆಯುತ್ತೇನೆ ಎಂದರೆ. .

ಅತ್ತೆಯು ಎಲ್ಲರಿಗೂ ವಿರಾಮ ಕೊಟ್ಟಳು. . . . 'ಬಾ ಅಣ್ಣಪ್ಪ, ಅವಳಿಗೆ ಮಾನವಿಲ್ಲವೆಂದು ಸಮಗಿಲ್ಲವೇ?' ಎಂದು ಮುಗಿಸಿದಳು. ಅಂದಿನ ನಾಟಕ ಮುಗಿಯಿತು. ಮಂಜೇಶ್ವರದವರಿಗೆ ಮೂರು ತಿಂಗಳ ಗ್ರಾಸವಾಯಿತು. ಬರಿಯ ಅನಂತೇಶ್ವರ ಮೊಕ್ತೇಸರಿಯೇ ಊರವರಿಗೆ ಆರು ತಿಂಗಳ ಭೋಜನದ ಸುದ್ದಿಯಾಗುತ್ತದೆ; ಈಗ ಇನ್ನೂ ಮೂರು ತಿಂಗಳ ಆಹಾರ ದೊರೆಯಿತು.

ಆ ದಿನ ಸಂಜೆ, ದಾರಿಮೇಲೆ ಹೋಗುವ ಪೇಟೆಯವರೆಲ್ಲ ಅಣ್ಣಪ್ಪ ಕಮ್ತಿಯರ ಅಂಗಡಿ ಎದುರಿಗೆ ಅನಾವಶ್ಯಕವಾಗಿಯಾದರೂ ಬಂದು ನಿಲ್ಲುವರು. ಅವರನ್ನೇ ಪಿಳಿಪಿಳಿ ನೋಡುವರು. ಅಣ್ಣಪ್ಪಯ್ಯ ಮೋರೆ ಎತ್ತುವಂತಿಲ್ಲ. ಗಿರಾಕಿಯರೊಡನೆ ಮಾತನಾಡುವಂತೆ ನಟಿಸುವರು. . ಗಿರಾಕಿ ಇಲ್ಲವಾದರೆ ಶ್ಯಾನುಭಾಗರ ಮುಖವನ್ನು ನೋಡುವರು. . . .

———

೨೨

# ರಾಜಿ ಪಂಚಾಯತಿ

ಆ ರಾತ್ರಿ ಅಣ್ಣಪ್ಪಯ್ಯನ ತಲೆ ಬಿಸಿಯಾಗಿ ಹೊಟ್ಟೆ ಹೋಗದಿದ್ದುದು ಆಶ್ಚರ್ಯ. ಪ್ರಾಯಶಃ ಅದೇ ಇಲ್ಲದುದರಿಂದಲೋ ಏನೋ ಮನೆಗೆ ಬಂದರು. ಊಟಕ್ಕೆ ಬಡಿಸಿದವಳು ತಾಯಿ. ಸುನಾಲಿನಿ ಅಡಿಗೆಯನ್ನೇನೊ ಮಾಡಿದಳು. ತಾನು ಎಂಟು ಘಂಟೆಗೆ ಪಟ್ಟಾಗಿ ಊಟಮಾಡಿ ತನ್ನ ಕೊಟಡಿಗೆ ಹೋಗಿ ಮಲಗಿಕೊಂಡಳು.

ಊಟ ಮುಗಿದಾಗಲು ಅಣ್ಣಪ್ಪಯ್ಯ ಅಭ್ಯಾಸ ಬಲದಿಂದ ಕೊಟಡಿಗೆ ಹೋದರು. ಇವರಿಗೆ ಹಾಸಿಗೆಯನ್ನು ಸಹ ಬಿಡಿಸಿರಲಿಲ್ಲ, ದಟ್ಟನಾದ ಹಾಸುಗೆಯ ಮೇಲೆ ತಲೆಯಿಂದ ತಲೆಯ ತನಕ ಒಬ್ಬಳೇ ಮಲಗಿದ್ದಳು. ಅಣ್ಣಪ್ಪಯ್ಯನು ಹಿಂದೆ ಬಂದರು. ಇನ್ನು ತಾಯಿಯೇನಾದರೂ ಹೇಳಿದರೆ ಕಷ್ಟವೆಂದು ಕೋಣೆಗೆ ಮರಳಿದರು. ಬೇರೆ ಚಾಪೆಯೂ ಇರಲಿಲ್ಲ. ಅಲ್ಲೇ ನೆಲದಲ್ಲೊಂದು ಕಡೆ ಮಲಗಿಕೊಂಡರು. 'ಈ ಹುಡುಗಿಯ ಬಾಯಿಂದ ಒಮ್ಮೆ ಬಚಾಯಿಸಿದರೆ' ಎಂಬ ಯೋಚನೆ. ಅವರು ಇಷ್ಟೆಲ್ಲ ಮಾಡಿದುದು ಸುನಾಲಿನಿಗೆ ಗೊತ್ತಿತ್ತು. ಅವಳು ಎದ್ದು, ಹಾಸುಗೆಯನ್ನು ಅವರು ಮಲಗಿದ್ದಲ್ಲಿಯ ತನಕ ನೂಕಿ, ಅದರ ಈಚೆ ಮಗ್ಗುಲಿನಲ್ಲಿ ಮಲಗಿದಳು. ಆದೀಗ ದೇವತೆಗಳು ನೋಡಬೇಕಾದ ನೋಟ. ಆಚೆ ಅಣ್ಣಪ್ಪಯ್ಯ ಬರಿ ನೆಲದ ಮೇಲೆ ಮುದುರಿದ್ದಾರೆ; ಈಚೆ ಸುನಾಲಿನಿ ಏಕಟ ನಗೆ ನಗುತ್ತಿದ್ದಾಳೆ. ನಡುವೆ ಇಬ್ಬರ ನಡುವೆ ದಪ್ಪದ ಹಾಸುಗೆ ಒಂಟಿಯಾಗಿ ನರಳುತ್ತಿದೆ. ರಾತ್ರಿಯಿಬ್ಬರೂ ಸುಖವಾಗಿ ನಿದ್ರಿಸಿದರು. . ನಡುವಿನ ಹಾಸುಗೆ ಬೇರೆ ಎಚ್ಚತ್ತಂತೆ ಕಾಣಲಿಲ್ಲ.

ಬೆಳಕು ಹರಿಯುವ ಮೊದಲೇ ಅಣ್ಣಪ್ಪಯ್ಯನು ಎದ್ದು ಹೊರಕ್ಕೆ ಬಂದು ಕಾಫಿ ಮುಗಿಸಿದರು; ಬರೇ ಮುಗಿಸಿದ್ದು ಮಾತ್ರ ಕಾಡಿದುದಲ್ಲ. . ಅಂಗಡಿಗೆ ಹೋದರು. ಮೂರು ತಾಸು ಕುಳಿತುಕೊಳ್ಳುವುದರಲ್ಲೇ ತಲೆ

ಬಿಸಿಯಾಯಿತು. ನಾನು ಮನೆಗೆ ಹೋಗುತ್ತೇನೆಂದರು. ಶ್ಯಾನುಭಾಗರ ಕಿವಿಗೆ ಹಿಂದಿನ ದಿನದ ಗದ್ದಲ ಕೇಳಿಸಿತ್ತು. ಅದರಿಂದ 'ಏನು ಮನೆಯಲ್ಲಿ ತೊಂದರೆಯೇ' ಎಂದರು. ಅಣ್ಣಪ್ಪಯ್ಯ ಮಾತನಾಡದೆ ಮನೆಗೆ ಹೋದರು. ಅವರು ಮುಟ್ಟುವ ಮೊದಲೇ ರಾಜೀವಿಯು ಸುನಾಲಿನಿಯ ಬಳಿ ಅಡುಗೆ ಮಾಡಲು ಹೇಳಿ ಹೊರಗೆ ಹೋಗಿದ್ದಳು. ಸುನಾಲಿನಿಯೂ ಅಡುಗೆ ಮನೆಗೆ ಕಾಲಿಡಲಿಲ್ಲ. ಬರಿಯ ಹುಚ್ಚಿಯಂತೆ ವಿಕಟವಾಗಿ ವಿಜಯದ ನಗು ನಗುತ್ತ ಮನೆಯಲ್ಲಿ ಅತ್ತಿತ್ತ ತಿರುಗಾಡುತ್ತಿದ್ದಾಳೆ. ಅಣ್ಣಪ್ಪಯ್ಯನಿಗೆ ಹಿಂದಿನ ರಾತ್ರಿ ನಿದ್ರೆ ಇಲ್ಲದೆ ತಲೆನೋವು ಬಂದಿತೆಂದು ಕೊಟಡಿಗೆ ಹೋಗಿ ಮಲಗಿಕೊಂಡು, ನಿನ್ನೆ ಬಿಡಿಸಿದ ಹಾಸುಗೆ ಬಿಡಿಸಿಯೇ ಇದ್ದುದರಿಂದ ಅದರ ಮೇಲೆ ಹೋಗಿ ಉರುಳಿದರು.

ಮಧ್ಯಾಹ್ನ ಒಂದು ಘಂಟೆಗೆ ಅತ್ತೆಯ ಸವಾರಿ ಮರಳಿತು. ಊರಲ್ಲಿ ಉಪ್ಪುಕಾರ ಕೂಡಿ ಹಬ್ಬಿದ ವಾರ್ತೆಯಿಂದ ಅವಳು ರೇಗಿ ಕೆಂಡವಾಗಿದ್ದಳು. ಈ ಇಂಗ್ಲಿಸ್ ಹುಡುಗಿಯನ್ನು ತಂದು ತಮ್ಮ ಮರ್ಯಾದೆ ಹೀಗೆ ಹತ್ತು ಜನರ ಪಾಲಿಗೆ ಚೆಲ್ಲಿತಲ್ಲ—ಎಂದು ಚಿಂತಿಸಿ ಚಿಂತಿಸಿ ಮನೆಗೆ ಬಂಡಳು. ಬರುವಾಗ ಸುನಾಲಿನಿಯನ್ನು ಹತ್ತಿಬಟ್ಟೆಯ ಹಾಗೆ ಹರಿದು ಸೀಳುತ್ತೇನೆ ಎಂದೆಣಿಸಿದ್ದಳು. ಮನೆಗೆ ಕಾಲಿಟ್ಟೊಡನೆಯೇ ಅವಳ ಭೇಟಿಯಾಯಿತು. ಅವಳ ಕ್ರೂರ ಮುಖವನ್ನು ಕಂಡು ತೆಪ್ಪನೆ ಕಾಲು ತೊಳೆಯ ಹೋದಳು. ಅಡುಗೆ ಮನೆಗೆ ಬಂದಳು. ಒಲೆಯಲ್ಲಿ ಕೆಂಡು ವಿದ್ದಿಲ್ಲ..ಅಲ್ಲಿಂದ ಜ್ವಾಲಾಮುಖಿಬಾಯಿ ತೆರೆಯಿತು. ಅಣ್ಣಪ್ಪನು ಇವಳ ಗದ್ದಲ ಕೇಳಿ ಹೊರಗೆ ಬಂದು ಅಡುಗೆಯ ಮನೆಗೆ ಹೋದನು.. 'ಸುಮ್ಮನೆ ನಾವು ಬಾಯಿ ತೆರೆದು..ನಾವು ಬಾಯಿ ತೆರೆದು..' ಎಂದನು.

ಅಲ್ಲೇ ಅವನು ಪೀಠವೂರಿದನು. ತಾಯಿ ನೂರಾರು ದೇವರಿಗೆ ಶಾಪವಿತ್ತು ಅಡಿಗೆಯ ಕೆಲಸವನ್ನು ಮುಂದುವರಿಸಿದಳು. ಆಗಲೇ ಬೇಕಲದಿಂದ ಬುದ್ಧಿಭ್ರಮಿಷ್ಠನಾಗಿ ಚಂದ್ರಯ್ಯನು ಅಲ್ಲಿಗೆ ಬಂದುದು. ಬಂದ ಸ್ಥಳವು ಹುಚ್ಚರ ಆಸ್ಪತ್ರೆಯೆಂದು ಅವನಿಗೆ ಹೇಗೆ ತಿಳಿಯಬೇಕು?

ಬಂದವನು ' ಕಪ್ಪಣ್ಣಯ್ಯನವರು ಇಲ್ಲವೇ ? ' ಎಂದು ಕೇಳಿದನು. ಎದುರಿಗೇ ಸುನಾಲಿನಿಗೆ ಬೀಟಿನ ಗಸ್ತು ಹಾಕುತ್ತಿದ್ದಳು. ತಲೆಯೆತ್ತದೆ ' ಅವುಗೆ ಮನೆಯಲ್ಲಿದ್ದಾರೆ. . ಅಂಗಡಿಯಲ್ಲಿಲ್ಲವೇ ? ' ಎಂದು ಕೇಳಿದಳು. ನೋಡುತ್ತಾಳೆ–' ಆ ದಿನ ಸರಸಮ್ಮನ ಗುಡಿಯಲ್ಲಿ ಕೇಳಿದ ದನಿ. . ಅಣ್ಣಪ್ಪಯ್ಯನ ಅಂಗಡಿಯಿಂದ ಬರುತ್ತಿದ್ದೇನೆ ' ಎಂದ ಸ್ವರ–ಹಿಂದಿನ ನೆನಪಾಯಿತು.

ಚಂದ್ರಯ್ಯನಿಗೆ ಎದೆ ದಿಗಿಲಾಯಿತು. . ' ಈಕೆ ಅಣ್ಣಪ್ಪಯ್ಯನ ಮನೆಯವಳೇ. '

' ಅಮ್ಮಾ. . ಆ ದಿನ . . ' ಎಂದು ಮೆಲ್ಲಗೆ ಮಾತನಾಡಿದನು. ಬದಲು ಸುನಾಲಿನಿ ಗಟ್ಟಿಯಾಗಿಯೇ ' ಮೆಲ್ಲಗೇನು ಬೇಡ. . ಸರಸಮ್ಮನಿಂದ ಮಣ್ಣು ಸಹ ಆಗಲಿಲ್ಲ. ಅವಳು ಮನುಷ್ಯರಿಗೆ ಬುದ್ಧಿ ಕೊಟ್ಟಾಳೋ ಏನೋ; ರಾಕ್ಷಸರಿಗೆ ಏನು ಮಾಡಿಯಾಳು. '

ಸುನಾಲಿನಿಯ ಮಾತು, ಮುಖಗಳೊಂದೊಂದೂ ಶಾಂತಭಾವದ ಎಲ್ಲೆಯನ್ನು ಮೀರಿದ್ದುವು. ಮುಖದಲ್ಲಿ ತೀವ್ರ ತಿರಸ್ಕಾರ, ಅಸಹ್ಯ ಕೋಪಗಳು ತುಳುಕುತ್ತಿದ್ದುವು. ಅದನ್ನು ಕಂಡು ಚಂದ್ರಯ್ಯನಿಗೆ ಸಹನವಾಗಲಿಲ್ಲ. . ' ಅಯ್ಯೋ, ಇಂಥ ಸ್ಫುರದ್ರೂಪಿಗೂ ಇದೇ ಪಾಡೇ ? ಇದು ಅಣ್ಣಪ್ಪಯ್ಯನ ಹೆಂಡತಿ ಇರಬೇಕಲ್ಲವೇ–ಎಂದು ಊಹಿಸಿದನು.

ಅವನ ಮನೆಗೆ ಬಂದು ಸ್ವರಹೊರಡಿಸಿಯಾಯಿತು. ಇಲ್ಲವಾದರೆ ಈ ಘೋರದಲ್ಲಿ ತಾನು ತಲೆಯಿರಿಸಲಾರೆ ಎಂದು ಯೋಚಿಸಿ ಮರಳುವವನು. ಆದರೆ ಬಂದಾಯಿತು. ಮಾತನಾಡಿಯಾಯಿತು. ಇನ್ನು ಮರಳಿದರೆ. . ಹೀಗೆಂದು ಅಲ್ಲೇ ನಿಂತು–ಇನ್ನೊಮ್ಮೆ ' ಅಮ್ಮಾ, ಅಣ್ಣಪ್ಪಯ್ಯನಿಲ್ಲವೇ ? ' ಎಂದು ಕೇಳಿದನು.

' ಅಮ್ಮ, ಅಣ್ಣಪ್ಪಯ್ಯ ಇಬ್ಬರೂ ಒಳಗೆ ' ಎಂದು ಸುನಾಲಿನಿಯ ಉತ್ತರ ಬಂದಿತು.

' ಅಣ್ಣಪ್ಪಯ್ಯ ' ಎಂದು ಕೂಗಿ ಕರೆದನು.

ಅವರ ತಾಯಿ, ಆ ಧ್ವನಿಯನ್ನು ಕೇಳಿ ಹೊರಗೆ ಬಂದಳು. ಸೊಸೆಯನ್ನು ಕಂಡು ತನ್ನಷ್ಟಕ್ಕೆ ' ಮನೆಯಲ್ಲಿ ಇಲ್ಲ ಎನ್ನಲಿಕ್ಕೂ ಬಾರದೇ ? '

ಎಂದು ಗೊಣಗುತ್ತ ಈಚೆಗೆ ಬಂದು 'ಅವರಿಗೆ ಮೈ ಸ್ವಸ್ಥವಿಲ್ಲ, ಮಲಗಿದ್ದಾರೆ' ಎಂದು ಹೇಳಿದಳು.

ಗೆಳೆಯರ ಅನಾರೋಗ್ಯವಲ್ಲವೇ ಎಂದು 'ಏನಮ್ಮ?' ಎಂದು ಕೇಳಿದನು.

ತಾಳ್ಮೆಗೆಟ್ಟ ರಾಜೀವಿಯು 'ಅದೇನೋ ನನಗೆ ಗೊತ್ತಿಲ್ಲ.... ಅವಳನ್ನು ಕೇಳು..ಅವರ ಹೆಂಡತಿ ಅದು. ನಾನ್ಯಾರು ಈ ಮನೆಯಲ್ಲಿ..' ಎಂದು ನಡೆದೇ ಬಿಟ್ಟಳು.

ಸುನಾಲಿನಿಯು ಕೆರಳಿದಳು. ಅವಳಿಗೆ ಏನು ಮಾಡುವುದೆಂದೂ ತೋಚದು. 'ನನ್ನನ್ನು ಕೇಳಬೇಕಂತೆ....ನಾನೇ ಹೇಳುತ್ತೇನೆ.... ಚಂದ್ರಯ್ಯ ಅಲ್ಲವೇ ನಿಮ್ಮ ಹೆಸರು..ನಿಮ್ಮ ಮನೆಯಲ್ಲಿ ಹೀಗಿದೆಯೇ! ನೀವೂ ನಿಮ್ಮ ಹೆಂಡತಿಯನ್ನು ಮಾತನಾಡಿಸದೆ ಮನೆಯಲ್ಲಿ ಕಸದ ಹಾಗೆ ಇರಿಸುತ್ತೀರಾ! ಬನ್ನಿ, ಕುಳಿತುಕೊಳ್ಳಿ. ನಿಮಗೆ ನಾನು ಸರಸಮ್ಮನ ಗುಡಿಗೆ ಹೋದುದು ಗೊತ್ತು. ಇದೂ ತಿಳಿಯಲಿ' ಎಂದಳು.

ಚಂದ್ರಯ್ಯನಿಗೆ ಹೆದರಿಕೆ ಆಯಿತು.

ಸುನಾಲಿನಿಯು 'ಲಚ್ಮೀ' ಎಂದು ಕರೆದಳು. ಲಚ್ಮಿ, ಕೆಲಸದವಳು, ಬಂದಳು. 'ಇವರು ಆ ದಿವಸ ಸರಸಮ್ಮನ ಗುಡಿಯ ಹತ್ತಿರ ಸಿಕ್ಕಿದರಲ್ಲ; ಅವರು. ನಮ್ಮವರಿಗೆ ಬೇಕಾದವರಂತೆ! ಅವರಿಗೆ ಈ ಮನೆಯಲ್ಲಿ ಏನೇನಾಗಿದೆ ಎಂದು ಹೇಳು. ರಾಜೀವತ್ತೆಯವರು ಅದನ್ನು ಹೇಳಲಿಕ್ಕೆ ಹುಕುಂ ಮಾಡಿದ್ದಾರೆ. ಮನೆಯ ಯಜಮಾನಿ ನಾನಂತೆ! ಇನ್ನು ಏನೂ ಹೆದರಿಕೆಯಿಲ್ಲ ಹೇಳು'—ಎಂದಳು.

ಲಚ್ಮಿ ಮೂದಂಬೈಲನ್ನು ಬಲ್ಲವಳು. ಬಯಲಿನವಳೆಂದರೂ ಸರಿಯೇ. ಕಮ್ತಿಯರಲ್ಲಿ ಕಾಯಂ ಕೆಲಸಕ್ಕೆ ನಿಂತಿದ್ದಾಳೆ. ಅವಳೊಡನೆ ಚಂದ್ರಯ್ಯನೂ ತುಳುವಿನಲ್ಲಿ 'ಏನು ಸಂಗತಿ?' ಎಂದು ಕೇಳಿದನು. ಲಚ್ಮಿಯು ಮೆಲ್ಲಗೆ ಪಿಸಪಿಸನೆ ಸುದ್ದಿ ಹೇಳತೊಡಗಿದಳು. ಅಲ್ಲೇ ತುಸು ದೂರದಲ್ಲಿ ಸುನಾಲಿನಿಯು ಸಿಟ್ಟಿನ ಮುಖಮಾಡಿ ಕುಳಿತಿದ್ದಳು. ಕಣ್ಣು ಮಾತ್ರ ಅಳುಗರೆಯುತ್ತಿತ್ತು.

ಅಷ್ಟರಲ್ಲಿ ರಾಜೀವತ್ತೆ ತಿರುಗಿ ಹೊರಗೆ ಬಂದಳು. 'ಲಚ್ಮಿ' ಎಂದು ಸುನಾಲಿನಿ ಕೂಗಿದುದು ಅವಳಿಗೆ ಕೇಳಿತ್ತು. ಲಚ್ಮಿಯನ್ನು ಕಂಡಳು....'ಲಚ್ಮಿ, ನಿನಗೆ ಕೆಲಸವಿಲ್ಲವೇ?' ಎಂದು ಗದರಿಸಿದಳು. ಸುನಾಲಿನಿಯು ಕುಳಿತಲ್ಲಿಂದಲೇ 'ನಾನು ಹೇಳಿದ್ದು. ಮನೆಯ ಯಜಮಾನಿ, ಅವಳನ್ನು ಬರಲಿಕ್ಕೆ....' ಎಂದಳು. ರಾಜೀವಿ ಇಲ್ಲಿ ನಿಂತರೆ ಪೂರಾ ಮಾನಗೇಡಿಯಾಗುವುದೇ ಸರಿಯೆಂದು ಅಡುಗೆಯ ಮನೆಗೆ ಓಡಿದಳು. ಲಚ್ಮಿ ಎದ್ದಳು. 'ಕಥೆ ಮುಗಿಸಿ ಹೋಗೆಂ'ದು ಸುನಾಲಿನಿ ಹೇಳಿದಳು. ಚಂದ್ರಯ್ಯನು ಹೊರಡಲು ಎದ್ದುನಿಂತನು. ಅವನಿಂದ ಇದನ್ನೆಲ್ಲ ಕೇಳುವುದಾಗದು. ಸುನಾಲಿನಿಯಾಗ 'ನನ್ನಾಣೆ. ನಾನು ಸಾಯುವ ಮೊದಲು ಒಬ್ಬರಿಗಾದರೂ ಸತ್ಯ ತಿಳಿದಿರಲಿ....' ಎಂದಳು. ಆ ಮಾತು ಚಂದ್ರಯ್ಯನ ಕರುಳನ್ನು ಇರಿಯಿತು. ಅವನಿಗೂ ಕಣ್ಣೀರು ಬಂದಿತು. 'ಇಲ್ಲಮ್ಮ ಕೇಳುತ್ತೇನೆ' ಎಂದನು. ಲಚ್ಮಿ ಮಾತು ಮುಂದುವರಿಸಿದಳು. ಅವಳು ತಪ್ಪಿದಲ್ಲಿ ಸುನಾಲಿನಿಯು ತಿದ್ದಿದಳು. 'ಕೊನೆಗೆ—ಇನ್ನು ಬೇಕಾದರೆ ಹೋಗಿ. ನಾನು ಸತ್ತರೆ ತಿಂದದ್ದು ಹೆಚ್ಚಾಗಿ ಬಾವಿಗೆ ಹಾರಿಕೊಂಡಳು—ಎಂದು ಜನರಾಡಿಕೊಳ್ಳದೆ, ಈ ನರಕ ಅನುಭವಿಸಲಾರದೆ, ಗಂಡನಿದ್ದು ವೈಧವ್ಯ ಬಂದಿತೆಂದು ಪ್ರಾಣಬಿಟ್ಟಳು' ಎಂದು ನೀವು ಒಬ್ಬರು ಹೇಳಿದರೆ ಸಾಕು..' ಹೀಗೆಂದು ತನ್ನ ಕೋಣೆಗೆ ಹೋದಳು. ಲಚ್ಮಿಯೂ ಹೋದಳು. ಸುನಾಲಿನಿಯ ಮಾತು ಕೇಳಿ ಅವಳಿಗೂ ಅಂಜಿಕೆಯಾಯಿತು. ಅವಳನ್ನು ಸಮಾಧಾನಪಡಿಸಲು ಕುಳಿತಳು. ಆದರೆ ಸುನಾಲಿನಿಯು ಯಾವುದಕ್ಕೂ ಹಾಂ ಹೂಂ ಎನ್ನಲಿಲ್ಲ.

ಚಂದ್ರಯ್ಯನಿಗೆ ದುಃಖ ತಡೆಯಲಾರದಾಯಿತು. 'ಅಯ್ಯೋ ಇನ್ನೊಂದು ಜೀವ..' ಎಂದು ಎದೆ ದಡಬಡಿಸುತ್ತಿತ್ತು. ಅವನು ಅಲ್ಲೇ ಜಗುಲಿಯ ಮೇಲೆ ಕುಳಿತನು. ಸಾಧಾರಣ ಮಧ್ಯಾಹ್ನ ನಾಲ್ಕು ಘಂಟೆಯ ಹೊತ್ತಿಗೆ ಅಣ್ಣಪ್ಪಯ್ಯ ಊಟ ಮಾಡಿ ಹೊರಬಿದ್ದನು. ಚಂದ್ರಯ್ಯನು ಅವನಿಗೆ ಬೇಕಾದವನು. 'ಬಂದದ್ದು ತಿಳಿಯಲೇ ಇಲ್ಲವಲ್ಲ' ಎಂದನು.

'ತಾಯಿ ಹೇಳಲಿಲ್ಲವೇ?'

'ಹೇಳಲಿಲ್ಲ.'

'ಈ ಮನೆಯಲ್ಲಿ ಯಾರಿಗೂ ತಲೆ ಸರಿಯಿಲ್ಲ' ಎಂದನು.

'ಬನ್ನಿ, ತಿರುಗಾಡಲು ಹೋಗುವ' ಎಂದು ಚಂದ್ರಯ್ಯನು ಕರೆದನು.

ಅಷ್ಟು ನೆಪ ಸಿಕ್ಕಿದರೆ ಸಾಕಿತ್ತು. ಅವರಿಬ್ಬರೂ ಮಾತನಾಡುತ್ತ ಬೆಟ್ಟಗುಡ್ಡಗಳನ್ನು ಅಲೆದಾಡಿದರು. ಚಂದ್ರಯ್ಯನು ಅವನನ್ನು ಕೆಣಕಿ ಮಾತನಾಡಲು ಯತ್ನಿಸಿದನು—ಅಣ್ಣಪ್ಪನು ಮೌನ. ಕೊನೆಗೆ 'ಸುಮ್ಮನೆ ಒಂದು ಹುಡುಗಿಯ ಪ್ರಾಣ ತೆಗೆದ ಅಪಕೀರ್ತಿ ಬಂದೀತು' ಎಂದನು. ಆಗ 'ನಾವು ಈಗಲೇ ಸತ್ತಿದ್ದೇವೆ' ಎಂಬ ಉತ್ತರ ದೊರಕಿತು.

ಚಂದ್ರಯ್ಯನು ಮೂರು ತಾಸು ಬುದ್ಧಿ ಹೇಳಿದನು. ಆದರೆ ಒಂದೇ ಉತ್ತರ 'ನೀವೇನೂ ಹೇಳಿ—ನನ್ನ ಅಂತರಂಗ ನನಗೆ ತಿಳಿದಿದೆ. ನನಗೆ ಧೈರ್ಯವಿಲ್ಲ. ಅವಳೊಡನೆ ಸಲಿಗೆಯಲ್ಲಿರುವ ಧೈರ್ಯ ನನಗಿಲ್ಲ. ಅವಳನ್ನು ಮದುವೆಯಾದುದು ತಪ್ಪು. ಅವಳು ಅಷ್ಟು ಅಭಿಮಾನದವಳು. ನಾವು ಕೂಡುವಂತಿಲ್ಲ..ಮುರಿದುದು ಮುರಿದ ಹಾಗೇ..ಅವಳನ್ನು ಮೆಚ್ಚಿಸುವ ತ್ರಾಣ ನನಗಿಲ್ಲ..ನನ್ನಿಂದ ಅವಳಿಗೆ ಸುಖವಿಲ್ಲ...ಅವಳಿಂದ ನನಗಿಲ್ಲ..ನೀನು ಸ್ನೇಹಿತನಾದರೆ ಈ ರಾಜಿಪಂಚಾಯತಿ ಬಿಟ್ಟು ನಮ್ಮ ಮರ್ಯಾದೆ ಉಳಿಸಿಕೊಂಡು ದಿವಸ ಸಾಗಿಸುವುದು ಹೇಗೆಂದು ಹೇಳು' ಎಂದರು.

'ಹೊರಗಿನ ನಾಟಕ ಹೇಗೆ ಇರಬೇಕು ಎಂದು ಪ್ರಪಂಚ ನೋಡಿದರೆ ತಿಳಿಯುತ್ತದೆ. ನನ್ನನ್ನು ಕೇಳಿ ಫಲವೇನು?' ಎಂದನು ಚಂದ್ರಯ್ಯ. ಇಬ್ಬರೂ ತಿರುಗಿ ಪೇಟೆಯನ್ನು ಸೇರಿದರು. ಚಂದ್ರಯ್ಯನು ಅದು ತನ್ನಿಂದಾಗದ ಕೆಲಸವೆಂದು ಮರಳಿದನು. ನನ್ನದೇ ನನಗೇ ತೀರ್ಮಾನವಾಗಿಲ್ಲ. ನನಗೆ ಇನ್ನೊಂದು ಹೊರೆಯಾಕೆ? ಊರಲ್ಲಿದ್ದವರ ಸುಖದುಃಖಗಳನ್ನು ಹೊರುವ ಯೋಗ್ಯತೆ ನನಗಿದೆಯೇ? ಹೀಗೆಂದು ಊರಿನ ಹಾದಿ ಹಿಡಿದನು.

———

೨೩

# ಒಂದರಿಂದ ಇನ್ನೊಂದು

ಊರಿಗೆ ಮರಳುವ ಯೋಚನೆ ಇದ್ದಿಲ್ಲ. ಅಲ್ಲಿ ಮನಸ್ಸು ಗುರಿ ಕಾಣಲಿಲ್ಲವೆಂದು ಬೇಕಲಕ್ಕೆ ಹೋಗಿದ್ದನು. ಅಲ್ಲಿ ಶಾಂತಿ ದೊರೆಯಲಿಲ್ಲ ವೆಂದು ಮಂಜೇಶ್ವರಕ್ಕೆ ಮರಳಿದನು. ಅಲ್ಲಿಂದ ಬೇರೊಂದು ಹೊರೆಯನ್ನು ಹೊತ್ತು ಮೂಡಂಬೈಲಿಗೇ ಬರಬೇಕಾಯಿತು. ಬೈಲನ್ನು ದಾಟುವಾಗ ಲೆಲ್ಲ ಬೆಳ್ಯಕ್ಕನ ನೆನಪು ಅವನಿಗೆ ಆಗುವುದು ರೂಢಿ. ಆದರೆ ಇಂದು ಕೇಳಿದ ಕಥೆಯಿಂದ ಅವನಿಗೆ ಕಮ್ತಿಯರ ಮನೆಯ ಘೋರವಲ್ಲದೆ ಬೇರೆ ಯೋಚನೆಯೇ ಇಲ್ಲ.ತನ್ನ ಸಮಸ್ಯೆ, ತಾನು ಸಲಿಸಬೇಕಾಗಿರುವ ಉತ್ತರ ಇದೊಂದೂ ಹೊಳೆಯಲಿಲ್ಲ.

ಮೂಡಂಬೈಲಿನ ಸರಸಮ್ಮನ ಬನವೂ ಬಂದಿತು. ಕೆರೆಯ ನೀರು ಬೆಳ್ದಿಂಗಳಲ್ಲಿ ತೀರ ಚೆನ್ನಾಗಿ ಕಾಣಿಸುತ್ತಿದೆ.... ಅದರ ಬಳಿಯಲ್ಲಿ ಯಾರೋ ಕುಳಿತಂತೆ ಕಂಡಿತು. ಯಾರಿರಬಹುದು? ಸರಸಮ್ಮನ ಗುಡಿ ಯಲ್ಲಿ ಯಾರು ಎಂದು ಕೇಳಿದರೆ, ಯಾರೋ ಸಂಸಾರದಲ್ಲಿ ನೊಂದವರು; ದಾಂಪತ್ಯವನ್ನು ಅತಿರೇಕ ಅನುಭವಿಸಿದವರು ಇರಬೇಕು. ಇವನು ಬರುವುದನ್ನು ಆ ವ್ಯಕ್ತಿಯೂ ಕಂಡಿರಬೇಕು. ಎದ್ದುನಿಂತುದು ಕಾಣಿಸಿತು. ಹೆಣ್ಣು ಜೀವ. ಮೈತುಂಬ ಕರಿಯ ಬಟ್ಟೆಯನ್ನು ಹೊದೆದು ತನ್ನ ಕಡೆಗೆ ತಿರುಗಿದಂತೆ ಕಾಣಿಸಿತು. ಸಾಮಾನ್ಯರಾರಾಗಿದ್ದರೆ ಅಲ್ಲಿಂದ ಅಡಗುತಿದ್ದರು. ಈ ಸ್ತ್ರೀ ಅಲ್ಲೇ ನಿಂತುಕೊಂಡಳು. ಯಾರು ಬೆಳ್ಯಕ್ಕನೇ? ಬೆಳ್ಯಕ್ಕನಾದರೆ ಬಿಳಿಯ ಒಟ್ಟೆಯನ್ನು ಉಡುತ್ತಿದ್ದಳು.

ಬೆಳ್ಯಕ್ಕನು ನಿಜಕ್ಕೂ ಈಗ ಭೇಟಿಯಾದರೆ ಅವಳಿಗೆ ಏನೆಂದು ಉತ್ತರವನ್ನು ಕೊಡಬೇಕು. ಸುನಾಲಿನಿಯ ಇತಿಹಾಸವನ್ನು ಕೇಳಿದ ಅವನಿಗೆ ಈ ದಾಂಪತ್ಯದ ಘೋರ ಯೋಚನೆಯೇ ಬೇಡ ಎನಿಸಿತು. ಎರಡು ವ್ಯಕ್ತಿಗಳು, ಚಿರವಾದ ನರಕವನ್ನು ಅನುಭವಿಸಲು ತಾವಾಗಿ ತೊಟ್ಟುಕೊಳ್ಳುವ ಶೃಂಖಲೆ 'ವಿವಾಹ' ಎಂಬುದು ಎಂದೆನಿಸಿತು.

ಆದುದರಿಂದ ಬೆಳ್ಳಕ್ಕ ತಾನಾಗಿ ಸಿಕ್ಕಿದರೆ 'ನನ್ನನ್ನು ಈ ಶೃಂಖಲೆಗೆ ಸಿಲುಕಿಸಬೇಡ' ಎನ್ನುವ ಮನಸ್ಸಾಯಿತು. ಅವಳಾಗಿ ಹುಡುಕಿಕೊಂಡು ಒರುವದು ಬೇಡ. ನಾನೇ ಅವಳನ್ನು ಭೇಟಿಯಾಗುವೆನೆಂದು ಗುಡಿಯ ಕಡೆಗೆ ನಡೆದನು. ಬೆಳ್ಳಕ್ಕ ಕಪ್ಪು ಸೀರೆ ಉಟ್ಟಳೇಕೆ? ಇತರರಾರಲ್ಲ.. ಇತರರಾಗಿದ್ದರೆ ಓಡುತ್ತಿದ್ದರು. ಹೀಗೆಂದು ಮುಂದುವರಿದನು. ಇವನ ಕಣ್ಮುಂದೆ ಆ ರೂಪ ಕೆರೆಗೆ ದುಮುಕಿತು. ನಿಜ ಬೆಳ್ಳಕ್ಕ. ಬೆಳ್ಳಕ್ಕನಾದರೆ ದಿಗಂಬರೆಯಾಗಿ ಸೀರನ್ನು ಹೋಗಬೇಕಿತ್ತಲ್ಲ..? ಏನೋ ಸಂಶಯ ವಾಯಿತು. ಕಾತರನಾಗಿ ಕೊಳಕ್ಕೆ ಓಡಿ ತಾನೂ ಹಾರಿದನು. ಅದರಲ್ಲಿ ನಾಲ್ಕು ಅಡಿ ನೀರೂ ಇರಲಿಲ್ಲ. ಬಿದ್ದ ವ್ಯಕ್ತಿಯು ಕೊರಳಿಗೆ ಕಲ್ಲು ಕಟ್ಟಿ ಕೊಂಡಲ್ಲದೆ ಮುಳುಗುವಂತಿಲ್ಲ. ಆದರಿಂದ ಆಕೆಯನ್ನು ಎತ್ತಿತಂದನು. ದಂಡೆಯ ಮೇಲೆ ತಂದು ನೋಡುತ್ತಾನೆ– ಅದು ಸುನಾಲಿನಿ.. ಅವಳು ಅಂದು ಆಡಿದುದು ನೆನಪಿಗೆ ಬಂದಿತು.

'ಅಮ್ಮಾ ನೋಡಿ:– ನೀವು ಇಲ್ಲಿಗೆ ಬಂದಿರೇಕೆ? ಕೊನೆಗೆ ಹೀಗೂ ಮಾಡಿದಿರೇಕೆ?'

'ನೀವಾರು....ಚಂದ್ರಯ್ಯನೇ....ನೀವೇಕೆ ಬಂದಿರಿ. ನಿಮಗೆ ಸರಸಮ್ಮನ ಗುಡಿ ಕಾಯುವ ಕೆಲಸವೇ?'

'ನನ್ನ ಮನೆ ಇಲ್ಲೇ ಸಮೀಪ..ನಿಮ್ಮ ಯಜಮಾನರೊಡನೆ..'

ಆಕೆ ಸಿಟ್ಟಿನಿಂದ 'ನನಗಾರು ಯಜಮಾನರು?' ಎಂದಳು.

'ಇಲ್ಲ ,ಅದೇ ಕಮ್ತಿಯರೊಡನೆ ಮಾತನಾಡಿ ಬೇಸತ್ತು ಬಂದೆ. ಅವರ ಮನಸ್ಸು ಹದವಾಗುವಂತಿಲ್ಲ. ನೀವು ಹೀಗೆ ಮಾಡಿ ಉಪ-ಯೋಗವೇನು?'

'ಅವರು ಮನೆಯಲ್ಲಿ ನನ್ನನ್ನು ಕಾಣದೆ ನಿಮ್ಮನ್ನು ಕಳುಹಿದರೇ?'

'ಇಲ್ಲ, ಮೊನ್ನೆಯಂತೆ ಆಕಸ್ಮಿಕವಾಗಿ ನಾನು ಇಲ್ಲಿಗೆ ಬಂದೆ'

'ನಾನು ಈ ಸರಸಮ್ಮನ ಮೇಲೆ ನನ್ನ ಸಿಟ್ಟನ್ನು ತೀರಿಸಬಾರ ದೆಂದೇ? ಅವಳಲ್ಲಿ ನಾನು ಹರಕೆ ಹೊತ್ತಿದ್ದೆ. ನನಗೆ ನಂಬಿಕೆಯಿರಲಿಲ್ಲ. ಮನುಷ್ಯರಿಗೆ ಪುನರ್ಜನ್ಮ ಕೊಡುವ ಶಕ್ತಿ ಅವಳಿಗಿಲ್ಲೆಂದು ತಿಳಿದಿತ್ತು..

ಹಾಗಿದ್ದರೆ ನನ್ನ ಶವವಾದರೂ ಅವಳ ಕಣ್ಣಿಗೆ ಬೀಳಲೆಂದು ಇಲ್ಲಿಗೆ ಬಂದೆ.

'ನೀವು ಹಾಗೆ ಇಚ್ಛಿಸಬಹುದು. ಆದರೆ ಇದು ನೀರಿಲ್ಲದ ಕೆರೆ. ನಾನು ಬೇರೆ ಬಂದೆ. . ನೀವು ಸಾಯಬಾರದೆಂದು ದೈವೇಚ್ಛೆ ಇರಬೇಕು. ತೀರಿಕೊಂಡರೆ ನಿಮ್ಮ ತಂದೆ ಹೇಗೆ ಸಹಿಸಿಯಾರು ?'

ತಂದೆಯ ನೆನಪು ಸುನಾಲಿನಿಗೆ ಆದೊಡನೆ ತೀರ, ತೀರ ವ್ಯಥೆಯಾಯಿತು. 'ಅಹುದು, ನಾನು ಸಾಯಬಾರದು. ಆದರೆ ನನ್ನ ಸೇಡನ್ನು ತೀರಿಸಬೇಕು. ಅವರು ದಿವಾಳಿಯಾಗಿ ಮಗಳನ್ನು ತನಗೆ ಕೊಟ್ಟ ಎಂಬುದಕ್ಕೆ ಪ್ರತ್ಯುತ್ತರ ಸಲಿಸಬೇಕು. ಇನ್ನೆರಡನೆಯ ಹುಡುಗಿಯೂ ನನ್ನಂತೆ ಅವರಲ್ಲಿ ನರಳದಂತೆ ನೋಡಬೇಕು'

'ಅದೇನು ಹಟ? ಅವರು ಬೇಕಾದವರನ್ನು ಲಗ್ನವಾಗಲಿ. .'

'ಹೀಗೆ ಕೊರಳು ಹಿಸುಕುವುದಕ್ಕೇನು'

'ನಿಮಗೆ ಪತಿಸ್ನೇಹ ಬೇಕಾಯಿತು. ಅದಿಲ್ಲದೆ ತೃಪ್ತಿಪಡುವ ಜೀವಿಗಳು ಸಾವಿರಾರಿವೆ. ಅವರ ಐಶ್ವರ್ಯ ಕಂಡು ತಾವು ಸುಖಿಗಳೆಂದು ತಿಳಿಯುವವರಿಲ್ಲವೇ ? ಪಾಪ, ನೀವು ಗೆಳೆತನ ಬಯಸಿದಿರಿ. ಅದನ್ನು ಕೊಡುವ ಯೋಗ್ಯತೆ ಅವರಿಗಿಲ್ಲ. ಅವರೊಡನೆ ನಿನ್ನೆ ತಾಸು ತಾಸಿನ ತನಕ ನಾನು ಮಾತನಾಡಿದೆ,—ಬುದ್ಧಿ ಹೇಳಿದೆ. ಆದರೆ ಆ ಮನುಷ್ಯ ಬರಿದು. ಅವರಲ್ಲಿ ನಿಮಗೆ ಬೇಕಾದ ಗೆಳೆತನವಿಲ್ಲ. ಅಲ್ಲದೆ ತಾವು ನಿಮಗಿಂತ ಕಡಿಮೆ ಯೋಗ್ಯತೆಯವನೆಂದು ನಾಚಿಕೆ. ಅದರ ಪರಿಣಾಮವಾದ ಸುಳ್ಳು ಹೆಮ್ಮೆ ಬಂದು ನಿಮ್ಮ ಸಂಸಾರ ಕೆಟ್ಟಿತು. . ಬನ್ನಿ ಹೋಗೋಣ. . ನಿಮ್ಮ ತಂದೆಯ ಮನೆಗೆ ನಾಳೆ ಒಯ್ದು ಬಿಡುತ್ತೇನೆ. ಈಗ ನಮ್ಮ ಮನೆಗೆ ಹೋಗುವ. .'

'ತಂದೆಯ ಮನೆಗೆ? ಅವರೇನು ತಿಳಿದಾರು. ಅವರಿಗೆ ನಾನಿಷ್ಟು ವರ್ಷ ಇಲ್ಲಿ ನರಕ ಅನುಭವಿಸುತ್ತಿದ್ದೆನೆಂಬ ಸುಳಿವೂ ಇಲ್ಲ. ನಾನು ಅವರ ಮುಪ್ಪನ್ನು ಆ ಚಿಂತೆಯಿಂದ ದಣಿಸಲಿಲ್ಲ. . ಈಗ.

'ಇನ್ನೇನು ಮಾಡಬೇಕು. ಇನ್ನೆಲ್ಲಿಯೂ ನೀವಿರುವುದು ಚಂದವಲ್ಲ; ಬನ್ನಿ ಹೋಗುವ ನಮ್ಮ ಮನೆಗೆ..ತುಸು ಊಟಮಾಡಿ..'

'ನಿಮ್ಮ ಮನೆಗೆ..? ಅವರೇನು ತಿಳಿದಾರು..ಯಾರದೋ ಹೆಂಗಸನ್ನು ಕರೆತಂದರೆ..

'ನಿಮ್ಮನ್ನು ಕಂಡು ಯಾರಿಗೂ ಕಸಿಕರವಾದೀತು. ಅಲ್ಲದೆ ನನಗೆ ಮನೆಯಲ್ಲಿ ತಾಯಿ ಹೊರತು ಬೇರೆಯಿಲ್ಲ..'

'ಬೇರೆಯಿಲ್ಲ..ತೀರಿಕೊಂಡರೇ..'

'ಅದೀಗ ಬೇಡ..ಹೋಗುವ..ನೀವೊಂದು ಬಗೆಯಲ್ಲಿ ದುರ್ದೈವಿಯಾದರೆ, ನಾನು ಹತ್ತು ಬಗೆಯಲ್ಲಿ....ಈಗ ಬೇಡ....ಅದರಿಂದ ಫಲವಿಲ್ಲ.

ಅವರಿಬ್ಬರೂ ತೆರಳಿದರು. ತಾಯಿಯು ಮನೆಯ ಕದವನ್ನು ತೆಗೆದಾಗ ಅವಳಿಗೆ ಇಬ್ಬರನ್ನು ಕಂಡು ಆಶ್ಚರ್ಯವಾಯಿತು. ಯಾರು? ಯಾರು? ಎಂದು ಕೇಳಿದಳು. ಇವನು ಹೇಳುತ್ತೇನೆಂದು ಸುನಾಲಿನಿಯನ್ನು ಕುಳ್ಳಿರಿಸಿ, ತಾಯಿಯ ಸೀರೆಯೊಂದನ್ನು ಕೊಡಿಸಿ ಅವಳ ಕಿವಿಯಲ್ಲಿ ನಾಲ್ಕು ಮಾತನ್ನುಸುರಿ ಸಮಾಧಾನಪಡಿಸಿದನು.

ಚಂದ್ರಯ್ಯನಿಗೊಂದು ಚೇಷ್ಟೆ ಕಂಡಿತು....ಸುನಾಲಿನಿಯು ಇಲ್ಲಿದ್ದ ವಿಚಾರ ನಾಲ್ಕಾರು ದಿವಸ ಗುಪ್ತವಾಗಿದ್ದರೆ 'ಮಂಜೇಶ್ವರದಲ್ಲಿ ಏನು ಗದ್ದಲ ಹುಟ್ಟಿತೆಂದು ನೋಡಬಹುದೆಂದು..'

ಅಂತು ಮರುದಿನ ಸುನಾಲಿನಿಯು ಅಲ್ಲೇ ಇದ್ದಳು. ಚಂದ್ರಯ್ಯನ ಹಿಂದಿನ ದಿನದ ಮಾತುಗಳನ್ನು ಕೇಳಿ ಅವಳ ಮನಸ್ಸಿಗೆ ಆವನೂ ಸುಖಿಯಲ್ಲ. ಎಂದು ತಿಳಿಯಿತು. ಅದರಿಂದ 'ಆ ದಿನ ನೀವೂ ಸರಸಮ್ಮನಿಗೆ ಹರಕೆ ಹೇಳಲು ಬಂದಿದ್ದಿರಾ?' ಎಂದು ಕೇಳಿದಳು. ಚಂದ್ರಯ್ಯನು 'ಆ ದಿನ ತಾನು ಬಂದ ಉದ್ದೇಶವನ್ನು ಹೇಳಿದನು. ಬೆಳ್ಯಕ್ಕನ ಕಥೆಯನ್ನು ಹೇಳಿದನು. ಮಾತಿನಲ್ಲಿ ವಂಚನೆಯಿಲ್ಲದವನಂತೆ ಜಲಜಾಕ್ಷಿ, ಭಾಗೀರಥಿಯರ ಕಥೆಯನ್ನೂ ಹೇಳಿದನು..

ಆ ಮಧ್ಯಾಹ್ನ ಸುನಾಲಿನಿಯು ಏನು ಮಾತನ್ನೂ ಆಡಲಿಲ್ಲ. ಸುಮ್ಮನೆ ಮೌನವಾಗಿದ್ದಳು. ಮಧ್ಯಾಹ್ನ ಚಂದ್ರಯ್ಯನು ಮಂಜೇಶ್ವರಕ್ಕೆ ಹೋಗಿ ಹೊಸ ವಾರ್ತೆಯನ್ನು ತಂದನು. ಅವನಿಗೆ ಪೇಟೆಯಲ್ಲಿ ಲಚ್ಚಿ ಭೇಟಿಯಾದಳು..'ಸುನಾಲಿನಿ ಯಾರೋ ಮಾಪಿಳ್ಳೆಯ ಹಿಂದೆ ಓಡಿಹೋಗಿರುವಳೆಂ'ಬ ಸುದ್ದಿಯನ್ನು ಕಿಲಿಸ್ತಿಯರು ಊರಲ್ಲಿ ಹಬ್ಬಿಸಿದರು. ರಾತ್ರಿ ಮನೆಗೆ ಬಂದೊಡನೆ ಅವಳು ಮನೆಯಲ್ಲಿಲ್ಲದುದನ್ನು ಕಂಡು ಕೆರೆ ಬಾವಿ ಹುಡುಕಿಸಿದರು. ಅವಳಾಡಿದ ಕೆಲವು ಮಾತುಗಳಿಂದ ರಾಜೀವಿಯು ಬೆದರಿಕೊಂಡು—ಕೆರೆ ಬಾವಿ ಹುಡುಕಾಡಿದಳು. ಬೆಳಿಗ್ಗೆ ಯಾರಾರ ಮನೆಗೆ ಹೋಗಿ 'ಆ ತೆಳ್ಳಗಿನ ಮಾಪಿಳ್ಳೆಯನ್ನು ನೋಡಿದ್ದೀರಾ? ಸಂಜೆ ನಮ್ಮ ಮನೆಮುಂದು ಸುತ್ತುತಿದ್ದ. ಇಬ್ಬರೂ ಸಂಚಿಸಿಂದ ಓಡಿರಬೇಕು' ಎಂದು ತಮ್ಮ ಹೊಣೆಯನ್ನು ನೀಗಿಸಲು ಸುದ್ದಿ ಹಬ್ಬಿಸಿದಳು.

ಲಚ್ಚಿಗೆ ನಿಜವಾದ ಸಂಗತಿ ಗೊತ್ತು. ಆ ದಿನ ಸಂಜೆಯ ತನಕ ನಡೆದ ಕಥೆ ಗೊತ್ತಿತ್ತು. ಸುನಾಲಿನಿ ಆಡಿದ ಮಾತಿನಿಂದ ಅವಳು ಆತ್ಮಹತ್ಯೆ ಮಾಡಿಕೊಳ್ಳಬಹುದೆಂದು ಸಂಶಯವಾಗಿತ್ತು. ಬೆಳಿಗ್ಗೆ ಕೆಲಸಕ್ಕೆ ಬಂದವಳು ಅವಳಿಲ್ಲವೆಂದು ಕೇಳಿ ನಿಜಕ್ಕೂ ಗಾಬರಿಯಾದಳು. ರಾಜೀವಿಯು ಮನೆಯ ಸುತ್ತ ನೆರೆದವರಿಗೆ ಮಾಪಿಳ್ಳೆ ಕಥೆ ಹೇಳತೊಡಗಿದಳು. ಲಚ್ಚಿಯು ರೇಗಿ 'ಸುಳ್ಳು, ಸುಳ್ಳು..ಮೂಡಂಬೈಲು ಚಂದ್ರಯ್ಯನನ್ನು ಕೇಳಿ. ಅವನ ಹತ್ತಿರ ಬೊಬ್ಬೆ ಹೊಡೆದು ತಾನು ಪ್ರಾಣಹತ್ಯೆ ಮಾಡುತ್ತೇನೆಂದಿದ್ದಾಳೆ..ಇವರ ಕಾಟ ಸಹಿಸದೆ ಅವಳು ಸಮುದ್ರ ಹಾರಿಕೊಂಡಿರಬೇಕು' ಎಂದಳು. ಕೆಲವರು ಕಡಲಿಗೂ ಓಡಿದರು. ಉಪಾಯವಿಲ್ಲದೆ ದೇವೇಂದ್ರ ಶೆಣಯಿಯರಿಗೆ ತಂತಿ ಹೋಯಿತು. ಮಂಗಳೂರಿಂದ ಧಾವಿಸಿ ಅವರು ಬಂದರು. ಅಳಿಯನನ್ನು ಗದರಿಸಿ ವಿಚಾರಿಸಿದರು. ಅಳಿಯನ ಬಗ್ಗೆ ರಾಜೀವಿ ತಲೆಯಿಂದ ತಲೆಗೆ ಸುಳ್ಳಿನ ಸುದ್ದಿಯನ್ನು ಹರವಿದಳು. ಲಚ್ಚಿ ಬಿಡುತ್ತಾಳೆಯೋ? 'ಈ ಮನೆಯ ನೀರು ನನಗೆ ಬೇಡ... ಅಯ್ಯಾ, ನಿಮ್ಮ ಮಗಳನ್ನು ಇವರು ಹಿಸುಕಿಯೇ ಕೊಂದಿರಬೇಕು..

ಇಲ್ಲವಾದರೆ ಅವಳೇ ಜಾಪಿ ಹಾರಿಕೊಂಡಿರಬೇಕು . . ನಿನ್ನೆ ಹೀಗಾಯಿತು . . ಮೊನ್ನೆ ಹೀಗಾಯಿತು. ನಿತ್ಯವೂ ಅವರ ಕಥೆ ಹೀಗೆ . . ' ಎಂದು ಪುರಾಣ ಬಿಚ್ಚಿದಳು.

ಮುಂದುಕನಿಗೆ ತುಟಿ ಥರಥರಿಸಹತ್ತಿತು. ಆವರು ನಡುಗುತ್ತ ಕುಳಿತರು. ಹುಡುಗಿಯನ್ನು ಹುಡುಕ ಹೋದವರು 'ಇಲ್ಲ' ವೆಂಬ ವಾರ್ತೆ ತಂದರು. ಅವರು ದುಃಖದಿಂದ ತುಂಬಿದರು. ಕಣ್ಣಿಂದ ನೀರು ಸಹ ಬರಲಿಲ್ಲ . . ದಾರಿಯಲ್ಲಿ ಚಂದ್ರಯ್ಯನು ಲಚ್ಮಿಗೆ ಭೇಟಿಯಾದನು. ಲಚ್ಮಿಯು ಬಲವಂತದಿಂದ ದೇವೇಂದ್ರ ಶೆಣಾಯಿಯರಿಗೆ ಭೇಟಿಯಾದನು. 'ನಿಮ್ಮ ಮಗಳು ಹೀಗೆ ನನ್ನೆದುರು ನುಡಿದುದು ನಿಜ' ಎಂದು ಸಾಕ್ಷಿ ಕೊಟ್ಟನು. ಕೊನೆಗೆ ಅವರನ್ನು ಕರೆದು ಕಿವಿಯಲ್ಲಿ ಏನನ್ನೊ ಹೇಳಿ 'ತೋರಿಸಿಕೊಳ್ಳಬೇಡಿ, ಮಂಗಳೂರಿಗೆ ಹೋಗಿ' ಎಂದರು. ಅವರು ಪೋಲೀಸಿಗೆ ದೂರುಕೊಟ್ಟು ಮಂಗಳೂರಿಗೆ ತೆರಳಿದರು.

ಅಣ್ಣಪ್ಪ ಕವಿತ್ತ ಚಂದ್ರಯ್ಯನ ಬೆನ್ನುಹತ್ತಿದನು. 'ಚಂದ್ರಯ್ಯ ಸತ್ಯವನ್ನು ಹೇಳಿ ನನ್ನನ್ನು ಕೊಲ್ಲುತ್ತೀಯಾ.' ಅವಳು ಸತ್ತಿದ್ದರೆ ನಿನ್ನ ಮಾತಿನಂತೆ ನನಗೆ ಫಾಶೀಯಾದೀತಲ್ಲ. . ವೆಂಕಟ್ರಮಣನ ಆಣೆಗೂ ನಾನು ನಿನ್ನೊಡನೆ ಮಾತನಾಡಿ ಮನೆಗೆ ಬರುವಾಗ ಆವಳಿರಲಿಲ್ಲ. . ದೇವ ರಾಣೆ—ನಿನ್ನ ಕೊರಳಾಣೆ—ಎಂದರು.

ಅದಕ್ಕೆ ಚಂದ್ರಯ್ಯನು 'ನನ್ನಿಂದ ನಿಮಗೆ ಯಾವ ಅನ್ಯಾಯವೂ ಆಗಲಾರದು' ಎಂದು ಭರವಸೆಯಿತ್ತು ಹೊರಟನು. ಮಂಜೇಶ್ವರದಲ್ಲಿ ಇಂದು ಸುದ್ದಿಯು ಷಷ್ಠಿ. ಪ್ರತಿಯೊಬ್ಬರೂ ಅದರಲ್ಲಿ ಮಡಸ್ನಾನ * ಮಾಡುತ್ತಿದ್ದಾರೆ.

* * * *

ಆ ರಾತ್ರಿ ಶೆಣಾಯಿಯರು ಮನೆಯಲ್ಲಿ, ಹೊರಗೆ ಪೊರ್ಟಿಕೋ ಮೇಲೆ ಕಾಲು ನೀಡಿ ಕುಳಿತಿದ್ದಾರೆ. . ನಡುರಾತ್ರಿಯಾದರೂ ನಿದ್ರೆ ಬರಲಿಲ್ಲ. . ತಾಸು ಒಂದು ಬಾರಿಸಿತು. . ಅಷ್ಟಕ್ಕೆ ಸರಿಯಾಗಿ ಮನೆ ನಾಯಿ

* ಉಚ್ಚಿಷ್ಟದ ಮೇಲೆ ಉರುಳಾಡುವ ವಾಡಿಕೆ.

ಟಾವ್-ಬೌ ಬೌ ಎಂದಿತು. ಟಾಮನ್ನು ಕರೆದು ಗೇಟಿನ ಒಳಗೆ ಹೋದರು. ಮನೆಗೆ ಕಾಲುನಡೆಯಿಂದ ಬಂದ ಮಗಳನ್ನೂ ಚಂದ್ರಯ್ಯ ನನ್ನೂ ಕರೆದುಕೊಂಡು ಒಳಕ್ಕೆ ನಡೆದರು.

'ಸುನಾಲಿನಿ, ಒಂದೂ ಸುದ್ದಿ ನನಗೆ ಹೇಳಲಿಲ್ಲ. ಅಲ್ಲವೇ..' ಎಂದಿಷ್ಟೇ ನುಡಿದು, ತಂದೆಯು ಮಗಳನ್ನು ತಬ್ಬಿಕೊಂಡನು.

---

೨೪

# ಮಹಾಸತಿ

ಸುನಾಲಿನಿಯನ್ನು ತಂದೆಯ ಮನೆಯಲ್ಲಿ ಬಿಟ್ಟು ಬಂದು ಹದಿನೈದು ದಿವಸಗಳಾದವು. ಚಂದ್ರಯ್ಯ ಇನ್ನೂ ಬೆಳ್ಯಕ್ಕನನ್ನು ಭೇಟಿಯಾಗಲಿಲ್ಲ. ಅಧೈರ್ಯ. ಅವಳು ತನ್ನನ್ನು ಎಂಥ ಪ್ರಸಂಗಗಳಿಗೆ ತೊಡಕಿಸುವಳೋ ಎಂಬ ಭೀತಿ. ಇತ್ತ ಆವನ ಮನಸ್ಸು ಒಂದು ರೀತಿಯಿಂದ ನೆಮ್ಮದಿ ಯನ್ನು ಪಡೆದಿತ್ತು. ಸುನಾಲಿನಿಯನ್ನು ಬದುಕಿಸಿದೆನೆಂಬ ಹಿಗ್ಗು ಒತ್ತ ಟ್ಟಿಗಿತ್ತು; ಆದರೆ ಭಾಗೀರಥಿಯ ವಿಚಾರದಲ್ಲಿ ಅವನಿಗೆ ಊಹಾಪೋಹ ಗಳೇ ಗತಿ. ಅವಳು ಹಿರಣ್ಯನೊಂದಿಗೆ ಸುಖವಾಗಿರಬೇಕು; ಅಥವಾ ಹಿರಣ್ಯನು ಅವಳೊಂದಿಗೆ ಸುಖವಾಗಿದ್ದಾನೆ.

ಹಿರಣ್ಯನ ತಂದೆಯು ಮಗನನ್ನು ಕುರಿತು ತೀರಿಸಿದ ಸೇಡೂ ವಿಚಿತ್ರ ವಾಗಿತ್ತು. ಹಟಕ್ಕೂ ಅವರು ನಿಡುಬೆಟ್ಟಿನವರ ಮಗಳನ್ನು ಲಕ್ಷ್ಮೀನಾರಾ ಯಣನಿಗೆ ತಂದರು. ಮೈತುಂಬಾ ಚಿನ್ನ ಧರಿಸಿ, ಬೆಳ್ಳಂಬೆಳ್ಳಗಿನ ಹುಡು ಗಿಯು ಎರಡನೆ ಸೊಸೆಯಾಗಿ ಬಂದಳು. ಆದರಿಂದ ಲಕ್ಷ್ಮೀನಾರಾಯಣ ನಿಗೂ ತೃಪ್ತಿಯಾಯಿತು. ಆದರೆ ಮನೆಯ ಯಜಮಾನಿ ಮಾತ್ರ ಹಿರಣ್ಯನು ತಮ್ಮಿಂದ ದೂರಾದನಲ್ಲಾ ಎಂಬ ಚಿಂತೆಯಲ್ಲಿದ್ದಳು. ಚಂದ್ರಯ್ಯನಿಗೆ

ಊರಿನ ಸುದ್ದಿಗಳೆಲ್ಲ ಸಿಗುತ್ತವೆ. ಯಾರಾದರೊಬ್ಬರು ಬಂದು ಹೇಳು ತ್ತಾರೆ. . ತಿಮ್ಮಪ್ಪಯ್ಯನು ಮಗಳನ್ನು ಅಳಿಯನ ಮನೆಗೆ ಕಳುಹಿಸಿದ ರಂತೆ. ವೆಂಕಟ್ರಮಣಯ್ಯನು ಮೂರನೇ ಮಗನ ಜಾತಕವನ್ನು ತೋರಿಸ ತೊಡಗಿದ್ದಾರಂತೆ. ಅವನಿಗೆ ಎಲ್ಲದಕ್ಕೂ ವಿಚಿತ್ರವಾಗಿ ಕಂಡುದು ಲಕ್ಷ್ಮೀ ನಾರಾಯಣನ ಮದುವೆ. ಲಕ್ಷ್ಮೀನಾರಾಯಣ ಒಲ್ಲೆನೆಂದಿದ್ದರೆ ಅವನ ತಮ್ಮ ಕೃಷ್ಣನಿಗೆ ಆ ಲಗ್ನ ನಿಶ್ಚಯಿಸುತ್ತಿದ್ದರು. ಮುಖ್ಯವಾಗಿ ಇಂಥವರೇ ಬೇಕೆಂದಿಲ್ಲ. ಜಾತಕದ ಕೂಟಗಳು ಸರಿ ಹೋದರಾಯಿತು. ಜೀವನದ ಕೂಟ ಮುಂದಿನದು; ತನ್ನಂತೆ ಸರಿ ಹೋಗುವುದೆಂದು ತಿಳಿ ಯಲೇಬೇಕು. ಒಮ್ಮೆ ಹೋಗಲಿಲ್ಲ—ಆಗ ಜಾತಕ ನೋಡಿದಲ್ಲಿ ಎಲ್ಲಿಯೋ ತಪ್ಪಿರಬೇಕೆಂಬುದು ಸ್ಪಷ್ಟ. ಆಗ ಹಣೆಬರಹವನ್ನು ದೂರಿದರಾಯಿತು.

'ಆ ದಿನ ಬೇಕಲದಲ್ಲಿ ಚೀರಿದ ತನ್ನೂರಿನ ಹುಡುಗಿ, ಅವಳನ್ನು ಜಾತಕ ನೋಡದೆ ಲಗ್ನ ಮಾಡಿರುತ್ತಾರೆಯೇ ?'

ಈ ಎಲ್ಲಾ ಹೆಣ್ಣುಹೃದಯಗಳ ದುಃಖವನ್ನು ಚಂದ್ರಯ್ಯ ಪರಿ ಶೀಲಿಸಿಯಾಯಿತು. ಇವರೆಲ್ಲ ಒಂದು ಜೀವಮಾನದಲ್ಲಿ ಸರಳುತ್ತಿರುವ ಜೀವಿಗಳು. ಆದರೆ ಬೆಳ್ಯಕ್ಕ—ಅವಳು ? ಬಲು ದೀರ್ಘಕಾಲದಿಂದ, ನಿಜ ಪ್ರಣಯಕ್ಕಾಗಿ ಬಾಯಿ ಬಿಡುತ್ತಿದ್ದಾಳೆ. . ಅವಳಿಗೆ ತಾನು ಮಾತು ಕೊಟ್ಟಿದ್ದೇನೆ. . ಹಾಗಿದ್ದರೆ ಇನ್ನೂ ಭೇಟಿಯಾಗಬೇಡವೇ. ಒಲ್ಲೆನಾದರೆ ಒಲ್ಲೆನೆಂದೂ ಹೇಳಬಾರದೇ ಹಾಳಾದ ಆಸೆ, ಅತೃಪ್ತಿಗಳು ಎಷ್ಟು ವ್ಯಥೆ ಯನ್ನು ಉಂಟುಮಾಡುವುದಿಲ್ಲ. ಈ ಎಲ್ಲಾ ಯೋಚನೆಗಳಿಂದ ಅವನು ಆ ರಾತ್ರೆ ತಿರುಗಿ ಪ್ರೇತದರ್ಶನಕ್ಕೆ ಹೊರಡಲು ನಿರ್ಧರಿಸಿದನು.

ರಾತ್ರಿ ಊಟ ಮುಗಿಸಿ ಏನೋ ಒಂದು ಪತ್ರವನ್ನು ತನ್ನ ಮೇಜಿನ ಮೇಲೆ ಬರೆದಿರಿಸಿ ಹೊರಬಿದ್ದನು. ಬಯಲಿಗೆ ಕಾಲಿಟ್ಟುದೇ ತಡ. ಬೆಳ್ಯಕ್ಕನ ದರ್ಶನವಾಯಿತು. ನಗುಮೋರೆಯಿಂದ ಅಂಗಸೌಂದರ್ಯವನ್ನೆಲ್ಲಾ ಸೂಸಿ ಅವನ ಬಳಿಗೆ ಅವಳು ಓಡಿ ಬಂದಳು 'ಅಂಜಿಕೆ ಇಲ್ಲವಷ್ಟೆ' ಎಂದಳು.

'ಅಂಜಿಕೆಯೇಕೆ ?'

'ಸುಮ್ಮನೆ ಕೇಳಿದೆ..ಯೋಚನೆಯಾಯಿತೇ ?'

'ವಿರಾಮದಲ್ಲಿ ಹೇಳುತ್ತೇನೆ. ನಾನೇ ನಿನ್ನೊಡನೆ ಚರ್ಚಿಸಬೇಕಾದ ಸಂಗತಿಗಳಿವೆ. ಎಲ್ಲಿಗೆ ಹೋಗೋಣ?'

'ಬೆಟ್ಟದ ಮೇಲೆ ಕುಳಿತಿರುವ..ಮೊನ್ನೆ ಕುಳಿತಲ್ಲಿ..'

'ಬಲು ದೂರ..'

'ಏತಕ್ಕೆ..ಅಂಜಿಕೆಯೇ..?'

'ಇಲ್ಲ..'

ಇಬ್ಬರೂ ತೆರಳಿದರು. ಬೆಳ್ಳಕ್ಕನ ನಡಿಗೆ ಮೃಗವು ಕಾಲಿಡುವಂತಿತ್ತು. ಅವಳನ್ನು ನೋಡಿದಂತೆ ಚಂದ್ರಯ್ಯನ ವ್ಯಸನ ಅಧಿಕವಾಯಿತು. ಇಂಥ ಸುಂದರ ಮೂರ್ತಿ..ಇಂಥ ರೂಪ..ಇದು ಜೀವನದಲ್ಲಿ ಅನಾದರಕ್ಕೆ ಪಾತ್ರವಾಗಿತ್ತೇ, ಬರಿಯ ರೂಪವನ್ನಾದರೂ ಮೋಹಿಸಿ ಸ್ನೇಹ ತೋರಿದವರಿಲ್ಲವೇ ? ಪೂಜಿಸಿದವರಿಲ್ಲವೇ..'

ಇಬ್ಬರೂ ಬೆಟ್ಟವನ್ನು ಸೇರಿದರು. ಬೆಳ್ಳಕ್ಕನು ಕುಳಿತಳು..ತಾನೇ ಮಾತಿಗೆ ಪ್ರಾರಂಭಿಸಿದಳು..

'ಏನು ನಿರ್ಧಾರವಾಯಿತು? ನಿನ್ನ ಗೆಳೆತನವನ್ನು ಕೊಡುತ್ತೀಯಾ? ನನ್ನ ಗೆಳೆತನದ ಆಸೆಯನ್ನು ಮುಗಿಸುತ್ತೀಯಾ!'

'ನೀನಾರು ?'

'ಅದನ್ನು ಹೇಳಲಾರೆ..ಒಂದು ದಿನ ಹೇಳುತ್ತೇನೆ..ನೀನು ನನ್ನವನಾದರೆ—ಈಗಲ್ಲ..ಏನು ಉಪಯೋಗ..ಈ ಹೇಸು ಜೀವನ, ಈ ಆಶೆಯ ಕಂತೆಯನ್ನು ಹೊತ್ತು ಎಷ್ಟು ದಿನ ತಿರುಗಿಯೇನು ? ಆಗಾಗ ನನ್ನ ನಿರಾಶೆಯು ಮನುಷ್ಯ ಕುಟುಂಬವನ್ನೇ ಕಾಡಲು ಪ್ರೇರಿಸುವುದು· ಒಂದು ದಿನ ಸೂಕ್ಷ್ಮಶರೀರವು ಅನೇಕರನ್ನು ಹಿಂಸಿಸುವ ಸಾಧನವಾದೀತು. ನಾನೀತನಕ ಯಾರನ್ನೂ ಬೆದರಿಸಿದವಳಲ್ಲ..'

ಅವಳ ಕಥೆಯು ಚಂದ್ರಯ್ಯನನ್ನು ಕರಗಿಸುತ್ತಿದೆ. ಆದರೆ ಅವನ ಮನಸ್ಸು ಬೇರೆಲ್ಲೋ ಸ್ಥಾಪಿತವಾಗಿದೆ.

'ಏಕೆ ಮೌನ..'

'ಇರಲಿ, ನೀನು ಬೇರೆಯವರಲ್ಲಿ ಅನುರಕ್ತನೇ..'

'ಅಹುದು..'

'ಅದರಿಂದ ತೃಪ್ತಿ ದೊರೆತೀತೇ..?

'ಹಾಗೆಂದು ಆಸೆ. ಅದರಿಂದಲೇ ನಿನ್ನನ್ನು ಒಪ್ಪಲಾರೆ... ನೋಡು ನಾನು ಮಾಂಸಬದ್ಧ ಜೀವಿ. ಬರಿಯ ಮನಸ್ಸಲ್ಲ; ನನಗೆ ಶರೀರವಿದೆ. ಅವೆರಡೂ ಪ್ರೇಮಸುಖವನ್ನು ಬಯಸುತ್ತವೆ. ನೀನು ಛಾಯಾಶರೀರಿ.. ನಿನ್ನ ವಿಚಾರ ನನಗೆ ತಿಳಿಯದು. ಆದರೆ ನಿನ್ನಿಂದ ನನಗೆ ಸ್ಪರ್ಶಸುಖವಿಲ್ಲ. ಹೀಗೆಂದು ನನ್ನನ್ನು ನಂಬಿದ ಅನಾಥೆಯೊಬ್ಬಳನ್ನು ಪ್ರೀತಿಸುತ್ತಿದ್ದೇನೆ. ಇನ್ನಾವ ಸುಖ ನಮಗಿಲ್ಲ.. ನಾವಿಬ್ಬರು ಒಬ್ಬರೊಬ್ಬರ ಗೆಳೆಯರೆಂಬುದು ಮಾತ್ರ. ನಮ್ಮ ಗೆಳೆತನದಿಂದ ಲೋಕಾಪವಾದವು ಹೊರಲಾರದಷ್ಟು ಬಂದೀತು. ಮೊದಲು ಅದಕ್ಕೆ ಅಂಜುತ್ತಿದ್ದೆ..ಆದರೆ ಜೀವನದ ದುಃಖವನ್ನು ಹೋಗಲಾಡಿಸದವರು, ತಾವೇ ನೂರಾರು ಜೀವಿಗಳ ಕಣ್ಣೀರಿಗೆ ಕಾರಣರಾದವರು, ಹೊರಿಸುವ ಅಪವಾದಗಳಿಗೆ ನಾನು ಏಕೆ ಅಂಜಬೇಕು?'

'ನನಗೂ ಹಾಗೆನಿಸುವುದು. ನನ್ನ ಜೀವನವೂ ಹಾಗಿತ್ತು. ನನ್ನ ಪತಿಗೆ ನಾನು ಬೇಡವಾಗಿದ್ದೆ. ನನಗೆ ಬೇಕಾದವನೊಬ್ಬನಿದ್ದನು. ಅವನೊಂದಿಗಿರಲು ಶಾಸ್ತ್ರ, ಸಮಾಜಗಳೆರಡು ಅಡ್ಡವಾಯಿತು. ತೋರಿಕೆಗೆ ಶಾಸ್ತ್ರವನ್ನು ಹಿಂಬಾಲಿಸಿ, ನಾನೀ ಅವಸ್ಥೆಗೆ ಬಂದೆ. ಕೊನೆಯ ತನಕವೂ ನನ್ನ ಬಯಕೆಗಳು ಪತಿಯಿಂದ ಪೂರ್ಣವಾಗಲಿಲ್ಲ....'

'ಕೇಳು. ಹಾಗಿದ್ದರೆ ನಿನ್ನ ಪಾಡು ನನಗೆ ಬರುವಲ್ಲಿತ್ತು. ನಾನಿಂದು ಒಬ್ಬಾಕೆಯೊಡನೆ, ಪತಿಯಿಂದ ಪರಿತ್ಯಕ್ತಳೊಡನೆ, ಆತ್ಮಹತ್ಯೆ ಮಾಡಲು ಅನುವಾದವಳೊಡನೆ ಸ್ನೇಹ ಬೆಳೆಸಿದ್ದೇನೆ.... ಇಬ್ಬರೂ ಲೋಕಾಪವಾದದ ಅಂಜಿಕೆಯನ್ನು ಹರಿದಿದ್ದೇವೆ.... ನನಗಷ್ಟು ಸಂತೋಷ.. ಒಂದು ಜೀವನದ ದುಃಖ ನನ್ನಿಂದ ಹೋಯಿತೆಂದು.. ಅಲ್ಲದೆ ನನ್ನ ಜೀವನಕ್ಕೆ ಬೇಕಾದ ಗೆಳೆತನವೂ ಅವರಿಂದ ದೊರೆಕಿತೆಂದು..'

'ಅವಳು ನನ್ನನ್ನು ಕಂಡರೆ ಅಸೂಯೆ ಪಡುವಳೇ.. ಅವಳಿಗೆ ಈ ಸಂಗತಿ ನೀನು ಹೇಳದಿದ್ದರೆ?'

'ಹೇಳದಿರುವುದೇ .. ಅಪ್ರಮಾಣಿಕತನವೇಕೆ? ನನಗೆ ಆ ಭೀತಿ ಇಲ್ಲ.. ಅವಳಿಗೆ ಅವಿಶ್ವಾಸ, ಅಸೂಯೆ ಬರಲಾರದು....ಆದರೆ ನಿನಗೆ ಅಸೂಯೆ, ಕೋಪ ಬಂದೀತು..ಕಾರಣ ಅವಳು ಸಶರೀರಿ.. ಸುಖ ವನ್ನು ಬೇಕಾದಂತೆ ಪಡೆಯಬಲ್ಲಳು.. ನಿನಗೆ ಆ ಶಕ್ತಿಯಿಲ್ಲ. ಛಾಯಾ ಗೆಳೆತನದಿಂದ ನಿನಗೆ ನಾನೆಷ್ಟು ತೃಪ್ತಿಕೊಡುವೆನೆಂದೂ ನನಗೂ ನಂಬಿಕೆ ಯಿಲ್ಲ..'

'ಅದು ನನಗೆ ಸಂದುದು. ನಾನು ಭಿಕ್ಷಾರ್ಥಿ. ನಿನ್ನ ಪ್ರೇಮದ ಒಂದಂಶ ನನಗೆ ಕೊಡು. ಈ ಶರೀರದಿಂದ ಅನುಭವಿಸಬಹುದಾದ ಸ್ನೇಹ ಸುಖ, ಭೋಗ– ಎಲ್ಲವನ್ನೂ ಅನುಭವಿಸುತ್ತೇನೆ.. ಅದಕ್ಕೂ ವಿಾರಿ ಪಡೆಯಲಾರೆ.. ನನ್ನನ್ನು ಇನ್ನೂ ಯೋಚನೆಗೆ ತಳ್ಳಬೇಡ! ಪ್ರೇತವನ್ನು ಹಿಂಬಾಲಿಸಿ ಯಾರು ಬರುವರು?– ನಾನು ಹಿಂಬಾಲಿಸಿದಷ್ಟು ಜನರು ಭೀತರಾಗುತ್ತಾರೆ.

ಚಂದ್ರಯ್ಯನಿಗೆ ಈ ದೈನ್ಯತೆಯು ಆಕೆಯ ಪೂರ್ವಜೀವನದ ದುಃಖದ ಆಳವನ್ನು ಮುಂದಟ್ಟುಮಾಡಿತು. 'ಸುನಾಲಿನಿಯು ದುಃಖ ವನ್ನು ಉಂಡವಳು. ಅಸೂಯೆಪಡಲಾರಳು..ಅಂಜಬಹುದು. ಆದರೆ ಅವಳ ಅಂಜಿಕೆ ಬಹುಕಾಲ ನಿಲ್ಲದು....ಏಕೆ ಈ ಭಿಕ್ಷಾರ್ಥಿನಿಯನ್ನು ಕಂಡು ಸಂತೋಷವೂ ಆಗಬಹುದು.

ಬೆಳ್ಯಕ್ಕ ನಕ್ಕಳು.. ಆ ನಗುವಿನ ಧನಿ ಆತ್ಮತುಷ್ಟಿಯ ಕುಸುಮ ವನ್ನು ಚೆಲ್ಲುತ್ತಿತ್ತು.. 'ಹಾಗಾದರೆ ನಮ್ಮ ವಿವಾಹವೆಂದು....'

'ವಿವಾಹವೇ.... ಯಾರ ಮುಂದೆ.. ನಮ್ಮದೇ ಸಾಕ್ಷಿ.. ಸಾಲದೆ..'

ನಿಜಕ್ಕೂ ಬೆಳ್ಯಕ್ಕನು ಈಗ ಮೊದಲಿಗಿಂತ ಸುಂದರಿಯಾಗಿ ಕಾಣಿ ಸುವಳು. ಅವಳ ಶರೀರವು ಚಂದ್ರನ ಕಾಂತಿಯಿಂದ ತುಂಬಿದ ದೀಪದಂತೆ

ಕಾಣುತ್ತಿತ್ತು.......ಅವರಿಬ್ಬರೂ ನಿಂತರು. ಹೋಗೋಣವೇ–ಎಂದು ಕೈ ಕೈ ಹಿಡಿದು ಬಯಲನ್ನು ಇಳಿದರು. ಬೆಳ್ಳಕ್ಕನ ಪ್ರೈಯು ಸುಖ ಚಂದ್ರಯ್ಯನಿಗಿಲ್ಲ. ಆದರೆ ಮಾತಿನ ಇಂಪು ತುಂಬಾ ಶಾಂತಿಯನ್ನು ಕೊಡುತ್ತಿತ್ತು.

ಮುಂದೆ ಸರಸಮ್ಮನ ಗುಡಿ ಎದುರಾಯಿತು. ಕೆರೆ ಬಂದಿತು. ಅದನ್ನು ತೋರಿಸಿ 'ಅವಳು–ನನ್ನವಳು. ಇಲ್ಲಿ ಹಾರಿ ಆತ್ಮಹತ್ಯೆಗೆ ಮುಂದಾದಳು. ಅದು ನೀನಿರಬೇಕೆಂದು ನಾನು ಭ್ರಮಿಸಿದ್ದೆ. ಆದರೆ ಕಪ್ಪು ಸೀರೆ..ಅದಲ್ಲವೆಂದು ಕಂಡಿತು..ಅದರಲ್ಲಿ ನೀರೇ ಇರಲಿಲ್ಲ—ನೀನು ಆ ಕೊಳದಲ್ಲಿ ಹೇಗೆ ಹಾರುತ್ತಿದ್ದೆ?'

'ನನ್ನದು ಛಾಯಾ ಶರೀರವಲ್ಲವೇ?'

ಚಂದ್ರಯ್ಯನು ಅವಳನ್ನೇ ಕಂಡನು.. 'ನೋಡು ವಿವಾಹವೆಂದೆ. ಶಾಸ್ತ್ರೋಕ್ತವಾಗಿ ಕೈ ಹಿಡಿಯಬೇಡವೇ–ಬಾ–ಹೀಗೆಂದು ಅವಳೆರಡೂ ಕೈಗಳನ್ನು ಹಿಡಿದು ಸರಸಮ್ಮನ ಗುಡಿಯೊಳಗೆ ಎಳೆದೊಯ್ದನು. ಅಲ್ಲಿ ಆಲಿಂಗಿಸಲು ಯತ್ನಿಸಿದನು.. 'ಇದು ವಿವಾಹ' ಎಂದು ಹೇಳುವವ ನಿದ್ದನು.

ಬೆಳ್ಳಕ್ಕನು 'ಅಯ್ಯೋ' ಎಂದು ಚೀರಿ ಹೊರಗೋಡಿ ಬಂದಳು. ಬಯಲಿನ ತುದಿಯ ತನಕ ಓಡಿದಳು. ಚಂದ್ರಯ್ಯನಿಗೆ ಭೀತಿಯಾಯಿತು. ಇದು ಈಶ್ವರಭಟ್ಟರೆಂದಂತೆ ಬರೀ ಕನಸೇ ಎಂಬ ಸಂಶಯ ಬಂದಿತು. ಆದರೂ ಕೊನೆ ನೋಡುವ ಆತುರದಿಂದ ಹಿಂಬಾಲಿಸಿದನು..ಬೆಳ್ಳಕ್ಕ ನಿಂತಳು..'ಇಗೋ ಇನ್ನು ಆ ಗುಡಿ ಬೇಡ..ಅಲ್ಲಿ ಬೇಡ..ಅಲ್ಲಿ ನಮ್ಮೊಳಗೆ ವಿವಾಹವಾಗಲಾರದು..'

'ಏಕೆ? ದಂಪತಿಗಳಿಗೆ ಸುಖಕೊಡುವವಳು ಸರಸಮ್ಮನಂತೆ! ಅಂಥವಳ ಗುಡಿಯಿಂದ ನೀನೇಕೆ ಓಡಿ ಬಂದೆ. ಅದೇ ಕೆರೆಯಲ್ಲಿ ಬಿಂದ ವಳು ನೀನು–ಅಲ್ಲೇನು ಅಂಜಿಕೆ?

'ಅಹುದು..ಅದನ್ನು ಹೇಳುವುದಿಲ್ಲವೆಂದೆ..ನೀನು ಈಗಲೇ ಹೇಳುವಂತೆ ಮಾಡಿದೆ..'

'ಏನದು?'

'ಅದು ನನ್ನ ಮನೆ..ನನ್ನ ಪತಿ, ನನ್ನನ್ನು ಈ ಅವಸ್ಥೆಗೆ ಇಳಿಸಿದವನು–ನೀಲಾಚಲ ಮಲಗಿದ ಸ್ಥಳ! ಅವನ ಪ್ರೇತವು ನನ್ನನ್ನು ಅಲ್ಲಿ ಅಂಕೆಯಲ್ಲಿರಿಸುತ್ತದೆ! ನಾನು ಬೇಡೆಂದು ರೋದಿಸಿದರೂ ಅವನ ರೋಗಿಷ್ಠ ಶರೀರದೊಡನೆ ನನ್ನನ್ನು ಸುಟ್ಟರು. ನರಘಾತುಕರು..ನನ್ನನ್ನು ಮಹಾಸತಿಯಾಗಿ ಮಾಡಿದರು.'

'ಏನು ನೀನು ಮಹಾಸತಿ ಸರಸಮ್ಮನೇ?'

'ಈ ಹಾಳು ಜನರ ಪಾಲಿಗೆ.'

ತಿರುಗಿ ಅವರೀರ್ವರೂ ಆ ಗುಡಿಗೆ ಕಾಲಿರಿಸಲಿಲ್ಲ.